

# ಸ್ವ - ವಿಕಾಸ ಹಾಗೂ ಕಲೆಯ ರಸಸ್ವಾದ

ಇಯತ್ತೆ

9



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರದ ನಿರ್ಣಯ ಕ್ರಮಾಂಕ: ಅಭ್ಯಾಸ - 2116/(ಪ್ರ. ಕ್ರ. 43/16) ಎಸ್‌ಡಿ - 4 ದಿನಾಂಕ 25.4.2016ದ ಪ್ರಕಾರ ಸ್ಥಾಪನೆ ಆದ ಸಮನ್ವಯ ದಿ. 3.3.2017 ರಂದು ಆದ ಸಭೆಯಲ್ಲಿ ಈ ಪಠ್ಯ ಪುಸ್ತಕವನ್ನು ತಯಾರಿಸಲು ಮಾಡಿದ ನಿರ್ಧಾರಕ್ಕೆ ಮನ್ನಣೆ ನೀಡಲಾಯಿತು.



# ಸ್ವ - ವಿಕಾಸ ಹಾಗೂ ಕಲೆಯ ರಸಸ್ವಾದ

## ಒಂಬತ್ತನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯ ಪುಸ್ತಕ ನಿರ್ಮಿತಿ ಹಾಗೂ
ಅಭ್ಯಾಸಕ್ರಮ ಸಂಶೋಧನ ಮಂಡಳ. ಪುಣೆ 4.

BGLR.JF

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R.Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಅದರಂತೆ ಪಠ್ಯಪುಸ್ತಕದಲ್ಲಿಯ ಆಶಯಕ್ಕನುಗುಣವಾಗಿ ಕೊಟ್ಟಿರುವ ಬೇರೆ Q.R.Codeದ ಮೂಲಕ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : 2017
ಪುನರ್ಮುದ್ರಣ : 2022

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ ಪುಣೆ - 411 004.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಸ್ವ-ವಿಕಾಸ ಹಾಗೂ ಕಲಾರಸಸ್ವಾದ ವಿಷಯ ಸಮಿತಿ**

ಡಾ. ಶಿರೀಷ ಸಾಠೆ, ಅಧ್ಯಕ್ಷ,
ಶ್ರೀಮತಿ. ಶೀತಲ ಬಾಪಟ, ಸದಸ್ಯ
ಶ್ರೀ ವಿದ್ಯಾನಿಧಿ (ಪ್ರಸಾದ) ವನಾರಸೆ, ಸದಸ್ಯ
ಶ್ರೀಮತಿ, ಆಭಾ ಭಾಗವತ, ಸದಸ್ಯ
ಶ್ರೀಮತಿ, ಪ್ರತಿಭಾ ಕದಮು, ಸದಸ್ಯ
ಡಾ. ಅಜಯ್‌ಕುಮಾರ್ ಲೊಳಗೆ, ಸದಸ್ಯ-ಸಚಿವ

**ನಿಮಂತ್ರಿತ**

ಶ್ರೀಮತಿ ಸಾಯಲಿ ತಾಮಣೆ
ಶ್ರೀಮತಿ ಮನೀಷ ಪಿಂಪಳೆ
ಶ್ರೀಮತಿ ಪರಿಣಿತ ಬಾಲಸುಬ್ರಮಣ್ಯ
ಶ್ರೀಮತಿ ಕೇತಕಿ ಶಾಹಾ
ಡಾ. ಮಧುವಂತಿ ಸಾಠೆ
ಶ್ರೀಮತಿ ಮಂಜರಿ ಟಕಲೆ
ಶ್ರೀಮತಿ ನೀತಾ ಮುತಾಲಿಕ
ಶೀಮತಿ ಕಲ್ಪನಾ ಸಂಚೇತಿ
ಶ್ರಿ ಇಮ್ತಿಯಾಜ್ ಶೇಖ
ಶ್ರಿ ಸಂಜಯ ಬುಗಟೆ
ಶ್ರಿ ಶಿವಾಜಿ ಹಾಂಡೆ
ಶ್ರಿ ರೂಪೇಶ್ ಪಂಗೇಕರ್
ಶ್ರೀಮತ್ರಿ ಮನೀಷಾ ಅಷ್ಟಪುತ್ರೆ
ಶ್ರೀಮತ್ರಿ ಸುಮೇಧಾ ಲೇಲೆ
ಶ್ರೀಮತಿ ನಿಷಿಗಂಧಾ ಶೆಜೂಳ
ಶ್ರೀಮತಿ ಶಾಮಲಾತಾಯಿ ವನಾರಸೆ

**ಮುಖಪುಟ ಹಾಗೂ ಅಲಂಕಾರ**

ಶ್ರೀಮತಿ ಫಾಲ್ಗುಣಿ ಗೋಖಲೆ
ಶ್ರೀಮತಿ ಮಧುರಾ ಪೆಂಡಸೆ

**ವಿಶೇಷ ಸಹಕಾರ್ಯ**

ಸಂಶೋಧನ ಮತ್ತು ವಿಕಾಸ ವಿಭಾಗ
ಶ್ಯಾಮಚಿ ಆಯಿ ಫೌಂಡೇಶನ್

**ಸಂಯೋಜ ಪ್ರಮುಖ :** ಡಾ. ಸದಾನಂದ ಎಂ. ಬಿಳ್ಳೂರ, ವಿಶೇಷಾಧಿಕಾರಿ, ಕನ್ನಡ.
ಶ್ರೀ ಆರ್. ಎಮ್. ಗಣಾಚಾರಿ, ವಿಷಯ ಸಹಾಯಕ, ಕನ್ನಡ.

**ಭಾಷಾಂತರಕಾರ** : ಶ್ರೀಮತಿ ವಿಜಯಲಕ್ಷ್ಮಿ ರೇವಣಕರ

**ಸಮೀಕ್ಷೆ** : ಶ್ರೀ ಪ್ರಕಾಶ ಎಲ್. ಪ್ರಧಾನ

**ಅಕ್ಷರ ಜೋಡಣೆ** : ಪಿ. ಸಿ. ಗ್ರಾಫಿಕ್ (P. C. Graphics)

**ನಿರ್ಮಿತಿ** : ಶ್ರೀ ಸಚ್ಚಿತಾನಂದ ಆಫಳೆ
ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ ಸಚಿನ್ ಮೆಹತಾ
ನಿರ್ಮಿತಿ ಅಧಿಕಾರಿ
ಶ್ರೀ ನಿತಿನ ವಾಣಿ
ಸಹಾಯಕ ನಿರ್ಮಿತಿ ಅಧಿಕಾರಿ

**ಕಾಗದ** : 70 ಜಿಎಸ್‌ಎಮ್ ಕ್ರಿಮ್‌ವೋವ್ಹ್

**ಮುದ್ರಣಾದೇಶ** :

**ಮುದ್ರಕ** :

**ಪ್ರಕಾಶಕ**

ಶ್ರೀ ವಿವೇಕ ಗೋಸಾವಿ

**ನಿಯಂತ್ರಕ**

ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ 400 025.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

**ವಿದ್ಯಾರ್ಥಿ ಗೆಳೆಯರೆ,**

ಒಂಬತ್ತನೆಯ ಇಯತ್ತೆಯ ವರ್ಗದಲ್ಲಿ ನಿಮಗೆಲ್ಲ ಸ್ವಾಗತವಿದೆ. 'ಸ್ವ-ವಿಕಾಸ ಹಾಗೂ ಕಲೆಯ ರಸಸ್ವಾದ' ಈ ವಿಷಯದ ಪಠ್ಯಪುಸ್ತಕ ನಿಮ್ಮ ಕೈಯಲ್ಲಿಡಲು ನಮಗೆ ವಿಶೇಷ ಆನಂದವಾಗುತ್ತದೆ.

21ನೆಯ ಶತಕದಲ್ಲಿ ಆವಶ್ಯಕವಿರುವ ಜೀವನ ಕೌಶಲ್ಯಗಳು ಆತ್ಮಸಾತ ಮಾಡುವ ಸಲುವಾಗಿ ಮತ್ತು ನಿಮ್ಮ ಕರಿಅರದ ಯಶಸ್ವಿಯಾಗುವ ಸಲುವಾಗಿ ಈ ವಿಷಯದಿಂದ ಅವಶ್ಯಕ ಮಾರ್ಗದರ್ಶನ ನಿಮಗೆ ದೊರೆಯುವುದು. ಮುಂದಿನ ಜೀವನದಲ್ಲಿಯ ಆವ್ಹಾನಾತ್ಮಕಗಳಿಗೆ ನೀವು ಸಕ್ಷಮದಿಂದ ಎದುರಿಸಬಹುದು. ಅದರಂತೆ ಸ್ವ-ಪರಿಚಯ ಮಾಡಿಕೊಂಡು ಸ್ವಂತದ ಸಂಧಿ ಗುರುತಿಸುವ ಕ್ಷಮತೆ ನಿಮ್ಮಲ್ಲಿ ನಿರ್ಮಾಣವಾಗಬಹುದು ಹೀಗೆ ವಿಶ್ವಾಸವೆನಿಸುತ್ತದೆ.

ನಿಮಗೆ ಗೊತ್ತೆ ಇದೆ, ಮಾನವೀ ಜೀವನದಲ್ಲಿಯ ಕಲೆಯ ಮಹತ್ವ ಅನನ್ಯ ಸಾಧರಣವಾಗಿದೆ. ಅದರಂತೆ ಕಲೆಯಿಂದ ನಮ್ಮ ಆಯುಷ್ಯ ಸಮೃದ್ಧವಾಗಲು ಸಹಾಯವಾಗುತ್ತದೆ. ಆದುದರಿಂದ ಕಲೆಯ ರಸಸ್ವಾದ ಈ ಭಾಗವು ಅಷ್ಟೇ ಮಹತ್ವದ್ದಾಗಿದೆ.

ಸ್ವ-ವಿಕಾಸ ಹಾಗೂ ಕಲೆಯರಸಸ್ವಾದ ಈ ಪಠ್ಯಪುಸ್ತಕದ ಮೂಲ ಉದ್ದೇಶವಾಗಿದೆ. ನಿಮ್ಮ ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿಷಯವಾಗಿದೆ. ಪುಸ್ತಕದ ಆರಂಭದಲ್ಲಿ ನಿಮಗೆ ಇಷ್ಟವಿರುವ ಚಿತ್ರಮಯ ಕತೆಯಿಂದ ಮಾಡಲಾಗಿದೆ. ಚಿತ್ರದಿಂದ ಮುಂದಿನ ಪ್ರಕರಣದಲ್ಲಿ ಏನು ಕಲೆಯುವರಿದ್ದೇವೆ ಈ ಸಂದೇಶ ಕೊಡಲಾಗಿದೆ. ಈ ಪಾಠ್ಯಪುಸ್ತಕ 'ಸ್ವಲ್ಪ-ಮೋಜು' ಮತ್ತು 'ಚರ್ಚೆ ಮಾಡಿರಿ' ಹೀಗೆ ಅನೇಕ ಕೃತಿಗಳಿಂದ ನೀವು ಈ ವಿಷಯ ಕಲಿಯುವರಿದ್ದೀರಿ. ಈ ಎಲ್ಲ ಕೃತಿ ನೀವು ಆವಶ್ಯಮಾಡಿರಿ ಈ ಕೃತಿ ನಿಮ್ಮ ವಿಚಾರಪ್ರಕ್ರಿಯೆಗೆ ಚಾಲನೆ ಕೊಡುತ್ತದೆ.

ಪಠ್ಯಪುಸ್ತಕದಲ್ಲಿ ಅನೇಕ ಚಿಕ್ಕ ಚಿಕ್ಕ ಆಟಗಳ ಸಮಾವೇಶ ಮಾಡಲಾಗಿದೆ. ಈ ಆಟಗಳಿಂದ ನೀವು ಸಾಕಷ್ಟು ಕಲಿಯುವವರಿದ್ದೀರಿ. ಕೊಟ್ಟ ಪ್ರಕಲ್ಪ, ಅವುಗಳ ಕಾರ್ಯ ಮತ್ತು ಅವುಗಳ ನಡುವೆ ಅವಶ್ಯಕವಿರುವ ಕೃತಿ ನೀವು ಸ್ವತಃ ಕಾಳಜಿಪೂರ್ವಕ ಮಾಡಿರಿ. ಅದರಂತೆ ಆವಶ್ಯಕವಿದ್ದಲ್ಲಿ ನಿಮ್ಮ ಶಿಕ್ಷಕರಿಗೆ ಮತ್ತು ಪಾಲಕರಿಗೆ ವರ್ಗದಲ್ಲಿಯ ಸಹಕಾರಿಯೊಂದಿಗೆ ಸಹಾಯ ಪಡೆಯಿರಿ. ಇಂದಿನ ತಂತ್ರಜ್ಞಾನದ ಶೀಘ್ರಯುಗದಲ್ಲಿ ಸಂಗಣಕ, ಸ್ಮಾರ್ಟ್‌ಫೋನ ಇದು ನಿಮ್ಮ ಪರಿಚಯದಿದೆ. ಪಠ್ಯಪುಸ್ತಕದಿಂದ ಅಭ್ಯಾಸ ಮಾಡುವಾಗ ಮಾಹಿತಿ ಸಂಪ್ರೇಷಣ ತಂತ್ರಜ್ಞಾನದ ಸಾಧನಗಳ ಸುಯೋಗ ಉಪಯೋಗ ಮಾಡಿರಿ. ಏನೆ ಮಾಡಿ ನಿಮ್ಮ ಅಧ್ಯಯನವು ಒಳ್ಳೆಯದಾಗುವುದು.

ಪಠ್ಯಪುಸ್ತಕ ಓದುವಾಗ, ಅಭ್ಯಸಿಸುವಾಗ ಮತ್ತು ತಿಳಿದುಕೊಳ್ಳುವಾಗ ನಿಮಗೆ ಇದರಲ್ಲಿಯ ಇಷ್ಟವಾಗುವ ಭಾಗ ಅದರಂತೆ ಅಭ್ಯಾಸ ಮಾಡುವಾಗ ಬರುವ ತೊಂದರೆ, ಪ್ರಶ್ನೆಗಳನ್ನು ನಮಗೆ ಅವಶ್ಯತಿಳಿಸಿರಿ.

ನಿಮಗೆ ನಿಮ್ಮ ಶೈಕ್ಷಣಿಕ ಪ್ರಗತಿಸಲುವಾಗಿ ಹಾರ್ದಿಕಶುಭೇಚ್ಛೆ

**(ಡಾ. ಸುನಿಲ ಮಗರ)**
**ಸಂಚಾಲಕ**
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

**ಪುಣೆ**
**ದಿನಾಂಕ:** 28 ಎಪ್ರಿಲ್, 2017, ಅಕ್ಷಯತೃತೀಯಾ
ಭಾರತೀಯ ಸೌರ : 8 ವೈಶಾಖ 1939

## ಸ್ವ-ವಿಕಾಸ ಹಾಗೂ ಕಲಾರಸಸ್ವಾದ ಕ್ಷಮತಾ ವಿಧಾನಗಳು

**ಒಂಬತ್ತನೆಯ ಇಯತ್ತೆಯ ಕೊನೆಯಲ್ಲಿ ವಿದ್ಯಾರ್ಥಿಗಳಲ್ಲಿ ಮುಂದಿನ ಕ್ಷಮತೆಗಳು ವಿಕಸಿತವಾಗಬೇಕೆಂಬ ಅಪೇಕ್ಷಿತವಿದೆ.**

| ಅ. ಕ್ರ. | ಘಟಕ | ಕ್ಷಮತಾವಿಧಾನಗಳು |
|---|---|---|
| 1. | ಸ್ವಂತ ಪರಿಚಯ | 1. **ಸ್ವಂತದ ಅರಿವು/ಸ್ವಯಂಭೋಧನೆ** - ಸ್ವಃ ಸಂಬಂಧ ಒಂದು ಸುಸಂಗತ ಚಿತ್ರವನ್ನು ಮನಸ್ಸಿನಲ್ಲಿ ವಿಕಸಿತಗೊಳಿಸುವುದು.<br>2. **ಸ್ವಯಂ ವ್ಯವಸ್ಥಾಪನೆ** - ಸ್ವಂತದ ವೈಯಕ್ತಿಕ, ಸಾಮಾಜಿಕ ಮತ್ತು ಆರ್ಥಿಕ ಬಲಸ್ಥಾನಗಳು ಹಾಗೂ ಮರ್ಯಾದೆಯನ್ನು ಗುರುತಿಸಲು ಬರುವುದು ಹಾಗೂ ಅವುಗಳ ವಿಶ್ಲೇಷಣೆ ಮಾಡಿದ ಕ್ಷಮತೆ ವಿಕಸಿತಮಾಡಲು ಬರುವುದು.<br>3. **ವಿವಿಧತೆಯ ಸ್ವೀಕಾರ** - ಸುತ್ತ ಮುತ್ತಲಿನ ಜನರಲ್ಲಿಯ ವಿವಿಧತೆ ಸ್ವೀಕರಿಸುವ ಹಾಗೂ ಅವುಗಳ ಮಹತ್ವವನ್ನು ತಿಳಿದುಕೊಂಡು ಅವುಗಳ ಸಮರ್ಥನೆ ಮಾಡುವ ಕ್ಷಮತೆಯ ವಿಕಸಿತ ಮಾಡುವುದು. |
| 2. | ಬೆಳೆಯುವ ವಯಸ್ಸು | 1. **ಸ್ವಂತದ ಅರಿವು/ಸ್ವಯಂಭೋಧನೆ** - ಕಿಶೋರಾವಸ್ಥೆಯಲ್ಲಿಯ ಬದಲಾವಣೆ ಹಾಗೂ ಅದಕ್ಕನುಗುಣವಾಗಿ ಉದ್ಭವಿಸುವ ಸಂಭಾವ್ಯ ಸಮಸ್ಯೆ ಬಗ್ಗೆ ಇರುವ ವಿಕಸಿತ ಮಾಡುವುದು.<br>2. **ಭಾವನೆಗಳಿಗೆ ವ್ಯವಸ್ಥಿತ ರೀತಿಯಿಂದ ಎದುರಿಸುವುದು** - ಕಿಶೊರಾವಸ್ಥೆಯ ನಡುವೆ ಆಗುತ್ತಿರುವ ಭಾವನೆಗಳ ಬದಲಾವಣೆಗೆ ವ್ಯವಸ್ಥಿತ ರೀತಿಯಿಂದ ಎದುರಿಸುವ ಕ್ಷಮತೆ ವಿಕಸಿತ ಮಾಡುವುದು.<br>3. **ಚಿಕಿತ್ಸಕ ವಿಚಾರ** - ದೈನಂದಿನ ಆಯುಷ್ಯದಲ್ಲಿಯ ಘಟನೆ ಮತ್ತು ಪರಿಸ್ಥಿತಿಯ ವಿಶ್ಲೇಷಣೆ ಮಾಡಿ ಯೋಗ್ಯ ಪರ್ಯಾಯ ಆರಿಸಿಕೊಂಡು ಕ್ಷಮತೆ ವಿಕಸಿತ ಮಾಡುವುದು<br>4. **ಆತ್ಮ ವಿಶ್ವಾಸ** - ಸಮಸ್ಯೆ ಮತ್ತು ಬೇಜವಾಬ್ದಾರಿಯ ವರ್ತನೆ ತಡೆಯುವ ಸಲುವಾಗಿ ಯೋಗ್ಯ ಪರ್ಯಾಯ ಆರಿಸಿ ಆತ್ಮವಿಶ್ವಾಸ ಜಾಗೃತಿ ಮಾಡುವುದು. |
| 3. | ಮೌಲ್ಯಗಳು | 1. **ಸ್ವಂತದ ಅರಿವು/ಸ್ವಯಂಭೋಧನೆ** - ಸ್ವಂತದ ವೈಯಕ್ತಿಕ ಮೂಲ್ಯಗಳ ಬಗ್ಗೆ ಮತ್ತು ಮೂಲ್ಯಾಧಿಷ್ಠಿತ ಜೀವನದ. ಮಹತ್ವದಬಗ್ಗೆ ಅರಿವು ವಿಕಸಿತ ಮಾಡುವುದು.<br>2. **ಸ್ವಯಂ ವ್ಯವಸ್ಥಾಪನೆ** - ಮೂಲ್ಯಾಧಿಷ್ಠಿತ ಜೀವನ ಜೀವಿಸುವಸಲುವಾಗಿ ಸ್ವಂತದಲ್ಲಿ ಮಾಡುವ ಬದಲಾವಣೆಯ ನಿಯೋಜನೆ ಮಾಡುವ ಕ್ಷಮತೆ ವಿಕಸಿತ ಮಾಡುವುದು<br>3. **ಚಿಕಿತ್ಸಕ ವಿಚಾರ** - ಸ್ವಂತದ ಮೂಲ್ಯಗಳು ಮತ್ತು ಪ್ರತ್ಯಕ್ಷವರ್ತನೆ ಇವುಗಳ ವಿಶ್ಲೇಷಣೆ ಮಾಡಿ ಅವುಗಳಲ್ಲಿಯ ವಿಪರ್ಯಾಸವನ್ನು ಸ್ಪಷ್ಟವಾಗಿ ತೋರಿಸಲು ಬರುವ ಕ್ಷಮತೆ ವಿಕಸಿತ ಮಾಡುವುದು. |
| 4. | ಸಾಮಾಜಿಕ ನೆತೃತ್ವ | 1. **ಸಾಮಾಜಿಕ ಸಮಸ್ಯೆ ಮತ್ತು ಜವಾಬ್ದಾರಿ** - ಸುತ್ತಮುತ್ತಲನಲ್ಲಿರುವ ಸಾಮಾಜಿಕ ಸಮಸ್ಯೆ ಮತ್ತು ಅವುಗಳಿಗೆ ಸ್ವಂತದ ಸಮಾಜ ಪ್ರಾಪ್ತಿಯಲ್ಲಿರುವ ಜವಾಬ್ದಾರಿ ಈ ವಿಷಯದ ಅರಿವು ವಿಕಸಿತ ಮಾಡಿಕೊಳ್ಳುವುದು<br>2. **ಸಹವೇದನೆ** - ಸಮಾಜದ ಅಸ್ತಿತ್ವದಲ್ಲಿರುವ ಪರಸ್ಪರಾವಲಂಬಿತ್ವದ ಅರಿವು ಮತ್ತು ಅವುಗಳಿಗನುಗುಣವಾಗಿ ಉಳಿದ ಜನರ ಸಹವೇದನೆ ವಿಕಸಿತ ಮಾಡುವುದು.<br>3. **ನೇತೃತ್ವ ಕ್ಷಮತೆ/ನೇತೃತ್ವ ಗುಣ** - ಸಮಾಜದಲ್ಲಿ ಯಾವುದೇ ಒಂದು ಚಿಕ್ಕ ಬದಲಾವಣೆಯಾಗುವ ಅವಶ್ಯಕವಿರುವ ನೇತೃತ್ವ ಗುಣ ವಿಕಸಿತ ಮಾಡುವುದು.<br>4. **ಚಿಕಿತ್ಸಕಾತ್ಮಕ ವಿಚಾರ** - ಸಾಮಾಜಿಕ ಸಮಸ್ಯೆಗಳ ಚಿಕಿತ್ಸಕ ರೀತಿಯಿಂದ ವಿಶ್ಲೇಷಣೆ ಮಾಡಿ ಅವುಗಳ ವ್ಯಾಪ್ತಿ ಮತ್ತು ಗಾಂಭಿರ್ಯ ನಿರ್ಧಾರಿತ ಮಾಡುವ ಕ್ಷಮತೆ ವಿಕಸಿತ ಮಾಡುವುದು. |

| ಅ. ಕ್ರ. | ಘಟಕ | ಕ್ಷಮತಾವಿಧಾನಗಳು |
| --- | --- | --- |
| | | 5. **ಸಮಸ್ಯೆ ನಿವಾರಣೆ** – ಸಾಮಾಜಿಕ ಸಮಸ್ಯೆಗಳ ನಿವಾರಣೆ ಮಾಡುವ ಸಲುವಾಗಿ ಯೋಗ್ಯ ಪರ್ಯಾಯ ಅರಿಸೆ ಸಮಸ್ಯೆ ಬಿಡಿಸುವ ದೃಷ್ಟಿಯಿಂದ ಕೃತಿ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>6. **ಧ್ಯೇಯ ಕಟ್ಟುವುದು** – ವೈಯಕ್ತಿಕ ಮತ್ತು ಸಾಮಾಜಿಕ ಬದಲಾವಣೆ ತರುವ ಕುರಿತು ವಾಸ್ತವವಾದ ಮತ್ತು ಅಳತೆ ಧ್ಯೇಯ ಸುನಿಶ್ಚಿತ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>7. **ಸಾಂಘಿಕ ಕಾರ್ಯ** – ಒಗ್ಗಟ್ಟಿನಿಂದ ಸಾಂಘಿಕ ಕಾರ್ಯ ಮಾಡುವ ಕ್ಷಮತೆ ವಿಕಸಿತ ಮಾಡುವುದು. |
| 5. | ಕಲಾ ರಸಸ್ವಾದ ದೃಶ್ಯಕಲೆ | 1. **ಕಲೆ ಕುರಿತು ಅರಿವು** – ದೃಶ್ಯ ಕಲೆಗಳ ವಿವಿಧ ಪ್ರಕಾರ, ದೃಶ್ಯ ಕಲೆಯ ಮೂಲಭೂತ ಘಟಕ ಈ ವಿಷಯದ ಅರಿವು ವಿಕಸಿತ ಮಾಡುವುದು.<br>2. **ಕಲಾವಿಷ್ಕಾರ ನಿರ್ಮಿತಿ** – ವಿವಿಧ ದೃಶ್ಯ ಕಲೆಗಳ ಪೈಕಿ ಒಂದನ್ನು ಉಪಯೋಗಿಸಿ ಯಾವುದೇ ಕಲಾವಿಷ್ಕಾರ ನಿರ್ಮಾಣ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>3. **ಅಭಿವ್ಯಕ್ತಿ** – ದೃಶ್ಯ ಕಲೆಯ ಮಾಧ್ಯಮದಿಂದ ಸ್ವಂತದ ವಿಚಾರ ಭಾವನೆ ಮತ್ತು ಅನುಭವ ವ್ಯಕ್ತಿ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>4. **ಸೃಜನಶೀಲತೆ** – ಯಾವುದೇ ಒಂದು ಕಲಾವಿಷ್ಕಾರದಲ್ಲಿ ದೃಶ್ಯ ಕಲೆಯ ಮೂಲಭೂತ ಘಟಕಗಳನ್ನು ಉಪಯೋಗಿಸಿಕೊಂಡು ಹೊಸ ನಿರ್ಮಿತಿ ಮಾಡಿ ಕೊಳ್ಳುವ ಕ್ಷಮತೆ ವಿಕಸಿತ ಮಾಡುವುದು.<br>5. **ಸೌಂದರ್ಯ ದೃಷ್ಟಿ** – ಅ) ಯಾವುದೇ ಕಲಾವಿಷ್ಕಾರದಲ್ಲಿ ಬಳಸಿದ ದೃಶ್ಯ ಕಲೆಯಲ್ಲಿ ಮೂಲಭೂತ ಘಟಕ ಗುರುತಿಸುವ ಕ್ಷಮತೆ ಪ್ರತಿಪಾದನೆ ಮಾಡುವುದು. ಆ) ಯಾವುದೇ ಒಂದು ಕಲಾವಿಷ್ಕಾರದ ನಿರೀಕ್ಷಣೆ ಮಾಡಿ ಅದರಲ್ಲಿಯ ಸ್ವಂತದ ಭಾವನೆಯ ಘಟಕಗಳ ವರ್ಣನೆ ಸ್ವಂತ ಶಬ್ದಗಳಲ್ಲಿ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>6. **ಪ್ರತ್ಯಕ್ಷ ಜೀವನದಲ್ಲಿಯ ಉಪಯೋಜನೆ** – ಅ) ಕಲೆಯ ಮಹತ್ವ ಹೇಳಲು ಬರುವ ಕ್ಷಮತೆ ವಿಕಸಿತ ಮಾಡಲು ಬರುವುದು ಆ) ಯಾವುದೇ ಒಂದು ಸ್ಥಾನಿಕ ವ್ಯವಸಾಯದ ಕಲಾಕಾರನ ಕೆಲಸದ ಸಂದರ್ಭದಲ್ಲಿಯ ದೈನಂದಿನ ವ್ಯವಸಾಯದ ಶ್ರೇಣಿ ವಿಷಯ ವಿಕಸಿತ ಮಾಡುವುದು. |
| 6. | ಸಂಘರ್ಷ ಬಗೆಹರಿಸುವುದು. | 1. **ಸೃಜನಶೀಲ ವಿಚಾರ** – ಸಂಘರ್ಷ ಬಗೆಹರಿಸುವ ಸಲುವಾಗಿ ನಾವಿನ್ಯಪೂರ್ಣ ದಾರಿ ಶೋಭಿಸುವ ಕ್ಷಮತೆ ವಿಕಸಿತ ಮಾಡುವುದು.<br>2. **ಚಿಕಿತ್ಸಕ ವಿಚಾರ** – ಯಾವುದೇ ಸಂಘರ್ಷದಂತಹ ಪರಿಸ್ಥಿತಿಯ ವಸ್ತು ನಿಷ್ಠವಾಗಿ ವಿಶ್ಲೇಷಣೆ ಮಾಡಿ ಎಲ್ಲ ಬದಿಗಳನ್ನು ತಿಳಿದುಕೊಂಡು ಕ್ಷಮತೆ ವಿಕಸಿತ ಮಾಡುವುದು.<br>3. **ಸಮಸ್ಯೆ ನಿರಾಕರಣ** – ಸಮವಯಸ್ಕ ಒತ್ತಡಗುಂಪು ಅಥವಾ ದೈನಂದಿನ ಜೀವನದಲ್ಲಿಯ ಬೇರೆ ಸಂಘರ್ಷದಂತಹ ಪರಿಸ್ಥಿತಿ ಎಲ್ಲ ಯೋಗ್ಯ ಪರ್ಯಾಯ ಆರಿಸುವ ಕ್ಷಮತೆ ವಿಕಸಿತ ಮಾಡುವುದು.<br>4. **ಪ್ರಭಾವಿ ಸಂಪ್ರೇಷಣ** – ಉಳಿದವರ ವಿಚಾರ ತಿಳಿದುಕೊಳ್ಳುವುದು. ಸ್ವಂತ ವಿಚಾರ ಸ್ಪಷ್ಟವಾಗಿ, ಶಬ್ದಬದ್ಧ ಮಾಡಿ ಮತ್ತು ಪ್ರಭಾವಿ ರೀತಿಯಿಂದ ಇತರರೊಂದಿಗೆ ಸಂಪ್ರೇಷಣ ಮಾಡಿ ಈ ವಿಷಯಗಳ ಕ್ಷಮತೆ ವಿಕಸಿತ ಮಾಡುವುದು.<br>5. **ವ್ಯಕ್ತಿಗಳಲ್ಲಿಯ ಅಂತರ್ಗತ ಸಂಬಂಧ** – ಎರಡೂ ಬದಿಗಳ ಹಿತ ಸಾಧಿಸಿ ಶಾಂತ ಮಾರ್ಗದಿಂದ, ಒಬ್ಬರಿಗೊಬ್ಬರಿಗೆ ಇರುವ ಅಂತರ್ಗತ ಸಂಬಂಧಗಳಿಗೆ ಹಾನಿಯಾಗದಂತೆ, ಸಂಘರ್ಷ ಬಗೆಹರಿಸುವ ಕ್ಷಮತೆ ವಿಕಸಿತ ಮಾಡುವುದು. |

| ಅ. ಕ್ರ. | ಘಟಕ | ಕ್ಷಮತಾವಿಧಾನಗಳು |
|---|---|---|
| 7. | **ಬೆಳವಣಿಗೆಗೆ ಪೂರಕವಾದ ಮಾನಸಿಕತೆ** | 1. **ಸ್ವಂತದ ಅರಿವು** – ಸ್ವಂತದ ಗುಣಗಳಿಗೆ, ಬುದ್ಧಿಮತ್ತೆಗೆ, ಕೌಶಲ್ಯಯಗಳಿಗೆ ಸ್ವಂತವಿರುವ ಮಾನಸಿಕತೆ ಗುರುತಿಸುವ ಕ್ಷಮತೆ ವಿಕಸಿತ ಮಾಡುವುದು.<br>2. **ಆತ್ಮ ವಿಶ್ವಾಸ** – ಬೆಳವಣಿಗೆ ಪೂರಕ ಮಾನಸಿಕತೆಯಿಂದ ವಿಚಾರ ಮಾಡಿ ಸ್ವಂತದ ಮರ್ಯಾದೆಯ ಮೇಲೆ ಪ್ರಭುತ್ವ ಸಾಧಿಸುವ ಸಲುವಾಗಿ ಅವಶ್ಯಕವಿರುವ ಆತ್ಮವಿಶ್ವಾಸ ವಿಕಸಿತ ಮಾಡುವುದು.<br>3. **ಚಿಕಿತ್ಸಕ ವಿಚಾರ** – ಬೆಳವಣಿಗೆಗೆ ಪೂರಕ ಮಾನಸಿಕತೆಯಿಂದ ವಿಚಾರ ಮಾಡಿ ಸ್ವಂತದ ನ್ಯೂನತೆಗಳ ವಿಶ್ಲೇಷಣೆ ಮಾಡಿ ಅವುಗಳ ಮೇಲೆ ಪ್ರಭುತ್ವ ಸಾಧಿಸುವ ಸಲುವಾಗಿ ವಿವಿಧ ಮಾರ್ಗ ಶೋಧಿಸುವ ಕ್ಷಮತೆ ವಿಕಸಿತ ಮಾಡುವುದು.<br>4. **ಸ್ವಯಂ ವ್ಯವಸ್ಥಾಪನೆ** – ಸ್ವಂತದ ನ್ಯೂನತೆಗಳ ಮೇಲೆ ಪ್ರಭುತ್ವ ಸಾಧಿಸಿ ಯಶಸ್ವಿಯಾಗುವ ದೃಷ್ಟಿಯಿಂದ ಯೋಗ್ಯ ನಿಯೋಜನೆ ಮಾಡುವ ಕ್ಷಮತೆ ವಿಕಸಿತ ಮಾಡುವುದು.. |
| 8. | **ಕರಿಅರ** | 1. **'ಸ್ವಂತದ' ಅರಿವು** – ಕರಿಅರ ಮಾಡುವ ದೃಷ್ಟಿಯಿಂದ ಸ್ವಂತದ ಇಚ್ಛೆ ಕ್ಷಮತೆ ಮತ್ತು ಉಪಲಬ್ದ ಸಂಧಿ ಇವುಗಳ ಅರಿವು ವಿಕಸಿತ ಮಾಡುವುದು<br>2. **ಚಿಕಿತ್ಸಕ ವಿಚಾರ** – ವಸ್ತುನಿಷ್ಠ ಸಾಕ್ಷಿ ಮತ್ತು ಸತ್ಯ ಪರಿಸ್ಥಿತಿಯ ಆಧಾರದಿಂದ ಸ್ವಂತ ಇಷ್ಟವಾಗುವ. ಕ್ಷಮತೆ ಮತ್ತು ಸಂಧಿ ಇವುಗಳ ಚಿಕಿತ್ಸಕ ರೀತಿಯಿಂದ ವಿಚಾರ ಮಾಡಿ ಅದನ್ನು ಶಬ್ದಾಂಕಿತ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>3. **ನಿರ್ಣಯ ಕ್ಷಮತೆ** – ಇಷ್ಟವಾದ ಯಾವುದೇ ಒಂದು ಕ್ಷೇತ್ರದ ಆಯ್ಕೆ ಮಾಡುವ ಮತ್ತು ಅವುಗಳ ಸಮರ್ಥನೆ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>4. **ಸಾಂಘಿಕ ಕಾರ್ಯ** – ಸಮೂಹದಲ್ಲಿ ಕಾರ್ಯ ಮಾಡುವಾಗ ಸಮಾನ ಇಷ್ಟವಾಗುವ ಕ್ಷೇತ್ರಗಳ ಬಗ್ಗೆ ಹೆಚ್ಚಿನ ಮಾಹಿತಿ ಶೋಧಿಸುವ ಸಲುವಾಗಿ ಗುಂಪಿನಲ್ಲಿ ಸಾಂಘಿಕ ಕಾರ್ಯ ಮಾಡುವ ಕ್ಷಮತೆ ವಿಕಸಿತ ಮಾಡುವುದು. |
| 9. | **ಕಲಾರಸಸ್ವಾದ – ಪ್ರಯೋಗಜೀವಿ ಕಲೆ** | 1. **ಕಲೆ ವಿಷಯದ ಅರಿವು** – ಪ್ರಯೋಗಜೀವಿ ಕಲೆಯ ವಿವಿಧ ಪ್ರಕಾರ ಮತ್ತು ಮೂಲಭೂತ ಘಟಕ ಈ ವಿಷಯದ ಅರಿವು ವಿಕಸಿತ ಮಾಡುವುದು.<br>2. **ಸಾದರೀಕರಣ:** – ಪ್ರಯೋಗಜೀವಿ ಕಲೆಯ ವಿವಿಧ ಪ್ರಕಾರಗಳನ್ನು ಉಪಯೋಗಿಸಿ ಸಾದರೀಕರಣ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>3. **ಅಭಿವ್ಯಕ್ತಿ** – ಸ್ವಂತದ ವಿಚಾರ ಭಾವನೆ ಮತ್ತು ಅನುಭವ ಪ್ರಯೋಗಜೀವಿ ಕಲೆಗಳ ಮಾಧ್ಯಮದಿಂದ ವ್ಯಕ್ತ ಮಾಡುವ ಕ್ಷಮತೆ ವಿಕಸಿತ ಮಾಡುವುದು.<br>4. **ಸೃಜನ ಶೀಲತೆ** – ಯಾವುದೆ ಪ್ರಯೋಗಜೀವಿ ಕಲೆಯಲ್ಲಿ , ಸ್ವಂತದ ಸೃಜನ ಶೀಲತೆಯ ಆಧಾರದಿಂದ ಹೊಸ ನಿರ್ಮಿತಿ ಮಾಡಲು ಬರುವ ಕ್ಷಮತೆ ವಿಕಸಿತ ಮಾಡುವುದು<br>5. **ಪ್ರತ್ಯಕ್ಷ ಜೀವನದಲ್ಲಿ ಉಪಯೋಜನೆ** – ಪ್ರಯೋಗಜೀವಿ ಕಲೆಯ ಮಹತ್ವ ಈ ವಿಷಯದ ಅರಿವು ವ್ಯಕ್ತ ಮಾಡುವ ಕ್ಷಮತೆ ವಿಕಸಿತ ಮಾಡುವುದು. |

# ಶಿಕ್ಷಕರಿಗಾಗಿ

**ಗೆಳೆಯರೆ,**

'ಸ್ವ-ವಿಕಾಸ ಹಾಗೂ ಕಲಾರಸಾಸ್ವಾದ' ಈ ಹೊಸ ವಿಷಯ ಕಲಿಸುವ ಅತ್ಯಂತ ಮಹತ್ವಪೂರ್ಣ, ಆಹ್ವಾನಾತ್ಮಕ ಅಷ್ಟೇ ಆನಂದದಾಯಿ ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸಲಾಗಿದೆ. ಅದಕ್ಕಾಗಿಮೊದಲನೆಯದಾಗಿ ತಮಗೆ ಅಭಿನಂದನೆ, ಈ ವಿಷಯದ ಮಹತ್ವ, ವೈಶಿಷ್ಟ್ಯ ಅದರಂತೆ ಅದರಿಂದ ಏನು ಸಾಧ್ಯವಾಗಬೇಕು ಎಂಬುದು ಅಪೇಕ್ಷಿತವಿದೆ. ಅದರ ಬಗ್ಗೆ ಸ್ಪಷ್ಟತೆ ಬಂದರೆ ಶಿಕ್ಷಣ ಪ್ರಕ್ರಿಯೆಯ ಪರಿಣಾಮಕಾರಕತೆಯು ಹೆಚ್ಚುವದು ಮತ್ತು ವಿದ್ಯಾರ್ಥಿಗಳ ಸಲುವಾಗಿ ತೆಗೆದುಕೊಳ್ಳಲಾಗುವ ಶ್ರಮದಲ್ಲಿ ಖಂಡಿತವಾಗಿಯೂ ಯಶಸ್ಸು ದೊರಕುವುದೆಂದು ಸಮಿತಿಗೆ ವಿಶ್ವಾಸವೆನಿಸುತ್ತದೆ.

**ವಿಷಯದ ಅವಶ್ಯಕತೆ :**

1. 9 ಮತ್ತು 10ನೆಯ ಇಯತ್ತೆಗಳು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ ಕಾಲವಾಗಿರುತ್ತದೆ. ಆದರೆ ಈ ಕಾಲದಲ್ಲಿಯೇ ವಿದ್ಯಾರ್ಥಿಗಳಲ್ಲಿ ಶೀಘ್ರದಿಂದ ಶಾರೀರಿಕ. ಮಾನಸಿಕ ಬದಲಾವಣೆಯಾಗುತ್ತಿರುತ್ತದೆ ಹಾಗೂ ಆ ಎಲ್ಲ ಬದಲಾವಣೆಗಳ ಪ್ರಭಾವ ಅವರ ಅಭ್ಯಾಸದ ಮೇಲೆ, ಪಾಲಕರಿಗೆ ಶಿಕ್ಷಕರಿಗೆ ಜೊತೆಗಿರುವ ಸಂಬಂಧದ ಮೇಲೆ, ಅವರು ತೆಗೆದು ಕೊಂಡಿರುವ ನಿರ್ಣಯಗಳ ಮೇಲೆ ಆಗುತ್ತಿರುತ್ತದೆ. ಈ ಬದಲಾವಣೆಗಳ ಸ್ವರೂಪ ಹಾಗೂ ಅವರಿಗೆ ಯಶಸ್ವಿಯಾಗಿ ಎದುರಿಸುವ ಮಾರ್ಗವನ್ನು ಒಂದುವೇಳೆ ವಿದ್ಯಾರ್ಥಿಗಳು ತಿಳಿದುಕೊಂಡರೆ ಅದರಿಂದಾಗುವ ದುಷ್ಪರಿಣಾಮವನ್ನು ತಪ್ಪಿಸಬಹುದು.
2. ಇದೇ ಕಾಲದಲ್ಲಿ ವಿದ್ಯಾರ್ಥಿ ಸ್ವತಃದ ಸಲುವಾಗಿ, ಆಯ್ಕೆ ಇಷ್ಟ ಪಡುವದು, ಗೆಳೆಯ-ಗೆಳತಿಯರು, ಭವಿಷ್ಯದ ಬಗ್ಗೆ ಜಾಗರೂಕತೆಯನ್ನು ವಿಚಾರ ಮಾಡಲು ಪ್ರಾರಂಭಿಸುತ್ತಾರೆ ಸ್ವತಃದ ಸಲುವಾಗಿ ಅವರ ಈ ವಿಚಾರಗಳನ್ನು ಶಾಲೆಯ ಅಭ್ಯಾಸಕ್ರಮದಲ್ಲಿ ಸ್ಥಾನ ಕಲ್ಪಿಸಲು ಅವರ ವಿಚಾರಗಳಿಗೆ ದಿಕ್ಕು ದೊರೆಯಬಹುದು ಹಾಗೂ ಸ್ವಂತದ ಕಡೆಗೆ ನೋಡಿ-ಸ್ವಂತದಲ್ಲಿಯ ಗುಣ-ದೋಷಗಳು ಅವರಿಗೆ ತಿಳಿದು ಬರಬಹುದು. ಈ ಉದ್ದೇಶದಿಂದ ಸ್ವ-ವಿಕಾಸ ಹಾಗೂ ಕಲಾರಸಸ್ವಾದ ಈ ವಿಷಯವನ್ನು ಅಭ್ಯಾಸಕ್ರಮದಲ್ಲಿ ಸಮಾವೇಶಮಾಡಲಾಗಿದೆ.
3. ಪರಿಪೂರ್ಣ ಮಾನವ ಜೀವನವನ್ನು ಸಾಧ್ಯಗೊಳಿಸಿಕೊಳ್ಳಲು ಯಾವುದಾದರೊಂದು ಕಲೆಯೊಂದಿಗೆ ಜೋಡಿಸಿಕೊಳ್ಳುವುದು, ಅದರೊಂದಿಗೆ ಸಂಬಂಧ ನಿರ್ಮಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿರುತ್ತದೆ. ವಿವಿಧ ಕಲೆಯ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯ ಒಂದುವೇಳೆ ಪ್ರಾಥಮಿಕ ಶಿಕ್ಷಣದಿಂದಲೇ ಆಗಿದ್ದರೂ ಕಲೆಯ ಮಹತ್ವವನ್ನು ತಿಳಿದುಕೊಳ್ಳುವದು. ಅದರ ಮಾನವೀ ಜೀವನದಲ್ಲಿಯ ಸ್ಥಾನ ಅರಿತುಕೊಳ್ಳುವುದು, ಅದರಲ್ಲಿಯ ಸೌಂದರ್ಯವನ್ನು ಅಸ್ವಾದಿಸಲು ಬರುವುದು ಇದೆಲ್ಲ ಸ್ವ-ವಿಕಾಸದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಸಮೃದ್ಧ, ಸುಸಂಸ್ಕೃತ ನಾಗರಿಕರನ್ನು ಸಿದ್ಧಪಡಿಸುವ ದೃಷ್ಟಿಯಿಂದ ಕಲಾ ರಸಸ್ವಾದ ಈ ಭಾಗದ ಕಡೆ ನೋಡಿ ಈ ವಿಷಯವನ್ನು ಅಂತರ್ಭಾವಗೊಳಿಸಲಾಗಿದೆ.

   **ಈ ಪ್ರಕಾರ ಶಾಲೆಯ ಜೀವನದಿಂದ ಹೊರಗಿನ ವಿಶ್ವದಲ್ಲಿ ಹೆಜ್ಜೆ ಇಡುವ ವಿದ್ಯಾರ್ಥಿಗಳಿಗೆ, ಹೊರಗಿನ ಜಗತ್ತಿನಲ್ಲಿ ಆತ್ಮವಿಶ್ವಾಸದಿಂದ ಜೀವನ ಸಾಗಿಸಲು ಸುಸಜ್ಜಿತಗೊಳಿಸುವ ಕಾರಣದಿಂದ ನಿರ್ಮಾಣ ಮಾಡಲುಬರುವ ಸೇತುವೆಯಾಗಿದೆಯೆಂದು ಈ ವಿಷಯದ ಕಡೆಗೆ ಇದೊಂದು ನೋಡಬಹುದು.**

**ಅಧ್ಯಯನ-ಅಧ್ಯಾಪನ ಪ್ರಕ್ರಿಯೆ :**

ಈ ವಿಷಯವನ್ನು ಕಲಿಸುವ ಪದ್ಧತಿ ಹಾಗೂ ಅದರಿಂದುಂಟಾಗುವ ಅಪೇಕ್ಷಿತ ಪರಿಣಾಮ ಇತರ ಶಾಲೆಯ ವಿಷಯಗಳಿಗಿಂತ ಭಿನ್ನ ವಾಗಿರುವುದರಿಂದ ಈ ಪದ್ಧತಿಯನ್ನು ಸರಿಯಾಗಿ ತಿಳಿದುಕೊಂಡು ಆ ಪದ್ದತಿಯಿಂದ ಅದನ್ನು ಕಾರ್ಯಗತಗೊಳಿಸುವುದು ಅನಿವಾರ್ಯವಾಗಿದೆ.

1. ಈ ಪುಸ್ತಕದಲ್ಲಿಯ ಎಲ್ಲ ಆಶೆಯಗಳನ್ನು ರಚನಾತ್ಮಕ ಪದ್ಧತಿಯಿಂದ ಕಲಿಸುವುದರಿಂದ ಅದಕ್ಕಾಗಿ ಯೋಗ್ಯವಾದ ಉಪಕ್ರಮ, ಪ್ರಶ್ನೆ ಹಾಗೂ ಸೂಚನೆಗಳನ್ನು ಪುಸ್ತಕದಲ್ಲಿ ಕೊಡಲಾಗಿದೆ. ಯಾವುದೇ ಪಾಠವನ್ನು **ಕಲಿಸುವ ಮೊದಲು** ಅದರ ಸಂಪೂರ್ಣ ಅಭ್ಯಾಸ ಮಾಡುವುದು ಅಪೇಕ್ಷಿತವಿದ್ದು ಅದರಲ್ಲಿಯ ಉಪಕ್ರಮಗಳ ನಿಯೋಜನೆಯನ್ನು ಮಾಡಬೇಕಾಗಿದೆ. ಅವಶ್ಯಕವೆನಿಸಿದಾಗ ಮಾತ್ರ ವಿದ್ಯಾರ್ಥಿಗಳ ಮುಂದೆ ಪುಸ್ತಕವನ್ನು ತೆಗೆದು ಓದಬೇಕು.

2. ಈ ವಿಷಯದ ಯಶಸ್ಸು ಅದರ ಯಾವುದೇ 'ಮಾಹಿತಿ'ಯನ್ನು ವಿದ್ಯಾರ್ಥಿಗಳ ತನಕ ಮುಟ್ಟಿಸುವುದಿಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಸ್ವತಃದ ಸಲುವಾಗಿ, ಬೇರೆಯವರ ಸಲುವಾಗಿ ವಿಚಾರಮಾಡಲು ತೊಡಗಿಕೊಳ್ಳುವುದರ ಮೇಲೆ ಅವಲಂಬಿತವಾಗಿದೆ. ವರ್ಗದದಲ್ಲಿ ನಡೆಯುವ ಪ್ರಕ್ರಿಯೆ, ಉಪಕ್ರಮ ನಡೆಯುವ ಸಂವಾದ, ಗುಂಪು ಕಾರ್ಯ, ವಿದ್ಯಾರ್ಥಿಗಳ ಆತ್ಮ ಪರೀಕ್ಷೆ ಇವುಗಳೇ ವಿದ್ಯಾರ್ಥಿಗಳ ನಿಜವಾದ ಶಿಕ್ಷಣವಾಗಿದೆ. ಈ ಪ್ರಕ್ರಿಯೆಯನ್ನು ನಡೆಸಿಕೊಂಡು ಬರುವುದೇ ಈ ವಿಷಯದ ಸಾಧ್ಯವು ವರ್ಗದಲ್ಲಿಯೇ ಇದೆ. ಎಲ್ಲ ಉಪಕ್ರಮಗಳನ್ನು ಯೋಗ್ಯ ಪದ್ಧತಿಯಿಂದ ತೆಗೆದುಕೊಂಡು ಸ್ವತಂತ್ರ ಹಾಗೂ ಅರ್ಥಪೂರ್ಣ ಚರ್ಚೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಇದು ನಮ್ಮ ಭೂಮಿಕೆಯಾಗಿದ್ದು ಸುಲಭಕರದ್ದೂ ಆಗಬೇಕು.

3. ಈ ವಿಷಯದಲ್ಲಿ ವಿದ್ಯಾರ್ಥಿಯು ತನ್ನ ಸಲುವಾಗಿ, ತನ್ನ ಅಡಚಣೆಗಳ ಸಲುವಾಗಿ ನಿರಾತಂಕವಾಗಿ ಮಾತನಾಡುವುದು ಅಪೇಕ್ಷಿತವಾಗಿದೆ. ಅದರೆ ಸಲುವಾಗಿ ವರ್ಗದಲ್ಲಿಯ ವಾತಾವರಣ ವಿದ್ಯಾರ್ಥಿಗಳಿಗೆ ಆಶ್ವಾಸಕ ಮತ್ತು ಮುಕ್ತತೆ ಇರುವುದು ಅವಶ್ಯಕವಾಗಿದೆ. ಅದರ ಸಲುವಾಗಿ ಜಾಗೃತವಾಗಿರುವುದು ಅತ್ಯಂತ ಮಹತ್ವದ್ದಾಗಿದೆ ವಿದ್ಯಾರ್ಥಿಗಳ ಮೇಲೆ ಯಾವುದೇ ಪ್ರಕಾರದ ಭಯ, ಭೀತಿ ಇದ್ದರೆ ಸಂಪೂರ್ಣ ಉಪಕ್ರಮವು ಅರ್ಥಹೀನವೆನಿಸುತ್ತದೆ. ವಿದ್ಯಾರ್ಥಿಗಳುಹೇಳಿರುವ ಸಮಸ್ಯ, ಅಡಚಣೆಗಳನ್ನೂ ಗಂಭೀರವಾಗಿ ತೆಗೆದುಕೊಳ್ಳಿರಿ.

4. ಪುಸ್ತಕದಲ್ಲಿಯ ಪ್ರತಿಯೊಂದು ಉಪಕ್ರಮಕ್ಕೆ ನ್ಯಾಯವನ್ನೊದಗಿಸಿ ಆ ನಂತರದ ಚರ್ಚೆ ಅಥವಾ ಗುಂಪುಕಾರ್ಯವನ್ನು ಅರ್ಥಪೂರ್ಣ ಪದ್ಧತಿಯಿಂದ ಮಾಡಲು ಪ್ರಯತ್ನಿಸಬೇಕು. **ವಿಷಯದ ಮುಖ್ಯತ್ವ ಅದರಲ್ಲಿಯ ಉಪಕ್ರಮ, ಚರ್ಚೆ, ಗುಂಪುಕಾರ್ಯದಲ್ಲಿಯೇ ಇದೆಯೆಂಬುದನ್ನು ಯಾವಾಗಲೂ ಲಕ್ಷ್ಯದಲ್ಲಿಡಬೇಕು.** ಯಾವುದೇ ಕಾರಣದಿಂದ, ವಿಶೇಷವಾಗಿ ಅಭ್ಯಾಸಕ್ರಮವನ್ನು ಪೂರ್ತಿಯಾಗಿ ಮುಗಿಸಬೇಕೆಂದು ಗಡಿಬಿಡಿ ಮಾಡಿ ಚರ್ಚೆ ಅಥವಾ ಗುಂಪುಕಾರ್ಯವನ್ನು ದುರ್ಲಕ್ಷ್ಯಿಸಬಾರದು.

5. ಬಹುತೇಕ ಎಲ್ಲ ಉಪಕ್ರಮಗಳ ಮೇಲೆ ಮುಕ್ತವಾದ ಚರ್ಚೆ ಅಪೇಕ್ಷಿತವಿದ್ದು ಅದರಲ್ಲಿ ಯಾವುದೇ ಒಂದು ತಪ್ಪು ಅಥವಾ ಸರಿ ಉತ್ತರವಿಲ್ಲ ಎಂಬುದನ್ನು ಲಕ್ಷ್ಯದಲ್ಲಿಡಬೇಕು. ವಿದ್ಯಾರ್ಥಿಗಳು ಸ್ವತಃ ವಿಚಾರ ಮಾಡುವುದು, ತರ್ಕಬದ್ಧವಾದ ಉತ್ತರಕೊಡುವದು ಮತ್ತು ಆ ಉತ್ತರಗಳನ್ನು ತನ್ನದೃಷ್ಟಿಯಿಂದ ಸಮರ್ಥಿಸಿಕೊಳ್ಳಲು ಬರುವುದು. ಇಷ್ಟೇ ಅಪೇಕ್ಷಿತವಿದೆ.

6. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಪ್ರಶ್ನೆಗಳ ಅಥವಾ ಪರಿಸ್ಥಿತಿಯ ಎಲ್ಲ ದೃಷ್ಟಿಯಿಂದ ಆಕಲನ ವಾಗಿಬೇಕೆಂದು ಎರಡೂ ಕಡೆಯಿಂದ ಪ್ರಶ್ನೆ ಕೇಳಿ ಅವರಿಗೆ ಸವಿಸ್ತಾರವಾಗಿ ಎಲ್ಲವನ್ನು ವಿಚಾರ ಮಾಡಲು ಅಪೇಕ್ಷಿತವಿದೆ

**ಗುಣಗಳ ನಿಯೋಜನೆ:**

1. ಈ ವಿಷಯದ ಸಲುವಾಗಿ ಯಾವುದೇ ಲೇಖಿನ ಪರೀಕ್ಷೆ ಇಲ್ಲ. ಆದರೆ ವರ್ಗದಲ್ಲಿ ಶೈಕ್ಷಣಿಕ ಪ್ರಕ್ರಿಯೆಯ ಸಾತತ್ಯಪೂರ್ಣ ಸರ್ವಂಕಷ ಮೌಲ್ಯಮಾಪನ ಹಾಗೂ ನೋಂದಣಿ ಇಡುವುದು ಅಪೇಕ್ಷಿತೆವಿದೆ.

2. ವಿದ್ಯಾರ್ಥಿಗಳು ಈ ವಿಷಯದ ಸಲುವಾಗಿ ಒಂದು 200 ಪುಟಗಳ ವಹಿ ಮಾಡಬೇಕು ಮತ್ತು ಉಪಕ್ರಮಗಳನ್ನು ವಹಿಯಲ್ಲಿ ಬಿಡಿಸುವುದು ಅಪೇಕ್ಷಿತವಿದೆ. ಅದನ್ನು ಅದರಲ್ಲಿ ಬಿಡಿಸಿರಿ ಯಾವುದೇ ಪ್ರಕಾರದ ಇತರ ಸಾಹಿತ್ಯವನ್ನು ಅದರ ಸಲುವಾಗಿ ಉಪಯೋಗಿಸಬಾರದು.

3. ಪ್ರತಿಯೊಂದು ಪಾಠದ ನಂತರ ಒಂದು ಮೌಲ್ಯಮಾಪನದ ರೂಪರೇಷೆಯನ್ನು ಕೊಡಲಾಗಿದೆ. ಅದರ ಪ್ರಕಾರ ವಿದ್ಯಾರ್ಥಿಗಳ ಸಾತತ್ಯಪೂರ್ಣ ಮೌಲ್ಯಮಾಪನ ಮಾಡಿ ಅದರ ನೋಂದಣಿಯನ್ನು ತಮ್ಮ ಕಡೆಗೆ ಇಡುವುದು ಅಪೇಕ್ಷಿತವಿದೆ. ವಿದ್ಯಾರ್ಥಿಗಳು ವಹಿಯಲ್ಲಿ ಮಾಡಿರುವವ ಕೆಲಸವನ್ನು ಪರೀಕ್ಷಿಸಿ ಅದನ್ನು ಪುಸ್ತಕದಲ್ಲಿ ಕೊಟ್ಟಿರುವ ಭಾರಾಂಶದಂತೆ ಗುಣಗಳನ್ನು ಕೊಡುವುದು ಅಪೇಕ್ಷಿತವಿದೆ, ವರ್ಷದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ದೊರೆತ ಗುಣಗಳ ಬೇರೀಜು ಮಾಡಿ ಅದರ ಮೇಲೆ ಅವರ ಶ್ರೇಣಿಯನ್ನು ನಿರ್ಧರಿಸಬೇಕು.

# ಅನುಕ್ರಮಣಿಕೆ


| ಅನುಕ್ರಮಾಂಕ | ಪ್ರಕರಣದ ಹೆಸರು | ಪುಟ ಸಂಖ್ಯೆ |
|---|---|---|
| 1. | ಸ್ವ - ಪರಿಚಯ | 1 |
| 2. | ಬೆಳವಣಿಗೆಯ ವಯಸ್ಸು | 14 |
| 3. | ಮೌಲ್ಯಗಳು | 22 |
| 4. | ಸಾಮಾಜಿಕ ನೇತೃತ್ವ | 31 |
| 5. | ಕಲಾ ರಸಸ್ವಾದ - ದೃಶ್ಯಕಲೆ | 42 |
| 6. | ಸಂಘರ್ಷವನ್ನು ಬಗೆಹರಿಸುವುದು | 58 |
| 7. | ಬೆಳವಣಿಗೆಗೆ ಪೂರಕವಾದ ಮಾನಸಿಕತೆ | 73 |
| 8. | ಕರಿಅರ | 83 |
| 9. | ಕಲಾ ರಸಸ್ವಾದ - ಪ್ರಯೋಗಜೀವಿ ಕಲೆ | 94 |


ಒಂದು ಊರಿನಲ್ಲಿ ರಾಘವನೆಂಬ ಒಬ್ಬ ಹುಡುಗ ವಾಸಿಸುತ್ತಿದ್ದ ರಾಘವ, ಲೋಬೊ, ನಿಶಾ, ಪ್ರತಾಪ ಹಾಗೂ ಸಮೀನಾ ಇವರು ಐವರೂ ಒಳ್ಳೆಯ ಗೆಳೆಯರಾಗಿದ್ದರು. ಈ ಗುಂಪು ಸ್ವಲ್ಪ. ತುಂಟಾಗಿದ್ದರೂ ಅವರ ಮನಸ್ಸು ಒಳ್ಳೆಯದಾಗಿತ್ತು. ಅವರ ಮನೆಗಳ ಸಮೀಪದಲ್ಲಿದ್ದ ಒಂದು ಚಿಕ್ಕ ಶಾಲೆಗೆ ಅವರು ಹೋಗುತ್ತಿದ್ದರು. ಅವರೆಲ್ಲರೂ ಒಂಬತ್ತನೆಯ ತರಗತಿಯಲ್ಲಿ ಕಲಿಯುತ್ತಿದ್ದರು. ಅವರೆಲ್ಲರಿಗೂ ಅವರ ಶಾಲೆ ಬಹಳ ಅಚ್ಚುಮೆಚ್ಚಿನದಾಗಿತ್ತು.
ದಿನಾಲೂ ಸಾಯಂಕಾಲ ಅವರಿಗೆ ಕ್ರಿಕೆಟ್, ಬ್ಯಾಡಮಿಂಟನ್ ಹಾಗೂ ಕಣ್ಣು ಮುಚ್ಚಾಲೆ ಆಡಲು ಬಹಳ ಇಷ್ಟ.
ಅವರ ಮನೆಗಳ ಹಿಂಬದಿಯಲ್ಲಿದ್ದ ಮಾವಿನ ಗಿಡದಡೀಯಲ್ಲಿ ಅವರು ಆಗಾಗ, ಗಂಟೆಗಟ್ಟಲೆ ಹರಟೆಹೊಡೆಯುತ್ತಿದ್ದರು.
ದೊಡ್ಡವರಾದ ನಂತರ ತಾವು ಏನುಮಾಡಬೇಕು ಎಂಬ ಪ್ರಶ್ನೆ ಆಗಾಗ ಅವರನ್ನು ಕಾಡುತ್ತಿತ್ತು. ರಾಘವನಿಗೆ ತಾನೊಬ್ಬ ಪ್ರಸಿದ್ಧವ್ಯಕ್ತಿ ಆಗಬೇಕೆಂದು ಅನಿಸುತ್ತಿತ್ತು ಅದಕ್ಕಾಗಿ ನಿಶ್ಚಿತವಾಗಿ ಏನು ಮಾಡಬೇಕು ಎಂಬುದು ತಿಳಿಯುತ್ತಿರಲಿಲ್ಲ.


ಲೋಬೋನಿಗೆ ಸ್ಕೆಚಿಂಗ್ ಮಾಡಲು ಪ್ರತಿಕೃತಿಗಳನ್ನು ತಯಾರಿಸಲುಚೆನ್ನಾಗಿಬರುತ್ತಿತ್ತು,ದೊಡ್ಡವನಾದನಂತರ ವಾಸ್ತು ರಚನೆ ಮಾಡುವವನಾಗಬೇಕೆಂದು ಅವನು ಕನಸ್ಸು ಕಾಣುತ್ತಿದ್ದ.
ಸಮೀನಾಳ ತಂದೆಗೆ ಅವಳು ದೊಡ್ಡವಳಾದನಂತರ ಶಿಕ್ಷಕಿ ಆಗಬೇಕೆಂದು ಅನಿಸುತ್ತಿತ್ತು
ಪ್ರತಾಪನಿಗೆ ಮಾತ್ರ ಏನೂ ತೋಚುತ್ತಿರಲಿಲ್ಲ. ಪ್ರತಿದಿನ ಮೂರು ಸಲ ಅವನ ಇಚ್ಛೆ ಬದಲಾಗುತ್ತ ಇರುತ್ತಿತ್ತು
ಇವರೆಲ್ಲರಲ್ಲಿ ನಿಶಾ ಇವರೆಲ್ಲರಿಗಿಂತ ಗಟ್ಟಿಗಳಾಗಿದ್ದಳು. ದೊಡ್ಡವಳಾಗಿ ತಾನು ಏನು ಆಗಬೇಕೆಂಬ ಪ್ರಶ್ನೆ ಅವಳನ್ನು ಕಾಡುತ್ತಿರಲಿಲ್ಲ
ಒಂದ ದಿನ ಎಲ್ಲರೂ, ಅವರು ದಿನಾಲೂ ಸೇರಿ ಕೂಡುವ ಸ್ಥಾನದಲ್ಲಿ ಸೇರಿದರು. ಆ ದಿನ ಎಲ್ಲರಿಗೂ ಒಳ್ಳೆಯ ದಿನವಾಗಿರಲಿಲ್ಲ. ಲೋಬೊನಿಗೆ ವರ್ಗದ ಪರೀಕ್ಷೆಯಲ್ಲಿ ಕಡಿಮೆ ಗುಣ ದೊರಕಿದ್ದವು. ರಾಘವನು ಒಂದು ಕಠಿಣವಾದ ಸಾಯಕಲ್ ಶರ್ಯತ್ತಿನಲ್ಲಿಭಾಗ ವಹಿಸಲಿಲ್ಲವೆಂದುಎಲ್ಲರೂ ಅವನನ್ನು ಅಂಜುಬರುಕ ಎಂದು ಚೇಷ್ಟೆ ಮಾಡಿದ್ದರು. ಪ್ರತಾಪನು ಪಾಲಕರ ಜೊತೆ ವಾದ ಮಾಡಿದ್ದ.
ಸಮೀನಾಳಿಗೆ ಅವಳ ಪಾಲಕರು ಹೊಸ ಬಟ್ಟೆ ತೆಗೆದು ಕೊಡಲಿಲ್ಲವೆಂದು ಸಿಟ್ಟಾಗಿದ್ದಳು ಮತ್ತು ನಿಶಾಳ ಪಾಲಕರು ಅವಳಿಗೆ ಒಬ್ಬಳೇ ಟ್ರೆಕಿಂಗಿಗೆ ಹೋಗಲು ಬಿಡಲಿಲ್ಲವೆಂದು ಅವಳು ದುಃಖಿಯಾಗಿದ್ದಳು. ಅವರೆಲ್ಲರೂ, ತಮಗೆ ಎಷ್ಟು ಕೆಟ್ಟೆನಿಸಿದೆ ಎಂಬುದರ ಬಗೆಗೆ ಮಾತನಾಡುತ್ತಿದ್ದರು. ತಮ್ಮ ಪರಿಸ್ಥಿತಿಯನ್ನು ಬದಲಿಸುವ ಶಕ್ತಿ ತಮ್ಮಲ್ಲಿದ್ದರೆಎಷ್ಟು ಒಳ್ಳೆಯದಾಗುತ್ತಿತ್ತು ಎಂದು ಎಲ್ಲರಿಗೂ ಅನಿಸಿತು
ಅಷ್ಟರಲ್ಲಿ ಒಂದು ದೊಡ್ಡ ಸಪ್ಪಳ ವಾಯಿತು
ZAP!
ಅವರೆಲ್ಲ ಹಿಂತಿರುಗಿ ನೋಡಿದಾಗ ಅವರಿಗೆ ಬಹಳ ಆಶ್ಚರ್ಯವಾಯಿತು.
ನಮಸ್ಕಾರ ಗೆಳೆಯರೆ, ನಾವು ನಿಮನ್ನು ಹೆದರಿಸಿದೆವೇ ನಿಮ್ಮಲ್ಲಿಯಾರೋ ಒಬ್ಬರು ಶಕ್ತಿಶಾಲಿ ಆಗಬೇಕೆಂದು ಇಚ್ಛೆ ಇದೆ ಎಂದು ನನಗೆ ಕೇಳಿ ಬಂದಿತು


ಓಹೋ !
ಧೈರ್ಯಧರ ಮತ್ತು ಧೈರ್ಯಶೀಲಾ!
ನನಗೆ ನನ್ನ ಕಣ್ಣಿನ ಮೇಲೆ ವಿಶ್ವಾಸವಾಗುತ್ತಿಲ್ಲ! ನಿಜವಾಗಿಯೂ ನೀವು ಬಂದಿರುವಿರಾ?
ಈಗ ನಾನು ನಮ್ಮ ವರ್ಗದಲ್ಲಿ ಹೇಳುವೆ ನಾವು ಪ್ರತ್ಯಕ್ಷವಾಗಿ ಧೈರ್ಯಧರ ಹಾಗೂ ಧೈರ್ಯಶೀಲಾ ಇವರನ್ನು ಕಂಡೆವೆಂದು
ನಿಮ್ಮಲ್ಲಿ ಇರುವ ಶಕ್ತಿ ಸಾಮರ್ಥ್ಯಗಳು ನಿಮ್ಮಲ್ಲಿ ಎಲ್ಲಿಂದ ಬಂದವು?
ನಿಮ್ಮನ್ನು ನೀವು ಸ್ವತಃ ಅರಿತು ಕೊಂಡಾಗ ಸಾಮರ್ಥ್ಯ ಬರುತ್ತದೆ! ನಾವು ಏನು ಇರುವೆವು ಎಂಬುದನ್ನು ಸ್ವತಃ ಅರಿತುಕೊಳ್ಳಬೇಕು.
ಅದನ್ನು ತಾವು ಸ್ವತಃ ಹುಡುಕಬೇಕು ಮಗು!
ಅದರೆ ನಾನು ಯಾರು ಆಗಿರುವೆ?

# 1 ಸ್ವ - ಪರಿಚಯ

**ಸ್ವಂತದ ಕ್ಷಮತೆಯನ್ನು ಗುರುತಿಸುವುದು.**



**ಉದ್ದೇಶಗಳು:**

(1) ಸ್ವತಃದ ಶಬ್ದಗಳಲ್ಲ 'ಸ್ವ- ಪರಿಚಯ' ಮಾಡಿಕೊಡುವುದು.


(2) ಸ್ವತಃದ ಪರಿಚಯದ ಮೇಲೆ ಪರಿಣಾಮ ಬೀರುವ ಘಟಕಗಳನ್ನು ಗುರುತಿಸಲು ಬರುವುದು.

(3) 'ಪ್ರತಿಯೊಬ್ಬವ್ಯಕ್ತಿಯಪರಿಚಯ ವೈಶಿಷ್ಟ್ಯಪೂರ್ಣವಾಗಿರುವುದು.

(4) ಸ್ವಂತದ ಬಲಸ್ಥಾನ, ನ್ಯೂನತೆ, ವಿಕಾಸದ ಸಂಧಿ ಹಾಗೂ ವಿಕಾಸದ ಮಾರ್ಗದಲ್ಲಿಯ ಆಹ್ವಾನಗಳ ರೂಪರೇಖೆಯನ್ನು ತಯಾರಿಸಲು ಬರುವುದು.


## 1.ನನ್ನ ಹೆಸರು:

- ನನ್ನ ಹೆಸರಿನ ಅರ್ಥವೇನು?
- ಸ್ವತಃದ ಹೆಸರನ್ನು ಬದಲಿಸಬೇಕೆಂದು ಅನಿಸುವುದೇ?
- ಹೆಸರು ಬದಲಿಸಿದರೂ ನೀವು ಅದೇ ವ್ಯಕ್ತಿ ಇರುವಿರಾ? ಕಾರಣವೇನು?



ಈ ವಿಷಯಕ್ಕಾಗಿ 200 ಪುಟಗಳ ವಹಿ ಮಾಡಿರಿ. ಆದಕ್ಕೆ ಕವ್ಹರ ಹಾಕಿ ಚಂದಾಗಿರಿಸಿರಿ. ಈ ಪುಸ್ತಕದಲ್ಲಿಯ ಎಲ್ಲ ಕೃತಿಗಳನ್ನು ಈ ವಹಿಯಲ್ಲಿ ಬರೆಯುವದಿದೆ.

## 2. ನನ್ನ ಚಿತ್ರ




ಸ್ವತಃದ ಪರಿಚಯ ಯಾವ ಚಿತ್ರದಿಂದ ಸ್ಪಷ್ಟವಾಗಬಲ್ಲದೂಅಂತಹ ಚಿತ್ರವನ್ನುವಹಿಯಲ್ಲಿ ಬಿಡಿಸಿರಿ. ಅದು ನಿಮ್ಮ ಇಲ್ಲವೆ ಯಾವುದೇ ಪ್ರಾಣಿಯದು ವಸ್ತುವಿನದು- ಅದರ ಸ್ವಭಾವ ಸ್ವತಃದ ಸ್ವಭಾವಕ್ಕೆ ಸರಿಹೊಂದಬಲ್ಲದಾದ/ಇಲ್ಲವೆ ಮುಕ್ತ ಚಿತ್ರದಸ್ವರೂಪದ್ದೂಇರಬಹುದು. ಈ ಚಿತ್ರದಿಂದನಿಮ್ಮ ಪರಿಚಯ ಆಗಬೇಕು. ಮೇಲೆ ತೋರಿಸಿದ ಚಿತ್ರಗಳು ಕೇವಲ ಉದಾಹರಣೆಗಾಗಿ ಇವೆ. ನಿಮ್ಮ ಚಿತ್ರದ ವರ್ಣನೆಯನ್ನು ಸ್ವಲ್ಪದರಲ್ಲಿಮಾಡಿರಿ. ಅದರಲ್ಲಿ ನೀವು ಬಿಡಿಸಿದ ಚಿತ್ರದ ಅರ್ಥ ಹೇಳಿರಿ. ಇಲ್ಲವೆ ಸ್ಪಷ್ಟೀಕರಣ ನೀಡಿರಿ. ನಿಮ್ಮ ವಹಿ ಪಕ್ಕದ ವಿದ್ಯಾರ್ಥಿಗೆ ಕೊಟ್ಟು ಅವನ ವಹಿ ನೀವು ತೆಗೆದುಕೊಂಡು ಅವನ ಚಿತ್ರವನ್ನುತಿಳಿದುಕೊಳ್ಳಿರಿ.

## 3. ವ್ಯಕ್ತಿಗತ ಅನುಭವ








ಈ ವರೆಗಿನ ಜೀವನದಲ್ಲಿಯ ಕೆಲವು ದುಃಖದ ಪ್ರಸಂಗಗಳು, ಓದಿದ ಪುಸ್ತಕ, ನೋಡಿದ ಊರುಗಳು (ಸ್ಥಳ/ವಸತಿ), ನೋಡಿದ ಚಲನ ಚಿತ್ರಗಳು ಇವುಗಳ ಮೂಲಕ ನಿಮ್ಮ ನಡುವಳಿಕೆ, ವಿಚಾರ, ಸ್ವಭಾವಗಳ ಮೇಲೆ ಆಳವಾದ ಪರಿಣಾಮ ವಾದದ್ದು ಕಂಡುಬರುವುದು.

**ಇಂತಹ ಪರಿಣಾಮ ಬೀರುವ ಘಟನೆಗಳನ್ನು ಮಹತ್ವದ ಅನುಭವಗಳೆಂದು ತಿಳಿಯಲ್ಪಡುವುದು.**

ಮೂರು ಅನುಭವಗಳ ಆಯ್ಕೆ ಮಾಡಿರಿ. ಉದಾ: ಚಿಕ್ಕ ತಮ್ಮ / ತಂಗಿ ಹುಟ್ಟಿದ್ದು; ಯಾವುದೇ ಒಂದು ಆಟಗಾರನ/ಳ ಚಲನಚಿತ್ರ; ಪಾಲಕರು ನೆರೆಮನೆಯವರಿಗೆ ಮಾಡಿದ ಸಹಾಯ; ನೋಡಿದ ಅಪಘಾತ ಮುಂತಾದ ಮಹತ್ವದ್ದೆನಿಸುವ ಯಾವುದೇ ಅನುಭವ ಬರೆಯಬಹುದು. ಈ ಅನುಭವಗಳಿಂದ ಯಾರು ಪಾಠಕಲಿಯುವರೋ ಅವರ ವ್ಯಕ್ತಿತ್ವದಮೇಲೆ ಅದರ ಪರಿಣಾಮವಾಗುವುದು.


ಬಾಲ್ಯದಿಂದ ಎಲ್ಲ ಮಹತ್ತದ 'ಅನುಭವ'ಗಳನ್ನು ವಹಿಯಲ್ಲಿ ಬರೆಯಲು ಹೇಳಿರಿ. ಅದನ್ನು ಆ ಪ್ರಸಂಗದಂತೆ/ಅನುಭವದಿಂದ ವ್ಯಕ್ತಿಮತ್ವದ ಮೇಲೆ ಪರಿಣಾಮ ಬೀರುವ ಮೂರು ಮುಖ್ಯ ಅನುಭವಗಳನ್ನು ಆಯ್ಕೆ ಮಾಡಲು ಹೇಳಿರಿ.

ಆ ಅನುಭವದಿಂದ ಏನು ಕಲಿತೇವು ಅದನ್ನು ಬರೆಯಲು ಹೇಳಿರಿ.




## 4. ಸ್ಫೂರ್ತಿ ನೀಡುವ ಇಲ್ಲವೆ ಆದರ್ಶ ವ್ಯಕ್ತಿ:

ಸ್ವತಃಕ್ಕೆ ಪ್ರೇರಣೆ ನೀಡುವಂತಹ ಆದರ್ಶ ಎನಿಸುವ ಮೂರು ವ್ಯಕ್ತಿಗಳ ಹೆಸರು ಬರೆಯಿರಿ. ಆ ವ್ಯಕ್ತಿ ನಿಮ್ಮ ಪಾಲಕರು ಶಿಕ್ಷಕ, ಆಟಗಾರ, ಕಲಾಕಾರ,






## 5. ಅಭಿಮಾನ ಪಡುವ ಸಂಗತಿಗಳು:

ಒಂದು ವಿಶಿಷ್ಟ ಇಲ್ಲವೆ ಒಳ್ಳೆಯ ಸಂಗತಿಯ ಬಗೆಗೆ ನಾವು ಅಭಿಮಾನ ಪಡುತ್ತೇವೆ. ಆ ಸಂಗತಿಗಳನ್ನು ನೆನಪಿಸಿಕೊಂಡಾಗ ನಮಗೆ ಬಹಳ ಆನಂದ ಸಿಗುತ್ತದೆ.

ಇಂತಹ, ಅಭಿಮಾನಾಸ್ಪದ ಮೂರು ಘಟನೆಗಳನ್ನು ನೆನಪಿಸಿಕೊಂಡು ವಹಿಯಲ್ಲಿ ಬರೆಯಿರಿ.



ಅಭಿಮಾನ ಪಡುವಂತಹ ಪದಕ ಇಲ್ಲವೆ ಬಿಲ್ಲೆಗಳನ್ನು (badges) ತಯಾರಿಸಿಕೊಳ್ಳಿರಿ. ಅವುಗಳನ್ನು ಸಮವಸ್ತ್ರದ ಮೇಲೆ ಹಚ್ಚಲು ಹೇಳಿರಿ. ನಂತರ ಎಲ್ಲರೂ ವರ್ಗದಲ್ಲಿ ತಿರುಗಲಿ. ಅವರು ನಿಂತನಂತರ, ಪ್ರತಿಯೊಬ್ಬರು ತಮ್ಮ ಎರುರು ನಿಂತ ವಿದ್ಯಾರ್ಥಿಗೆ ಸ್ವತಃದ ಪದಕದ ಬಗೆಗೆ, ಅದು ಯಾವಾಗ ಸಿಕ್ಕಿತು ಎಂಬುದರ ಬಗೆಗೆ ಹೇಳಲಿ.. ಇದರಿಂದ ಪರಸ್ಪರರ ಹೆಗ್ಗಳಿಕೆಯ ಬಗ್ಗೆ ತಿಳಿಯುವುದು.

ಮೂರು ಒಳ್ಳೆಯ ಕೃತಿಗಳ ಇಲ್ಲವೆ ದೊರಕಿದ ಬಹುಮಾನ ಬಿಲ್ಲೆಗಳ, ಪದಕಗಳ ಚಿತ್ರಗಳನ್ನು ವಹಿಯಲ್ಲಿ ಬಿಡಿಸಿರಿ. ಪ್ರತಿಯೊಂದು ಚಿತ್ರದ ಕೆಳಗೆ ಆ ಪದಕ ಏತಕ್ಕಾಗಿ ಸ್ವತಃಕ್ಕೆ ಕೊಡುತ್ತಿರುವಿರಿ ಎಂಬುದನ್ನು ಬರೆಯಿರಿ. ಕೆಳಗಿನ ಚಿತ್ರದಲ್ಲಿ ಕೆಲವು ನಮೂನೆಗಳನ್ನು ತೋರಿಸಲಾಗಿದೆ.



ದಿನನಿತ್ಯ ತಾಯಿಗೆ ಅಡುಗೆ ಮನೆಯಲ್ಲಿ ಸಹಾಯ ಮಾಡಿದೆ



ಖೋ - ಖೋ ದ ಆಟ ಗೆದ್ದಿತು.



ಸಂಕಟದಿಂದ ಒಬ್ಬ ವ್ಯಕ್ತಿಯನ್ನು ಕಾಪಾಡಿದೆ.

ವಿದ್ಯಾರ್ಥಿಗಳ ಕೌಶಲದ ಬಗ್ಗೆ ಪ್ರಶಂಸೆ ಮಾಡಿರಿ. ಒಬ್ಬ ವ್ಯಕ್ತಿಯೆಂದು ಹೊಗಳಬೇಡಿರಿ. ಅವರಿಗೆ ಅಭಿಮಾನ ಎನಿಸುವಂತಹ ಸಣ್ಣ ಪುಟ್ಟ ಉದಾಹರಣೆಯನ್ನೂ ಸ್ವೀಕರಿಸಿರಿ.

ಅಭಿಮಾನ ಪಡುವಂತಹ ಸಂಗತಿಗಳನ್ನು ಶಾಲೆಗನುಸರಿಸಿ ಪರಿಸರಕ್ಕನುಸರಿಸಿ ಭೌಗೋಲಿಕ. ಸಾಮಾಜಿಕ ಪರಿಸ್ಥಿತಿಗನುಸರಿಸಿ ಬದಲಾಗಬಹುದು. ಇದನ್ನು ಮುಂಚಿತವಾಗಿ ಹೇಳಿರಿ. ಕೆಲವು ಕೃತಿಗಳ ಬಗ್ಗೆ ನಮಗೆ ಹೇಗೆ ಅಭಿಮಾನ ಎನಿಸುವುದೋ, ಅದರಂತೆಯೇ ಕೈಯಿಂದ ಆದ ಕೆಲವು ಕೃತಿಗಳ ಬಗ್ಗೆ ಅಥವಾ ನಮ್ಮೊಂದಿಗೆ ಸಂಬಂಧಿಸಿದ ಘಟನೆಗಳ ಬಗ್ಗೆ ನಮಗೆ ಹೇಸಿಕೆ ಎನಿಸುವುದು. ಅವನ್ನು ಯಾರಿಗೂ ಹೇಳಬಾರದು ಎಂದು ಅನಿಸುತ್ತದೆ.

## 6. ನನ್ನ ಅನಿಸಿಕೆ ಭಾವನೆಗಳು:

ಬೇರೆಬೇರೆ ಪ್ರಸಂಗಗಳಲ್ಲಿಯ ಪ್ರತಿಕ್ರಿಯೆಗಳು ಅಥವಾ ವರ್ತನೆ, ಭಾವನೆಗಳಿಂದಾಗಿ ಬರುವವು. ವೈಶಿಷ್ಟ್ಯ ಪೂರ್ಣವಾದ ಭಾವನಾತ್ಮಕ ಪ್ರತಿಕ್ರಿಯೆಗಳಿಂದಾಗಿ ನಾವು ಇತರರಿಗಿಂತ ಬೇರೆಬೇರೆ ಇರುವುದು ತಿಳಿದು ಬರುತ್ತದೆ.

ಪ್ರೇಮ, ಕೋಪ, ಆನಂದ, ದುಃಖ, ಭೀತಿ, ಮುಂತಾದ ಭಾವನೆಗಳ ಅನುಭವ ಬಂದಾಗ, ಪ್ರತಿಯೊಬ್ಬರ ವರ್ತನೆ ಕೆಲವು ಸಂದರ್ಭಗಳಲ್ಲಿ ಭಾವನೆಗಳ ಅನುಭವಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು.

ಪ್ರತಿಯೊಂದು ಪ್ರಸಂಗ ಓದಿ, ಆ ಪ್ರಸಂಗದಲ್ಲಿ ಯಾವ ಪ್ರತಿಕ್ರಿಯೆ ದೊರಕಿತು ಎಂಬುದನ್ನು ನೋಡಿರಿ. ಪ್ರತಿಯೊಂದು ಪರ್ಯಾಯದ ಉತ್ತರವನ್ನು ಎಷ್ಟು ವಿದ್ಯಾರ್ಥಿಗಳು ನೀಡಿದರು ಎಂಬುದನ್ನು ನೋಡಬೇಕು. ಇದರಿಂದ ಒಂದೇ ಪ್ರಸಂಗಕ್ಕೆ ಹೇಗೆ ಭಿನ್ನ ಪ್ರತಿಕ್ರಿಯೆ ಸಿಗುವುದೆಂಬುದು. ತಿಳಿದು ಬರುವುದು. ಒಂದು ಕಾಲ್ಪನಿಕ ಪ್ರಸಂಗ ನೀಡಿ. ವಿದ್ಯಾರ್ಥಿಗಳು ಆಗ ಹೇಗೆ ಪ್ರತಿಕ್ರಿಯೆ ನೀಡುವರು ಎಂಬುದನ್ನು ಅವರಿಂದ ತಿಳಿದುಕೊಳ್ಳಬಹುದು.

**ಕೆಳಗೆ ಕೊಟ್ಟ ಕೆಲವು ಪ್ರಸಂಗಗಳ ಬಗ್ಗೆ ನಿಮಗೆ ಏನು ಅನಿಸುತ್ತದೆ? ನಿಮ್ಮ ಪ್ರತಿಕ್ರಿಯೆಗಳನ್ನು ವಹಿಯಲ್ಲಿ ಬರೆಯಿರಿ.**

**ಸ್ಪರ್ಧೆಯ ನೀವು ಸೋತಿರುವಿರಿ.**
1. ನಿರಾಶೆ
2. ಸಿಟ್ಟು
3. ಮತ್ಸರ
4. ಏನು ಅನಿಸುವುದಿಲ್ಲ
5. ಇವಲ್ಲದೆ ಇನ್ನಿತರ

**ಒಂದು ಕಠಿಣವಾದ ಇಲ್ಲವೆ ಧೈರ್ಯದ ಕೃತಿ ಮಾಡುವ ಆಹ್ವಾನ ನೀಡಲಾಗಿದೆ.**
1. ಉತ್ಸಾಹ
2. ಭಯ
3. ನಿರಾಶೆ
4. ಏನೂ ಅನಿಸುವುದಿಲ್ಲ
5. ಇವಲ್ಲದೆ ಇನ್ನಿತರ


**ನೀವು ಒಂದು ದಟ್ಟಣೆಯ ಸ್ಥಳದಲ್ಲಿ ನೀವು ಇರುವಿರಿ.**
1. ಆನಂದ/ಶಾಂತರಾಗಿರುವಿರಿ
2. ಅಸುರಕ್ಷಿತ ರಾಗಿರುವಿರಿ
3. ಉತ್ಸಾಹಿಗಳಾಗಿರುವಿರಿ
4. ಇವಲ್ಲದೆ ಇನ್ನಿತರ

**(ಯಾರೋ ಒಬ್ಬರು) ನಿಮ್ಮ ಪ್ರಶಂಶೆ/ ವರ್ಣನೆ ಮಾಡಿದಾಗ.**
1. ಅಭಿಮಾನ ಎನಿಸುವುದು
2. ದೊಡ್ಡಸ್ಥಿಕೆ/ವರ್ಚಸ್ಸು
3. ಉತ್ಸಾಹ
4. ಇವಲ್ಲದೆ ಇನ್ನಿತರ

**ನಿಮ್ಮನ್ನು ಟೀಕಿಸಿದಾಗ ಅಥವಾ ನಿಮ್ಮ ಮೇಲೆ ದೋಷಾರೋಪ ಮಾಡಿದಾಗ.**
1. ದುಃಖ
2. ಸಿಟ್ಟು
3. ನ್ಯೂನತೆಯ ಭಾವನೆ
4. ಉದಾಸೀನ
5. ಇವಲ್ಲದೆ ಇನ್ನಿತರ

**ನೀವು ಒಬ್ಬರೇ ಇರುವಿರಿ.**
1. ಸಮಾಧಾನ/ಆರಾಮು
2. ಉದಾಸ
3. ಅಸ್ವಸ್ಥತೆ
4. ಅಸುರಕ್ಷಿತತೆ
5. ಇವಲ್ಲದೆ ಇನ್ನಿತರ

**ಕೆಳಗಿನ ಚಿತ್ರಗಳ ಭಾವನೆಗಳನ್ನು ಗುರುತಿಸಿರಿ ಅವುಗಳ ಹೆಸರು ಹೇಳಿರಿ. ಈ ಭಾವನೆಗಳನ್ನು ನೀವು ಯಾವಾಗ ಅನುಭವಿಸಿರುವಿರಿ. ಇಂತಹ ಪ್ರಸಂಗಗಳಲ್ಲಿ ನೀವು ಮಿತಿಮೀರಿದ ಭೂಮಿಕೆ ಅನುಭವಿಸಿರುವಿರಾ? ಅದರಲ್ಲಿ ಏನಾದರೂ ಹಾನಿ ಆಗಿದೆಯಾ? ತೀವ್ರ, ಮಿತಿಮೀರಿದ ಭಾವನೆ ಎಷ್ಟುಕಾಲ ತಾಳುವವು ಎಂಬುದರ ವಿಚಾರ ಮಾಡಿರಿ ಮತ್ತು ಅದನ್ನು ನಿಮ್ಮ ವಹಿಯಲ್ಲಿ ಬರೆದಿಡಿರಿ.**




### ಭಾವನೆಗಳು ಹಾಗೂ ವಿಚಾರಗಳು:

ಕೆಳಗಿನ ವಾಕ್ಯಗಳ ಬಗ್ಗೆ ವಿಚಾರ ಮಾಡಿರಿ–

1. ಕೆಲವು ಜನರಿಗೆ ರಾತ್ರಿಯಲ್ಲಿ ಬಹಳ ಸಮಯದ ನಂತರ ಒಬ್ಬರೇ ನಡೆದು ಹೋಗುವಾಗ 'ಭಯವೆನಿಸುತ್ತದೆ' ಏಕೆ? ಏಕೆಂದರೆ ಅವರ ಮನದಲ್ಲಿ 'ವಿಚಾರ'ಗಳುಬರುವವು, ತಮ್ಮನ್ನು ಯಾರಾದರೂ ದೋಚಲು ಬಂದರೆ? ಎಂಬ ವಿಚಾರ.
2. ಒಂದು ಸ್ಪರ್ಧೆಯಲ್ಲಿ ಪ್ರಥಮ ಪಾರಿತೋಷಕ ಸಿಕ್ಕರೆ 'ಆನಂದ ಆಗುವುದು'? ಏಕೆ? ಏಕೆಂದರೆ ನಾವು ಪಟ್ಟ ಕಷ್ಟಕ್ಕೆ ಫಲ ದೊರಕಿತು ಎಂಬ 'ವಿಚಾರ' ಮನಸ್ಸಿನಲ್ಲಿ ಬರುವುದು.
3. ನಾವು ಮಾಡದ ತಪ್ಪಿನ ಬಗ್ಗೆ ಯಾರಾದರೂ ನಮ್ಮ ಮೇಲೆಸಿಟ್ಟಾದರೆ ನಮಗೆ 'ಸಿಟ್ಟು ಬರುವುದು', ಏಕೆಂದರೆ ನಮ್ಮ ಮನಸ್ಸಿನಲ್ಲಿ,ನಮ್ಮ ಮೇಲೆ ಅನ್ಯಾಯವಾಗಿದೆ ಎಂಬ 'ವಿಚಾರ' ಬರುತ್ತದೆ.

   ಮೇಲಿನ ಉದಾಹರಣೆಗಳಿಂದ ತಿಳಿದುಬರುದೇನೆಂದರೆ, ನಮ್ಮ ಭಾವನೆ ಹಾಗೂ ವಿಚಾರಗಳಲ್ಲಿ ಪರಸ್ಪರ ಸಂಬಂಧವಿದೆ. ನಮಗೆ ಬರುವ ತೀವ್ರ ಭಾವನೆಗಳು ನಮ್ಮಲ್ಲಿಯ ಯಾವ ವಿಚಾರಗಳಿಂದ ನಿರ್ಮಾಣವಾದವು ಎಂಬುದನ್ನು ತಿಳಿದುಕೊಂಡರೆ ಆ ಭಾವನೆಗಳ ವ್ಯವಸ್ಥೆ ಮಾಡುವುದು ಸುಲಭವಾಗಬಲ್ಲದು.

## 7. ನನ್ನ ಪಾತ್ರ:

ಒಂದೇ ಸಮಯದಲ್ಲಿ ವ್ಯಕ್ತಿಗೆ, ಮಗ–ಮಗಳು, ಸಹೋದರ–ಸಹೋದರಿ ವಿದ್ಯಾರ್ಥಿ, ಗೆಳೆಯ ಮುಂತಾದ ಪಾತ್ರಗಳನ್ನುನಿಭಾಯಿಸಬೇಕಾಗುವುದು,ಹಾಗೂ ಅದರಂತೆ ನಡೆದು ಕೊಳ್ಳಬೇಕಾಗುವುದು.

ಪ್ರತಿಯೊಂದು ಪಾತ್ರದಲ್ಲಿ ವ್ಯಕ್ತಿಯು ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಆ ವ್ಯಕ್ತಿಯ ಸುತ್ತಮುತ್ತಲು ಇರುವ ವ್ಯಕ್ತಿಗಳ,ಸಮಾಜದ ಕೆಲವು ಅಪೇಕ್ಷೆಗಳು ಇರುವವು.

ಮಗ-ಮಗಳು, ತಾಯಿ-ತಂದೆಯರ ಪಾತ್ರ ವಹಿಸುವ ವ್ಯಕ್ತಿ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ಸಮಾಜದ ಒಂದು ನಿರ್ದಿಷ್ಟ ಅಭಿಪ್ರಾಯ ಇರುವುದು. ಅವುಗಳಿಗೆ 'ಅಚ್ಚೊತ್ತಿದ ಕಲ್ಪನೆ' ಇಲ್ಲ 'ಸ್ಥಿರ ಪ್ರತಿಮೆ' ಎನ್ನುವರು. ಕೆಲವು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ-



ಹುಡುಗರು ಅಳುವುದಿಲ್ಲ. ಅವರು ಗಟ್ಟಿಗರು, ದಷ್ಟಪುಷ್ಟರಾಗಿರುವರು. ಹುಡುಗರು ಅಡುಗೆಮನೆಯಲ್ಲಿ ಕೆಲಸಮಾಡುವುದಿಲ್ಲ



ಅಡುಗೆಯನ್ನು ಹೆಂಗೆಸರೇ ಮಾಡಬೇಕು. ತಾಯಿಯು ತನ್ನ ನೌಕರಿ/ ವ್ಯವಸಾಯಕ್ಕಿಂತ ಮಕ್ಕಳ ಸಂಗೋಪನದತ್ತ ಲಕ್ಷ್ಯ ನೀಡಬೇಕು ಮಕ್ಕಳ ಕಾಳಜಿ ವಹಿಸುವಲ್ಲಿ ತಾಯಿ ಹೆಚ್ಚು ಜವಾಬ್ದಾರಿ ವಹಿಸಬೇಕು.



ಹೆಣ್ಣುಮಕ್ಕಳು ಶಾರೀರಿಕ ಶ್ರಮದ ಕೆಲಸ ಮಾಡಲಾರರು ಅವರು ಸಹನಶೀಲರು. ನಮ್ರ ಹಾಗೂ ಆಜ್ಞಾಧಾರಕರಾಗಿರುವರು ಹೊಲಿಗೆ ಕಸೂತಿ ಮಾಡುವುದು ಹುಡುಗಿಯರದೇ ಕೆಲಸವಾಗಿದೆ.




ಕುಟುಂಬದ ಮಹತ್ವದ ನಿರ್ಣಯಗಳನ್ನು ತಂದೆಯವರು ತೆಗೆದುಕೊಳ್ಳಬೇಕು. ಕುಟುಂಬದ ಚರಿತಾರ್ಥಕ್ಕೆಗೆ ತಂದೆಯ ಹಣಗಳಿಸಬೇಕು.

ಇಲ್ಲಿ ಕೆಲವು ಸಾಂಪ್ರದಾಯಿಕ ಕಲ್ಪನೆಗಳ ಉದಾಹರಣಗೆಗಳನ್ನು ಕೊಡಲಾಗಿದೆ. ಅವುಗಳ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಿರಿ.ಈ ಉದಾಹರಣೆಗಳನ್ನು ವಿದ್ಯಾರ್ಥಿಗಳು ಒಪ್ಪುವರೆ? ಅವರ ಕಾರಣಗಳ ಮೇಲೆ ಚರ್ಚೆ ಮಾಡಿರಿ. ಇಂತಹ ಇನ್ನಿತರ ಭೂಮಿಕೆಗಳ ಅಚ್ಚೊತ್ತಿದೆದ ಕಲ್ಪನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಗೊತ್ತಿದೆಯೆ? ಇಂತಹ ಕಲ್ಪನೆ ಹಾಗೂ ಅಪೇಕ್ಷೆಗಳು ಬದಲಾಗಬೇಕು ಎಂದು ಹುಡುಗರಿಗೆ ಅನುಸುತ್ತದೆಯೆ?
ಅಚ್ಚೊತ್ತಿದ ಕಲ್ಪನೆಗಳು ಸರಿ ಇವೆ ಎಂದಿಲ್ಲ. ಕಾಲಕ್ರಮವಾಗಿ ಅವು ಬದಲಾಗುವವು ಎಂಬುದನ್ನು ತಿಳಿಸಿ ಹೇಳಬೇಕು.

ಈ ವಿವಿಧ ಪಾತ್ರಗಳ ಹಾಗೂ ಆ ಪಾತ್ರಗಳಿಂದ ಅಪೇಕ್ಷಿತವಿರುವ ವರ್ತನೆಗಳ ಬಗ್ಗೆ ವಿಚಾರ ಮಾಡಿರಿ.

ಚಿತ್ರದಲ್ಲಿ ಒಬ್ಬ ವ್ಯಕ್ತಿಯ ಭಿನ್ನ ಪಾತ್ರಗಳ ವರ್ತನೆಗಳ ಉದಾಹರಣೆ ಕೊಟ್ಟಿದೆ. ಉಳಿದ ಪಾತ್ರಗಳ ವರ್ತನೆಯ ಉದಾಹರಣೆಗಳನ್ನುನೀವು ಪೂರ್ಣ ಮಾಡಿರಿ.




ಒಬ್ಬ ವ್ಯಕ್ತಿಯ ಬೇರೆ ಬೇರೆ ಪಾತ್ರಗಳನ್ನುತೋರಿಸಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಈ ಎಲ್ಲಾ ಪಾತ್ರಗಳನ್ನುನಿಭಾಯಿಸಲೇ ಬೇಕಾಗುವುದು ಎಂದಿಲ್ಲ, ಈ ಉದಾಹರಣೆಗಳಂತೆ ಸ್ವತಃದ ಪಾತ್ರ ಹಾಗೂ ಆ ಪಾತ್ರದಿಂದ ಅಪೇಕ್ಷೆ ಇರುವ ವರ್ತನೆಯ ರೇಖಾಚಿತ್ರವನ್ನುವಹಿಯಲ್ಲಿ ಬಿಡಿಸಿರಿ.

## ಸ್ವಲ್ಪ ಮೋಜು


### ಒಂದರಂತಿರುವ ಇನ್ನೊಂದನ್ನು ಗುರುತಿಸುವುದು.

ನಾಲ್ಕು, ನಾಲ್ಕು ವಿದ್ಯಾರ್ಥಿಗಳ ಗುಂಪು ಮಾಡಿ, ಶಾಲೆಯ ಮೈದಾನಕ್ಕೆ ಕರೆದೊಯ್ಯಿರಿ. ಹೂವು, ಎಲೆ, ಹರಳು, ಕಡ್ಡಿ ಮುಂತಾದ ಯಾವುದೇ ವಸ್ತುವಿನ ಸಮಾನ ನಮೂನೇಗಳನ್ನು ಒಂದೆಡೆ ಶೇಖರಿಸಲು ಹೇಳಿರಿ.



ಮುಂದಿನ ಸಂಗತಿಗಳ ಆಧಾರದ ಮೇಲೆ ಚರ್ಚೆ ಮಾಡಿರಿ. ಯಾವುದೇ ಗುಂಪಿಗೆ ಎರಡು ಬಹಳ ಸಮಾನವಾದ ವಸ್ತುಗಳು ಸಿಗದಿದ್ದರೆ, ಏಕೆ ಸಿಗಲಿಲ್ಲ? ಮನುಷ್ಯರಲ್ಲಿ ಇಂತಹ ಭಿನ್ನತೆಯ ವೈಶಿಷ್ಟ್ಯಗಳಾವವು?

ಸೇರಿಸಿದ ಎರಡು ವಸ್ತುಗಳಲ್ಲಿ ಒಂದಿಷ್ಟೂ ಭೇದ ವಿರಬಾರದೆಂದು ಸೂಚನೆಕೊಡಿರಿ. ವಸ್ತುಗಳನ್ನು ಹುಡುಕಲು ಮಕ್ಕಳಿಗೆ ಹತ್ತು ಮಿನಿಟುಕೊಡಿರಿ.




### ಗುಣ-ದೋಷ ಹೇಳುವುದು:


ವರ್ಗದಲ್ಲಿಯ ಎರಡು ಗುಂಪುಗಳಲ್ಲಿ ಒಂದು ಗುಂಪು ಹೂವು. ಹಣ್ಣು, ಪ್ರಾಣಿ, ಪದಾರ್ಥ, ವಾಹನ, ಸ್ಥಳ ಮುಂತಾದವುಗಳಲ್ಲಿಯ ಒಂದು ಹೆಸರು ಹೇಳಲಿ. ಅದರ ಒಳ್ಳೆಯ ಗುಣ-ವೈಶಿಷ್ಟ್ಯಗಳನ್ನೂ ಹೇಳಲಿ.

ಎರಡನೆಯ ಗುಂಪು ಅದರ ಸೀಮೆ ಇಲ್ಲವೆ ದೋಷ ಹೇಳಲಿ.

ನಂತರ ಎರಡನೆಯ ಗುಂಪು ಒಂದು ಹೆಸರನ್ನು ಹೇಳಿ ಅದರ ಒಳ್ಳೆಯ ಗುಣ ಹೇಳಲಿ.

ಮೊದಲನೆಯ ಗುಂಪು ಅದರಲ್ಲಿಯ ದೋಷಗಳನ್ನು ಹೇಳಲಿ.

ಈ ಆಟವನ್ನು, ಕೆಲ ಮಿನಿಟುಗಳ ನಂತರ ಇಲ್ಲವೆ ದೋಷಗಳನ್ನು ಹೇಳಲು ಸಾಧ್ಯವಿಲ್ಲದಾಗ ನಿಲ್ಲಿಸಬೇಕು.





**ಚರ್ಚೆ ಮಾಡಿರಿ :**

ಒಂದು ವಸ್ತುವಿನಲ್ಲಿ ಯಾವುದೇ ಸೀಮೆ ಇಲ್ಲವೆ ದೋಷವಿಲ್ಲದ ಹೆಸರು ಸಿಗಬಹುದೇ? ಇದೇ ಸಂಗತಿ ಮನುಷ್ಯರಿಗೆ ಸಂಬಂಧ ಪಡಬಹುದೆ? ಹೇಗೆ?

## ಸ್ವಲ್ಪ ಮೋಜು

### (1) ಇದನ್ನು ಮಾಡಿ ನೋಡಿರಿ:




(ಅ) ಕೈಯಲ್ಲಿಪೆನ್ನುತೆಗೆದುಕೊಳ್ಳಿರಿ.ತೋರುಬೆರಳು,ನಡುವಿನ ಬೆರಳು ಇವನ್ನು ಉಪಯೋಗಿಸದೆ ಉಳಿದ ಮೂರು ಬೆರಳುಗಳನ್ನು ಉಪಯೋಗಿಸಿ ಎರಡು-ಮೂರು ವಾಕ್ಯಗಳನ್ನು ಬರೆಯಿರಿ.

(ಬ) ಚಿತ್ರದಲ್ಲಿತೋರಿಸಿದಂತೆ ಐದೂ ಬೆರಳುಗಳ ಸುತ್ತ ದಾರ ಕಟ್ಟಿರಿ ಈ ಕೈಯಿಂದ ಚಿತ್ರ ಬಿಡಿಸುವುದು ನೆಲದಮೇಲಿನ ಚಿಕ್ಕ ವಸ್ತುವನ್ನು ಎತ್ತುವುದು, ಗಿಡದ ಮೇಲೆ ಹತ್ತುವುದು, ಕುರ್ಚಿ ಎತ್ತುವುದು ಮುಂತಾದ ಕ್ರಿಯೆಗಳನ್ನು ಮಾಡಲು ಸಾಧ್ಯವೇ ಎಂಬುದನ್ನು ಅನುಭವಿಸರಿ.

**ಚರ್ಚೆ ಮಾಡಿರಿ :**
ಎರಡೂ ಕೃತಿಗಳನ್ನುಮಾಡುವುದು ಸುಲಭವಿತ್ತೇ? ಕಾರಣ ಹೇಳಿರಿ. ಈ ಕೃತಿಯಿಂದ ಬೇರೆ ಬೇರೆ ಬೆರಳುಗಳ ಮಹತ್ವ ತಿಳಿಯಿತೆ ?

### (2) ಉತ್ತಮ ವ್ಯಕ್ತಿ

ಕೆಳಗಿನ ಚಿತ್ರಗಳಲ್ಲಿಯ ವ್ಯಕ್ತಿಇ ಮಾಹಿತಿ ಪಡೆಯಿರಿ. ಅವರ ಯಾವ ಗುಣಗಳು ನಿಮಗೆ ಹೆಚ್ಚು ಇಷ್ಟವಾದವು?





ಇಷ್ಟವಾದ ಗುಣಗಳ ಬಗ್ಗೆ ಚರ್ಚೆ ಮಾಡಿರಿ. ಇವರಲ್ಲದೆ,ನಿಮಗೆ ಇಷ್ಟವಾದ ಇನ್ನಿತರ ವ್ಯಕ್ತಿಗಳ ವೈಶಿಷ್ಟ್ಯಪೂರ್ಣವಾದ ಗುಣಗಳ ಬಗ್ಗೆ ಚರ್ಚೆ ಮಾಡಿರಿ. ಈ ನಾಲ್ಕು ವ್ಯಕ್ತಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿರುವರು.





***ಗಮನಿಸಬೇಕಾದ ಸಂಗತಿಗಳು:***

- *ಪ್ರತಿಯೊಬ್ಬ ವ್ಯಕ್ತಿಯೂ ಅವರ ವಿಶೇಷ ಕ್ಷಮತೆ ಹಾಗೂ ಸಾಮರ್ಥ್ಯಗಳಿಂದಾಗಿ ಭಿನ್ನ ಹಾಗೂ ಒಬ್ಬರೇ ಒಬ್ಬರಾಗಿರುವರು.*
- *ಕೈಯಿಂದ, ಪೂರ್ಣ ಕ್ಷಮತೆಯ ಕೆಲಸ ಆಗಬೇಕಾದರೆ ಐದೂ ಬೆರಳುಗಳನ್ನು ಉಪಯೋಗಿಸಬೇಕಾಗುವುದು, ಅದರಂತೆಯೇ ಜೀವನದಲ್ಲಿ ಪ್ರಗತಿ ಆಗಬೇಕಾದರೆ, ಸಮಾಧಾನದಿಂದ ಬಾಳಬೇಕಾದರೆ ನಮ್ಮ ವಿಶಿಷ್ಟ ಗುಣಗಳ, ಸೀಮೆಗಳ ಅರಿವನ್ನು ಪ್ರತಿಯೊಬ್ಬ ವ್ಯಕ್ತಿ ಇಡಲೇ ಬೇಕಾಗುವುದು.*

## ಓದಿರಿ ಹಾಗೂ ತಿಳಿದುಕೊಳ್ಳಿರಿ.



ಶರೀರದ ರಚನೆ, ಕ್ಷಮತೆ, ಸ್ವಭಾವದ ವೈಶಿಷ್ಟ್ಯ, ವಿಚಾರ ಹಾಗೂ ಹಾವಭಾವ - ಭಾವನೆ ಈ ಎಲ್ಲವುಗಳಒಂದೆಡೆ ಸೇರಿಸಿ ವಿಚಾರ ಮಾಡಿದರೆ ಪ್ರತಿಯೊಬ್ಬವ್ಯಕ್ತಿ ಬೇರೆಯಾಗಿ ವೈಶಿಷ್ಟ್ಯಪೂರ್ಣಹಾಗೂ ಏಕಮೇವವಾಗಿರುವವರು.ವ್ಯಕ್ತಿಯಈ ಎಲ್ಲವೈಶಿಷ್ಟ್ಯಗಳಸೇರಿ ಒಂದು ಏಕಮೇವ ವಾಗಿರುವವರು.ವ್ಯಕ್ತಿಯ ಈ ಎಲ್ಲವೈಶಿಷ್ಟ್ಯಗಳಸೇರಿ ಒಂದು 'ಸ್ವ-ಪ್ರತಿಮೆ'ಇಲ್ಲವೆ 'ಸ್ವ-ಗುರುತು'ಎಂಬುದು ತಯಾರಾಗುವುದು.

**ನಿಮ್ಮ ಗುರುತು ಯಾವ ವೈಶಿಷ್ಟ್ಯಗಳನ್ನೊಳಗೊಂಡಿದೆ ?**

ಸ್ವತಃದ ಬಗ್ಗೆ ವಿಚಾರ ಮಾಡಿರಿ. ನಿಮ್ಮ ಶರೀರದ ರಚನೆ, ಕ್ಷಮತೆ, ಮಾನಸಿಕ ಗುಣ, ಶ್ರದ್ಧೆ,ಕುಟುಂಬದ ಮಾಹಿತಿ, ಭಾವನೆ ಹಾಗೂ ಸ್ವಭಾವ ಮುಂತಾದ ವಿಷಯಗಳ ಮಾಹಿತಿ, ಇರುವ ಒಂದು ಕವಿತೆಯನ್ನು ಮುಕ್ತ ಶಬ್ದಗಳಲ್ಲಿ ಬರೆಯಿರಿ. ಕವಿತೆಯಲ್ಲಿ ಮುಂದಿನ ಘಟಕಗಳು ಇರಲಿ.

ನಾನು.................................................................. (ಹೆಸರು ಬರೆಯಿರಿ)

(ಪಾಲಕರ ಹೆಸರು) ............................................ (ಇವರ ಮಗ/ಮಗಳು)

ಸಹೋದರ/ಸಹೋದರಿಯರಹೆಸರು ..................................................

ನನಗೆಇಷ್ಟ(ಮೂರುಸಂಗತಿಗಳು)........................................................

ನನಗೆ ಇಷ್ಟವಿಲ್ಲ (ಮೂರು ಸಂಗತಿಗಳು) ..................................................

ನಾನು ತಿರಸ್ಕರಿಸುತ್ತೇನೆ ......................................................................

ನನ್ನ ಶರೀರ ಹಾಗೂ ಸ್ವಭಾವದ ವೈಶಿಷ್ಟ್ಯಗಳು(ಎರಡು-ಎರಡು) ..............................

ನನಗೆ ಮಾಡುವುದಿದೆ (ಮೂರು ಸಂಗತಿಗಳು).............................................

ನನಗೆ ಹೆದರಿಕೆ ಇದೆ (ಒಂದು) ..........................................................

ನನ್ನ ಕನಸು (ಒಂದು) ......................................................................

ನನ್ನ ಇಚ್ಛೆ (ಒಂದು) ......................................................................

ನನ್ನ ನಿಶ್ಚಯ (ಒಂದು) ....................................................................

ಇದರ ಬಗ್ಗೆ ನನಗೆ ಅಭಿಮಾನವಿದೆ (ಒಂದು) ............................................

(ಈ ಕವಿತೆ ಮುಕ್ತ ಶಬ್ದಗಳಲ್ಲಿ ಬರೆಯಿರಿ. ಯಮಕ ಸರಿಹೊಂದಬೇಕೆಂಬ ಅವಶ್ಯಕತೆ ಇಲ್ಲ.)

***ಗಮನಿಸಬೇಕಾದ ಸಂಗತಿಗಳು:***

- *ಪ್ರತಿಯೊಬ್ಬವ್ಯಕ್ತಿಯಲ್ಲಿ ಕೆಲವು ಕ್ಷಮತೆಗಳು ಹಾಗೂ ಸೀಮಿತ ಶಕ್ತಿಗಳ ಮಿಶ್ರಣಗಳಿರುವವು.*
- *ಸ್ವತಃದ ಬಲಸ್ಥಾನಗಳು ಹಾಗೂ ಸುಧಾರಣೆ ಮಾಡಲು ಸಾಧ್ಯವಿರುವ ಕ್ಷೇತ್ರಗಳನ್ನುಪ್ರತಿಯೊಬ್ಬರುತಿಳಿದುಕೊಳ್ಳಬೇಕು.*
- *ನೀವು ಸುಧಾರಿಸಲು ಬೇಕಾದ ಕ್ಷೇತ್ರದಲ್ಲಿಕೆಲಸ ಮಾಡಲೇಬೇಕು, ಆದರೆ ಅದಕ್ಕಿಂತ ಮಹತ್ವದ್ದೆಂದರೆ ನಿಮ್ಮ ಬಲಸ್ಥಾನಗಳ ವಿಕಾಸ ಮಾಡಲು ಹೆಚ್ಚು ಹೆಚ್ಚು ಒತ್ತು ಕೊಡಬೇಕು.*
- *ವಿಕಾಸದ ಮಾರ್ಗದಲ್ಲಿಯ ಹಾಗೂ ಪ್ರಗತಿಯಮಾರ್ಗದಲ್ಲಿಯ ಆಹ್ವಾನಗಳನ್ನುತಿಳಿದುಕೊಳ್ಳುವುದು ಮಹತ್ವದ್ದಾಗಿದೆ.*

## 8. ಸ್ವ - ವರದಿ :

ಸ್ವತಃದ ಮೌಲ್ಯಮಾಪನ ಮಾಡುವುದರಿಂದ ನಮಗೆ ಸ್ವತಃದ ಬಗ್ಗೆ ತಿಳಿಯುವುದು. ಇದರಲ್ಲಿ ಸ್ವತಃದ ಸಾಮರ್ಥ್ಯ (ವಿಕಾಸದಕ್ಷೇತ್ರ),ಅಪೇಕ್ಷೆ ಇರುವ ಸುಧಾರಣೆ,ವಿಕಾಸದ ಅವಕಾಶ,ವಿಕಾಸದ ಮಾರ್ಗದಲ್ಲಿಯತೊಂದರೆಗಳುಹಾಗೂ ಆಹ್ವಾನಗಳು ಇವುಗಳ ಸವಿಸ್ತರ ಮಾಹಿತಿ ದೊರೆಯುವುದು. ಇದರಿಂದ ಸ್ವತಃದ ಪ್ರಗತಿಯ ಇಲ್ಲವೆ ಸುಧಾರಣೆಗಳ ರೂಪರೇಷೆ ತಯಾರಿಸಲು ಬರುವುದು.

| ಮಾನದಂಡ | ನನ್ನ ಬಲಸ್ಥಾನಗಳು | ಸುಧಾರಣೆ ಮಾಡಬೇಕಾದ ಕ್ಷೇತ್ರಗಳು |
|---|---|---|
| ಜ್ಞಾನ | ನನಗೆ ಭಾಷೆ ಹಾಗೂ ಗಣಿತ ಚೆನ್ನಾಗಿ ಬರುವವು | ನನಗೆ ಸಮಾಜಜ್ಞಾನತಿಳಿಯುವುದಿಲ್ಲ |
| ಕೌಶಲ್ಯ | ನಾನು ಕಥೆ-ಕವಿತೆ ಬರೆಯುವೆ.<br>ನಾನು ಆಹಾರ ಪದಾರ್ಥಗಳನ್ನು ಚೆನ್ನಾಗಿ ಮಾಡಬಲ್ಲೆ. | ನನಗೆ ಸಭೆಯಲ್ಲಿ ಮಾತಾಡಲು ಹೆದರಿಕೆ.<br>ನಾನು ಒಳ್ಳೆಯ ಆಟಗಾರನ/ಳಲ್ಲ. |
| ದೃಷ್ಟಿಕೋನ | ದೃಢನಿಶ್ಚಯದಿಂದದೀರ್ಘಕಾಲದ ವರೆಗೆ ಕೆಲಸಮಾಡಬಲ್ಲೆ. | ಇನ್ನೊಬ್ಬರಭಾವನೆಗಳ ಬಗ್ಗೆ ವಿಚಾರ ಮಾಡುವುದಿಲ್ಲ. |
| ಸಾಮಾಜಿಕ (ಮಿತ್ರ, ಪಾಲಕರು, ಸಂಬಂಧಿಕರ ಬಗ್ಗೆ) | ಯಾರೊಂದಿಗೂ ನಾನು ಪಟ್ಟನೆ ಗೆಳೆತನ ಮಾಡಬಲ್ಲೆ. | ನನ್ನ ನಿರ್ಣಯಗಳ ಮೇಲೆ ನನ್ನ ಮಿತ್ರರ ಪ್ರಭಾವವಿರುತ್ತದೆ. |
| ಆರ್ಥಿಕ | ನನ್ನ ಪಾಲಕರ ಆರ್ಥಿಕ ಸ್ಥಿತಿ ಚೆನ್ನಾಗಿದೆ. | ವೆಚ್ಚ ನಿಯೋಜನೆ |
| **ಮಾನದಂಡ** | **ವಿಕಾಸದ ಅವಕಾಶ** | **ವಿಕಾಸದಲ್ಲಿಯ ಆಹ್ವಾನಗಳು** |
| ಜ್ಞಾನ, ಕೌಶಲ್ಯಗಳುಹಾಗೂ ದೃಷ್ಟಿಕೋನ | ನಾನು ಕೆಳಗಿನ ಕ್ಷೇತ್ರಗಳಲ್ಲಿಪ್ರಗತಿ ಮಾಡಬಲ್ಲೆ.<br>(1) ಸಾಹಿತ್ಯ (2) ಗಣಿತ<br>(3) ಉಪಹಾರಗೃಹ ವ್ಯವಸ್ಥಾಪನೆ | ನನ್ನ ಊರಿನಲ್ಲಿ, ಭಾಷೆ, ವಿಷಯದಲ್ಲಿ ಉಚ್ಚ ಶಿಕ್ಷಣ ಪಡೆಯಲು ಮಹಾವಿದ್ಯಾಲಯವಿಲ್ಲ. |
| ಸಾಮಾಜಿಕ (ಪಾಲಕ, ಮಿತ್ರ, ಸಂಬಂಧಿಕರ ಬಗ್ಗೆ) | ನನ್ನ ಪಾಲಕರು ಶಿಕ್ಷಣಕ್ಕೆ ಮಹತ್ವ ಕೊಡುವರು ಆದುದರಿಂದ ಅವರು ನನ್ನ ಮದುವೆಗೆ ಅವಸರ ಮಾಡುವುದಿಲ್ಲ. | ಸಂಬಂಧಿಕರು ನನ್ನ ಮದುವೆಯ ಬಗ್ಗೆ ಅವರ ಮೇಲೆ ಒತ್ತಡ ತರಬಹುದು. |
| ಸಾಮಾಜಿಕ ಆರ್ಥಿಕ ಸ್ಥಿತಿ. | ನನ್ನ ಪಾಲಕರು ನನ್ನ ಉಚ್ಚ ಶಿಕ್ಷಣಕ್ಕಾಗಿ ಆರ್ಥಿಕ ಸಹಾಯ ನೀಡಬಲ್ಲರು | ಉಚ್ಚ ಶಿಕ್ಷಣಕ್ಕಾಗಿ ಪಾಲಕರು ನನಗೆ ಪಟ್ಟಣಕ್ಕೆ ಹೋಗಲು ಬಿಡಲಿಕ್ಕಿಲ್ಲ. |

## ನನ್ನ ಸ್ವತಃದ ವರದಿ:


ಮೇಲಿನ ರೂಪರೇಷೆಯ ಸಹಾಯದಿಂದ ಸ್ವತಃದ ಬಲಸ್ಥಾನಗಳು, ಸುಧಾರಣೆಯ ಕ್ಷೇತ್ರಗಳು ಹಾಗೂ ವಿಕಾಸದ ಅವಕಾಶಗಳು, ಆಹ್ವಾನಗಳು ಇವುಗಳ ಸರ್ವಂಕಷ ವಿಚಾರ ಮಾಡಿ ನಿಮ್ಮ ವಹಿಯಲ್ಲಿ ಸ್ವತಃದ ವರದಿಯನ್ನು ತಯಾರಿಸಿರಿ.

ಸ್ವತಃದ ವರದಿ ತಯಾರಿಸುವುದು ಇದು ಬಹಳ ಮಹತ್ವದ ವರ್ಗಕೃತಿ ಆಗಿದೆ. ವಿದ್ಯಾರ್ಥಿಗಳಿಗೆ ಸ್ವತಃದ ಕ್ಷಮತೆಗಳ, ಸೀಮೆಗಳ ವಿಚಾರಗಳನ್ನು ಯೋಗ್ಯ ರೀತಿಯಿಂದ ಮಾಡಲು, ಮಾರ್ಗದರ್ಶನ ಮಾಡಿರಿ. ವಿಕಾಸದ ಸಂದಿಗಳ ಆದರಂತೆಯೇ ಸಾಮಾಜಿಕ ಹಾಗೂ ಪರಿಸ್ಥಿತಿಯಲ್ಲಿ ಬರುವ ಅಡೆತಡೆಗಳ ಬಗ್ಗೆ ಮಾಹಿತಿ ನೀಡಿರಿ.

## ಮೌಲ್ಯಮಾಪನ

ವಿದ್ಯಾರ್ಥಿಗಳಿಗೆ ಗುಣ ನೀಡಲು ಕೆಳಗೆ ಮಾರ್ಗದರ್ಶಕ ಕೋಷ್ಟಕ ಕೊಡಲಾಗದೆ. ಈ ಪ್ರಕರಣದಲ್ಲಿಯ ಮಾಹಿತಿ ಕೇವಲ ನೆನಪಿನಲ್ಲಿಡಲು ಇರದೆ ಸ್ವತಃದ ಬಗ್ಗೆ ಹಾಗೂ ಸಾಮಾಜಿಕ ಪರಿಸರದ ಬಗ್ಗೆ ವಿಚಾರ ಮಾಡಲು ಕೊಡಲಾಗಿದೆ. ಈ ಪ್ರಕರಣದಲ್ಲಿಯಪ್ರಕಲ್ಪಕೃತಿಗಳನ್ನುಅವರು ಹೇಗೆ ಮಾಡಿದರು ಎಂಬುದರ ಮೌಲ್ಯಮಾಪನಮಾಡಿರಿ.

| ಭಾರಾಂಶ 10% | | | | |
|---|---|---|---|---|
| ಮಾನದಂಡ | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಗುಣಗಳು |
| ಕೃತಿ ಮಾಡುವಾಗ ಉತ್ಸಾಹದಿಂದ ಸಹಭಾಗ: | ಪಾಠದಲ್ಲಿಯ ಪ್ರತಿಯೊಂದು ಕೃತಿಯನ್ನು ಪೂರ್ಣಗೊಳಿಸಿದರು. (ಸಕ್ರಿಯಸಹಭಾಗ) ಎಲ್ಲವರ್ಗಕೃತಿಗಳನ್ನು ವಹಿಯಲ್ಲಿಪೂರ್ಣ ಗೊಳಿಸಿದರು. | ಪಾಠದಲ್ಲಿಯ ಎಲ್ಲ ಕೃತಿಗಳನ್ನು ಪೂರ್ಣಗೊಳಿಸಿದರು. | ಇನ್ನೊಬ್ಬ ವಿದ್ಯಾರ್ಥಿಯ ವಹಿ ನೋಡಿ ಕೃತಿ ಪೂರ್ಣಗೊಳಿಸಿದರು. | |
| ಸ್ವತಃದ ವಿಶ್ಲೇಷಣೆ ಮಾಡಿ ಬಲಸ್ಥಾನಗಳ ಸುಧಾರಣೆ ಮಾಡುವಂತಹ ಕ್ಷೇತ್ರಗಳಪ್ರಗತಿಯ ಅವಕಾಶಗಳ ಸ್ವತಃದ ವರದಿ | ಸ್ವತಃದ ಬಲಸ್ಥಾನಗಳು, ಸುಧಾರಣೆ ಕ್ಷೇತ್ರಗಳು, ವಿಕಾಸದ ಅವಕಾಶ, ಇವುಗಳ ವಿಚಾರಮಾಡಿ ಸ್ಪಷ್ಟವಾದಶಬ್ದಗಳಲ್ಲಿ ಸ್ವತಃದ ವರದಿ ಬರೆದನು/ಳು. | ಬಲಸ್ಥಾನಗಳು, ಕೊರತೆ ಸುಧಾರಣೆಯ ಕ್ಷೇತ್ರ ವಿಕಾಸದ ಅವಕಾಶಗಳ ಬಗ್ಗೆ ಬರೆದರು. ಆದರೆ ಅವನು ಅಂದಾಜು ಮಾಡಿ ಬರೆದನು. | ಇನ್ನೊಬ್ಬರವಹಿ ನೋಡಿ ರೂಪರೇಷ ಬರೆದರು. | |
| 'ಸ್ವತಃದ ಪರಿಚಯ' ಮಾಡಿ ಕೊಡುವ ಕವಿತೆ. | ಕವಿತೆಯಿಂದ ಆ ವಿದ್ಯಾರ್ಥಿಗಳ/ ವಿದ್ಯಾರ್ಥಿನಿಯರ ಪರಿಚಯ ಸ್ಪಷ್ಟ ವಾಗುವುದು. | ಕವಿತೆಯನ್ನು ವಿಚಾರ ಪೂರ್ವಕವಾಗಿ ರಚಿಸಿಲ್ಲ. ಕವಿತೆಯಲ್ಲಿಂದ ಪರಿಚಯ ಸ್ಪಷ್ಟ ವಾಗುವುದಿಲ್ಲ. | ಕವಿತೆ ರಚಿಸಿಲ್ಲ. | |


ಯೋ ಹೋ ! ನನ್ನ ಮಿತ್ರರು ನನಗೆ ಕಲ್ಲುಗಳಿಂದ ತುಂಬಿದ ರಸ್ತೆಯ ಮೇಲೆ ಸಾಯಕಲ್ಲಿನ ಸ್ಪರ್ಧೆಯಲ್ಲಿ ಭಾಗವಹಿಸುವ ಆಹ್ವಾನ ನೀಡಿದ್ದರು, ನಾನದರಲ್ಲಿ ಗೆದ್ದೆ! ಸ್ಪರ್ಧೆ ಹೆದರಿತೆ ಹುಟ್ಟಿಸಿತ್ತು. ಸಾಕಷ್ಟು-ಸಲ ನಾನು ಬೀಳುವವನಿದ್ದೆ, ಆದರೆ ನಾನು ಅದನ್ನು ಪೂರ್ಣಗೊಳಿಸಿದೆ ! ಇಂದು ನಾನು ಧೈರ್ಯಧರ ಆದಂತೆ ಅನಿಸಿತು.
ಹಂ....ಆದರೆ ರಾಘವ ನಮ್ಮಲ್ಲಿ ಒಂದು ಚಿಕ್ಕ ಭೇದವಿದೆ. ನನಗೆ ಹಾರಾಡುವ ಅಭ್ಯಾಸ ಸಾಕಷ್ಟಿದೆ, ಆದರೆ ನಿನ್ನ ವಿಚಾರ ಪೂರ್ಣವಾಗಿ ಮೂರ್ಖತನದ್ದು ಹಾಗೂ ಆಪಾಯಕಾರಕ ವಾದದ್ದು ಇತ್ತು.
ಯಾವಾಗ ನಾವು ಹಾರಾಡುವೆವೋ ಆಗ ನಾವು ಬಹಳ ಜಾಗೃತೆವಹಿಸುವೆವು. ಎಲ್ಲ ಅಪಾಯಗಳ ಬಗ್ಗೆ ನಮಗೆ ತಿಳಿದಿರುತ್ತದೆ. ನಾವು ಅನಾವಶ್ಯಕ ಗಂಡಾಂತರಗಳನ್ನು ಎದುರಿಸಲು ಪ್ರಯತ್ನ ಪಡುವುದಿಲ್ಲ ಆದರೆ ನಿನಗೆ ಆಸ್ಪರ್ಧೆ ಸೇರಿದ್ದು ಅದರಲ್ಲಿ ಇರುವ ಗಂಡಾಂತರಗಳಿಂದಾಗಿಯೇ
ಇದರಲ್ಲಿ ನಿನ್ನ ದೋಷವಿಲ್ಲವೆಂದು ನನಗೆ ಅನಿಸಿದೆ. ಇದು ನನ್ನ ಕಿಶೋರಾವಸ್ಥೆಯ ಮೆದುಳಿನ ಕೆಲಸ. ನಿನಗೆ ಅದರ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳವದಿದೆಯೆ?

# 2 ಬೆಳವಣಿಗೆಯ ವಯಸ್ಸು

## ಕಿಶೋರಾವಸ್ಥೆಯ ಬಗ್ಗೆ ತಿಳಿದುಕೊಳ್ಳುವುದು..

**ಉದ್ದೇಶಗಳು:**

(1) ಕಿಶೋರಾವಸ್ಥೆಯ ಶಾರೀರಿಕ, ಮಾನಸಿಕ, ಭಾವನಿಕ ಹಾಗೂ ಸಾಮಾಜಿಕ ವೈಶಿಷ್ಟ್ಯಗಳನ್ನು ಅರಿತುಕೊಂಡು ಅವನ್ನು ಹೇಳಲು ಬರುವುದು.

(2) ಕಿಶೋರಾವಸ್ಥೆಯಲ್ಲಿ ಸಂಭವಿಸಬಹುದಾದ ಆಪತ್ತುಗಳನ್ನು ಹೇಳಲು ಬರುವುದು.

(3) ಕಿಶೋರರ ಮೆದುಳು ಹೇಗೆ ಬೇರೆಯಾಗಿರುವುದು ಎಂಬುದನ್ನು ಹೇಳಲು ಬರುವುದು.

(4) 'ಸ್ವಾತಂತ್ರ್ಯ ಹಾಗೂ ಜವಾಬ್ದಾರಿ ಇವುಗಳ ಸಮತೋಲ ಇರುವುದು ಅವಶ್ಯ' – ಈ ವಾಕ್ಯದ ಸಮರ್ಥನೆ ಮಾಡಲು ಬರುವುದು

(5) ಕೊಟ್ಟ ಪರ್ಯಾಯಗಳಲ್ಲಿ ಪ್ರತಿಯೊಂದು ಪರ್ಯಾಯದ ಮೌಲ್ಯಾಂಕನ ಮಾಡಿ, ಆರಿಸಿದ ಪರ್ಯಾಯಗಳ ಸಮರ್ಥನೆ ಮಾಡಲು ಬರುವುದು.

### 1. ಕಿಶೋರಾವಸ್ಥೆ ಎಂದರೇನು ?



**ತನ್ವಿ :**

- ಕಳೆದ ಕೆಲವು ತಿಂಗಳಲ್ಲಿ ಅವಳ ಶಾರೀರಿಕ ಬೆಳವಣಿಗೆ ಮಂದವಾಗಿದೆ.
- ಅವಳು ತನ್ನ ಭವಿಷ್ಯದ ಹಾಗೂ ಕರಿಯರದ ವಿಚಾರವನ್ನು ಗಂಭೀರವಾಗಿ ಮಾಡುವಳು.
- ಗುರಿ ಸಾಧಿಸಲು ಯೋಗ್ಯ ಪ್ರಯತ್ನ ಮಾಡುತ್ತಿರುವಳು.
- ಅವಳ ಆತ್ಮವಿಶ್ವಾಸ ಒಳ್ಳೆಯದಿದೆ. ಅವಳು ಎಚ್ಚರಿಕೆಯಿಂದ ಕೆಲಸ ಮಾಡುವಳು.
- ಸ್ತ್ರೀ ಹಾಗೂ ಪುರುಷರೊಂದಿಗೆ ಮುಕ್ತವಾಗಿ ಮಾತನಾಡುವಳು, ಕೆಲಸ ಮಾಡುವಳು. ಕೌಟುಂಬಿಕ ಜವಾಬ್ದಾರಿ ವಹಿಸುವಳು.

**ಮೀನಾ :**

- ಆಟವಾಡಲು ಇಷ್ಟ.
- ಹುಡುಗ, ಹುಡುಗಿಯರೊಂದಿಗೆ ಸಲೀಸಾಗಿ ಮೈತ್ರಿ ಮಾಡುವಳು, ಸ್ವಭಾವ ಬಿಚ್ಚು ಮನಸ್ಸಿನದಿದೆ.
- ಹೆಚ್ಚು ವಿಚಾರ ಮಾಡುವುದಿಲ್ಲ.
- ಪಾಲಕರೊಂದಿಗೆ ಆತ್ಮೀಯತೆ ಇದೆ. ಪಾಲಕರೊಂದಿಗೆ ಹೊರಗೆ ಹೋಗಲು ಸೇರುತ್ತದೆ.
- ಶಾಲೆಯಲ್ಲಿನ ಎಲ್ಲ ಸುದ್ದಿಗಳನ್ನು ತಾಯಿಗೆ ಹೇಳುವಳು.





**ರವಿ :**

- ದಿನವಿಡೀ ಹೊರಗೆ ಆಡಲು ಇಷ್ಟ.
- ಇತರರು ಅವನ ಎತ್ತರ ಹಾಗೂ ಬಟ್ಟೆಗಳ ಮೇಲೆ ಟೀಕೆ ಮಾಡಿದರೂ ಅತ್ತ ದುರ್ಲಕ್ಷ್ಯ ಮಾಡುವನು.
- ಯಾವುದೇ ನಿರ್ಣಯ ತೆಗೆದುಕೊಳ್ಳಲು ಪಾಲಕರನ್ನು ಅವಲಂಬಿಸಿರುವನು.



**ಸಾಧನಾ:**

- ಯಾವಾಗಲೂ ಉಲ್ಲಾಸಿತಳಾಗಿರುವಳು.
- ಇತ್ತೀಚೆಗೆ ತನ್ನ ಶರೀರ ರಚನೆಯ ಬಗ್ಗೆ ಜಾರೂಕಳಾಗಿರುವಳು.
- ಹಿಂದಿನ ಒಂದೆರಡು ವರ್ಷಗಳಲ್ಲಿ ಶರೀರದ ರಚನೆಯಲ್ಲಿ ಒಮ್ಮಿಂದೊಮ್ಮೆ ಬದಲಾವಣೆಗಳಾಗಿವೆ.
- ದೂರದರ್ಶನದ ಮಾಲಿಕೆ ಹಾಗೂ ಚಲನ ಚಿತ್ರದ ಸ್ತ್ರೀ ಪಾತ್ರಗಳೊಂದಿಗೆ ಸ್ವತಃ ಹೋಲಿಕೆ ಮಾಡಿ ಕೊಳ್ಳುವಳು.
- ಅವಳ ಸ್ವಭಾವ ಚಂಚಲ ಹಾಗೂಅಸ್ಥಿರವಾಗಿದೆ.
- ನಾನು ಚಂದ ಕಾಣಿಸುವೆನೇ, ಎಂಬುದರ ಬಗ್ಗೆ ಬಹಳ ಲಕ್ಷ್ಯಕೊಡುತ್ತಿದ್ದಳು.
- ಹುಡುಗರೊಂದಿಗೆ ಮಾತಾಡಬೇಕೆನಿಸುವುದು ಆದರೆ ಮಾತಾಡುವುದಿಲ್ಲ ಹುಡುಗಿಯರೊಂದಿಗೆ ಹೆಚ್ಚು ಮೈತ್ರಿ ಇದೆ.
- ಪಾಲಕರಿಗಿಂತ ಗೆಳತಿಯೆರೊಂದಿಗೆ ಹೊರಗೆ ಹೋಗಲು ಇಷ್ಟ.
- ತನ್ನಲ್ಲಿತಾನು ಮಗ್ನಳಾಗಿರುವಳು.ಪಾಲಕರೊಂದಿಗೆ ಮನಬಿಚ್ಚಿಮಾತನಾಡುವುದಿಲ್ಲ.ತನ್ನ ಬಟ್ಟೆ, ವಸ್ತುಗಳು ಯೋಗ್ಯ ಫ್ಯಾಶನ್‌ದವುಇವೆಯೇ ಎಂದು ಯಾವಾಗಲೂ ಅನಿಸುತ್ತದೆ.

ನಿಮ್ಮ ನಡುವಳಿಕೆ, ಸಾಧನಾ ಇಲ್ಲವೆ ಮನೀಷನಂತೆ ಇದೆಯೇ? ಇದರ ಬಗ್ಗೆ ಚರ್ಚೆ ಮಾಡಿರಿ. ಸಾಧನಾ ಹಾಗೂ ಮನೀಷರ ನಡುವಳಿಕೆ 'ಕಿಶೋರಾವಸ್ಥೆ'ಯಲ್ಲಿಯವ್ಯಕ್ತಿಯ ವಿಶಿಷ್ಟ ವರ್ತನೆಯಾಗಿದೆ ಎಂದು ಹೇಳಿರಿ.

**ಮನೀಷ**



- ಅಭ್ಯಾಸ ಹಾಗೂ ಆಟಗಳಲ್ಲಿ ಚ್ಛೇ ಸಾಮರ್ಥ್ಯವಿದೆ.
- ಅವನ ಶರೀರ ಹಾಗೂ ಎತ್ತರ ವೇಗವಾಗಿ ಬೆಳೆದಿದೆ.
- ಗಂಡಾಂತರ ಎದುರಿಸುವಾಗ ಹೆಚ್ಚು ವಿಚಾರ ಮಾಡುವುದಿಲ್ಲ. ತನಗೆ ಏನು ಆಗಲಿಕ್ಕಿಲ್ಲ ಎಂದು ಅವನಿಗೆ ಅನಿಸುತ್ತದೆ.
- ವರ್ಗದಲ್ಲಿಯ ಹುಡುಗಿಯರೊಂದಿಗೆ ಮಾತಾಡಬೇಕೆಂದು ಅನಿಸುತ್ತದೆ, ಆದರೆ ಅವನು ಮಾತಾಡುವುದಿಲ್ಲ.
- ಅವನಿಗೆ ಪಟ್ಟನೆ ಸಿಟ್ಟು ಬರುತ್ತದೆ. ಅನೇಕಸಲ ತಂದೆ ತಾಯಿಯ ಜೊತೆಗೆ ಅವನ ಮತಬೇಧಗಳಾಗುವವು.
- ತನ್ನ ಬಟ್ಟೆ, ವಸ್ತುಗಳು, ಕೇಶರಚನೆ ಹಾಗೂ ತನ್ನ ರೂಪದ ಬಗ್ಗೆ ಅವನು ಹೆಚ್ಚು ಜಾಗೃತೆಯಾಗಿ ಇರುವನು.



**ಅಲಿ:**

- ಕಳೆದ ಕೆಲ ತಿಂಗಳುಗಳಲ್ಲಿ ಅಲಿಯ ಎತ್ತರ ಹೆಚ್ಚು ಬೆಳೆದಿಲ್ಲ. ಅವನು ತುಂಬ ಕಷ್ಟಪಡುವನು.
- ಕೆಲಸ ಮಾಡುವಾಗ ಸಾವಧಾನವಾಗಿದ್ದು ಸಂಕಟವನ್ನು ಎದುರಿಸುವನು. ಯಾವ ಕೆಲಸದಿಂದ ಹಾನಿಯಾಗಲು ಸಾಧ್ಯವೋ ಅದನ್ನು ಮಾಡುವಾಗ ಸರಿಯಾಗಿ ವಿಚಾರ ಮಾಡುವನು.
- ಸ್ವತಃದ ಶರೀರ ಸೌಷ್ಠವದ ಬಗ್ಗೆ ಸಮಾಧಾನವಿದೆ. ರೂಪದ ಬಗ್ಗೆ, ಹೇಗೆ ಕಾಣಿಸುವೆನು ಎಂಬುದರ ಬಗ್ಗೆ ಚಿಂತಿಸುವುದಿಲ್ಲ.
- ಎಲ್ಲರೊಂದಿಗೆ ಬಿಚ್ಚುಮನದಿಂದ ಮಾತಾನಾಡುವನು. ಅವನಿಗೆ ಪಟ್ಟನೆ ಸಿಟ್ಟು ಬರುವುದಿಲ್ಲ.
- ಸಮಸ್ಯೆಗಳನ್ನು, ಪ್ರಶ್ನೆಗಳನ್ನು ವಿಚಾರಪೂರ್ವಕವಾಗಿ ಬಿಡಿಸುವನು.
- ಕುಟುಂಬದ ಜವಾಬ್ದಾರಿಗಳನ್ನು ಸ್ವೀಕರಿಸುವನು.

***ವಿಚಾರ ಮಾಡುವ ಅಂಶಗಳು :***

*ಕಿಶೋರಾವಸ್ಥೆಗೆಇಂಗ್ಲಿಷ್‌ನಲ್ಲಿAdolescence ಎನ್ನುವರು'Adolescent' ಈ ಶಬ್ದವನ್ನು'Adolescere' ಈ ಮೂಲLatin ಶಬ್ದದಿಂದ ತೆಗೆದುಕೊಳ್ಳಲಾಗಿದೆ. ಆ ಶಬ್ದದ ಅರ್ಥ 'ಬೆಳೆಯುವುದು' 'ಪರಿಪಕ್ವವಾಗುವುದು.' ಇದರ ಇನ್ನೊಂದು ಅರ್ಥವೆಂದರೆ , ವ್ಯಕ್ತಿಯ 'ಸ್ವತಃದ ಪರಿಚಯ ಆಗುವಿಕೆ. ಕಿಶೋರಾವಸ್ಥೆಯಕಾಲ ವಯಸ್ಸಿನ13 ರಿಂದ19 ವರ್ಷಗಳ ವರೆಗಿನ ಕಾಲಾವಧಿಯಾಗಿದೆ ಕಿಶೋರಾವಸ್ಥೆಯು, ಬಾಲ್ಯಾ ವಸ್ಥೆಯಿಂದ ಪ್ರೌಢಾವಸ್ಥೆಯತ್ತ ಸಂಕ್ರಮಣದ ಕಾಲಾವಧಿಯಾಗಿದೆ ಈ ವಯಸ್ಸಿನಲ್ಲಿ ಬಹಳಷ್ಟು ಶಾರೀರಿಕ, ಸಾಮಾಜಿಕ ಹಾಗೂ ಭಾವನೆಯ ಬದಲಾವಣೆಗಳಾಗುವವು. ಇದರಲ್ಲಿ ಕೆಲವುಬದಲಾವಣೆಗಳಿಂದಾಗಿ ಇತರರೊಂದಿಗೆ ಹೊಂದಿಕೊಳ್ಳುವಾಗ ಸಮಸ್ಯೆಗಳು ನಿರ್ಮಾಣವಾಗುವವು.*

*ಕಿಶೋರಾವಸ್ಥೆಯು ಜೀವನದ ಒಂದು ಮಹತ್ವದ ಕಾಲವಾಗಿದೆ, ಈ ವಯಸ್ಸಿನಲ್ಲಿ ಕಲಿಯುವ ಹಾಗೂ ಕೆಲಸಮಾಡುವ ಶಕ್ತಿ ಹಾಗೂ ಉತ್ಸಾಹ ಹೆಚ್ಚು ಇರುವುದು. ಸುತ್ತ ಮುತ್ತ ನಡೆಯುತ್ತಿರುವ ಪ್ರಸಂಗಗಳ ಬಗ್ಗೆ ಬಹಳ ಉತ್ಸುಕತೆ ಇರುವುದು.*

## 2. ಕಿಶೋರಾವಸ್ಥೆಯಲ್ಲಿಯ ಬದಲಾವಣೆಗಳು:

ವಿದ್ಯಾರ್ಥಿಗಳ ಗುಂಪು ಮಾಡಿರಿ. ಪಾಠದಲ್ಲಿ ಕೊಟ್ಟ ಮನೀಷ್ ಹಾಗೂ ಸಾಧನಾಇವರಗುಣವೈಶಿಷ್ಟ್ಯಗಳೊಂದಿಗೆ ಸ್ವತಃದ ಅನುಭವಗಳ ತುಲನೆ ಮಾಡಿರಿ. ಕೆಳಗಿನ ಕೋಷ್ಟಕವನ್ನು ಸರಿಯಾಗಿ ಓದಿರಿ.





| ಶಾರೀರಿಕ ಬದಲಾವಣೆ | ಭಾವನೆ ಹಾಗೂ ಸಾಮಾಜಿಕ ಬದಲಾವಣೆ | ವೈಚಾರಿಕ ಬದಲಾವಣೆ |
|---|---|---|
| ಹುಡುಗಿಯರ ಕೆಲವು ಅವಯವಗಳ ಆಕಾರ ಬೆಳೆಯುವುದು | ಸಮಲಿಂಗ ಮತ್ತು ವಿರುದ್ಧ ಲಿಂಗಗಳ ವ್ಯಕ್ತಿಗಳತ್ತ ಶಾರೀರಿಕ, ಭಾವನೆಗಳ ಆಕರ್ಷಣೆ ಎನಿಸುವುದು. | ಬೌದ್ಧಿಕ ವಿಷಯಗಳ ಮೆಚ್ಚುಗೆ ಬೆಳೆಯುವುದು. |
| ಹುಡುಗಿಯರ ತಿಂಗಳಸರದಿ ಪ್ರಾರಂಭವಾಗುವುದುಇಸ್ಟ್ರೋಜನ್ ಈ ಹಾರ್ಮೋನಿನಿಂದಾಗಿ ಈ ಬದಲಾವಣೆಕಂಡು ಬರುವುದು | ಕೆಲವು ಸಂಗತಿಗಳ ಬಗ್ಗೆ ನಿಶ್ಚಿತವಾದಅಭಿಪ್ರಾಯಗಳು ತಯಾರಾಗುವವು ಮತ್ತು ಅನೇಕ ವಿಷಯಗಳ ಬಗ್ಗೆ ಮನಸ್ಸಿನಲ್ಲಿ ಗೊಂದಲ ನಿರ್ಮಾಣವಾಗುವುದು. | ವಿಚಾರಗಳ ಹಾಗೂ ನಿರ್ಣಯಗಳ ಮೇಲೆ ಗೆಳೆಯ/ಗೆಳತಿಯರ ಪ್ರಭಾವ ಹೆಚ್ಚಾಗುವುದು. |
| ಹುಡುಗರ ಜನನೇಂದ್ರಿಯ ಹಾಗೂ ಅಂಡಕೋಷದ ಆಕಾರ ದೊಡ್ಡದಾಗುವುದು. ಅಂಡ್ರೋಜನ್ ಎಂಬ ಹಾರ್ಮೋನಿನಿಂದಾಗಿ ಈ ಬದಲಾವಣೆಗಳು ಆಗುವವು. | ಸ್ವತಃದ ರೂಪ ಹಾಗೂ ಗುಣಗಳ ಬಗೆಗಿನ ತಿಳುವಳಿಕೆ ಹೆಚ್ಚುತ್ತದೆ. | ಭವಿಷ್ಯದ ಬಗ್ಗೆ ಹಗಲು ಗನಸು ನೋಡುವಲ್ಲಿ ಸಂತೋಷ ಪಡುವರು. |
| ಮುಖ ಹಾಗೂ ತ್ವಚೆ ಎಣ್ಣೆ ಗಟ್ಟುವುದು. ಮುಖದ ಮೇಲೆ ಮೊಡವೆಗಳು ಬರುವ ಸಾಧ್ಯತೆ ಇದೆ. | ಇನ್ನೊಬ್ಬರೊಂದಿಗೆ ತುಲನೆ ಮಾಡಿದಾಗ ಸ್ವತಃದ ರೂಪದ ಬಗ್ಗೆ ಅಸ್ವಸ್ಥತೆ ಉಂಟಾಗುವುದು. | ಸಮಾಜಮಾನ್ಯ ನಡುವಳಿಕೆ ಹಾಗೂ ಶ್ರದ್ಧೆ:ವಿಶ್ವಾಸ ಇವುಗಳ ಅರ್ಥ ತಿಳಿಯಲಾರಂಭಿಸುವುದು. |
| ಶರೀರದ ಮೇಲೆ ಕೂದಲು ಬೆಳೆಯುವವು. ವಿಶೇಷವಾಗಿ ಹುಡುಗರ ಧ್ವನಿ ಬದಲಾಗುವುದು. | ಗುಂಪಿನಲ್ಲಿಯ ಮಕ್ಕಳು ಸ್ವೀಕರಿಸುವರೇ ಎಂಬ ಚಿಂತೆ, ಅದರಂತೆಯೇ ಸಮೂಹದಲ್ಲಿ ಸೇರಿಸಬಹುದೇ ಎಂಬ ಚಿಂತೆ. | ಹೊಸ ಕ್ಷೇತ್ರಗಳಮಾಹಿತಿ ಪಡೆಯುವ ಉತ್ಸುಕತೆ ಇರುವುದು. ಸ್ವತಃದ ಕ್ಷಮತೆಯನ್ನುಸಿದ್ಧ ಮಾಡಿ ತೋರಿಸುವ ಪ್ರಯತ್ನ ಮಾಡುವುದು |

ಕೋಷ್ಟಕದಲ್ಲಿಯ ವೈಶಿಷ್ಟ್ಯಗಳಹೊರತು ಕಿಶೋರಾವಸ್ಥೆಯಲ್ಲಿ ಆಗುವ ಕೆಲವು ಬದಲಾವಣೆಗಳನ್ನು ನೀವು ಅನುಭವಿಸಿದ್ದರೆ ಅವನ್ನು ವಹಿಯಲ್ಲಿ ಬರೆಯಿರಿ.

## 3. ಕಿಶೋರಾವಸ್ಥೆಯ ವೈಶಿಷ್ಟ್ಯಪೂರ್ಣವಾದದ್ದೇಕೆ?

ಕಿಶೋರಾವಸ್ಥೆಯಲ್ಲಿಮಕ್ಕಳ ಶಾರೀರಿಕ ಹಾಗೂ ಮೆದುಳಿನ ಕಾರ್ಯದಲ್ಲಿಯ ಬದಲಾವಣೆ ವೇಗವಾಗಿ ಆಗುತ್ತದೆ. ಸುಮಾರಾಗಿ ಮೆದುಳಿನ ರಚನಾತ್ಮಕ ಹಾಗೂ ಕಾರ್ಯಾತ್ಮಕ ಬದಲಾವಣೆಗಳು ಇಪ್ಪತ್ತನಾಲ್ಕನೆಯ ವರ್ಷದ ವಯಸ್ಸಿನ ವರೆಗೆ ಪೂರ್ಣವಾಗುವವು. ಅದರಿಂದಾಗಿ 'ಮೆದುಳಿನ ಪ್ರಗತಿಯ ಕೆಲಸ ನಡೆದಿದೆ' ಎಂದು ಕಿಶೋರಾವಸ್ಥೆಯಬಗ್ಗೆ ವರ್ಣನೆ ಮಾಡಬಹುದು.

## 4. ಮೆದುಳಿನ ವಿಕಾಸ ಹಾಗೂ ಕಾರ್ಯ:


ಮಾನವನ ಮೆದುಳು ಸಾವಿರಾರು ವರ್ಷಗಳಿಂದ ಉತ್ಕ್ರಾಂತಿ ಹೊಂದಿದೆ. ಮೆದುಳಿನ ರಚನೆ ಹಾಗೂ ಕಾರ್ಯಗಳು ತುಂಬ ತೊಡಕಿನದಾಗಿವೆ. ವಿಜ್ಞಾನವು ಮೆದುಳು ಹಾಗೂ ಅದರ ವಿವಿಧ ಭಾಗಗಳ ಅಭ್ಯಾಸಮಾಡಿದೆ. ಇಲ್ಲಿ ನಾವು ಮಾನಸಶಾಸ್ತ್ರದ ದೃಷ್ಟಿಕೋನದಿಂದ ಕಿಶೋರಾವಸ್ಥೆಯ ನಡುವಳಿಕೆಯ ವೈಶಿಷ್ಟ್ಯಗಳನ್ನುತಿಳಿದುಕೊಳ್ಳಲು ಮೆದುಳಿನ ಮೂರು ಭಾಗಗಳ ವಿಕಾಸ ಹೇಗೆ ಆಗುವುದು ಎಂಬುದನ್ನು ಸುಲಭವಾದ ರೀತಿಯಲ್ಲಿ ನೋಡುವಾ.

### 1. ಕೃತಿ ಮಾಡುವ ಮೆದುಳು (ಹರಿದಾಡುವ ಮೆದುಳು):



ಮೆದುಳಿನ ಈ ಭಾಗ, ಜನ್ಮವಾಗುವಾಗ ಪೂರ್ಣವಾಗಿ ವಿಕಸಿತವಾಗಿರುತ್ತದೆ. ಚಟುವಟಿಕೆಗಳನ್ನು ನಡೆಸುವ ಮೂಲಭೂತ ಕಾರ್ಯವನ್ನು ಈ ಮೆದುಳು ಮಾಡುತ್ತದೆ. ಶ್ವಸನ, ಪಚನ, ಹೃದಯದ ಕಾರ್ಯ, ಹಸಿವು, ನಿದ್ದೆ, ಶರೀರದ ಉಷ್ಣತಾಮಾನ ಮುಂತಾದ ಕಾರ್ಯಗಳ ಮೇಲೆ ಈ ಮೆದುಳಿನ ನಿಯಂತ್ರಣ ಇರುವುದು. ಅದರಂತೆಯೇ ಅಪಾಯದ ಪರಿಸ್ಥಿತಿ ನಿರ್ಮಾಣವಾದರೆ ಹೇಗೆ ಪ್ರತಿಕ್ರಿಯೆನೀಡಬೇಕುಎಂಬುದುಈ ಮೆದುಳಿನನಿಯಂತ್ರಣೆಯಲ್ಲಿಇರುವುದು.






### 2. ಭಾವನೆಗಳ ಮೆದುಳು (ಮಂಗ ಮೆದುಳು) :

ಮೆದುಳು, ಈ ಭಾಗದ ವಿಕಾಸ 0 ದಿಂದ 5 ವರ್ಷಗಳ ಕಾಲಾವಧಿಯಲ್ಲಿ ಆಗುವುದು. ಮೆದುಳಿನ ಈ ಭಾಗದಲ್ಲಿ ಭಾವನೆಗಳು ಅವಲಂಬಿಸಿರುವವು. ಮೆದುಳಿನ ಈ ಭಾಗ ಸ್ಮರಣೆ, ಒತ್ತಡಗಳ ಪ್ರತಿಕ್ರಿಯೆ, ಆಹಾರ, ಶರೀರದ ಸಂವರ್ಧನೆ, ಜಾಗೃತೆ ವಹಿಸುವಿಕೆ, ಹೆದರಿಕೆ, ಸಿಟ್ಟು, ಸಾಮಾಜಿಕ ನೆಂಟಸ್ತಿಕೆ ಇವುಗಳ ಮೇಲೆ ನಿಯಂತ್ರಣೆ ಇಡುತ್ತದೆ. ಭಾವನೆಗಳ ಅನುಭವದಲ್ಲಿ ವಿವಿಧ ಗ್ರಂಥಿಗಳ ಸ್ರಾವ ಆಗುವುದು, ಅದರಲ್ಲೂ ಭಾವನೆಯ ಮೆದುಳಿನ ಸಹಭಾಗ ಇರುವುದು.

### 3. ವಿಚಾರ ಮಾಡುವ ಮೆದುಳು:



ಈ ಮದುಳಿನ ವಿಕಾಸ ಎಲ್ಲಕ್ಕಿಂತ ಕೊನೆಗೆ ಪೂರ್ಣ ಹೊಂದುವುದು. ಸುಮಾರಾಗಿ ಈ ವಿಕಾಸ ಇಪ್ಪತ್ತರಿಂದ ಇಪ್ಪತ್ತನಾಲ್ಕನೆಯವರ್ಷಗಳವರೆಗೆ ನಡೆಯುವುದು. ಆತ್ಮನಿಯಂತ್ರಣ, ಸಮತೋಲ ವಿಚಾರ, ಸಮಸ್ಯೆಯ ಸಮಾಧಾನ, ಜಾಗರೂಕತೆಯ ನಿಯೋಜನೆ, ಸೃಜನಶೀಲತೆ, ಸ್ವತಃದ ಅರಿವು ಹಾಗೂ ಸ್ವತಃದ ಭಾವನೆಗಳನ್ನು ತಿಳಿದುಕೊಳ್ಳುವುದು, ಈ ಎಲ್ಲ ಕಾರ್ಯಗಳನ್ನು ಈ ಮೆದುಳು ಮಾಡುತ್ತದೆ.

## 5. ಕಿಶೋರರ ಮೆದುಳು, ಬೇರೆ ಹೇಗೆ?

ಕಿಶೋರ ವಯಸ್ಸಿನಲ್ಲಿ ಭಾವನೆಯ ಮೆದುಳು ಸಮಾರಾಗಿ ಪೂರ್ಣ ವಿಕಾಸಗೊಂಡಿರುತ್ತದೆ. ವೈಚಾರಿಕ ಮೆದುಳಿನ ವಿಕಾಸ ಮಾತ್ರ ನಡೆದಿರುತ್ತದೆ.

ಮೆದುಳಿನ ಈ ಎರಡು ಭಾಗಗಳಲ್ಲಿಯ ವಿಕಾಸದ ಅಸಮತೋಲನೆ ಹಾಗೂಅದೇಸಮಯದಲ್ಲಿವೇಗದಿಂದಸಂಭವಿಸುವಶಾರೀರಿಕಬದಲಾವಣೆ, ಗ್ರಂಥಿಗಳ ಸ್ರಾವ ಇವುಗಳಿಂದಾಗಿ ಕಿಶೋರರ ನಡುವಳಿಕೆ ಚಂಚಲ ಹಾಗೂ ಗಂಡಾಂತರ ವೆಸಗುವಂತೆ ತೋರುವುದು.

ಕಿಶೋರ ವಯಸ್ಸಿನ ಇಲಿ




ಒಮ್ಮಿಂದೊಮ್ಮೆಆಗುವಹಾಗೂಅಪಾಯಕಾರಕಪರಿಸ್ಥಿತಿಗೆಹೇಗೆಪ್ರತಿಕ್ರಿಯೆ ನೀಡಬೇಕೆಂಬ ವಿಚಾರ ಕಿಶೋರರು ಮಾಡಿರುವುದಿಲ್ಲ ಉತ್ಸೂರ್ತತೆಯಿಂದ ಆಗುವ ತೀವ್ರ ಕೃತಿಗಳು ಬಗೆಗೂ ಅವರು ವಿಚಾರ ಮಾಡುವುದಿಲ್ಲ, ಆದುದರಿಂದ ಅವರ ವರ್ತನೆ ಬೇಜವಾಬ್ದಾರಿತನದ್ದು ಅನಿಸುವುದು.

## 6. ಸ್ವಾತಂತ್ರ್ಯದ ಅವಶ್ಯಕತೆ:

ಕೆಳಗಿನ ವಾಕ್ಯಗಳನ್ನು ಓದಿರಿ, ನಿಮಗೆ ನಿಮ್ಮ ಜೀವನದಲ್ಲಿ ಯಾವಾಗಲಾದರೂ ಕೆಳಗಿನ ಸಂಗತಿಗಳಿಂದ ತೊಂದರೆ ಆಗಿದೆಯೆ?

(1) ನಿಮ್ಮ ತಂದೆ-ತಾಯಿ ಇಲ್ಲವೇ ಶಿಕ್ಷಕರು ನಿಮಗೆ ಒಂದು ವಿಶಿಷ್ಠ ಕೇಶರಚನೆ ಅಥವಾ ಬಟ್ಟೆ ಹಾಕಲು ಕೊಡುವುದಿಲ್ಲವೇ?

(2) ನಿಮ್ಮ ಪಾಲಕರು ನಿಮಗೆ ರಾತ್ರಿ ಬಹಳ ಹೊತ್ತಿನವರೆಗೆ ಹೊರಗಿರಲು ಅಥವಾ ಹೊರೆಗೆಹೋಗಲು ಬಿಡುವುದಿಲ್ಲವೆ?

**ಚರ್ಚೆ ಮಾಡಿರಿ:**
ಕೊಟ್ಟ ಪ್ರಸಂಗಗಳಲ್ಲಿ ಏನಾದರೂ ಸಾಮ್ಯ ಕಂಡು ಬರುವುದೆ? ಕೊಟ್ಟ ಪ್ರಸಂಗಗಳಲ್ಲಿ ಖಚಿತವಾಗಿ ಯಾವುದರ ತೊಂದರೆ ಆಗುತ್ತದೆ?

(3) ನಿಮ್ಮ ತಂದೆ-ತಾಯಿಯರು ನಿಮಗೆ ಬೇಕಾದಷ್ಟು ಹೊತ್ತು ಟಿ ವ್ಹಿ ನೋಡಲು ಕೊಡುವುದಿಲ್ಲ.

(4) ನಿಮಗೆ ಬೇಕಾದ ಹೊರಗಿನ ಕರಿದ ಪದಾರ್ಥಗಳನ್ನು ತಿನ್ನಲು ನಿಮ್ಮ ತಾಯಿತಂದೆ ನಿಮಗೆ ಬಿಡುವುದಿಲ್ಲ.

ತಾರುಣ್ಯದಲ್ಲಿಪ್ರವೇಶಿಸುವಾಗಎಲ್ಲಕ್ಕಿಂತಹೆಚ್ಚುಆಕರ್ಷಿಸುವವಿಷಯವೆಂದರೆ'ಸ್ವಾತಂತ್ರ್ಯ'.ನಿರ್ಣಯತೆಗೆದುಕೊಳ್ಳಲುಯಾರನ್ನು ಅವಲಂಬಿಸಿಲ್ಲ, ಯೋಗ್ಯ/ಅಯೋಗ್ಯ ಎಲ್ಲ ನನಗೆ ತಿಳಿಯುತ್ತದೆ. ಈಗ ನಾನು ಬೇಕಾದನ್ನು ಮಾಡಬಲ್ಲೆ ಎಂದು ಅನಿಸುತ್ತದೆ.

## 7. ಕೃತಿ ಹಾಗೂ ಪರಿಣಾಮ:

ಕೆಳಗಿನ ವಾಕ್ಯಗಳನ್ನು ಓದಿ, ಕೇಳಿದ ಪ್ರಶ್ನೆಗಳ ಮೇಲೆ ವಿಚಾರ ಮಾಡಿರಿ.

(1) ಮಳೆಯಲ್ಲಿ ಬೇಕಂತಲೇ ತೊಯ್ಸಿ ಕೊಂಡ ಒಬ್ಬ ವ್ಯಕ್ತಿಗೆ ನೆಗಡಿ, ಜ್ವರ ಆದರೆ ನಿಮಗೆ ಅವರ ಬಗ್ಗೆ ಮರುಕವೆನಿಸುವುದೆ?

(2) ವೇಗವಾಗಿ, ಅಂಕುಡೊಂಕಾಗಿ, ಸಾರಿಗೆಯ ನಿಯಮಗಳನ್ನು ಮೀರಿ ವಾಹನ ನಡೆಸುವವನಿಗೆ ಅಪಘಾತವಾದರೆ ನೀವು ವ್ಯಥೆ ಪಡುವಿರಾ?

(3) ವರ್ಷವಿಡೀ ಅಭ್ಯಾಸ ಮಾಡದ ವಿದ್ಯಾರ್ಥಿ ನಾಪಾಸಾದರೆ ಅದು ನಿಮಗೆ ಸರಿಯಾಗಲಿಲ್ಲ ಎಂದೆನಿಸುವುದೆ?

ಪ್ರತಿಯೊಂದು ಕೃತಿಯ ಒಂದು ಪರಿಣಾಮ ಇರುತ್ತದೆ. ಅದು ಒಳ್ಳೆಯ ಇಲ್ಲವೆ ಕೆಟ್ಟದ್ದು ಇರಬಹುದು. ಆದ್ದರಿಂದ ಕೃತಿ ಮಾಡುವ ಮೊದಲೇ ಆದರಿಂದ ಆಗುವ ಪರಿಣಾಮಗಳ ವಿಚಾರ ಮಾಡಿರಿ.

## 8. ಸ್ವಾತಂತ್ರ್ಯ ಹಾಗೂ ಜವಾಬ್ದಾರಿ:

ಕಿಶೋರ ವಯಸ್ಸಿನಲ್ಲಿ ಪ್ರತಿಯೊಬ್ಬರಿಗೆ, ಸ್ವಾತಂತ್ರ್ಯವೆಂದರೆ'ತನಗೆ ಬೇಕಾದುದನ್ನು ಮಾಡುವುದು' ಎಂದೆನಿಸುವುದು. ಅದು ಪ್ರತಿಯೊಬ್ಬರಿಗೂ ಬೇಕೆನಿಸುತ್ತದೆ. ಆದರೆ ಇದು ಸ್ವಾತಂತ್ರ್ಯದಅರ್ಧಸತ್ಯ. ಒಂದು ಕೃತಿ ಮಾಡುವ ಸ್ವಾತಂತ್ರ್ಯವಿದೆಯೆಂದರೂ ಅದರ ಪರಿಣಾಮದ ತಿಳಿವು ಇರಬೇಕು. ಆ ಪರಿಣಾಮಗಳನ್ನು ಎದುರಿಸಲು ನಾವು ಸಕ್ಷಮರಾಗಿರಬೇಕು. ಯಾವುದೋ ಕೆಲಸ ಮಾಡಲು ಸ್ವಾತಂತ್ರ್ಯವಿದೆಅಥವಾ ಅದು ನಮ್ಮ ಹಕ್ಕು ಎಂದುಕೊಂಡು ಕೃತಿ ಮಾಡಿದರೆ ಗೊಂದಲವಾಗುವುದು. ಆಗ ನಾವು ನುಣುಚಿಕೊಳ್ಳಲು ಪ್ರಯತ್ನಪಡುವೆವು ಇಲ್ಲವೆ ದೊಡ್ಡವರ ಸಹಾಯ ತೆಗೆದು ಕೊಳ್ಳಬೇಕಾಗುವುದು. ಕೆಲವುಸಲ ಈ ಎಲ್ಲ ಪರಿಸ್ಥಿತಿಯಲ್ಲಿ ಹಾನಿಯೂ ಆಗಬಲ್ಲದು.

## 9. ಪರ್ಯಾಯಗಳನ್ನು ಹುಡುಕುವುದು ಹಾಗೂ ಜವಾಬ್ದಾರಿ ಸ್ವೀಕರಿಸುವುದು:

ಪ್ರತಿಯೊಂದುಪರಿಸ್ಥಿತಿಯಲ್ಲಿನಮ್ಮೆದುರುಬೇರೆಬೇರೆಪರ್ಯಾಯಗಳಿರುವವು. ಉದಾ. ಹೆಚ್ಚುಹೊತ್ತಿನವರೆಗೆಟಿ. ವ್ಹಿ. ನೋಡುತ್ತಾ ಕುಳಿತುಕೊಳ್ಳುವುದು,ಮೊಬಾಯಿಲನಲ್ಲಿಚ್ಯಾಟಿಂಗ್ ಮಾಡುತ್ತ ಕೊಡುವುದು, ಮಿತ್ರರೊಂದಿಗೆಹರಟೆ ಹೊಡೆಯುತ್ತಕೂಡುವ ಸಮಯ ನಾವು ಯಾವ ಕೆಲಸದ ಅವಧಿ ಕಡಿಮೆ ಮಾಡಿ ಕೊಟ್ಟೆವು? ಒಂದು ಕೆಲಸದ ಸಮಯವನ್ನು ಇನ್ನೊಂದಕ್ಕೆ ಉಪಯೋಗಿಸಿದಾಗ ನಮಗೆ ಯಾವ ಹಾನಿಯಾಯಿತು? ಎಂಬುದರ ವಿಚಾರ ಮಾಡಬೇಕು. ಉದಾ. ಅಭ್ಯಾಸದವೇಳೆಯಲ್ಲಿ ಟಿ. ವ್ಹಿ ನೋಡುತ್ತ ಕುಳಿತರೆ, ಅಭ್ಯಾಸದ ವೇಳೆಯ ಹಾನಿ ಆಗುವುದು. ಅದೇ ಟಿ. ವ್ಹಿ ನೋಡಿ ಏನು ಲಾಭ ಗಳಿಸಿದೆವು? ಎಷ್ಟು? ಎಂಬ ವಿಚಾರ ಮಾಡಿದರೆ ಅಭ್ಯಾಸ ಹಾಗೂ ಟಿ. ವ್ಹಿಯಿಂದ ಆಗುವ ಮನರಂಜನೆ ಇವುಗಳ ಸಮತೋಲವನ್ನುಸಾಧಿಸಿ ವೇಳೆಯ ಪ್ರಯೋಜನಪಡೆಯಲು ಸಾಧ್ಯ.

## ಬನ್ನಿರಿ ಉಪಾಯ ಯೋಜನೆ ಮಾಡುವಾ :

ಕೆಳಗೆ ಕೆಲವು ಪ್ರಸಂಗಗಳನ್ನು ಕೊಡಲಾಗಿದೆ. ಅವನ್ನು ಓದಿರಿ. ಪ್ರತಿಯೊಂದು ವಿಷಯಕ್ಕೆ ಎರಡು ಪರ್ಯಾಯಗಳನ್ನುಕೊಡಲಾಗಿದೆ. ನೀವು ಯಾವ ಪರ್ಯಾಯವನ್ನು ಆರಿಸುವಿರಿ? ನೀವು ನಿಮ್ಮ ಮನಸ್ಸಿನಿಂದ ಇನ್ನೂ ಕೆಲವು ಹೆಚ್ಚಿನ ಪರ್ಯಾಯಗಳನ್ನುಸೇರಿಸಬಹುದು, ಅದರಂತೆಯೇ ಸ್ವತಃದ ಪ್ರಸಂಗಗಳನ್ನೂ ಸೇರಿಸಬಹುದು.

1. ನಿಮ್ಮ ಗೆಳೆಯ/ಗೆಳೆತಿಯರು ರಾತ್ರಿ ಹೊತ್ತಾಗಿ ಸಿನೇಮಾ ನೋಡಿ ತಿರುಗಿಬರುವ ವಿಚಾರ ಮಾಡಿರುವರು ಇದಕ್ಕೆ ನಿಮ್ಮ ತಂದೆ-ತಾಯಿಯರು ವಿರೋಧಿಸಿರುವರು.
   ಪರ್ಯಾಯ 1 : ನೀವು ತಾಯಿ-ತಂದೆಗೆಹೇಳದೇ ಹೋಗುವಿರಿ.
   ಪರ್ಯಾಯ 2 : ನೀವು ಗೆಳೆಯ/ಗೆಳತಿಗೆ ಬರುವುದಿಲ್ಲಎಂದು ತಿಳಿಸುವಿರಿ.

2. ನಾಳೆ ನಿಮ್ಮ ಪರೀಕ್ಷೆ ಇದೆ, ಆದರೆ ಇಂದು ಟಿ. ವ್ಹಿಯ ಮೇಲೆ ಒಂದು ಮಹತ್ವದ ಕ್ರಿಕೆಟ್ ಪಂದ್ಯವಿದೆ.
   ಪರ್ಯಾಯ 1 : ನೀವು ಪಂದ್ಯ ನೋಡುವಿರಿ.
   ಪರ್ಯಾಯ 2 : ನೀವು ಪರೀಕ್ಷೆಯ ಅಭ್ಯಾಸಮಾಡುವಿರಿ.

3. ನಿಮ್ಮ ಗೆಳೆಯ/ಗೆಳತಿಯರು ನಿಮಗೆ ಒಂದು ಅಲ್ಲಸಲ್ಲದ ಕೆಲಸಕ್ಕಾಗಿ ಆಗ್ರಹಪಡಿಸುತ್ತಿರುವರು.ನಿಮಗೆ, ಏನುಮಾಡಬೇಕೆಂದು ತೋಚುತ್ತಿಲ್ಲ.
   ಪರ್ಯಾಯ 1 : ನೀವು ಅವರ ಆಗ್ರಹಕ್ಕೆಬಲಿ ಬೀಳುವಿರಿ.
   ಪರ್ಯಾಯ 2 : ನೀವು ಸ್ಪಷ್ಟವಾಗಿ ಇಲ್ಲೆವೆಂದು ಹೇಳುವಿರಿ.

4. ಪಕ್ಕದ ಮನೆಯ ಮಾವಿನ ಗಿಡದಲ್ಲಿ ಬಹಳ ಮಾವಿನಹಣ್ಣುಗಳಿವೆ.ಆದರೆ ಆ ಮನೆಯಲ್ಲಿ ಯಾರೂ ಇಲ್ಲ. ನಿಮಗೆ ಆ ಹಣ್ಣುಗಳನ್ನು ತಿನ್ನುವ ಸದವಕಾಶವಿದೆ. ನೀವು ಏನು ಮಾಡುವಿರಿ?
   ಪರ್ಯಾಯ 1 : ನೀವು ಹೇಳಕೇಳದೆ ಮಾವಿನಹಣ್ಣುತಿನ್ನುವಿರಿ.
   ಪರ್ಯಾಯ 2 : ನೀವು ಮಾವಿನಹಣ್ಣುತಿನ್ನುವುದಿಲ್ಲ.

5. ನಿಮ್ಮ ಮಿತ್ರನಿಗೆ ಕೆಟ್ಟ ಚಟ ಹತ್ತಿದೆ, ಆದು ನಿಮಗೆ ತಿಳಿದಿದೆ.

ಪರ್ಯಾಯ 1 : ನೀವು ಅವನ ಮನೆಯವರಿಗೆ ಹೇಳುವಿರಿ.

ಪರ್ಯಾಯ 2 : ಅವನನ್ನು ಸುಧಾರಿಸುವ ಪ್ರಯತ್ನಮಾಡುವಿರಿ.

6. ನಿಮ್ಮ ವರ್ಗದಲ್ಲಿಯ ಒಹು ಗುಂಪು ಶಾಲೆಯ ಕಿಟಕಿಯನ್ನು ಒಡೆದುದನ್ನು ನೀವು ನೋಡಿರುವಿರಿ. ಆದರೆ ಆರೋಪ ಬೇರೆ ಹುಡುಗನ ಮೇಲೆ ಬಂದಿದೆ.

ಪರ್ಯಾಯ 1 : ನೀವು ವರ್ಗಶಿಕ್ಷಕರಿಗೆ ನಿಜ ಸಂಗತಿ ಹೇಳುವಿರಿ.

ಪರ್ಯಾಯ 2 : ನೀವು ಏನೂ ಮಾಡುವುದಿಲ್ಲ

**ಚರ್ಚೆ ಮಾಡಿರಿ:**
ವಿದ್ಯಾರ್ಥಿಗಳ ಗುಂಪು ಮಾಡಿ ಪ್ರತಿಗುಂಪಿಗೆಒಂದು ಪ್ರಸಂಗ ಕೊಡಿರಿ. ಪ್ರತಿ ಗುಂಪು ಒಂದು ಪರ್ಯಾಯ ಆರಿಸಿ ಅದರ ಪರಿಣಾಮಗಳ ಜವಾಬ್ದಾರಿ ತೆಗೆದುಕೊಳ್ಳಲು ಅವರು ಹೇಗೆ ಸಕ್ಷಮರಾಗಿರುವರು ಎಂಬುದನ್ನು ಹೇಳಬೇಕು.

***ಗಮನಿಸಬೇಕಾದ ಸಂಗತಿಗಳು :***

***ದೊಡ್ಡವರಾಗುವುದು :***

*ನಾವು ದೊಡ್ಡವರಾಗಿರುವೆವು ಚಿಕ್ಕವರಾಗಿ ಉಳಿದಿಲ್ಲ ಎಂದು ಹಿರಿಯರು ಸಾಕಷ್ಟು ಸಲ ಹೇಳುವರು. ಈ ವಾಕ್ಯದ ನಿಜವಾದ ಅರ್ಥವೇನು? ನಾವು ದೊಡ್ಡವರಾಗುತ್ತ ಹೋದಂತೆ, ನಮ್ಮ ನಿರ್ಣಯಗಳು ನಾವು ಸ್ವತಃ ತೆಗೆದುಕೊಳ್ಳುವ ಬೇಕಾದದುದನ್ನು ಮಾಡುವ ಸ್ವಾತಂತ್ರ್ಯ ಸಿಗುತ್ತ ಹೋಗುತ್ತದೆ. ಆದರೆ ಆ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ನಮ್ಮ ಸೀಮೆ ಎಷ್ಟು ಇದೆ ಎಂಬುದರ ಅರಿವು ಇಟ್ಟುಕೊಳ್ಳುವುದು ಅವಶ್ಯವಾಗಿದೆ ನಾವು ಯಾವ ಪರ್ಯಾಯಗಳನ್ನು ಸ್ವೀಕರಿಸುವೆವೋ ಅವುಗಳ ಜವಾಬ್ದಾರಿ ನಮ್ಮದೇ ಇರುತ್ತದೆ. ಅದರಂತೆಯೇ ಆ ನಿರ್ಣಯಗಳು ತಪ್ಪಾಗಿದ್ದರೆ ಅದರ ಬೇಲೆ ತೆರಲೂ ಸಿದ್ಧರಾಗಿರಬೇಕು. ಸ್ವಾತಂತ್ರ್ಯ, ಅದರ ಸೀಮೆ, ಅದರ ಜವಾಬ್ದಾರಿ ಹಾಗೂ ಅದರ ಬೆಲೆ ಕೊಡುವ ತಯಾರಿ ಈ ನಾಲ್ಕೂ ವಿಷಯಗಳ ಸಮತೋಲನೆಯನ್ನು ಸಾಧಿಸುವುದು ಎಂದರೇನೇ ನಿಜ ಅರ್ಥದಲ್ಲಿ ದೊಡ್ಡವರಾಗುವುದು ಎನ್ನಬಹುದು.*

## ಮೌಲ್ಯಮಾಪನ

**ಭಾರಾಂಶ – 10%**

| ಮಾನದಂಡ | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಗುಣಗಳು |
|---|---|---|---|---|
| ಕಿಶೋರಾವಸ್ಥೆಯಲ್ಲಿ ಮೆದುಳು ಏಕೆ ಭಿನ್ನವಾಗಿದೆ ಎಂಬುದನ್ನು ಸ್ಪಷ್ಟ ಪಡಿಸಲು ಬರಬೇಕು. | ಸ್ವತಃದ ಶಬ್ದಗಳಲ್ಲಿ ಖಚಿತವಾದ ಸ್ಪಷ್ಟೀಕರಣ ನೀಡಲು ಬಂದಿತು. | ಸ್ಪಷ್ಟೀಕರಣೆನೀಡಿದೆ. ಆದರೆ ಅದರಲ್ಲಿ ಕೆಲವು ತಪ್ಪುಗಳು ಕಂಡು ಬಂದವು. | ಅರ್ಧಮರ್ಧ ನಿಶ್ಚಿತವಲ್ಲದ ಸ್ಪಷ್ಟೀಕರಣ | |
| 'ಯೋಗ್ಯ ಪರ್ಯಾಯ ಆರಿಸಿರಿ' ಈ ಉಪಕ್ರಮದಲ್ಲಿ ಪಾಠದಲ್ಲಿ ಕಲಿತ ಸಂಕಲ್ಪನೆಗಳ ಉಪಯೋಗ ಮಾಡಿಕೊಳ್ಳುವುದು. | ಪಾಠಗಳಲ್ಲಿ ನೀಡಿದ ಸಂಕಲ್ಪನೆಗಳ ಯೋಗ್ಯ ಉಪಯೋಗ ಮಾಡಿ ಉತ್ತರಗಳನ್ನುಹುಡುಕಿದೆ | ಪಾಠದ ಕನಿಷ್ಠ ವೆಂದರೆ ಒಂದಾದರೂ ಸಂಕಲ್ಪನೆಯ ಉಪಯೊಗವನ್ನು ಉಪಾಯ ಯೋಜನೆಗಳಲ್ಲಿ ಮಾಡಲಾಯಿತು. | ಪಾಠದಲ್ಲಿಯ ಸಂಕಲ್ಪನೆಗಳು ಸರಿಯಾಗಿ ತಿಳಿಯಲಿಲ್ಲ, ಉಪಾಯ ಯೋಜನೆಗಳಲ್ಲಿ ಅವುಗಳ ಅಂತರ್ಭಾವ ಕಂಡುಬರಲಿಲ್ಲ. | |


ನನಗೆ ಯಾವಾಗಲೂ ಒಂದು ವಿಷಯದ ಬಗ್ಗೆ ಕುತೂಹಲವಿದೆ. ನೀವು ಎಂದೂ ಕೆಟ್ಟ ಪ್ರವೃತ್ತಿಯ ಜನರಿಗೆ ಬೆಂಬಲ ಕೊಡುವುದಿಲ್ಲ.
ಕಲ್ಪನೆ ಮಾಡಿರಿ. ನೀವು ಬೇಕಾದಾಗ ಶಾಲೆಯಿಂದ ಹಾರಿ ಹೋಗಬಹುದು. ನಿಮ್ಮ ಪ್ರತಿಸ್ಪರ್ಧಿಗಳ ಚೇಷ್ಟೆ ಮಾಡಬಹುದು..... ನಿಮಗೆ ಎಷ್ಟು ಮೋಜು ಎನಿಸಬಹುದು !
ಅಹುದು ನಿಶಾ, ಹೀಗೆ ಇರಬಹುದು..... ಇದೆಲ್ಲ ಮೋಜು ಎನಿಸಬಹುದು, ಆದರೆ ನಾವು ಯಾವಾಗಲೂ ಮೌಲ್ಯಾಧಾರಿತ ಜೀವನ ನಡೆಸುವುದರಲ್ಲಿ ವಿಶ್ವಾಸವಿಡುವೆ.
ಮೌಲ್ಯಾಧಾರ ಜೀವನ ನಡೆಸುವುದರ ಮೇಲೆ ನಿನಗೆ ವಿಶ್ವಾಸವಿದೆಯೇ?
?

# 3 ಮೌಲ್ಯಗಳು

## ನಿಮ್ಮ ಮೌಲ್ಯಗಳ ವ್ಯವಸ್ಥೆ ತಿಳಿದುಕೊಳ್ಳುವಾಗ..

8HEEPD

**ಉದ್ದೇಶಗಳು:**

(1) ಮೌಲ್ಯದ ಸಂಜ್ಞೆ, ಮೌಲ್ಯಗಳ ಮಹತ್ವ ಹಾಗೂ ಅವುಗಳ ಉಗಮ ಸ್ವತಃದ ಶಬ್ದಗಳಲ್ಲಿ ಹೇಳಲು ಬರುವುದು.

(2) ವೈಯಕ್ತಿಕ ಮೌಲ್ಯಗಳ ಪರಿಚಯ ಮಾಡಿಕೊಳ್ಳುವುದು.

(3) ಸ್ವತಃದ ಮೌಲ್ಯಗಳ ಆಚರಣೆಯಲ್ಲಿ ಕಂಡುಬರುವವೇ ಎಂಬುದರ ಬಗ್ಗೆ ಆತ್ಮ ಪರೀಕ್ಷೆ ಮಾಡಲು ಬರುವುದು.

(4) ಮೌಲ್ಯಾಧಾರಿತ ಜೀವನ ನಡೆಸಲು ವರ್ತಮಾನದಲ್ಲಿ ಯೋಗ್ಯ ಬದಲಾವಣೆ ಮಾಡುವ ನಿಯೋಜನೆ ಮಾಡಲು ಬರುವುದು.

(5) ಮೌಲ್ಯ ಹಾಗೂ ನಿಯಮಗಳಲ್ಲಿ ಭೇಧ ಮಾಡಲು ತಿಳಿಯುವುದು.

## 1. ಮೌಲ್ಯ ಎಂದರೇನು?

- ಯುಸುಫನು ಅವನ ಎಲ್ಲ **ಬೆಲೆಬಾಳುವ** ವಸ್ತುಗಳನ್ನು ಬ್ಯಾಗಿನಲ್ಲಿ ಸುರಕ್ಷಿತವಾಗಿರುವಂತೆ ಹೊಂದಿಸಿಟ್ಟಿರುವನು.



- ಡೆಲ್ಸಿಗೆ, ಅವಳ ತಂದೆ ಕೊಂಡುತಂದ ಮೋಟಾರು ಚೆನ್ನಾಗಿರುವುದರಿಂದ ಅವರ ಹಣಕ್ಕೆ ಸರಿಯಾದ ಮೌಲ್ಯ ಸಿಕ್ಕಿತು ಎಂದೆನಿಸುತ್ತದೆ.



ಪಕ್ಕದ ಚಿತ್ರಗಳ ಉತ್ತರ ಇರುವ ಹೇಳಿಕೆಗಳನ್ನು ಓದಿರಿ. ಪ್ರತಿಯೊಂದು ವಾಕ್ಯದಲ್ಲಿಯ ಬೆಲೆ, ಮೌಲ್ಯ, ಬೆಲೆಬಾಳುವ ಈ ಶಬ್ದಗಳ ಅರ್ಥ ತಿಳಿದುಕೊಳ್ಳಿರಿ. ಎಲ್ಲ ವಾಕ್ಯಗಳಲ್ಲಿ 'ಮೌಲ್ಯ ಅಥವಾ ಬೆಲೆಬಾಳುವ' ಈ ಶಬ್ದಗಳ ಅರ್ಥ ಒಂದೇ ಇದೆಯೆ? ಆ ಅರ್ಥ ಏನು ಇದೆ?



- ಇನ್ನೊಬ್ಬರ ಸಮಯಕ್ಕೆ ಬಹಳ **'ಮೌಲ್ಯ'** ಹೊಂದಿದೆ ಎಂಬುದನ್ನು ನೆನಪಿಡಿರಿ.



- ಶಾಲಿನಿಯ ದೂರು ಏನೆಂದರೆ ಅವಳ ತಲೆಗೆಏನೂ **'ಬೆಲೆ'** ಇಲ್ಲ.



- ಪ್ರಾಮಾಣಿಕತೆಯು ಅಕ್ಷಯನ ವಿಚಾರದಲ್ಲಿ ಮಹತ್ವದ **'ಮೌಲ್ಯ'** ಹೊಂದಿದೆ.

***ಗಮನಿಸಬೇಕಾದ ಸಂಗತಿಗಳು:***

- **ಆಚರಣೆಯ ನಿಯಮಗಳು ಅಥವಾ ತತ್ವಗಳು–**

*1. ನಾವು ಯಾವ ಸ್ಥಳದಲ್ಲಿ ಹುಟ್ಟಿರುವೆವೋ (ಉದಾ. ದೇಶ, ಧರ್ಮ, ಜಾತಿ ಇ.) ಮುಂತಾದವುಗಳಿಗನುಸಾರವಾಗಿ ಅವು ನಮ್ಮ ವಿಚಾರದಲ್ಲಿರುವವು.*

*2. ನಾವು ಸಾಕಷ್ಟುಸಲ ಸಮಯ ಪಾಲಿಸುವವು. (ಬೇರೆ ಬೇರೆ ಪರಿಸ್ಥಿತಿ/ಪಾತ್ರಗಳಲ್ಲಿ)*

*3. ಯಾವ ವಿಷಯದಲ್ಲಿ 'ನಾನಿದನ್ನು ಮಾಡಲೇಬೇಕು' ಎಂದು ನಮಗೆ ಅನಿಸುವುದೋ ಅದಕ್ಕೆ **'ಮೌಲ್ಯ'** ಎನ್ನುವರು.*

## 2. ಮೌಲ್ಯಕ್ಕೆ ಏಕೆ ಮಹತ್ವವಿದೆ?

ದೈನಂದಿನಜೀವನದಲ್ಲಿ ಮೌಲ್ಯಗಳಪರಿಣಾಮ ಹೇಗೆ ಆಗುತ್ತದೆ? ಆರಿಸಿದ ಪರ್ಯಾಯಗಳ ಪರಿಣಾಮ ಹೇಗೆ ಆಗುತ್ತದೆ ಎಂಬುದುನ್ನು ತಿಳಿಹೇಳಬೇಕು.

ಪರೀಕ್ಷೆಯ ಫೀ ತುಂಬಲು ಹಣ ತರಲು ನೀವು ಮರೆತಿರುವಿರಿ. ಗೆಳೆಯನು ಫೀ ತುಂಬಲು ತಂದ ಹಣ ಕಳೆದಿದೆ. ಅದು ಅಕಸ್ಮಾತ್ತಾಗಿ ನಿಮಗೆ ಸಿಕ್ಕಿದೆ. ಪರೀಕ್ಷೆಯ ಫೀ ಸರಿಯಾದ ಸಮಯದಲ್ಲಿತುಂಬದಿದ್ದರೆನೀವು ತೊಂದರೆಗೀಡಾಗುವಿರಿ.ಆದುದುರಿಂದ ಸಿಕ್ಕ ಹಣದಿಂದ ನಿಮ್ಮ ಫೀ ತುಂಬುವ ಆಸೆ ನಿಮಗಾಗುತ್ತದೆ. ಆದರೆ ನಿಮ್ಮ ಮಿತ್ರನಿಗೂ ಅದರ ಅವಶ್ಯಕತೆಇದೆ.

ಈಗ ನಿಮ್ಮ ಮುಂದೆ ಎರಡು ಪರ್ಯಾಯಗಳಿವೆ–

**ನೀವು ಏನು ಮಾಡುವಿರಿ? ಇವುಗಳಲ್ಲಿಯ ಒಂದು ಪರ್ಯಾಯವನ್ನು ನೀವು ಯಾವ ಆಧಾರದ ಮೇಲೆ ಆರಿಸುವಿರಿ?**

**ಪರ್ಯಾಯ 1**
ಮಿತ್ರನಿಗೆ ಅವನ ಹಣ ಕೊಡುವುದು ಹಾಗೂ ಸ್ವತಃದ ಪ್ರಶ್ನೆಯನ್ನು ಎದುರಿಸುವುದು.



**ಪರ್ಯಾಯ 2**
ಮಿತ್ರನ ಸಿಕ್ಕ ಹಣವನ್ನು ತನ್ನದೆಂದುತಿಳಿದು ಫೀ ತುಂಬಲು ಉಪ–ಯೋಗಿಸುವುದು

ಎರಡನೆಯ ಪರ್ಯಾಯ ಆರಿಸುವುದು ಸುಲಭವೆನಿಸುತ್ತದೆ.ಆದರೆ ವಿಚಾರ ಮಾಡಿದರೆ, ಪ್ರತಿಯೊಂದುಸಲ ನಾವು, ಆಹೊತ್ತಿನಲ್ಲಿ ಸುಲಭ ವೆನಿಸಿದ ಮಾರ್ಗದ ಆಯ್ಕೆ ಮಾಡಿದರೆ, ಇನ್ನೊಬ್ಬರಿಗೆನಮ್ಮ ನಡುವಳಿಕೆ ಸೇರಲಿಕ್ಕಿಲ್ಲ.ನಾವು ಪ್ರಾಮಾಣಿಕ,ವಿಶ್ವಾಸ ಇಡಬೇಕಾದ ವ್ಯಕ್ತಿಯಲ್ಲಿಎಂದು. ಅದರಂತೆಯ ಕಲ್ಪನೆ ಮಾಡಿರಿ. ಪ್ರತಿಯೊಬ್ಬನೂಸ್ವಾರ್ಥದಿಂದ, ಸುಳ್ಳುಗಾರಿಕೆಯಿಂದತನ್ನ ಹಿತದ ವಿಚಾರ ಮಾಡಿದರೆ ಸಮಾಜದಲ್ಲಿಎಲ್ಲೆಡೆ ಅವಿಶ್ವಾಸ ನಿರ್ಮಾಣ ವಾಗಬಹುದು. ಒಬ್ಬರಿಗೊಬ್ಬರಮೇಲೆ ವಿಶ್ವಾಸಕಳೆದು ಹೋಗಿ ಜೀವನ ನಡೆಸುವುದು ಕಠಿಣ ವಾಗಬಲ್ಲದು.ನಮ್ಮ ನಡುವಳಿಕೆ ಸರಿಯಾಗಿರಲು ಹಾಗೂ ಸಮಾಜದಲ್ಲಿನಾವು ಐಕ್ಯತೆಯಿಂದಿರಲು,ಶಾಂತಿಯಿಂದ, ಒಟ್ಟಾಗಿರಲು,ನಮ್ಮ ಜೀವನ ಸುಕರವಾಗಬೇಕಾದರೆ,ತಮ್ಮ ಸ್ವತಃದ ಮೌಲ್ಯಗಳ ವಿಚಾರ ಸರಣಿ ಅತ್ಯಂತ ಮಹತ್ವದ್ದಾಗಿದೆ.

ಯಾವಾಗ ನಾವು ಒಂದು ಕೃತಿ/ವರ್ತನೆಯನ್ನು ಯೋಗ್ಯವೆಂದು ತಿಳಿದುಕೊಳ್ಳುವೆವೋ ಆಗ ನಾವು ಅದನ್ನು ಯಾವಾಗಲೂ ಮಾಡುವ ಪ್ರಯತ್ನಮಾಡುವೆವು. ಆಗ ನಮ್ಮ ದೃಷ್ಟಿಕೋನಅಂತಹ ವರ್ತನೆಗೆ ಅನುಕೂಲ ವಾಗುತ್ತದೆ. ಸಾವಕಾಶವಾಗಿ ನಮಗೆ ಅದರ ಅಭ್ಯಾಸವಾಗುತ್ತದೆ.ನಂತರ ನಮ್ಮ ವೃತ್ತಿಯೇಹಾಗೆ ಆಗುತ್ತ ಹೋಗುತ್ತದೆ, ಆಗ ನಮ್ಮ ಮೌಲ್ಯಗಳೂಹಾಗೆಯೇ ಆಗುವವು. ದೃಷ್ಟಿಕೋನ ⟶ ರೂಢಿ ⟶ ವೃತ್ತಿ ⟶ ಮೌಲ್ಯ. ಉದಾ. ನಮಗೆ ಸಾದಾ ಬಟ್ಟೆಗಳನ್ನುಹಾಕಲು ಇಷ್ಟ, ಆಗ ಇತರರೂ ಸಾದಾ ಬಟ್ಟೆಗಳನ್ನು ಧರಿಸಿದುದು ಇಷ್ಟವಾಗುವುದು. ಸಾವಕಾಶವಾಗಿ ನಮ್ಮ ವೃತ್ತಿಯೂ ಸಾದಾತನವನ್ನು ಇಷ್ಟಪಡುವಂತಹದಾಗುತ್ತದೆ. ಜೀವನದ ಎಲ್ಲ ವಿಷಯಗಳಲ್ಲಿನಮಗೆ ಸಾದಾತನ ಇಷ್ಟವಾಗುತ್ತದೆ,ನಮ್ಮ ರೂಢಿಗಳಲ್ಲೂ ಅದು ಕಂಡು ಬರುತ್ತದೆ, ಆದೇ ನಮ್ಮ ಮೌಲ್ಯವಾಗುತ್ತದೆ.


***ಗಮನಿಸಬೇಕಾದ ಸಂಗತಿಗಳು :***

- ***ಮೌಲ್ಯಗಳ ಮಹತ್ವ***
- *ಮೌಲ್ಯಗಳುನಮ್ಮ ನಡುವಳಿಕೆಗೆಮಾರ್ಗದರ್ಶನನೀಡುವವು. ಮೌಲ್ಯಗಳಿಂದಾಗಿ, ಯಾವಸಂಗತಿಗಳು ಮಹತ್ವದ್ದಾಗಿವೆಹಾಗೂಹೆಚ್ಚು ಅರ್ಥಪೂರ್ಣವಾಗಿವೆಎಂಬುದನ್ನು ತಿಳಿಯಲು ಸಹಾಯವಾಗುತ್ತದೆ. ಯಾವ ವ್ಯಕ್ತಿಯಮೌಲ್ಯಗಳುಖಚಿತವಾಗಿ ಇರುವುದಿಲ್ಲವೋ, ಆವ್ಯಕ್ತಿವಿಶಿಷ್ಟಪರಿಸ್ಥಿತಿಯಲ್ಲಿಸ್ವತಃದ ಅಲ್ಪಕಾಲದಸಮಾಧಾನದ ವಿಚಾರಮಾಡಿ ಇಲ್ಲವೆಭಾವನೆಗಳಿಂದ ನಿರ್ಣಯತೆಗೆದುಕೊಳ್ಳುವರು.*
- *ವ್ಯಕ್ತಿಗಳವಿಚಾರ, ವರ್ತನೆ, ನಿರ್ಣಯ ಅದರಿಂತೆ ಜೀವನದಲ್ಲಿ ಯಾವ ಸಂಗತಿಗಳು ಮಹತ್ವದ್ದಿವೆ ಇವುಗಳೆಲ್ಲದರ ಮೇಲೆ ಮೌಲ್ಯಗಳು ಪ್ರಭಾವಬೀರುವವು.*

## 3. ವೈಯಕ್ತಿಕ ಮೌಲ್ಯಗಳು

ಮೌಲ್ಯಗಳು ಜೀವನಕ್ಕೆ ಆಕಾರ ಹಾಗೂ ಆಧಾರ ಕೊಡುವವು. ಅದಕ್ಕಾಗಿ ನಿಮ್ಮ ಮೌಲ್ಯಗಳು ಯಾವವು ಹಾಗೂ ಅವು ಏಕೆ ಮಹತ್ವದ್ದಾಗಿವೆ ಎಂಬುದನ್ನು ತಿಳಿದುಕೊಳ್ಳಬೇಕು. ಪ್ರತಿಯೊಬ್ಬ ವೈಯಕ್ತಿಕ ಮೌಲ್ಯಗಳು ವ್ಯಕ್ತಿನುಸಾರ ಭಿನ್ನ ಭಿನ್ನ ವಾಗಿರುವವು.

### ವೈಯಕ್ತಿಕ ಮೌಲ್ಯಗಳಿಂದ ಕಂಡುಬರುವ ಕೆಲವು ರೂಢಿಗಳು



## 4. ಮೌಲ್ಯಗಳ ಶೋಧ


ಕೆಳಗಿನ ಉದಾಹರಣೆಗಳಲ್ಲಿ ಯಾವಯಾವ ಮೌಲ್ಯಗಳು ಕಂಡುಬರುವವು ಎಂಬುದರ ಚರ್ಚೆಮಾಡಿ ನಿರ್ಧರಿಸಿರಿ.



- ಹಾಲು ಮಾರುವ ಮೋಹನ ದಿನಾಲು ನಿರ್ಧಿಷ್ಟ ವೇಳೆಯಲ್ಲಿ ಅನೇಕ ಮನೆಗಳಲ್ಲಿ ಹಾಲು ಕೊಡುವನು. ಅವನ ಕೆಲವು ಮಿತ್ರರು ಹಾಲಿನಲ್ಲಿ ನೀರುಹಾಕಿ ಹಾಲಿನ ಪ್ರಮಾಣಬೆಳೆಸುವರು ಹಾಗೂ ಹೆಚ್ಚು ಲಾಭ ಗಳಿಸುವರು. ಆದರೆ ಇಂತಹ ಕಲಬೆರಕೆಗೆ ಮೋಹನನ ವಿರೋಧವಿದೆ.



- ಜೊಸೆಫ್‌ನ ತಾಯಿ ಕೆಲಸಕ್ಕಾಗಿ ಊರಿಗೆ ಹೋಗಿರುವಳು. ಅವನ ಮಿತ್ರರು ಜೊಸೆಫ್‌ನಿಗೆ ಸಿನೇಮಾ ನೋಡಲು ಆಗ್ರಹ ಪಡಿಸುತ್ತಿರುವರು. ಅವನ ಪರೀಕ್ಷೆ ಸಮೀಪ ಬಂದಿರುವುದರಿಂದ ಅಭ್ಯಾಸ ಮಾಡುವುದಿದೆ ಎಂದು ಅವರ ಜೊತೆ ಸಿನೇಮಾಕ್ಕೆ ಹೋಗಲು ಇಲ್ಲೆಂದನು.





- ನೀಲಿಮಾ ಇವಳು ಅವಳಿಗೆ ಒಪ್ಪಿಸಿದ ಯಾವುದೇ ಕೆಲಸವನ್ನು ಚೆನ್ನಾಗಿ. ಅಚ್ಚುಕಟ್ಟಾಗಿ, ಪೂರ್ಣ ಕ್ಷಮತೆಯಿಂದ ಹಾಗೂ ಸಮಯಕ್ಕೆ ಸರಿಯಾಗಿ ಪೂರ್ತಿ ಮಾಡುವಳು.

- ಕ್ರಿಕೆಟ್ ಆಡುವಾಗ ರತನ ಹಾಗೂ ಅವನ ಗೆಳೆಯರಿಂದ ಒಂದು ಮನೆಯ ಕಿಟಿಕಿಯ ಗಾಜು ಒಡೆದಿದೆ. ಅವನ ಇತರ ಮಿತ್ರರು ಹೆದರಿ ಓಡಿಹೋಗಿರುವರು. ಆದರೆ ರತನನು ಅವರ ತಪ್ಪನ್ನು ಒಪ್ಪಿಕೊಂಡ. ಅವನು ಮನೆಯ ಯಜಮಾನತಿಯ ಕ್ಷಮೆ ಕೇಳಿದ. ಅವರು ಅವನನನ್ನು ಕ್ಷಮಿಸಿದರು.

- ಪರೀಕ್ಷೆಯ ಮೊದಲು ಭಾಸ್ಕರನ ಗೆಳೆಯನು ಅಭ್ಯಾಸ ಮಾಡಲು ಅವನ ಪುಸ್ತಕ ತೆಗೆದುಕೊಂಡ. ಆ ಮಿತ್ರನಿಂದ ಆ ಪುಸ್ತಕ ಕಳೆಯಿತು. ಅಭ್ಯಾಸ ಮಾಡಲು ಪುಸ್ತಕ ಇಲ್ಲದಿರುವುದರಿಂದ ಭಾಸ್ಕರನಿಗೆ ಪರೀಕ್ಷೆಯಲ್ಲಿ ಕಡಿಮೆ ಗುಣಗಳು ದೊರೆತವು. ಗೆಳೆಯನು ಭಾಸ್ಕರನ ಕ್ಷಮೆ ಕೋರಿದ. ಭಾಸ್ಕರನು ಅವನ ಮೇಲೆ ಸಿಟ್ಟಾಗದೆ ಅವನ ಗೆಳೆತನ ಮುಂದುವರಿಸಿದ.



## 5. ಮೌಲ್ಯಗಳ ಉಗಮ (ಮೌಲ್ಯಗಳ ನಿರ್ಮಾಣ)

ಕೆಳಗಿನ ಕೆಲವು ನಮೂನೆಯ ಉದಾಹರಣೆಗಳನ್ನು ಕೊಡಲಾಗಿದೆ. ಅದನ್ನು ಓದಿ ವಿವಿಧ ವೈಯಕ್ತಿಕ ಮೌಲ್ಯಗಳ ನಿರ್ಮಾಣ ಹೇಗೆ ಆಗುವುದೆಂಬುದನ್ನು ತಿಳಿದು ಕೊಳ್ಳಿರಿ.

### ಮೌಲ್ಯಗಳ ಉಗಮ

ರೀನಾಳ ತಂದೆ ಅವಳಿಗೆ ಯಾವಾಗಲೂ ಸತ್ಯ ಮಾತಾಡಲು ಕಲಿಸಿರುವರು. ಆದರ ಪರಿಣಾಮದಿಂದಾಗಿ ಪ್ರಾಮಾಣಿಕತೆಯು ರೀನಾಳ ಮೌಲ್ಯವಾಗಿದೆ.

ಶಾಲೆಗೆ ಸಮಯಕ್ಕೆ ಸರಿಯಾಗಿ ಬಂದು ಕೊಟ್ಟ ಸಮಯದಲ್ಲಿ ಎಲ್ಲ ಕೆಲಸಗಳನ್ನು ಪೂರ್ಣ ಮಾಡುವುದು ಅವಳ ಶಾಲೆಯ ನಿಯಮವಾಗಿದೆ. ಸೀಮಾಳ ಮನೆಯಲ್ಲಿ ಎಲ್ಲರೂ ಸಮಯ ಪರಿಪಾಲನೆ ಮಾಡುವುದಿಲ್ಲ ಆದರೆ ಶಾಲೆಯಿಂದಾಗಿ ಸಮಯ ಹಾಗೂ ಶಿಸ್ತು ಪಾಲನೆ ಮಾಡುವದಿಲ್ಲ ಆದರೆ ಶಾಲೆಯಿಂದಾಗಿ ಸಮಯ ಹಾಗೂ ಶಿಸ್ತು ಪಾಲನೆ ಮಾಡುವ ಮೌಲ್ಯಗಳು ಸೀಮಾಳಲ್ಲಿ ಬಿಂಬಿಸಿವೆ.

ತನ್ನ ಹುಟ್ಟು ಹಬ್ಬದ ದಿನ ಮಹೇಶನು ದುಬಾರಿ ಬಟ್ಟೆಗಳನ್ನು ಖರೀದಿ ಮಾಡದೆ ಸಾದಾ ಬಟ್ಟೆಗಳನ್ನು ಖರೀದಿಸಿ, ಅವಶ್ಯಕತೆ ಇದ್ದ ಮಕ್ಕಳಿಗೆ ಕಾಣಿಕ ನೀಡುವನು.

ಜಗ ವಿಜಯನಿಗೆ ವಿಜ್ಞಾನದಲ್ಲಿ ರುಚಿ ಇದೆ. ಬಾಹ್ಯ ವಾತಾವರಣದಲ್ಲಿಯ ಎಲ್ಲ ಭೌತಿಕ ಘಟನೆಗಳ ವೈಜ್ಞಾನಿಕ ಕಾರಣಗಳನ್ನು ಹುಡುಕುವ ಪ್ರಯತ್ನ ಅವನು ಮಾಡುತ್ತಾನೆ. ಪರಂಪರಾಗತವಾಗಿ ಬಂದ ಸಂಗತಿಗಳಲ್ಲಿ ಅವನು ಕಣ್ಣು ಮುಚ್ಚಿ ವಿಶ್ವಾಸವಿಡುವುದಿಲ್ಲ ವೈಜ್ಞಾನಿಕ ದೃಷ್ಟಿಕೋನವು ಜಗವಿಜಯನ ಮೌಲ್ಯವಾಗಿದೆ.

ಜಮಶೇದನಿಗೆ ಸ್ವಾತಂತ್ರ್ಯ ಸೈನಿಕರ ಶೌರ್ಯ ಕಥೆಗಳನ್ನು ಓದಲು ಸೇರುತ್ತದೆ. ಅವರ ಶೌರ್ಯದ, ಧೈರ್ಯದ ಪ್ರಭಾವ ಜಮಶೇದನ ಮೇಲೆ ಆಗಿದೆ. ಯೋಗ್ಯ ಕಾರಣಕ್ಕಾಗಿ ಶೂರತನದಿಂದ ಹೋರಾಡುವುದು ಬಹಳ ಮಹತ್ವದ್ದಾಗಿದೆ ಎಂದು ಅವನಿಗೆ ಅನಿಸುತ್ತದೆ.

ಬಾಲಾಜಿಯ ಕುಟುಂಬದವರು ಸಾಮುದಾಯದ ಜೀವನಶೈಲಿಯನ್ನು ಮನ್ನಿಸುವರು. ಸಮೂಹ ಜೀವನದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುವುದು ಮಹತ್ವದ್ದಾಗಿದೆ. ಎಂದು ಅವರು ನಂಬುವರು. ಇದರಿಂದಾಗಿ ಪರಸ್ಪರ ಸಹಕಾರ ಮಾಡುವುದು ಬಾಲಾಜಿಯ ಮೌಲ್ಯವಾಗಿದೆ.

***ಗಮನಿಸಬೇಕಾದ ಸಂಗತಿಗಳು :***

- *ವೈಯಕ್ತಿಕ ಮೌಲ್ಯಗಳು ಶಾಲೆ, ಸಮಾಜ, ಸಂಸ್ಕೃತಿ, ಧರ್ಮ, ಪುಸ್ತಕ, ಶಾಸ್ತ್ರಗಳು ಈ ಯಾವುದೇ ಘಟಕದ ಪ್ರಭಾವದಿಂದಾಗಿ ನಿರ್ಮಾಣವಾಗುವವು.*
- *ವ್ಯಕ್ತಿಯು ಕೆಲವು ಮೌಲ್ಯಗಳನ್ನು ಅನುಭವದಿಂದ ಹಾಗೂ ಬಹಳ ವಿಚಾರ ಮಾಡಿ, ಸ್ವೀಕರಿಸುವನು, ಕೆಲವು ಮೌಲ್ಯಗಳು ವಿಶಿಷ್ಟ ಕುಟುಂಬ ವ್ಯವಸ್ಥೆ, ಜಾತಿ, ಧರ್ಮ, ಸಮುದಾಯ, ಸಂಸ್ಕೃತಿ, ವಿಚಾರ ಸರಣಿಗಳ ಪ್ರಭಾವದಿಂದ ಜನ್ಮತಃ ಇಲ್ಲವೆ ವಂಶ ಪರಂಪರಾಗತವಾಗಿ ನಿರ್ಮಾಣವಾಗುವವು.*
- *ತಮ್ಮ ಜೀವನದ ಮೌಲ್ಯಗಳ ಬಗ್ಗೆ ಪ್ರತಿಯೊಬ್ಬರು ಕಾಲಾಂತರದಲ್ಲಿ ಪುನಃ ವಿಚಾರ ಮಾಡಬೇಕು. ಆ ಮೌಲ್ಯಗಳನ್ನು ತಮ್ಮ ನಡುವಳಿಕೆಯಲ್ಲಿ ನಾವು ಎಷ್ಟು ಪ್ರಮಾಣದಲ್ಲಿ ಪಾಲಿಸುವೆವು ಎಂಬುದರ ವಿಚಾರ ಮಾಡಬೇಕು.*

ವಿದ್ಯಾರ್ಥಿಗಳಿಗೆ ಕೆಳಗಿನ ಕೃತಿಗಳನ್ನು ಮಾಡಲು ಹೇಳಬೇಕು.

- ನೀವು ಆದರ ತೋರುವ ಮೂರು ವ್ಯಕ್ತಿಗಳನ್ನು ಆರಿಸಿರಿ. ಅವರು ನಿಮ್ಮ ಪಾಲಕರು, ಶಿಕ್ಷಕ, ಮಿತ್ರ, ನೆರೆಹೊರೆಯವರು, ಪ್ರಸಿದ್ಧ ವ್ಯಕ್ತಿ ಯಾರೇ ಆಗಿರಬಹುದು.
- ಅವರ ನಡುವಳಿಕೆಯಲ್ಲಿ ಯಾವ ಮೌಲ್ಯಗಳು ಕಂಡುಬರುವವು ಎಂಬುದರ ವಿಚಾರ ಮಾಡಿರಿ.
- ಆ ಮೌಲ್ಯಗಳನ್ನು ಅವರು ಏಕೆ ಸ್ವೀಕರಿಸಿದರು ಯಾವುದೇ ತರಹದಿಂದ ಹುಡುಕಿ ತೆಗೆಯಿರಿ.

## 6. ರೂಢಿಗಳ ಆತ್ಮಪರೀಕ್ಷೆ

ಕೆಳಗಿನ ವಾಕ್ಯಗಳನ್ನು ಓದಿರಿ. ಇಂತಹ ಪ್ರಸಂಗಗಳಲ್ಲಿಸುಮಾರಾಗಿ ನೀವು ಏನು ಮಾಡುವಿರಿ ಎಂಬುದನ್ನು ನೆನಪಿಸಿಕೊಳ್ಳಿರಿ. ಕೆಳಗಿನ ವಾಕ್ಯಗಳನ್ನು ಪೂರ್ಣಗೊಳಿಸಿರಿ. ಆ ಕೃತಿಗಳಿಂದ ನಿಮ್ಮ ಯಾವ ಮೌಲ್ಯಗಳು ಕಂಡುಬರುವವು ಎಂಬುದರ ಬಗ್ಗೆ ವಿಚಾರ ಮಾಡಿರಿ.

> ವಿದ್ಯಾರ್ಥಿಗಳಿಗೆ ಮೌಲ್ಯಗಳ ಬಗ್ಗೆ ಸ್ವತಃ ಪರೀಕ್ಷೆ ಮಾಡಲು ಪ್ರೋತ್ಸಾಹಿಸಿರಿ. ಅವರಿಗೆ ಯೋಗ್ಯವೆನಿಸುವ ಉತ್ತರಕ್ಕಿಂತ ನಿಜವಾದ ಉತ್ತರ ಬರೆಯಲು ಹೇಳಿರಿ.

1. ಗೃಹಪಾಠ ಪೂರ್ಣ ಮಾಡಿಲ್ಲ ಮತ್ತು ವರ್ಗದಲ್ಲಿ ಗೃಹಪಾಠ ಮಾಡದ ವಿದ್ಯಾರ್ಥಿಗಳಿಗೆ ಶಿಕ್ಷಕರು ಎದ್ದು ನಿಲ್ಲಲು ಹೇಳಿದರೆ ........................
2. ನಿಮ್ಮ ಗೆಳೆಯನು ವಿಶ್ವಾಸದಿಂದ ನಿಮಗೆ ಒಂದು ಗುಟ್ಟು ಹೇಳಿದರೆ........................
3. ನೀವು ತಪ್ಪು ಮಾಡಿದ್ದರೆ ಪಾಲಕರೊಂದಿಗೆ........................
4. ಒಬ್ಬ ವ್ಯಕ್ತಿಯನ್ನು ಭೇಟ್ಟಿಯಾಗಲು ವೇಳೆ ನಿಗದಿಪಡಿಸಿದ್ದರೆ........................
5. ಬೇರೆ ವ್ಯಕ್ತಿ ಸರಿಯಾದ ಸಮಯಕ್ಕೆ ಬರದೆ ತಡಮಾಡಿದರೆ ........................
6. ನೀವು ಮಾಡಿದ ತಪ್ಪಿಗೆ ಶಿಕ್ಷಕರು ಬೇರೆ ವಿದ್ಯಾರ್ಥಿಗೆ ಶಿಕ್ಷೆ ಕೊಡುತ್ತಿದ್ದರೆ........................
7. ತಿಂಡಿ. ಶೀತಪೇಯ, ಹಣ, ಕೆಲಸ ಇವುಗಳ ಪಾಲು ಮಾಡುವಾಗ ........................
8. ಸಾಯಕಲ್ಲು, ಬಟ್ಟೆ ಮುಂತಾದವುಗಳನ್ನು ಸಹೋದರ-ಸಹೋದರಿಯರು, ಮಿತ್ರರೊಂದಿಗೆ ಹಂಚಿಕೊಂಡು ಉಪಯೋಗ ಮಾಡಬೇಕಾದಾಗ........................
9. ಯಾವುದೊಂದು ಕ್ಷೇತ್ರದಲ್ಲಿ ಕುಶಲ ಹಾಗೂ ತರಬೇತಿ ಪಡೆದವರಿದ್ದರೆ ಇನ್ನೊಬ್ಬರು ಕೊಟ್ಟ ಸೂಚನೆ ಹಾಗೂ ಸಲಹೆಗಳನ್ನು ........................
10. ಬೇರೆಯವನಿಗೆ ಒಂದು ಕೆಲಸ ಸರಿಯಾಗಿ ಮಾಡಲು ಬರುವುದಿಲ್ಲ ಆದರೆ ನೀವು ಅದನ್ನು ಚೆನ್ನಾಗಿ ಮಾಡುತ್ತೀರಿ ಆಗ ........................
11. ಶರೀರದಿಂದ ಆಶಕ್ತವಾಗಿರುವ ವಿದ್ಯಾರ್ಥಿಗೆ ದಷ್ಟಪುಷ್ಟ ಆಗಿರುವ ವಿದ್ಯಾರ್ಥಿ ಹೊಡೆಯುವ ದೃಶ್ಯ ನೋಡಿದರೆ........................
12. ರಸ್ತೆಯ ಮೇಲೆ ಅಪಘಾತ ನೋಡಿದಿರಿ ಮತ್ತು ನೀವು ಒಬ್ಬರೇ ಇರುವಿರಿ ........................
13. ನಿಗದಿ ಪಡಿಸಿದ ಸಮಯದಲ್ಲಿ ಅಭ್ಯಾಸ, ವ್ಯಾಯಾಮ, ವಾಚನ, ರೂಢಿ ಮಾಡುವುದನ್ನು ಒಂದುಸಲ ನಿರ್ಧರಿಸಿದರೆ ........................
14. ಕರಿದ ಹಾಗೂ ಜಂಕಫುಡ್ (ಪೋಷಕ ವಲ್ಲದ ಆಹಾರ ಪದಾರ್ಥ) ತಿನ್ನುವುದಿಲ್ಲವೆಂದು ನಿರ್ಧಾರ ಮಾಡಿದರೆ........................
15. ಈ ಮೊದಲು, ಮಕ್ಕಳು ನಿಮಗೆ ವರ್ಗದಲ್ಲಿ ತೊಂದರೆ ಕೊಟ್ಟಿದ್ದರೆ........................
16. ನಿಮ್ಮೊಂದಿಗೆ ಯಾರಾದರೂ ಉದ್ದಟತನ, ಸಿಟ್ಟಿನಿಂದ ವರ್ತಿಸಿದರೂ ........................
17. ಮಿತ್ರರು, ಗುಂಪುಗಳ ಮೇಲೆ ಪ್ರಭಾವ ಬೀರಲು ಫ್ಯಾಶನೇಬಲ್ ಬಟ್ಟೆ ಧರಿಸುವುದು ಇಲ್ಲವೆ ಆಧುನಿಕ ವಸ್ತುಗಳನ್ನು ಉಪಯೋಗಿಸಬೇಕೆಂದು........................
18. ಒಬ್ಬವ್ಯಕ್ತಿ ಎಷ್ಟು ಆಧುನಿಕ ಆಗಿರುವನು/ಆಗಿರುವಳು ಮತ್ತು ಅವನ ಹತ್ತಿರ ಎಷ್ಟು ಫ್ಯಾಶನೇಬಲ್ ವಸ್ತುಗಳಿವೆ ಇವುಗಳಿಂದ ಅವನ/ಅವಳ ಮೈತ್ರಿ........................
19. ನೀವು ಬೇಕೆಂತಲೇ ಇನ್ನೊಬ್ಬ ವ್ಯಕ್ತಿಯಲ್ಲಿಯ ದೋಷ ........................
20. ನಿಮ್ಮ ಅಕ್ಕಪಕ್ಕದಲ್ಲಿಯ ಒಬ್ಬ ವ್ಯಕ್ತಿಗೆ ಸಹಾಯ ಬೇಕಾಗಿದೆ ಎಂಬುದು ನಿಮಗೆ ತಿಳಿದು ಬಂದಾಗ ........................

ಮೇಲಿನ ಆತ್ಮ ಪರೀಕ್ಷೆಯಿಂದ ನಿಮ್ಮ ಯಾವ ಮೂರು ಮೌಲ್ಯಗಳು ನಿಮಗೆ ಕಂಡು ಬಂದವು ?

ನಿಮಗೆ ಈ ಮೂರು ಮೌಲ್ಯಗಳನ್ನು ಕಾಪಾಡಲಾಗದಂತಹ ಪ್ರಸಂಗಗಳು ಬಂದುವೇ

ಈ ಮೂರು ಮೌಲ್ಯಗಳನ್ನು ಯಾವಾಗಲೂ ಅನುಸರಿಸಲು ನೀವು ಸ್ವತಃದಲ್ಲಿ ಯಾವ ಬದಲಾವಣೆಗಳನ್ನು ಮಾಡಬಲ್ಲರೆಂಬುದನ್ನು ನಿಮ್ಮ ವಹಿಯಲ್ಲಿ ಬರೆದಿಡಿರಿ.

## 7. ಮನೆ-ಸಮಾಜದ ಪ್ರತಿಕೃತಿ

ನಮ್ಮ ಮನೆಯು ಸುಮಾರಾಗಿ ಸಮಾಜದ ಪ್ರತಿಕೃತಿ ಆಗಿರುವುದು. ಅಲ್ಲಿಯೂ ಸಮಾಜದಂತೆ ಬೇರೆಬೇರೆ ಸದಸ್ಯರು ಒಕ್ಕಟ್ಟಾಗಿ ಇರುವರು. ಮನೆ ಪ್ರತಿಯೊಬ್ಬರದಿರುವುದು. ಮನೆಗಾಗಿ ಪ್ರತಿಯೊಬ್ಬರ ಕರ್ತವ್ಯಗಳೂ ಸಮಾನವಾಗಿರುವವು. ನಿಮ್ಮ ಮನೆಯಲ್ಲಿಯ ಕೆಲಸದ ವಿಭಜನೆಯನ್ನು ಕಣ್ಣುಮುಂದೆ ತನ್ನಿರಿ. ಅದು ನಿಮಗೆ ಸರಿ ಎನಿಸುವುದೆ? ಆದರಲ್ಲಿ ಬದಲಾವಣೆ ಮಾಡಬೇಕಾ? ಯಾವ ಮೌಲ್ಯಗಳಿಗನುಸರಿಸಿ ಈ ವಿಭಜನೆ ಆಗಬೇಕು?

## 8. ಮೌಲ್ಯಗಳು ಹಾಗೂ ಸಾಮಾಜಿಕ ವರ್ತನೆಯ ಮಾನದಂಡ

ಕೆಳಗಿನ ಎರಡು ಪ್ರಸಂಗಗಳನ್ನು ಓದಿರಿ ಹಾಗೂ ಆದರಲ್ಲಿಯ ಸಾಮಾಜಿಕ ಮಾನದಂಡ ಮತ್ತು ಮೌಲ್ಯಗಳಲ್ಲಿಯ ಭೇದ ತಿಳಿದುಕೊಳ್ಳಲು ಬರುವುದೇ ಎಂಬುದನ್ನು ನೋಡಿರಿ.

ಈ ಉದಾಹರಣೆಗಳನ್ನು ಓದಿ ವರ್ಗದಲ್ಲಿ ಅವುಗಳ ಬಗ್ಗೆ ಚರ್ಚೆಮಾಡಿರಿ. ಈ ಇಬ್ಬರಲ್ಲಿ ಸ್ವಚ್ಛತೆ ಈ ಮೌಲ್ಯವನ್ನು ಯಾರು ಕಾಪಾಡುವರು? ಈ ಇಬ್ಬರಲ್ಲಿ ಯಾರು ಬರೀ ನಿಯಮಗಳ ಪಾಲನೆ ಮಾಡುವರು? ಬರೀ ನಿಯಮಪಾಲಿಸಲೆಂದು ವಿಶಿಷ್ಠ ವರ್ತನೆ ಮಾಡುವುದು ಹಾಗೂ ಈ ವರ್ತನೆಯೆ ನನ್ನ ಜೀವನದ ಮೌಲ್ಯವಿದೆ ಎಂದು ವರ್ತನೆ ಮಾಡುವುದು ಇವುಗಳಲ್ಲಿ ಭೇದವಿದೆ.



- ಪುಷ್ಕರನ ಶಾಲೆಯಲ್ಲಿ ಕಸವನ್ನು ಕಸದ ಬುಟ್ಟಿಯಲ್ಲೇ ಎಸೆಯಬೇಕೆಂಬ ಕಠಿಣವಾದ ನಿಯಮವಿದೆ. ಶಾಲೆಯ ಆವರಣದಲ್ಲಿ ಪುಷ್ಕರನು ಕಸವನ್ನು ಕಸದ ಬುಟ್ಟಿಯಲ್ಲೆ ಎಸೆಯುವನು.



- ರಸ್ತೆಯಲ್ಲಿ ನಡೆಯುವಾಗ ಮಾತ್ರ ಪುಷ್ಕರ ಕಸವನ್ನು ಫುಟ್‌ಪಾಥಿನ ಮೇಲೆಯೇ ಎಸೆಯುವನು.



- ಹರಭಜನನು ಪುಷ್ಕರನ ಶಾಲೆಯಲ್ಲಿ ಕಲಿಯುವನು. ಶಾಲೆಯ ಆವರಣದಲ್ಲಿಯಾಗಲಿ, ರಸ್ತೆ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲೆ ಆಗಲಿ ಹರಭಜನನು ಕಸವನ್ನು ಅತ್ತ-ಇತ್ತ ಎಸೆಯದೆ ಕಸದ ಬುಟ್ಟಿಯಲ್ಲೇ ಎಸೆಯುವನು.



***ಗಮನಿಸಬೇಕಾದ ಅಂಶಗಳು***

- *ಸಾಮಾಜಿಕ ವರ್ತನೆಯ ಮಾನದಂಡ ಇದು, ಜನರ ನಡುವಳಿಕೆ ಹೇಗಿರಬೇಕು ಎಂದು ನಿಶ್ಚಿತ ಪಡಿಸಿದ ಕೆಲವು ನಿಯಮವಾಗಿದೆ. ಈ ವರ್ತನೆಯ ನಿಯಮಗಳು ವಿಶಿಷ್ಠ ಮೌಲ್ಯಗಳನ್ನು ಆಧರಿಸಿರುವುದು. ವರ್ತಮಾನದ ಮಾನದಂಡಗಳು ಎಷ್ಟು ಯೋಗ್ಯವಾದ ರೂಢಿಗಳನ್ನು ಹಚ್ಚಲಿರುವವು ಎನ್ನುವುದಕ್ಕೆ ಒಂದು ಮಿತಿ ಇದೆ. ಈ ನಿಯಮಗಳು ವಿಶಿಷ್ಠ ಜಾಗ, ಕ್ಷೇತ್ರ, ಸಮಾಜ ದೇಶಗಳಲ್ಲಿ ಕ್ರಿಯೆ ಮಾಡುತ್ತಿರುವಾಗ ಬಂಧನಕಾರಕ ವಾಗಿರುವವು.*
- *ಮೌಲ್ಯಗಳು ವ್ಯಕ್ತಿಯ ವರ್ತನೆಯ ಮೇಲೆ ನಿಯಂತ್ರಣವಿಡುವ ಆಂತರಿಕ ಘಟಕಗಳಾಗಿರುವವು. ಇದರಿಂದ ವ್ಯಕ್ತಿ ಮನೆಯಲ್ಲಿ. ಹೊರಗೆ ಸಮಾಜದಲ್ಲಿ ಎಲ್ಲಿದ್ದರೂ ಮೌಲ್ಯಗಳನ್ನು ಪಾಲಿಸಬೇಕೆಬು ಆಂತರಿಕ ಪ್ರೇರಣೆ ಇರುತ್ತದೆ. ಮೌಲ್ಯಗಳು ಆಂತರಿತ ಇಚ್ಛಾಶಕ್ತಿಗಳಾಗಿವೆ. ನಿಯಮಗಳ ಪಾಲನೆ ಮಾಡಲು ಮಾತ್ರ ಯೋಗ್ಯ ವರ್ತನೆ ಮಾಡುವುದಕ್ಕಿಂತ ಒಂದು ವರ್ತನೆಯ ಪದ್ದತಿಯನ್ನು ಒಬ್ಬ ವ್ಯಕ್ತಿಯು 'ಮೌಲ್ಯ'ವೆಂದು ಸ್ವೀಕರಿಸಬೇಕು.*

## ಮೌಲ್ಯಮಾಪನ

| ಭಾರಾಂಶ 10% | | | | |
|---|---|---|---|---|
| ಮಾನದಂಡ | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಗುಣಗಳು |
| ವರ್ಗಕೃತಿಯಲ್ಲಿಸಹಭಾಗ | ವರ್ಗದ ಎಲ್ಲ ಕೃತಿಗಳಲ್ಲಿ,ಆಟದಲ್ಲಿ, ಚರ್ಚೆಗಳಲ್ಲಿ ಉತ್ಸಾಹದಿಂದ ಸಹಭಾಗ, ಎಲ್ಲ ವರ್ಗಕೃತಿಗಳನ್ನು ವೇಳೆಯಲ್ಲಿಪೂರ್ಣ ಗೊಳಿಸಿದರು | ಎಲ್ಲ ವರ್ಗಕೃತಿಗಳನ್ನು ಪೂರ್ಣ ಗೊಳಿಸಿದರು | ವರ್ಗಮಿತ್ರರವಹಿ ನೋಡಿ ಕೃತಿ ಬರೆದ | |
| ಸ್ವತಃದ ಮೌಲ್ಯಗಳನ್ನು ಗುರುತಿಸುವುದು ಹಾಗೂ ವರ್ತನೆಯಲ್ಲಿಸುಧಾರಣೆ ಮಾಡುವ ಯೋಜನೆಯನ್ನು ತಯಾರಿಸುವುದು. | ಸ್ವತಃ ದ ಮೌಲ್ಯಗಳನ್ನು ಹೇಳಿದರು ಸುಧಾರಣೆ ಮಾಡುವ ವಾಸ್ತವವಾದದ ಮಾರ್ಗಗಳನ್ನು ಬರೆದರು. | ವರ್ತನೆಯಲ್ಲಿ ಸುಧಾರಣೆ ಮಾಡುವ ತಾತ್ಕಾಲಿಕ ಮಾರ್ಗ ಬರೆದರು. | ಅಪೂರ್ಣ ಮಾರ್ಗ ಸೂಚಿಸಿದರು. | |
| ವರ್ಗದಲ್ಲಿಯ ವರ್ತನೆಯಿಂದ ಕಂಡುಬಂದ ಮೌಲ್ಯಗಳು. | ಮಕ್ಕಳ ವರ್ತನೆಯಲ್ಲಿ ಅವರ ಮೌಲ್ಯಗಳು ಕಂಡುಬಂದವು. | ಮೌಲ್ಯಗಳಪಾಲನೆ ಕೆಲಪ್ರಮಾಣದಲ್ಲಿ ಕಂಡುಬಂದಿತು. | ಮೌಲ್ಯಗಳ ಪಾಲನೆಆದದ್ದು ಕಂಡುಬರಲಿಲ್ಲ. | |


ಧೈರ್ಯಧರ...ನೀನೆಲ್ಲಿರುವೆ? ಬೇಗನೆ ಬಾ. ನನ್ನ ಸಹಾಯ ಅತ್ಯಾವಶ್ಯಕವಾಗಿದೆ.
ಏನಾಯ್ತು ಲೋಬೋ ಯಾರಿಗೆ? ಅತ್ಯಾವಶ್ಯಕವಾಗಿಸಹಾಯ ಬೇಕಾಗಿದೆ ?
ಇಂದು ನಾನು ಶಾಲೆಯಿಂದ ಮನೆಗೆ ಬರುತ್ತಿದ್ದಾಗಕೆಲವು ತುಂಟ ಹಡುಗರನ್ನು ನೋಡಿದೆ. ಅವರು ಬೇಕೆಂತಲೇ ಕೆಲವು ಮೊಳೆಗಳನ್ನು ರಸ್ತೆಯಮೇಲೆ ಹರಡಿದರು ಮತ್ತು ಗಿಡದಹಿಂದೆ ಅವಿತುಕೊಂಡರು. ಯಾರದಾದರೂ ವಾಹನದ ಟಾಯರ ಪಂಕ್ಚರೆ ಆದಾಗ, ಅವರ ಫಜೀಯಾಯಿತೆಂದು ಅವರು ನಗುತ್ತಿದ್ದರು.ಅವರಿಗೆ ನೀನು ಪಾಠ ಕಲಿಸು.
ನಿಶ್ಚಿತವಾಗಿ ಲೋಬೊ ! ಆದರೆ ನನಗೆ ಹೇಳು...... ನೀನೇನು ಮಾಡಬಲ್ಲೆ?
ನಾನೇನು ಮಾಡಬಲ್ಲೆ? ಅವರು ಎಷ್ಟು ದೊಡ್ಡವರು ಹಾಗೂ ಬಲಶಾಲಿಗಳಾಗಿರುವರು, ನಾನು ಒಬ್ಬನೆ ಇರುವೇ!
ಹಾಗಾದರೆ ನಿನಗೆ ಒಬ್ಬ ವ್ಯಕ್ತಿಯ ಸಾಮರ್ಥ್ಯದ ಬಗ್ಗೆ ಗೊತ್ತಿಲ್ಲಎಂದಾಯಿತು !

# 4 ಸಾಮಾಜಿಕ ನೇತೃತ್ವ

**ಒಬ್ಬನ ಸಾಮರ್ಥ್ಯ...**

**ಉದ್ದೇಶಗಳು:**

(1) ಸಾಮಾಜಿಕ ಬದಲಾವಣೆ ತರುವ ಹಾಗೂ ಬದಲಾವಣೆಗಳನ್ನು ತರುವ ಮಾರ್ಗಗಳ ಬಗ್ಗೆ ಅವರ ಹೇಳಲು ಬರುವುದು.

(2) ಸಾಮಾಜಿಕ ಬದಲಾವಣೆ ಮಾಡಲು ಆತ್ಮವಿಶ್ವಾಸದಿಂದ ಹೆಜ್ಜೆ ಇಡುವ ಪ್ರಯತ್ನ ಮಾಡುವುದು.

(3) ಜೀವನಶೈಲಿಯಲ್ಲಿ ಬದಲಾವಣೆ ಮಾಡಿ ಕೊಂಡು ಸಾಮಾಜಿಕ ಬದಲಾವಣೆಗಾಗಿ ಯೋಗ್ಯ ದಿಕ್ಕಿನಲ್ಲಿ ಮೊದಲ ಹೆಜ್ಜೆ ಇಡುವುದು.


(4) ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದು, ಅವನ್ನು ಬಿಡಿಸುವ ಮಾರ್ಗಗಳನ್ನು ತಯಾರಿಸುವುದು ಹಾಗೂ ಪ್ರತ್ಯಕ್ಷವಾಗಿ ಆ ಸಮಸ್ಯೆಗಳನ್ನು ಬಿಡಿಸಲು ಕ್ರಿಯಾಶೀಲವಾಗಿ ಪ್ರಯತ್ನ ಮಾಡುವುದು.

## 1. ಸಾಮಾಜಿಕ ಜಾಲ

**ಬನ್ನಿರಿ, ಆಟ ಆಡೋಣ:**

- ಹತ್ತು ವಿದ್ಯಾರ್ಥಿಗಳಿಗೆ ಒಂದೊಂದು ಚೀಟಿ ಕೊಟ್ಟು ಒಬ್ಬರ ಕೈಯಲ್ಲಿ ದಾರದ ಗುಂಡಿ ಕೊಟ್ಟು ದುಂಡಾಗಿ ನಿಲ್ಲಿಸಿರಿ.
- ಯಾರ ಕೈಯಲ್ಲಿದಾರದ ಉಂಡಿ ಇದೆಯೋ ಅವರು ದಾರದ ಒಂದು ತುದಿ ಹಿಡಿದು ಆಟ ಆರಂಭಿಸಲಿ.
- ಅವರು ಉಂಡಿಯನ್ನು ಇನ್ನೊಬ್ಬವಿದ್ಯಾರ್ಥಿಗೆಕೊಟ್ಟು ಅವರ ಕೈಯಲ್ಲಿಯ ಚೀಟಿಯಲ್ಲಿ ಏನು ಬರೆದಿದೆ ಎಂದು ಕೇಳಲಿ.
- ಅದನ್ನು ಕೇಳಿ ಮೊದಲನೆಯ ವಿದ್ಯಾರ್ಥಿಯು ಅವನ ಕೈಯಲ್ಲಿರುವ ಚೀಟಿಯಲ್ಲಿ ಹಾಗೂ ಎರಡನೆಯವನ ಚೀಟಿಯಲ್ಲಿ ಇರುವ ಪದಗಳನ್ನು ಬಳಸಿ ಒಂದು ವಾಕ್ಯ ತಯಾರಿಸಲಿ. ಉದಾ. ಮೊದಲಿನ ಶಬ್ದ ಪಕ್ಷಿ, ಎರಡನೆಯದುಗಿಡ ಇದ್ದರೆ-ಪಕ್ಷಿಗಳು ಗಿಡದಲ್ಲಿಗೂಡುಕಟ್ಟುವವುಎಂಬ ವಾಕ್ಯ ತಯಾರಾಗಬಲ್ಲದು. ಅದರಂತೆಯೇ ಮಾಲಿನ್ಯ (ಮೊದಲಶಬ್ದ) ನೀರು (ಎರಡನೆಯ ಶಬ್ದ) ಇದ್ದರೆ, ಮಾಲಿನ್ಯದಿಂದ ನದಿಯ ನೀರು ಅಶುದ್ಧವಾಗುವುದು. ಇದರಂತೆ ಉಂಡಿಯ ದಾರ ಮುಂದೆ ಹೋದಂತೆ ದಾರ ಹಾಗೂ ಶಬ್ದಗಳ ಜಾಳಿಗೆ ತಯಾರಾಗುವುದು.
- ಈಗ ಎರಡನೆಯ ವಿದ್ಯಾರ್ಥಿ/ವಿದ್ಯಾರ್ಥಿನಿಯು ಕೈಯಲ್ಲಿಉಂಡಿಯನ್ನು ಮೂರನೆಯವರಿಗೆ (ತನ್ನ ತುದಿಯನ್ನು ಹಿಡಿದಿಟ್ಟು) ಕೊಟ್ಟು ಅವರ ಹಾಗೂ ತನ್ನ ಶಬ್ದಗಳಿಂದ ವಾಕ್ಯ ತಯಾರಿಸಬೇಕು.
- ಇದೆ ತರಹ ಮೂರನೆಯವರಿಂದ ನಾಲ್ಕನೆಯವರ ಹತ್ತಿರಉಂಡಿ ಕೊಟ್ಟು, ಶಬ್ದಗಳ ವಾಕ್ಯಗಳನ್ನು ರಚಿಸುತ್ತ ಹತ್ತನೆಯವರ ಆ ಉಂಡಿ ಹೋಗುವವರೆಗೆ ಆಟ ಆಡಬೇಕು.

ಹತ್ತು ಚೀಟಿಗಳನ್ನು ತಯಾರಿಸಿರಿ. ಒಂದೊ ಚೀಟಿಯಾ ಮೇಲೆ ಮುಂದಿನ ಶಬ್ದಗಳನ್ನು ಬರೆಯಿರಿ. ಮಾನವ, ನದಿ, ಹವ, ಪಕ್ಷಿ, ಮಾಲಿನ್ಯತೆ, ಪ್ಲಾಸ್ಟಿಕ್, ಪ್ರಾಣಿ, ನೀರು, ಗಿಡ, ಮಣ್ಣು (ಹತ್ತು ವಿದ್ಯಾರ್ಥಿಗಳಲ್ಲಿ ಈ ಚೀಟಿಗಳನ್ನು ಹಂಚಿರಿ) ಪ್ರತಿ ಯೊಬ್ಬರಿಗೆ ಒಂದರಂತೆ.) ಮಕ್ಕಳನ್ನು ದುಂಡಾಗಿ ನಿಲ್ಲಿಸಿರಿ. ದಾರದ ಒಂದು ಉಂಡಿ ತೆಗೆದು ಕೊಳ್ಳಿರಿ. ಅವರಲ್ಲಿಯ ಒಂದು ವಿದ್ಯಾರ್ಥಿಗೆ ಅದನ್ನು ಕೊಡಿರಿ.



- ಈ ಆಟದಲ್ಲಿ ಹಿಂದಿನ ಪುಟದಲ್ಲಿತೊರಿಸಿದಂತೆ ಮಕ್ಕಳ ಕೈಯಲ್ಲಿನ ದಾಢ ಜಾಳಿಗೆ ತಯಾರಾಗುವುದು.
- ಈ ಜಾಳಿಗೆ ದಾರದ ಮೇಲೆ ಬೇಕಾದಲ್ಲಿ ಒಂದು ಚಿಟಿಕೆ ಕೊಡೆದು ಅಥವಾ ಅಂಗೈಯಿದ ಹೊಡೆದು ಹೇಗೆ ಅನಿಸುವುದೆಂಬುದನ್ನು ಅನುಭವಿಸಿರಿ.

***ಗಮನಿಸಬೇಕಾದ ಸಂಗತಿಗಳು***

- *ವಿದ್ಯಾರ್ಥಿಗಳ ಕೈಯಲ್ಲಿಯ ದಾರದ ಜಾಳಿಗೆಯ ಮೇಲೆ ಎಲ್ಲಿಯೇ ಚಿಟಿಕೆ ಹೊಡೆದರೂ ಎಲ್ಲ ಮಕ್ಕಳಿಗೆ ದಾರದ ಕಂಪನ ಅನುಭವಕ್ಕೆ ಬರುತ್ತದೆ. ಇದರಿಂದ ತಿಳಿಯುವುದೆನೆಂದರೆ ಪರಿಸದಲ್ಲಿಯೇ ನಿಸರ್ಗದಲ್ಲಿಯ ಪ್ರತಿಯೊಂದು ಸಂಗತಿ ಒಂದಕೊಂದು ಹೊಂದಿಕೊಂಡಿರುವವು ಒಂದು ಘಟಕದ ಬದಲಾವಣೆಯ ಪರಿಣಾಮ ಇನ್ನೊಂದಕ್ಕೆ ಆಗುತ್ತದೆ.*
- *ಇದರಂತೆ ಎಲ್ಲ ಮಾನವರು ಪರಸ್ಪರಾವಲಂಬಿಗಳಾಗಿರುವವರು. ಉದಾ– ಪಟ್ಟಣದಲ್ಲಿರುವರು ಆಹಾರ ಧಾನ್ಯಗಳಿಗಾಗಿ ಹಳ್ಳಿಯ ಜನರ ಮೇಲೆ ಅವಲಂಬಿಸಿರುವರು. ಪಟ್ಟಣಗಳಲ್ಲಿಯ ಅನೇಕ ಕಾರಖಾನೆಗಳಿಗೆ ಅವಶ್ಯವಿರುವ ಕಚ್ಚಾಯಾಲು ಗ್ರಾಮೀಣ ಭಾಗಗಳಲ್ಲಿರುವ ಗಣಿಗಳಿಂದ ಅವಶ್ಯವಿರುವ ಕಚ್ಚಾಮಾಲು ಗ್ರಾಮೀಣ ಭಾಗಗಳಲ್ಲಿರುವ ಗಣಿಗಳಿಂದ ಬರುವುದು, ಅಂದರೇನೇ ಪರಸ್ಪರ ಸಮಸ್ಯೆಗಳು ಒಬ್ಬರಿನೊಬ್ಬರ ಮೇಲೆ ಪರಿಣಾಮ ಬೀರುವವು.*

## 2. ಪರಸ್ಪರಾವಲಂಬನ

**ಕೆಳಗಿನ ಸಂಗತಿಗಳು ನಿಮ್ಮ ಮೇಲೆ ಪರಿಣಾಮ ಬೀರಬಹುದೇ? ಇದರ ಮೇಲೆ ವಿಚಾರ ಮಾಡಿರಿ.**

(1) ವಾಹನಗಳ ಅತಿಯಾದ ಬಳಕೆಯಿಂದ ಜಾಗತಿಕ ಉಷ್ಣತಾಮಾನದಲ್ಲಿ ಬೆಳವಣಿಗೆ ಆಗಿದೆ.



ಪ್ರತಿಯೊಂದು ಘಟನೆಗೆ ಸಂಬಂಧಿಸಿದ ಚರ್ಚೆ ಮಾಡಲು ಪ್ರೋತ್ಸಾಹಿಸಿರಿ. ಈ ಪ್ರಶ್ನೆಗಳು ಅವರಿಗೂ ಸಂಬಂಧ ಪಟ್ಟಿವೆಯೇ ಎಂದು ಕೇಳಿರಿ.



(2) ಪ್ಲಾಸ್ಟಿಕ್ ಕಸದ ವಿನಿಯೋಗ ಸರಿಯಾಗಿ ಮಾಡದಿದ್ದರೆ ಆ ಪ್ಲಾಸ್ಟಿಕ್ಕು ಭೂಮಿಯಲ್ಲಿ ಸೇರಿ ಭೂಮಿಯ ಫಲವತ್ತತೆಯನ್ನು ಹಾಳುಮಾಡುವುದು.



(3) ಹಳ್ಳಿ ಹಾಗೂ ದುರ್ಗಮ ಭಾಗಗಳಲ್ಲಿ ಜೀವನಾವಶ್ಯಕ ಸಂಗತಿಗಳ ಉಪಲಬ್ಧ ವಿಲ್ಲದಿರುವಿಕೆ ಹಾಗೂ ಬರಗಾಲಗಳಿಂದ ಹಳ್ಳಿಯ ಜನರು ಪಟ್ಟಣಗಳಲ್ಲಿ ಕೆಲಸ ಹುಡುಕಲು ವಲಸೆ ಹೋಗುವರು.



(4) ಕೆಲವೊಂದು ಸಲರಸ್ತೆ, ಆಣೆಕೆಟ್ಟು ಕಟ್ಟಲು, ಕಟ್ಟಡಕಟ್ಟಲು, ಸಾರ್ವಜನಿಕ ಯೋಜನೆಯ ಕೆಲಸದಲ್ಲಿ ಹೆಚ್ಚು ಸಮಯ ಬೇಕಾಗುವುದು ಕೆಲಸವೂ ಕೆಳಮಟ್ಟದ್ದು ಆಗುವುದು.

***ಗಮನಿಸಬೇಕಾದ ಸಂಗತಿಗಳು***

- *ದೇಶ ಹಾಗೆಯೇ ಜನತ್ತಿನ ಒಂದು ಭಾಗದ ಸಮಸ್ಯೆಯ ಪರಿಣಾಮ, ಸಮಸ್ಯೆಗಳ ಸರಪಣಿಯನ್ನೇ ಪ್ರಾರಂಭಿಸುವುದು. ಅದರ ಪರಿಣಾಮ ಕೊನೆಗೆ ಪ್ರತ್ಯಕ್ಷ ಇಲ್ಲವೇ ಅಪ್ರತ್ಯಕ್ಷವಾಗಿ ಎಲ್ಲರ ಮೇಲೂ ಆಗುತ್ತದೆ.*
- *ನಮ್ಮ ಪರಿಸರದಲ್ಲಿಯ ಸಮಸ್ಯೆಗಳು ಇನ್ನೊಬ್ಬರ ಸಮಸ್ಯೆಗಳಿವೆಎಂದು ತಿಳಿದು ಕೊಂಡು ನಾವು ಅತ್ತ ದುರ್ಲಕ್ಷ್ಯ ಮಾಡಲು ಸಾಧ್ಯವಿಲ್ಲ. ಕಾಲಾಂತರದಲ್ಲಿ ಆ ಸಮಸ್ಯೆಗಳಿಂದ ನಮಗೂ ತೊಂದರೆ ಆಗಬಲ್ಲದು.*
- *ಸಾರ್ವಜನಿಕ ಪ್ರಶ್ನೆಗಳನ್ನುಬಿಡಿಸುವ ಪ್ರಯತ್ನ ಮಾಡಬೇಕು ಒಬ್ಬ ವ್ಯಕ್ತಿಯಕೃತಿ ಹಾಗೂ ಕಲ್ಪನೆ ಪರಿಸ್ಥಿತಿಯನ್ನು ಬದಲಾಯಿಸಬಹುದು.*

## 3. ಸಾಮಾಜಿಕ ಬದಲಾವಣೆ ಮಾಡುವ ವಿವಿಧ ಮಾರ್ಗಗಳು

ಸಮಾಜದ ಬದಲಾವಣೆಗಾಗಿ ಜನರು ಅನೇಕ ಪ್ರಯತ್ನಗಳನ್ನುಮಾಡಬಹುದು. ಕೆಳಗೆ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ. ನಿಮ್ಮ ಪರಿಸರದಲ್ಲಿ ಇಂತಹ ಕಾರ್ಯ ಮಾಡುವ ವಿವಿಧ ಸಂಸ್ಥೆಗಳು ಹಾಗೂ ವ್ಯಕ್ತಿಗಳ ಮಾಹಿತಿ ಪಡೆಯಿರಿ.

### ಅ. ಸಮಾಜ ಸೇವೆ (ಸಾಮಾಜಿಕ ಕಾರ್ಯ):

ಒಂದು ಸಮೂಹ ಅಥವಾ ಸಮಾಜಕ್ಕೆ ಯಾವ ಅತ್ಯಾವಶ್ಯಕ ಸೇವೆಗಳು ಸಿಗುವುದಿಲ್ಲವೋ ಅವನ್ನು ಸಿಗುವಂತೆ ಮಾಡುವ ಕಾರ್ಯ ಮಾಡುವುದು! ಸಾಮಾಜಿಕ ಬದಲಾವಣೆ ತರುವ ಒಂದು ಮಾರ್ಗ. ಉದಾ-ಕುಷ್ಟರೋಗಿಗಳಿಗೆ ಯಾವಾಗ ಸಮಾಜದಿಂದ ಹೊರಗೆಸೆಯುತ್ತಿದ್ದರೋ ಆಗ ಬಾಬಾ ಆಮ್ಟೆಯವರು ಅವರ ಸೇವೆ ಮಾಡಿದರು, ಉಪಚಾರ ಮಾಡಿದರು.





### ಬ. ಮೂಲಭೂತ ಸೌಕರ್ಯಗಳ ನಿರ್ಮಾಣ:

ಒಂದು ಸಾಮಾಜಿಕ ಸಮಸ್ಯೆಯ ಮೇಲೆ ದೀರ್ಘಕಾಲದ ಉಪಾಯ ಯೋಜನೆ ಮಾಡಲು ಚಿಕ್ಕ ಚಿಕ್ಕ ಕಲ್ಪನೆ ಹಾಗೂ ಯೋಜನೆಗಳನ್ನುಪ್ರಾರಂಭಿಸುವುದೊಸಾಮಾಜಿಕ ಬದಲಾವಣೆಯ ಒಂದು ಕಾರ್ಯವಾಗಿದೆ. ಉದಾ. ನೀರಿನ ಅತ್ಯಂತ ಸಮಸ್ಯೆ ಇರುವ ರಾಜಸ್ಥಾನದಲ್ಲಿ ಡಾ. ರಾಜೇಂದ್ರ ಸಿಂಹ ಇವರು ಜನರ ಸಹಕಾರದಿಂದ 4,500 'ಜೋಹಡ' (ಚಿಕ್ಕ ಆಣೆ ಕಟ್ಟು) ಗಳನ್ನು ಕಟ್ಟಿದರು. ಅವರು ಪ್ರಾರಂಭಿಸಿದ ಈ ಯೋಜನೆಯಿಂದಾಗಿ ರಾಜಸ್ಥಾನದ ಭೂಜಲ ಪಾತಳಿಯಲ್ಲಿ ಬೆಳವಣಿಗೆ ಆಗಿದೆ.

### ಕ. ಸಂಶೋಧನೆ:

ಸಮಸ್ಯೆಗಳನ್ನು ಬೇರು ಸಹಿತ ನಷ್ಟ ಪಡಿಸಲು ಸಂಶೋಧನೆ ಮಾಡಿ ಹೊಸ ಪರ್ಯಾಯಗಳನ್ನು ಹುಡುಕಿ ತೆಗೆಯುವುದು. ಇದು ಸಾಮಾಜಿಕ ಬದಲಾವಣೆಯಒಂದು ಪ್ರಭಾವೀಮಾರ್ಗವಾಗಿದೆ.ಉದಾ. ಮಹಾರಾಷ್ಟ್ರದ ಗಡಚಿರೋಲಿ. ಜಿಲ್ಲೆಯಲ್ಲಿ ಬಾಲ ಮೃತ್ಯುವಿನ ಪ್ರಮಾಣ ಹೆಚ್ಚು ಇತ್ತು. ಇದರ ಮುಖ್ಯ ಕಾರಣ ನ್ಯುಮೋನಿಯಾ ಕಾಯಿಲೆ. ಡಾ. ಅಭಯ್ ಬಂಗ ಹಾಗೂ ಡಾ. ರಾಶಿ ಬಂಗ ಇವರು ನ್ಯೂಮೋನಿಯಾದ ಮೇಲೆ ನಿಯಂತ್ರಣ ಹಾಗೂ ಉಪಚಾರ ಮಾಡಲು ಸಂಶೋಧನೆ ಮಾಡಿದರು. ಅವರ ಈ ಕಾರ್ಯದಿಂದಾಗಿ ಆ ಭಾಗದ ಬಾಲ ಮೃತ್ಯುವಿನ ಪ್ರಮಾಣ ಕಡಿಮೆ ಆಯಿತು.





### ಡ. ಸಾಮಾಜಿಕ ಚಳುವಳಿ:

ಸಮಾಜದಲ್ಲಿಯ ಜನರಿಗೆ ಆವಶ್ಯಕತೆಗಳ, ಸಿಗಬೇಕಾದ ಹಕ್ಕುಗಳ ಹಾಗೂ ಜವಾಬ್ದಾರಿಗಳ ಮನವರಿಕೆ ಮಾಡಿಕೊಟ್ಟು ಅವರಿಗೆ ಸಿಗಬೇಕಾದ ಹಕ್ಕುಗಳನ್ನು ಕೊಡಿಸಲು ಜನಜಾಗೃತಿ ಮಾಡುವುದು, ಸಾಮಾಜಿಕ ಚಳುವಳಿ ಮಾಡುವುದು ಮುಂತಾದವು ಸಾಮಾಜಿಕ ಬದಲಾವಣೆಯ ಮಾರ್ಗಗಳಾಗಿವೆ.

**ಬನ್ನಿರಿ ಕಲಿಯುವಾ.**

ಸಾಮಾಜಿಕ ಬದಲಾವಣೆ ಮಾಡುವ ನಾಲ್ಕು ಉದಾಹರಣೆಗಳನ್ನು ನಾವು ಕಲತವು ಅಂತಹ ಇನ್ನೂ ಕೆಲವು ಉದಾಹರಣೆಗಳನ್ನು ನೋಡುವಾ.

| ಸಮಾಜಸೇವೆ | ಮೂಲಭೂತ ಸೌಕರ್ಯಗಳು | ಸಂಶೋಧನೆ | ಸಾಮಾಜಿಕ ಚಳುವಳಿ |
|---|---|---|---|
| ಅನಾಥಾಶ್ರಮ ಇಲ್ಲವೆ ವೃದ್ಧಾಶ್ರಮದ ಕೆಲಸಕ್ಕೆ ಸಹಾಯ ಮಾಡುವುದು. | ಜನರ ಸಹಭಾಗದಿಂದ ರಸ್ತೆ ದುರಸ್ತಿ | ಬೇಸಾಯಕ್ಕಾಗಿ ಉಪಯುಕ್ತವಾಗುವ ಉಪಕರಣ. ಸಾಧನಗಳನ್ನು ತಯಾರಿಸುವುದು. | ಕೆಟ್ಟ ರೂಢಿಗಳ ವಿರುದ್ಧ ಸಾಮಾಜಿಕ ಹೋರಾಟ ಮಾಡುವುದು. |
| ಶಾಲೆಗೆ ಹೋಗದ ಮಕ್ಕಳನ್ನು ಶಾಲೆಗೆ ಸೇರಿಸುವುದು. | ಜಲ ಸಂಗ್ರಹ | ಹೊಸ ಔಷಧಗಳು ಮತ್ತು ರೋಗ ಪ್ರತಿ ಬಂಧಕ ಔಷಧಗಳ ಸಂಶೋಧನೆ | ಹವೆ ಹಾಗೂ ನೀರಿನ ಮಾಲಿನ್ಯತೆ ಕಡಿಮೆ ಮಾಡಲು ಜನರ ಚಳುವಳಿಯನ್ನು ಪ್ರಾರಂಭಿಸುವುದು. |
| ಗುಡ್ಡ ಗಾಡುಗಳಲ್ಲಿಯ ಗ್ರಾಮೀಣ ಭಾಗಗಳಲ್ಲಿ ಔಷಧ ಹಾಗೂ ಆರೋಗ್ಯ ಸೇವೆಗಳ ಪೂರೈಕೆ. | ಸಾರ್ವಜನಿಕ ಶೌಚಾಲಯಗಳನ್ನು ಕಟ್ಟುವುದು. | ಸಾಮಾಜಿಕ ಸಮಸ್ಯೆಗಳ ಕಾರಣಗಳ ಸಂಶೋಧನೆ. | ಜಲ ಸಾಕ್ಷರತೆಯ ಚಳುವಳಿ ಮಾಡುವುದು. |
| ಯಾವ ಮಕ್ಕಳಿಗೆ ಪುಸ್ತಕ/ಬಟ್ಟೆಗಳು ಉಪಲಬ್ಧ ವಾಗುವುದಿಲ್ಲವೊ, ಅವರಿಗೆ ಅವುಗಳನ್ನು ಉಪಲಬ್ದ ಮಾಡಿ ಕೊಡುವುದು. | ಕಸದ ವ್ಯವಸ್ಥಾಪನೆ. | ಶಿಕ್ಷಣ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನದಉಪಯೋಗ ಆಗಲು ಸಂಶೋಧನೆ | ಸಾರಿಗೆಯ ನಿಯಮಗಳ ಪಾಲನೆ |
| | | | |

ಕೊನೆಯ ಖಾಲಿ ಚೌಕೋನುಗಳಲ್ಲಿ, ಈ ನಾಲ್ಕು ಮಾರ್ಗಗಳ ಬಗೆಗೆ ಗೊತ್ತಿರುವ ಉದಾಹರಣೆಗಳನ್ನು ಬರೆಯಿರಿ. ವಹಿಯಲ್ಲಿ ಕೋಷ್ಟಕ ಮಾಡಿರಿ.

ನಿಮ್ಮ ಪರಿಸರದಲ್ಲಿಯ ಸಾಮಾಜಿಕ ಕೆಲಸ ಮಾಡುತ್ತಿರುವ ಕೆಲವುಸಂಸ್ಥೆಗಳ ಅಥವಾ ವ್ಯಕ್ತಿಗಳ ಪಟ್ಟಿ ತಯಾರಿಸಿರಿ.

## 4. ಒಬ್ಬರ ಸಾಮರ್ಥ್ಯ

ಒಬ್ಬ ಸಾಮಾನ್ಯ ವ್ಯಕ್ತಿ ಬಲವಾದ ಇಚ್ಛಾಶಕ್ತಿಯಿಂದ ಇಲ್ಲವೆ ಧ್ಯೇಯದ ಪ್ರೇರಣೆಯಿಂದ ಹಾಗೂ ಕಠೋರ ಪರಿಶ್ರಮದಿಂದ ಅವರ ಪರಿಸರದಲ್ಲಿ ಇಲ್ಲವೆ ಜಗತ್ತಿನಲ್ಲಿ ಮಹತ್ವದ ಬದಲಾವಣೆಗಳನ್ನು ತರುವರು. ಕೆಳಗೆ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ.


ಸಾಮಾಜಿಕ ಬದಲಾವಣೆ ತರಲು ಕಠೋರ ಪರಿಶ್ರಮ ಪಟ್ಟ ಒಬ್ಬ ವ್ಯಕ್ತಿಯನ್ನು ಶೋಧಿಸಲು ಮಕ್ಕಳಿಗೆ ಪ್ರವೃತ್ತ ಮಾಡಿರಿ.

ಆ ವ್ಯಕ್ತಿಗಳು ಕಾರ್ಯದಬಗೆಗೆ ವಹಿಯಲ್ಲಿ ಸ್ವಲ್ಪದರಲ್ಲಿ ಬರೆಯಲು ಹೇಳಿ. ವರ್ಗದಲ್ಲಿಸಾದರ ಪಡಿಸಲು ಹೇಳಿರಿ.



**ಮಲಾಲಾ ಯುಸುಫ್ ಝೂಇ** ಇವಳಿಗೆ ಹದಿನೈದನೆಯ ವರ್ಷದ ವಯಸ್ಸಿನಲ್ಲಿ ನೋಬೆಲ ಪಾರಿತೋಷಕ ಸಿಕ್ಕಿದೆ. ಪಾಕಿಸ್ಥಾನದ ವಾಯವ್ಯ ಭಾಗದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಪಡೆಯಲು ತಾಲಿಬಾನವು ಮನಾ ಮಾಡಿತ್ತು. ಆಗ ಅವಳು ಈ ನಿರ್ಬಂಧನೆಗೆ ಆಹ್ವಾನ ನೀಡಿದಳು. ಹೆಣ್ಣು ಮಕ್ಕಳ ಶಿಕ್ಷಣ ಹಾಗೂ ಹಕ್ಕು ಹಾಗೂ ಮಹಿಳೆಗೆ ಸಬಲೀಕರಣಕ್ಕಾಗಿ ಅವಳು ಹೋರಾಡಿದಳು.

ಗೆಹಲೋರ ಇದು ಬಿಹಾರ ರಾಜ್ಯದ ಒಂದು ಸಣ್ಣ ಹಳ್ಳಿ. ಈ ಹಳ್ಳಿಯ ಜನರಿಗೆ ಪಕ್ಕದ ಪಟ್ಟಣಕ್ಕೆ ಹೋಗಲು ಒಂದು ಕಲ್ಲಿನಿಂದ ತುಂಬಿದ ದೊಡ್ಡಗುಡ್ಡ ಅಡ್ಡ ಬರುತ್ತಿತ್ತು. ಅದನ್ನು ತಪ್ಪಿಸಿ ಹೋಗಲು 50 ಕಿ.ಮೀ. ನಷ್ಟು ನಡೆಯಬೇಕಾಗುತ್ತಿತ್ತು. ಜನರ ಈ ಕಷ್ಟ ನೋಡಿ ಆ ಊರಿನಲ್ಲಿಯ **ದಶರಥ ಮಾಂಜಿ** ಇವನು ಒಂದು ಛಿನ್ನಿ ಹಾಗೂ ಸುತ್ತಿಗೆ ತೆಗೆದುಕೊಂಡು ಗುಡ್ಡದ ಶಿಲೆಗಳನ್ನು ಒಡೆಯಲಾರಂಭಿಸಿದ. ಆಗ ಉಳಿದ ಊರಜನರು ಅವನ ಚೇಷ್ಟೆ ಮಾಡಲಾರಂಭಿಸಿದರು. ಅವರು ಅವನಿಗೆ ಹೇಳುತ್ತಿದ್ದರು. ಇದು ಒಬ್ಬನ ಕೆಲಸವಲ್ಲವೆಂದು, ಆದರೆ ದಶರಥನು ಯಾರ ಮಾತಿಗೂ ಕಿವಿಗೊಡದೆ ತನ್ನ ಕೆಲಸ ಮುಂದುವರೆಸಿದ. ಇಪ್ಪತ್ತೆರಡು ವರ್ಷಗಳ ಕಠಿಣ ಪರಿಶ್ರಮದ ನಂತರ ಆ ಗುಡ್ಡದಲ್ಲಿ ಅವನು ರಸ್ತ ತಯಾರಿಸಿಯೇ ಬಿಟ್ಟ.





ಕಸದ ವ್ಯವಸ್ಥಾಪನೆಹಾಗೂ ಸುಲಭ ಶೌಚಾಲಯಯಕಟ್ಟುವಸಾಮಾಜಿಕಕಾರ್ಯಕ್ಕಾಗಿ **ಬಿಂದೇಶ್ವರ ಪಾಠಕ** ಇವರ ಹೆಸರು ಮೊದಲು ನೆನಪಾಗುತ್ತದೆ. ಅವರು 'ಸುಲಭ ಇಂಟರ್‌ನ್ಯಾಶನಲ್' ಈ ಸಂಸ್ಥೆಯನ್ನು ಪ್ರಾರಂಭಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯಗಳು ಉಪಲಬ್ಧವಿರದರಿಂದ ನಾಗರಿಕರಿಗೆ, ಮುಖ್ಯವಾಗಿ ಹೆಂಗಸರಿಗೆ ತುಂಬ ತೊಂದರೆಯಾಗುತ್ತಿತ್ತು. ಜನರ ತೊಂದರೆಗಳನ್ನು ನಿವಾರಿಸಲು ಬಸ್ಸುನಿಲ್ದಾಣ ಉದ್ಯಾನಗಳು, ಪೇಟೆ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ 'ಸುಲಭ' ಸಂಸ್ಥೆಯು ಶೌಚಾಲಯಗಳನ್ನು ಕಟ್ಟಿತು. ಭಾರತ ಸರಕಾರವು, ಬಿಂದೇಶ್ವರ ಪಾಠಕ ಅವರಿಗೆ 'ಪದ್ಮಭೂಷಣ' ಈ ರಾಷ್ಟ್ರೀಯ ಸನ್ಮಾನ ನೀಡಿತು.

## 5. ಸ್ವತಃ ಬದಲಾವಣೆಯ ಪ್ರಕಲ್ಪ



''ಇನ್ನೊಬ್ಬ ವ್ಯಕ್ತಿಯಲ್ಲಿ ಯಾವ ಬದಲಾವಣೆಗಳನ್ನು ಮಾಡುವುದಿದೆಯೋ ಅದನ್ನು ಮೊದಲು ಸ್ವಂತ ಮಾಡಿ ಆಚರಣೆಯಲ್ಲಿ ತನ್ನಿರಿ.'' –ಮಹಾತ್ಮಾ ಗಾಂಧೀ

- ಯಾವಾಗ ಸಮಾಜದಲ್ಲಿ ಒಂದು ಬದಲಾವಣೆ ಮಾಡುವುದಿಯೋ ಅದನ್ನು ಮೊದಲು ಸ್ವತಃದಲ್ಲಿ ಮಾಡಬೇಕಾಗುವುದು.
- ಸ್ವತಃದಲ್ಲ ಬದಲಾವಣೆ ಮಾಡಿದರೇನೇ ಇನ್ನೊಬ್ಬರಿಗೆ ಬದಲಾವಣೆ ಮಾಡಲು ಹೇಳುವಾಗ ಆತ್ಮವಿಶ್ವಾಸ ಇರುತ್ತದೆ.
- ವ್ಯಕ್ತಿಯಲ್ಲಿಯ ಬದಲಾವಣೆಯ ಈ ಯೋಜನೆ ಪ್ರತಿಯೊಬ್ಬ ವ್ಯಕ್ತಿ ಮೊದಲು ತಾನು ಮಾಡಬೇಕು.
- ಸ್ವಂತದ ಬದಲಾವಣೆ ಹೇಗೆ ಮಾಡುವುದು ಎಂಬುದರ ಬಗ್ಗೆ ಮಾರ್ಗದರ್ಶನ ಮಾಡುವ ಕೆಲವು ಹಂತಗಳನ್ನು ಕೆಳಗೆ ಕೊಟ್ಟಿದೆ.

ಸ್ವತಃದಲ್ಲಿಯ ಬದಲಾವಣೆಯ ಪ್ರಕಲ್ಪದ ಉದಾಹರಣೆಕೊಡಲಾಗಿದೆ. ಮಕ್ಕಳಿಗೆ ಅರ್ಥಪೂರ್ಣ ಹಾಗೂ ಮಹತ್ವದ್ದು ಎನಿಸುವ ಒಂದು ಸಾಮಾಜಿಕ ಬದಲಾವಣೆಯ ಯೊಜನೆಯನ್ನುರೂಪಿಸುವಸ್ವಾತಂತ್ರ್ಯ ಕೊಡಿರಿ. ಈ ಯೋಜನೆಗೆ ಕಾರ್ಯರೂಪ ಕೊಡಲು, ಉದಾಹರಣೆಯ ಯಾವ ಯೊಜನೆಗಳನ್ನು ಮಕ್ಕಲು ಸ್ವತಃಕ್ಕಾಗಿ ಆವಿಸುವರೋ, ಅವರು ಅವನ್ನು ಒಂದು ತಿಂಗಳವರೆಗೆ ಕೈಗೊಂಡು ವಹಿಯಲ್ಲಿ ಅಹವಾಲು ಬರೆಯುವುದಿದೆ.

**ಶೀರ್ಷಿಕೆ:** ಮನೆಯಲ್ಲಿಯ ಪ್ಲಾಸ್ಟಿಕ್ ವಸ್ತುಗಳ ಇಲ್ಲವೆ ಕಾಗದದ ಉಪಯೋಗ ಕಡಿಮೆ ಮಾಡುವುದು.



1. **ಸಮಸ್ಯೆಯ ಸ್ವರೂಪ:** ಮನೆಯಿಂದ ಹೊರಬೀಳುವ ಕಾಗದ ಪ್ಲಾಸ್ಟಿಕದ ಕಸ ನಿರುಪಯೋಗಿಯಾದ ಕಸ ಕಡಿಮೆ ಮಾಡುವುದು.

2. **ಸಮಸ್ಯೆಯ ಪ್ರಮಾಣ** ಮನೆಯಲ್ಲಿಸೇರಿಡುವಕಸದಪ್ರಮಾಣವನ್ನು ನಿರ್ಧರಿಸಲು ಕಸದ ಬಾದಲಿಯ ಮೇಲೆ 1/4, 1/2, 3/4 ಮತ್ತು ಪೂರ್ಣ ತುಂಬಿದ ಹೀಗೆ ಬರೆದಿಡಿರಿ. ಐದು ದಿನವೂ ಎಷ್ಟು ಕಸ ಸೇರಿತು ಎಂಬುದನ್ನು ನೋಂದಾಯಿಸಿ ಇಡಿರಿ. ಈ ಐದು ದಿನಗಳ ಕಸದಿಂದ ಕಾಗದ ಹಾಗೂ ಪ್ಲಾಸ್ಟಿಕ್‌ದ ಎಷ್ಟು–ಕಸ ಎಸೆಯುವ ಪ್ರಕಾರದ್ದು ಇರುತ್ತದೆ ಎಂಬುದನ್ನು ನಿರ್ಧರಿಸಿರಿ.

3. **ವಿಚಾರ ಮಂಥನ:** ಯಾವ ಪ್ರಕಾರದ ಪ್ಲಾಸ್ಟಿಕ್‌ಹಾಗೂ ಕಾಗದಗಳ ಕಸ ಹೋಗುತ್ತದೆಂಬುದರ ಪಟ್ಟಿ ಮಾಡಿರಿ ಉದಾ– ಧಾನ್ಯ, ತರಕಾರಿ, ಆಹಾರ ಪದಾರ್ಥಗಳು ಪ್ಲಾಸ್ಟಿಕ್‌ದ ಖಾಲಿ ಚೀಲಗಳು ಚಾಕಲೇಟದ ಕಾಗದ, ಹರಿದ ಕಾಗದ, ಕಾಗದದ ಚೀಲ ಇತ್ಯಾದಿ.

4. **ಪರ್ಯಾಯ ಮಾರ್ಗ ಶೋಧಿಸುವುದು** ಪ್ಲಾಸ್ಟಿಕ್ ಹಾಗೂ ಕಾಗದದ ಯಾವ ವಸ್ತುಗಳನ್ನು ನೀವು ಕಸದಲ್ಲಿ ಎಸೆಯುವುದನ್ನು ನಿಲ್ಲಿರುವಿರಿ? ಹೇಗೆ ? ಏಕೆ ? ಅದಕ್ಕೆ ಪರ್ಯಾಯ ಏನು ?

5. ಪ್ಲಾಸ್ಟಿಕ್ ಹಾಗೂ ಕಾಗದದ ಕಸ ಕಡಿಮೆ ಮಾಡಲು ನಿಮಗೆ ತೋರಿದ ಉಪಾಯಗಳನ್ನು ಕನಿಷ್ಠ ಒಂದು ವಾರದ ವರಗೆ ಮಾಡಿ ನೋಡಿರಿ.

6. ಈ ಏಳು ದಿನಗಳಲ್ಲಿ ಕಸದಬುಟ್ಟಿ ಎಷ್ಟು ತುಂಬಿದ್ದವು ಎಂಬುದರೆ ನೋಂದು ಇಡಿರಿ. ಕಸದ ಪ್ರಮಾಣದಲ್ಲಿ ಯಾವುದೇ ಬದಲಾವಣೆ ಆಗಿರದಿದ್ದರೆ ಮತ್ತು ಮೂರನೆಯ ಹಂತಕ್ಕೆ ಹೋಗಿ ಬೇರೆ ಪರ್ಯಾಯಗಳ ವಿಚಾರ ಮಾಡಿರಿ. ಆದರೆ ಕಸದ ಪ್ರಮಾಣ ಸ್ವಲ್ಪಾದರೂ ಕಡಿಮೆ ಇರುವುದು ಕಂಡುಬಂದರೆ, ನೀವು ಸರಿಯಾದ ಮಾರ್ಗದಲ್ಲಿ ಸಮಸ್ಯೆಯನ್ನು ಬಿಡಿಸುತ್ತಿರುವಿರಿ. ಪ್ರಯತ್ನ ಮಾಡುತ್ತಿರುವಿರಿ ಎಂಬುದನ್ನು ಅರಿತುಕೊಂಡು ಬದಲಾವಣೆಯನ್ನು ಮುಂದು ವರೆಸಿರಿ.

7. **ಪ್ರಕಲ್ಪದ ಅಹವಾಲು:** ಸಮಸ್ಯೆ ಬಿಡಿಸಲು ಪೂರ್ಣ ಪ್ರಕ್ರಿಯೆಯಲ್ಲಿಯ ಅನುಭವಗಳನ್ನು ವಹಿಯಲ್ಲಿ ಬರೆಯಿರಿ.

## ಸ್ವ-ಬದಲಾವಣೆ ಮಾಡಲು ಕೆಲವು ಪ್ರಕಲ್ಪಗಳು.



ಪ್ರತಿ ತಿಂಗಳ ವಿದ್ಯುತ್, ನೀರು, ಪೆಟ್ರೋಲ ಮುಂತಾದವುಗಳ ಉಪಯೋಗ ಕಡಿಮೆ ಮಾಡುವುದು.



ಪ್ರತಿದಿನ ಒಂದು ಗಂಟೆಕಾಲ ಓದಲು ಬರೆಯಲು ಕಲಿಸುವುದು.




ಪ್ರತಿದಿನ ಒಂದುಗಂಟೆಕಾಲ ಸಹೋದರ-ಸಹೋದರಿಯರಿಗೆ ಅಬ್ಯಾಸದಲ್ಲಿ ಸಹಾಯ ಮಾಡುವುದು.



ಪ್ರತಿದಿನ ಒಂದು ಗಂಟೆ ಮನೆಗೆಲಸದಲ್ಲಿ ಸಹಾಯ ಮಾಡಿ, ಇತರರ ಕೆಲಸದ ಭಾರವನ್ನು ಸ್ವಲ್ಪ ಕಡಿಮೆ ಮಾಡುವುದು



ನಾವು ಯಾವ ವಿಷಯದಲ್ಲಿ ಹಿಂದೆ ಬೀಳುವೆವೋ ಆ ವಿಷಯದಲ್ಲಿ ಪ್ರಗತಿ ಮಾಡುವುದು




ಮನೆಯಲ್ಲಿಯ ಹಸಿ ಹಾಗೂ ಒಣ ಕಸಗಳಿಗಾಗಿ ಬೇರೆ ಬೇರೆ ಕಸದ ಬುಟ್ಟಿಗಳನ್ನು ತಯಾರಿಸುವುದು. ಹಸಿ ಕಸದಿಂದ ಸೇಂದ್ರಿಯ ಗೊಬ್ಬರ ತಯಾರಿಸುವುದು.

## 6. ಸಾಮಾಜಿಕ ಬದಲಾವಣೆಯ ಪ್ರಕಲ್ಪ

ಸ್ವತಃದಲ್ಲಿ ಬದಲಾವಣೆಮಾಡುವ ಕಲ್ಪನೆಯನ್ನು ಯಶಸ್ವಿಯಾಗಿ ಮಾಡಿದ್ದರಿಂದ ನಿಮ್ಮ ಆತ್ಮವಿಶ್ವಾಸ ಬೆಳೆದಿರಬಹುದು. ಈ ಆ ಬದಲಾದ ದೃಷ್ಟಿಕೋನವನ್ನು ಸ್ವಲ್ಪ ವ್ಯಾಪಕ ಮಾಡೋಣ

ಸುತ್ತಮುತ್ತಲಿನ ಸಮಾಜದಲ್ಲಿಯ ಕೆಲವು ಪ್ರಶ್ನೆ ಅಥವಾ ಸಮಸ್ಯೆಗಳು ನಿಮ್ಮ ಲಕ್ಷ್ಯದಲ್ಲಿಬಂದಿರಬಹುದು ಅಂದಮೇಲೆ ಅವುಗಳಲ್ಲಿ ಹೇಗೆ ಬದಲಾವಣೆ ತರಬೇಕು ಎಂಬುದರ ವಿಚಾರ ಮಾಡಿರಿ.

ಸಾಮಾಜಿಕ ಬದಲಾವಣೆ ತರಲು ಪ್ರಕಲ್ಪಗಳ ಮೆಟ್ಟಿಲು ಅಥವಾ ಹಂತಗಳನ್ನು ನಮೂನೆಗೆ ಕೊಡಲಾಗಿದೆ ಅವನ್ನು ಅಭ್ಯಸಿಸಿರಿ

ವಿದ್ಯಾರ್ಥಿಗಳ ಗುಂಪು ಮಾಡಿ ಸಾಮಾಜಿಕ ಬದಲಾವಣೆಗಳ ಪ್ರಕಲ್ಪ ಮಾಡಲುಹೇಳಿರಿ. ಈ ಪ್ರಕಲ್ಪಕ್ಕಾಗಿ ಮೂರು ತಿಂಗಳ ಅವಧಿ ಕೊಡಿರಿ. ಪ್ರಕಲ್ಪಕ್ಕಾಗಿ ಪರಿಸರದಲ್ಲಿಯ ಸಾಮಾಜಿಕ ಪ್ರಶ್ನೆಗಳನ್ನು ಆರಿಸಬೇಕು, ಆ ಪ್ರಶ್ನೆಗಳನ್ನು ಬಿಡಿಸಲು ಅವಶ್ಯವಿರುವ ಸಾಧನ ಸಾಮಗ್ರಿಗಳ ಉಪಲಬ್ಧವಾಗಿವೆಯೇ ಎಂಬುದನ್ನು ಖಚಿತ ಪಡೆಸಿಕೊಳ್ಳಿರಿ ಹಾಗೂ ಸಮಾಜದ ಪ್ರತ್ಯಕ್ಷ ಸಹಭಾಗ ಪಡೆಯುವ ಆವಶ್ಯಕತೆಯ ಬಗ್ಗೆ ಮಾರ್ಗದರ್ಶನ ಮಾಡಿರಿ.



### ಮೊದಲ ಮೆಟ್ಟಿಲು: ಸಾಮಾಜಿಕ ಸಮಸ್ಯೆಯನ್ನು ಆರಿಸುವುದು.

● ಸಾಮಾಜಿಕ ಬದಲಾವಣೆ ಮಾಡಲು ಸಮಸ್ಯೆಯನ್ನುಜಾಗರೂಕತೆಯಿಂದ ಆರಿಸಬೇಕು. ಇನ್ನೊಬ್ಬರವೇದನೆಕಂಡು ನೀವು ಎಂದಾದರೂ ಅಸ್ವಸ್ಥರಾಗಿದ್ದೀರಾ ಎಂಬುದನ್ನು ನೆನಪು ಮಾಡಿಕೊಳ್ಳಿರಿ.

● ಒಂದು ಘಟನೆ ಅಥವಾ ಪ್ರಸಂಗ ನೋಡಿ ಎಂದಾದರೂ ನಿಮ್ಮ ಕಣ್ಣಲ್ಲಿನೀರು ಬಂದಿತ್ತೇ? ಆ ಸಮಸ್ಯೆ ಬಿಡಿಸಲು ನೀವು ಸಹಾಯ ಮಾಡಬಹುದು ಎಂದು ಅನಿಸಿತ್ತೆ?

● ಈ ಪದ್ಧತಿಯಿಂದ ನಿಮಗೆ ಸಮಸ್ಯೆಗಳನ್ನು ಆರಿಸಲು ಬರದಿದ್ದರೆ, ನಿಮ್ಮ ಪರಿಸರದಲ್ಲಿರುವ ನಿಮ್ಮ ಮಿತ್ರನ ಮನೆಗೆ ಹೋಗಿ ಅವರ ಸಮಸ್ಯೆಗಳನ್ನುಬಗ್ಗೆ ಅವರಿಗೆ ಪ್ರಶ್ನೆಕೇಳಿರಿ. ಅವರ ತೊಂದರೆಗಳನ್ನು ತಿಳಿದುಕೊಳ್ಳಿರಿ.ಈ ಸಂದರ್ಶನದಿಂದ ನಿಮಗೆ ಕಂಡುಬಂದ ಸಮಸ್ಯೆಗಳು ಪಟ್ಟಿ ಮಾಡಿರಿ.



### ಎರಡನೆಯ ಮೆಟ್ಟಿಲು : ಬದಲಾವಣೆ ಮಾಡಲು ಸಮಸ್ಯೆ ನಿಶ್ಚಿತ ಪಡಿಸಿರಿ.

● ನಿಮ್ಮ ಪರಿಸರದ ಸಮಸ್ಯೆಗಳ ಪಟ್ಟಿ ತಯಾರಿಸಿರುವಿರಿ. ಆ ಸಮಸ್ಯೆಯ ಎದುರು ಇರುವ ಮುಂದಿನ ಪ್ರಶ್ನೆಗಳನ್ನು ಸ್ವತಃಕ್ಕೆ ಕೇಳಿಕೊಳ್ಳಿರಿ.

1. ಈ ಸಮಸ್ಯೆ ನಿಮ್ಮ ದೃಷ್ಟಿಯಿಂದ ಬಹಳ ದೊಡ್ಡದಿದೆಯೆ? ಉದಾ: ಊರಿನಲ್ಲಿಯ ಎಲ್ಲ ಜನರನ್ನು ಸಾಕ್ಷರರನ್ನಾಗಿ ಮಾಡುವುದು. ಅದರಂತೆಯೇ ಬಹಳ ಸಣ್ಣದಿದೆಯೆ? ಉದಾ: ಮನೆಯ ಹಿತ್ತಲಲ್ಲಿ ಒಂದು ಗಿಡ ನೆಡುವುದು.

2. ಈ ಬದಲಾವಣೆಯನ್ನು ತರಲು ಬೇಕಾಗುವ ಹಣ, ಮಾನವ ಸಹಾಯವನ್ನು ನಿಮ್ಮ ಜಮೆ ಮಾಡಲು ಸಾಧ್ಯವೆ?

3. ಈ ಬದಲಾವಣೆ ಮಾಡಲು ಬೇಕಾದ ಕೌಶಲ್ಯ, ಮಾಹಿತಿ ಇವು ನಿಮ್ಮ ಗುಂಪಿನಲ್ಲಿ ಇದೆಯೇ? ನೀವು ಮಾಡಲು ಇಷ್ಟಪಡುವ ಬದಲಾವಣೆಯ ಯೋಜನೆ ನೀವು ಮಾಡಿರುವಿರಾ?



### ಮೂರನೆಯ ಮೆಟ್ಟಿಲು : ಸಮಸ್ಯೆಯನ್ನು ಸ್ಪಷ್ಟವಾದ ಶಬ್ದಗಳಲ್ಲಿ ಮಂಡಿಸಿರಿ.

● ಸಮಸ್ಯೆ ಹಾಗೂ ಅದಕ್ಕೆ ಸಂಬಂಧಿಸಿದ ಕೃತಿ ಸ್ಪಷ್ಟಪಡಿಸಿ, ಸ್ಪಷ್ಟ ಶಬ್ದಗಳಲ್ಲಿಮಂಡಿಸಿರಿ. ಉದಾ. ನಮ್ಮ ಪರಿಸರದಲ್ಲಿ ನಿರಕ್ಷರತೆಯ ಪ್ರಮಾಣ ಹೆಚ್ಚು ಇದೆ, ಇದು ಸಮಸ್ಯೆ. ಅದಕ್ಕಾಗಿ ನಮ್ಮ ಗುಂಪಿನಲ್ಲಿಯ ಜನರು ಐವರನ್ನು ಸಾಕ್ಷರ ಮಾಡುವ ನಿರ್ಧಾರ ಮಾಡಿರುವರು, ಆದರಿಂದ ಅವರಿಗೆ ಸುಲಭವಾದ ವಾಕ್ಯಗಳನ್ನುಓದಲು ಬರೆಯಲು ಬರಬೇಕು. ಹೀಗೆಯೇ ಪ್ರತಿಯೊಂದು ಗುಂಪು ಸಮಸ್ಯೆಗಳನ್ನು ಸ್ಪಷ್ಟವಾಗಿ ಮಂಡಿಸಬೇಕು. ಉದಾ...................ಇದು ಸಮಸ್ಯೆಯಾಗಿದೆ. ಅದಕ್ಕಾಗಿ ನಾವು................. ಮಾಡುವವರಿರುವೆವು. ಆದರಿಂದ....................ಆಗಬೇಕು.

## ನಾಲ್ಕನೆಯ ಮೆಟ್ಟಿಲು : ಸಮಸ್ಯೆಗಳನ್ನು ಪರಿಹರಿಸುವ ಮಾರ್ಗಗಳು.

● ನೀವು ಆರಿಸಿದ ಸಮಸ್ಯೆ ಪರಿಹರಿಸಲು, ಅದಕ್ಕೆ ಸಂಬಂಧಪಟ್ಟ ತಜ್ಞರೊಂದಿಗೆ/ಪಾಲಕರೊಂದಿಗೆ ಮಾತನಾಡಿ ಮಾರ್ಗದರ್ಶನ ಪಡೆಯಿರಿ. ಗುಂಪಿನಲ್ಲಿಯ ಎಲ್ಲ ಮಕ್ಕಳಿಗೆ ಯಾವ ಯಾವ ಪರಿಹಾರ ಕಂಡುಬಂದಿದೆ ಎಂಬುದನ್ನು ತಿಳಿದುಕೊಳ್ಳಿರಿ. ಶಿಕ್ಷಕ ಹಾಗೂ ಪಾಲಕರೊಂದಿಗೆ ಅದರ ಬಗ್ಗೆ ಮಾತನಾಡಿರಿ. ಉದಾ– ಸಮಸ್ಯೆಯನ್ನುಪರಿಹರಿಸಲು, ಎಂದರೆ ನಿರಕ್ಷರ ಪ್ರೌಢರಿಗೆ ಸಾಕ್ಷರರನ್ನಾಗಿ ಮಾಡಲು ಮುಂದಿನ ಪರ್ಯಾಯಗಳ ವಿಚಾರ ಮಾಡಬಹುದು.

1. ಆ ಪ್ರೌಢರಿಗೆ ಕಲಿಯಲು ಪ್ರೋತ್ಸಾಹನೆ ನೀಡುವುದು.

2. ಅಶಿಕ್ಷಿತ ಪ್ರೌಢರಿಗೆ ಅವರಿಗೆ ಸರಿಹೊಂದುವ ಸಮಯದಲ್ಲಿ ಗುಂಪಿನಲ್ಲಿಯ ಮಕ್ಕಳು ಕಲಿಸುವುದು.

ನೀವು ಯಾರನ್ನು ಸಾಕ್ಷಕರರನ್ನಾಗಿಮಾಡಲಿರುವಿರಿ. ಅವರಿಗಾಗಿ ಯಾವ ಮಾರ್ಗ ಯೋಗ್ಯವಾಗಿದೆ ಎಂಬುದು ನಿಮ್ಮ ಪರ್ಯಾಯ ಮಾರ್ಗದ ಮೇಲೆ ಅವಲಂಭಿಸಿದೆ.

## ಐದನೆಯ ಮೆಟ್ಟಿಲು: ಯೋಜನೆಯನ್ನು ಸಾದರ ಪಡಿಸಿರಿ

● ಆಯ್ದ ಸಮಸ್ಯೆ ಪರಿಹರಿಸಲು ಕೃತಿಯ ರೂಪರೇಷೆಯನ್ನು ತಯಾರಿಸಿರಿ.

● ವರ್ಗದಲ್ಲಿಯ ಎಲ್ಲ ಮಕ್ಕಳಿಗೆ ನಿಮ್ಮ ಯೋಜನೆಯ ಬಗ್ಗೆ ಹೇಳಿರಿ. ಅದಕ್ಕೆ ಉಳಿದ ಮಕ್ಕಳು ಯಾವ ಪ್ರತಿಕ್ರಿಯೆ ನೀಡುವರೊ ಅದರ ಬಗೆಗೆ ವಿಚಾರ ಮಾಡಿರಿ.

## ಆರನೆಯ ಮೆಟ್ಟಿಲು: ಸಮಸ್ಯೆ ಬಿಡಿಸಲು ಪ್ರತ್ಯಕ್ಷ ಕೃತಿ

● ಈ ಹಂತ ಸ್ವಲ್ಪ ಕಠಿಣದಾಗಿರುತ್ತದೆ.

● ನಿಮ್ಮ ಯೋಜನೆಯಂತೆ ಪ್ರತ್ಯಕ್ಷಕೃತಿ ಮಾಡುವಾಗ ಕೆಲವು ಅಡೆತಡೆಗಳು ಬರಬಹುದು. ಆ ಕ್ಷಣದಲ್ಲಿ ನಿಮಗೆ ಆ ಅಡೆತಡೆಗಳನ್ನು ಪರಿಹರಿಸಲು ದಾರಿ ಹುಡುಕಬೇಕಾಗುವುದು.

● ಅಡೆತಡೆಗಳನ್ನು ಪರಿಹರಿಸಲು, ಅವಶ್ಯಕತೆ ಇದ್ದರೆ ಶಿಕ್ಷಕರು ಇಲ್ಲವೆ ಪಾಲಕರ ನೆರವು ತೆಗೆದುಕೊಳ್ಳಿರಿ.

## ಏಳನೆಯ ಮೆಟ್ಟಿಲು: ಎಷ್ಟು ಬದಲಾವಣೆ ಆಯಿತು ಎಂದುದರ ಲೆಕ್ಕ.

● ಸಮಸ್ಯೆಗಳ ಸಂದರ್ಬದಲ್ಲಿ ಕೆಲವು ವಿಧಾಯಕ ಬದಲಾವಣೆಗಳನ್ನು ತರುವಲ್ಲಿ ನೀವು ಯಶಸ್ವಿಯಾದಿರಾ

● ಯಾವ ಸ್ಥಿತಿಯಲ್ಲಿನೀವು ಸಾಮಾಜಿಕ ಬದಲಾವಣೆ ಮಾಡುವ ಪ್ರಯತ್ನಮಾಡಿದಿರಿ? ಆದರಲ್ಲಿ ಅತ್ಯಲ್ಪಸುಧಾರಣೆ ಆದರೂ ಅದು ನಿಮ್ಮ ಯಶಸ್ಸಾಗಿದೆ.

● ಸಾಧ್ಯವಾದರೆ ಬದಲಾವಣೆಯ ಎಣಿಕೆ ಮಾಡಿರಿ ಇಲ್ಲವೆ ಶಬ್ದಗಳಲ್ಲಿ ವರ್ಣಿಸಿರಿ.

● ಬದಲಾವಣೆ ಆಗದೇ ಇದ್ದರೆ, ಯಾವ ತಪ್ಪು ಆಯಿತು ಎಂಬುದರ ಬಗ್ಗೆ ಕಾರಣ ಮೀಮಾಂಸೆ ಮಾಡಿರಿ.

## ಎಂಟನೆಯ ಮೆಟ್ಟಿಲು: ಬದಲಾವಣೆಯ ಲಿಖಿತ ವರದಿಯನ್ನು ತಯಾರಿಸಿರಿ.

● ಸಮೂಹದ ಸಮಸ್ಯೆಗಳನ್ನುಪರಿಹರಿಸಲು ಇಲ್ಲವೆ ಪರಿಸ್ಥಿತಿಯಲ್ಲಿಬದಲಾವಣೆ ಮಾಡಲು ನಿಮ್ಮ ಗುಂಪು ಯಾವ ಕೆಲಸಗಳನ್ನು ಮಾಡಿತ್ತೋ ಅದರ ಫೋಟೋ ತೆಗೆದಿಡಿರಿ.

● ನಿಮ್ಮ ಕೆಲಸದಿಂದ ಆ ಜನರಿಗೆ ಹೇಗೆ ಮತ್ತು ಎಷ್ಟು ಲಾಭವಾಯಿತು ಎಂಬುದನ್ನು ಅವರಿಂದ ತಿಳಿದುಕೊಳ್ಳಿರಿ.

● ಫೋಟೊ ಹಾಗೂ ಇನ್ನಿತರ ಪುರಾವೆಗಳು ಹಾಗೂ ಲೇಖೀ ಪ್ರತಿಕ್ರಿಯೆಗಳನ್ನು ಪ್ರಕಲ್ಪ ವಹಿಯಲ್ಲಿ ಅಂಟಿಸಿರಿ.

## ಒಂಬತ್ತನೆಯ ಮೆಟ್ಟಿಲು: ಸ್ವತಃದ ಬೆನ್ನು ಚಪ್ಪರಿಸಿ ಕೊಳ್ಳಿರಿ.

● ಸಾಮಾಜಿಕಬದಲಾವಣೆಎಷ್ಟುಕಂಡುಬಂದಿತುಎಂಬುದಕ್ಕಿಂತನೀವುಸಮಾಜದಪ್ರಶ್ನೆಗಳಬಗೆಗೆತಿಳಿದುಕೊಂಡಡು ಯಾವ ಕೃತಿಗಳನ್ನು ಮಾಡಿದರೋ ಅದು ಪ್ರಶಂಸನೀಯವಿದೆ.

● ಸಾಮಾಜಿಕ ಬದಲಾವಣೆಯ ಕೆಲಸವನ್ನು ನೀವು ಪೂರ್ಣ ಕ್ಷಮತೆಯಿಂದ ಮಾಡಿದ್ದರೆ ಸ್ವತಃದ ಹಾಗೂ ನಿಮ್ಮ ಗುಂಪಿನಬೆನ್ನು ಚಪ್ಪರಿಸಿರಿ.

ಸಾಮಾಜಿಕ ಬದಲಾವಣೆಗಾಗಿ ಕೆಲವು ನಮೂನೆ ಪ್ರಕಲ್ಪಗಳನ್ನುಕೆಳಗೆ ಕೊಡಲಾಗಿದೆ. ಆದರೆ ಯೋಗ್ಯವೆನಿಸುವ ಪ್ರಕಲ್ಪಗಳನ್ನು ಆಯ್ದುಕೊಳ್ಳಲು ನಿಮಗೆ ಸ್ವಾತಂತ್ರ್ಯವಿದೆ.

1. ಶಾಲೆಯಲ್ಲಿಯ ಸ್ವಚ್ಛತಾಗೃಹಗಳ ಸುಧಾರಣೆ ಮಾಡುವುದು.
2. ಶಾಲೆಯ ಪರಿಸರ ಯಾವಾಗಲೂ ಸ್ವಚ್ಛವಾಗಿಡಲು ವ್ಯವಸ್ಥೆ ಮಾಡುವುದು.
3. ಶಾಲೆಯ ಪರಿಸರದಲ್ಲಿ ವೃಕ್ಷಾರೋಪಣೆಮಾಡಿ ಅವುಗಳ ಕಾಳಜಿ ವಹಿಸುವುದು.
4. ನಿಮ್ಮ ಓಣಿಯಲ್ಲಿಯ ಅಥವಾ ಕಟ್ಟಡದಲ್ಲಿಯ ಕಸದ ವರ್ಗೀಕರಣಮಾಡಿ ಹಸಿ ಘನ ಕಸದಿಂದ ಗೊಬ್ಬರ ತಯಾರಿಸುವುದು.
5. ಪಕ್ಕದಲ್ಲಿ ಇರುವ ಒಬ್ಬ ಅಶಿಕ್ಷಿತ ವ್ಯಕ್ತಿಗೆ ಓದಲು ಕಲಿಸುವುದು.

## ನನ್ನ ಪ್ರಶಸ್ತಿ ಪತ್ರಿಕೆ:

ಬದಲಾವಣೆಗಾಗಿ ಮಾಡಿದ ರೂಪರೇಕೆಯಿಂದ ಹಿಡಿದು ಕೆಲಸ ಮುಗಿಯುವವರೆಗೆ ನಿಮಗೆ ಬಂದ ಅನುಭವ ಮತ್ತು ಅದರಲ್ಲಿ ಹೇಗೆ ಯಶಸ್ಸು ಸಿಕ್ಕಿತು ಎಂಬುದರ ಪ್ರಶಸ್ತಿಪತ್ರಿಕೆಯನ್ನು ಸ್ವತಃಕ್ಕಾಗಿ ತಯಾರಿಸಿರಿ. ನಿಮ್ಮ ಪ್ರಯತ್ನದ ಕಷ್ಟದ ಪ್ರಶಂಸೆ ಮಾಡಿರಿ.

## ಮೌಲ್ಯಮಾಪನ

| ಭಾರಾಂಶ 20% | | | | |
|---|---|---|---|---|
| ಮಾನದಂಡ | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಗುಣಗಳು |
| ಸ್ವತಃದಲ್ಲಿಯ ಬದಲಾವಣೆಯ ಪ್ರಕಲ್ಪ ಸಾದರ ಪಡಿಸುವುದು. | ಸ್ವಂತದ ಸಾಮರ್ಥ್ಯ ಗುರುತಿಸಿ ಸ್ವಂತದಲ್ಲಾದ ಬದಲಾವಣೆಯ ಪ್ರಕಲ್ಪ ಪೂರ್ಣಗೊಳಿಸಿದೆ ಪ್ರಕಲ್ಪವನ್ನು ಸ್ಪಷ್ಟ ಶಬ್ದಗಳಲ್ಲಿ ಮಂಡಿಸಿದೆ. ಸಂಬಂಧಪಟ್ಟ ಪ್ರಶ್ನೆಗಳಿಗೆ ಸಮಾಧಾನ ನೀಡುವ ಉತ್ತರ ಕೊಟ್ಟಿದೆ. | ಸ್ವತಃದಲ್ಲಿಯ ಬದಲಾವಣೆಯ ಪ್ರಕಲ್ಪ ಪೂರ್ಣಗೊಳಿಸಿದೆ. | ಸ್ವತಃದಲ್ಲಿಯ ಬದಲಾವಣೆಯ ಮಾಹಿತಿಯನ್ನು ಸುಮಾರಾಗಿ ಕೊಟ್ಟಿದೆ. ವಿಚಾರಗಳು ಸ್ಪಷ್ಟವಾಗಿಲ್ಲ. | |
| ಸಾಮಾಜಿಕ ಬದಲಾವಣೆಯ ಪ್ರಕಲ್ಪ ಪೂರ್ಣಗೊಳಿಸುವುದು. | ಸಾಮಾಜಿಕ ಬದಲಾವಣೆಯ ಪ್ರಕಲ್ಪ. ಪೂರ್ಣಗೊಳಿಸಿದೆ. ಪ್ರಕಲ್ಪವನ್ನು ಸ್ಪಷ್ಟ ಶಬ್ದಗಳಲ್ಲಿ ಮಂಡಿಸಿದೆ. ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಮಾಧಾನ ನೀಡುವ ಉತ್ತರಗಳನ್ನು ನೀಡಿದೆ. ಫೋಟೋ ಅಥವಾ ಸಮುದಾಯದ ಲಿಖಿತ ಪ್ರತಿಕ್ರಿಯೆಗಳನ್ನು ಸಾದರ ಪಡಿಸಿ ಸಾಮಾಜಿಕ ಬದಲಾವಣೆಯ ಪುರಾವೆ ನೀಡಿದೆ. | ಸಾಮಾಜಿಕ ಬದಲಾವಣೆಯ ಪ್ರಕಲ್ಪ. ಪ್ರಮಾಣಿಕತೆಯಿಂದ ಪೂರ್ಣಗೊಳಿಸಿದೆ. ಪ್ರಕಲ್ಪದ ಮಂಡಣೆ ಸ್ಪಷ್ಟವಾದ ಶಬ್ದಗಳಲ್ಲಿ ಮಾಡಿದೆ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಮಾಧಾನಕಾರಕ ಉತ್ತರ ನೀಡಿದೆ. ಆದರೆ ಸಾಮಾಜಿಕ ಬದಲಾವಣೆಗಳ ಪುರಾವೆ ಎಂದು ಫೋಟೋ ಹಾಗೂ ಸಮುದಾಯದ ಲಿಖಿತ ಪ್ರತಿಕ್ರಿಯೆಗಳನ್ನು ಸಾದರಪಡಿಸಲಿಲ್ಲ. | ಸಾಮಾಜಿಕ ಬದಲಾವಣೆಯ ಪ್ರಕಲ್ಪಗಳ ಬಗ್ಗೆ ಸ್ಪಷ್ಟತೆ ಇಲ್ಲ. ಸಾಮಾಜಿಕ ಬದಲಾವಣೆಗಾಗಿ ಯಾವ ಕೃತಿಹಾಗೂ ಏಕೆ ಮತ್ತು ಹೇಗೆ ಮಾಡಿದೆ ಎಂಬುದು ಸ್ಪಷ್ಟವಾಗುವುದಿಲ್ಲ. | |


ಧೈರ್ಯಧರ, ನಿನ್ನಲ್ಲಿ ಏನೂ ಕಡಿಮೆ ಇಲ್ಲವೆ?
ಇದೆಯಲ್ಲ! ಒಂದು ಸಂಗತಿಯನ್ನು ಇಷ್ಟು ವರ್ಷಗಳಲ್ಲಿ ನನಗೆ ಕಲಿಯಲಾಗಲಿಲ್ಲ.
ಆಹಾ! ಒಂದಾದರೂ ಸಿಕ್ಕಿತು ಅದು ಏನು?
ಕಲೆ ಬೆಳಿಸಿಕೊಳ್ಳುವುದು ಅಥವಾ ಅದರ ರಸಗ್ರಹಣ ಮಾಡುವುದು.
ಎಂದರೆ ನಿನಗಿದು ಸಾಧ್ಯವಾಗಲಿಲ್ಲವೆ?
(ಉದಾಸೀನಗಾಗಿ) ನನ್ನ ದುರ್ದೈವ! ಧೈರ್ಯಶೀಲನಾಗುವುದರಲ್ಲಿ ನಾನು ಎಷ್ಟು ವ್ಯಸ್ತನಾಗಿದ್ದೆ ಎಂದರೆ ಮೊದಲು ಮನುಷ್ಯನಾಗಬೇಕು ಎಂಬುದನ್ನೇ ಮರೆತೆ
ನಮ್ಮ ಸುತ್ತಮುತ್ತಲಿನ ಕಲೆಗಳೊಂದಿಗೆ ಹೊಂದಿಕೊಂಡು ಹೋಗುವುದು, ಮಾನವನಿಗೆ ಸಿಕ್ಕ ದೊಡ್ಡ ಕೊಡುಗೆಯಾಗಿದೆ. ನಾವಿಬ್ಬರೂ ಸೇರಿ ಕಲಿಯೋಣವೆ? ನಿನಗೇನು ಅನಿಸುತ್ತದೆ?

# 5 ಕಲಾ ರಸಸ್ವಾದ - ದೃಶ್ಯಕಲೆ.

## ಕಲೆಯಲ್ಲಿಯ ಸೌಂದರ್ಯವನ್ನು ತಿಳಿದು ಕೊಳ್ಳುವಾಗ....

BHX6SN

**ಉದ್ದೇಶಗಳು:**

(1) ಮಾನವ ಜೀವನದಲ್ಲಿ ಕಲೆಯ ಮಹತ್ವವನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವುದು. ವಿವಿಧ ದೃಶ್ಯ ಕಲೆಯ ಪ್ರಕಾರಗಳ ಹೆಸರು ಹಾಗೂ ದೃಶ್ಯ ಕಲಾಪ್ರಕಾರದಮೂಲಭೂತ ಐದು ಘಟಕಗಳ ಹೆಸರು ಹೇಳಲು ಬರುವುದು

(2) ದೈನಂದಿನ ಜೀವನದಲ್ಲಿ ಉಪಯೋಗಿಸಲ್ಪಡುವ ಕಲಾಪ್ರಕಾರಗಳನ್ನು ಗುರುತಿಸಲು ಬರುವುದು, ಕೆಲವು ಪ್ರಸಿದ್ಧ ಕಲಾಕಾರರ ಹೆಸರು ಹೇಳಲು ಬರುವುದು.

(3) 'ಒಂದೇ ಭಾವನೆ ಅಥವಾ ಪ್ರಸಂಗವನ್ನು ಪ್ರತಿಯೊಬ್ಬ ಕಲಾಕಾರನು ಅವನ ಶೈಲಿಯಲ್ಲಿ ಬೇರೆ ಬೇರೆ ಪದ್ದತಿಯಿಂದ ವ್ಯಕ್ತ ಮಾಡಬಲ್ಲ' ಈ ವಾಕ್ಯವನ್ನು ಸಮರ್ಥಿಸಲು ಬರುವುದು.

(4) ಒಂದು ಕಲಾವಿಷ್ಕಾರವನ್ನುನಿರ್ಮಿಸಿ ಸ್ವತಃಅಭಿವ್ಯಕ್ತಮಾಡುವುದು.

(5) ಒಂದು ಕಲಾವಿಷ್ಕಾರದಲ್ಲಿದೃಶ್ಯಕಲೆಗಳಲ್ಲಿಯಐದು ಮೂಲಭೂತ ಘಟಕಗಳ ಉಪಯೋಗ ಹೇಗೆ ಮಾಡಿರುವರು ಎಂಬುದನ್ನುಸ್ವಂತದ ಶಬ್ದಗಳಲ್ಲಿ ವರ್ಣನೆ ಮಾಡುವುದು ಹಾಗೂ ಒಂದು ಕಲಾವಿಷ್ಕಾರ ಏಕೆ ಮೆಚ್ಚಿಕೆಯಾಯಿತು ಎಂಬುದನ್ನು ಸ್ವಂತದ ಶಬ್ದಗಳಲ್ಲಿ ಸ್ಪಷ್ಟ ಪಡಿಸಲುಬರುವುದು

### 1. ಸ್ವಲ್ಪ ಮೋಜು ಮಾಡೋಣ...

ವಿದ್ಯಾರ್ಥಿಗಳು ಕೇಳಿ ಆನಂದ ಪಡುವಂತಹ ಒಂದು ದೇಶಭಕ್ತಿಯ ಹಾಡನ್ನು ವರ್ಗದಲ್ಲಿ ಜೋರಾದ ಧ್ವನಿಯಲ್ಲಿ ಹಾಕಿರಿ

### 2. ಸ್ವಲ್ಪ ವಿಚಾರ ಮಾಡುವಾ :



ಸಮುದ್ರ ದಂಡೆಯಲ್ಲಿಸುತ್ತಾಡುವಾಗರೇವೆಯ ಕೋಟೆ ಮಾಡಬೇಕು ಇಲ್ಲವೆ ರೇವೆಯ ಮೇಲೆ ಅಕ್ಷರಗಳನ್ನು ಗೀರಬೇಕೆಂದು ಅನಿಸುವುದೆ? ಅಹುದು/ಅಲ್ಲ



ಯಾವುದೇ ಒಂದು ಸಂಗತಿಯ ವಿಚಾರ ಮಾಡುವಾಗ ನಿಮಗೆ ತಿಳಿಯದೇ ನೀವು ಕಾಗದದ ಮೇಲೆ ಚಿತ್ರ ಇಲ್ಲವೆ ನಕ್ಷಿ ಬಿಡಿಸುವಿರಾ? ಅಹುದು/ಇಲ್ಲ

1. ಕೆಳಗಿನ ಅಂಶಗಳ ಮೇಲೆ ವಿಚಾರ ಮಾಡಿರಿ.
   - ಹಾಡು ಕೇಳುವಾಗ ನಿಮಗೆ ನೃತ್ಯ ಮಾಡಬೇಕು, ಕಾಲಿನಿಂದ ತಾಲ ಹಿಡಿಯಬೇಕು ಎಂದೆನಿಸುವುದೆ?
   - ನಿಮ್ಮ ಶರೀರ ಸಂಗೀತದೊಂದಿಗೆ ಒಲಿದಾಡುತ್ತಿತ್ತೆ?
   - ಹಾಡು ಕೇಳುವಾಗ ಹೆಚ್ಚು ಉತ್ಸಾಹವೆನಿಸಿತೆ? ಹೀಗೇಕೆ ಆಯಿತು?
2. ವಿದ್ಯಾರ್ಥಿಗಳಿಗೆ ಪ್ರತಿಯೊಂದು ಪ್ರಶ್ನೆಯನ್ನು ಓದಿ ಹೇಳಿರಿ. ಅಹುದು/ಇಲ್ಲಎಂಬುದನ್ನುಕೈ ಎತ್ತಿದರ್ಶಿಸಲು ಹೇಳಿರಿ. ಪ್ರಶ್ನೆಯಲ್ಲಿಯ ಎಲ್ಲ ಕೃತಿಗಳನ್ನು ನಿಶ್ಚಿತ ಪಡಿಸಿ ಮಾಡಿದರೋ ಇಲ್ಲವೇ ಅವರಿಗೆ ತಿಳಿಯದೇ ಆದುವೊ ಎಂಬುದರ ವಿಚಾರ ಮಾಡಲು ಹೇಳಿರಿ.



ನೀವು ಸಂತೋಷದಿಂದ ಇರುವಾಗ ಯಾವುದಾದರೊಂದು ಹಾಡು ಗುಣಗುಣಿಸಬೇಕು ಇಲ್ಲವೆ ನೃತ್ಯ ಮಾಡಬೇಕು ಎಂದು ಅನಿಸುವುದೆ ? ಅಹುದು/ಇಲ್ಲ



ಯಾರೊ ಒಬ್ಬರ ಬಗ್ಗೆ ಮಾತನಾಡುವಾಗ ಅವನ / ಅವಳ ನಕಲು ಮಾಡಬೇಕೆಂದು ಅನಿಸಿದೆಯೆ? ಅಹುದು/ಇಲ್ಲ



ಒಂದು ಘಟನೆಯ ಬಗ್ಗೆ ಬಣ್ಣಿನೆ, ಅತಿಶಯೋಕ್ತಿ ಮಾಡಿ ಹೇಳುವ ಮೋಜನ್ನು ಅನುಭವಿಸಿರುವಿರಾ? ಅಹುದು/ಇಲ್ಲ

***ಗಮನಿಸಬೇಕಾದ ಅಂಶಗಳು:***

*ಪ್ರತಿಯೊಬ್ಬ ಮನುಷ್ಯನಿಗೆ ವಿಚಾರಗಳನ್ನು ವ್ಯಕ್ತ ಪಡಿಸುವ ಅವಶ್ಯಕತೆ ಇರುತ್ತದೆ. ಸ್ವಂತದ ವಿಚಾರ ಭಾವನೆ, ಹೇಳಿಕೆಗಳನ್ನು ಪ್ರಕಟ ಪಡಿಸುವ, ಮನದಾಳದ ಇಚ್ಛೆ ಇರುವುದು. ಇದೇ ಅಭಿವ್ಯಕ್ತಿ. ಇದು ಜೀವಿಸಲು ಶ್ವಾಸೋಚ್ಛ್ವಾಸ ಮಾಡುವಷ್ಟೇ ಮಹತ್ವದ್ದಾಗಿದೆ.ಕೆಲವುಸಲ ಈ ಅಭಿವ್ಯಕ್ತಿ ಶಬ್ದದಿಂದ ಹೊರಬಂದರೆ ಸಾಕಷ್ಟು ಸಲ ಇದಕ್ಕೆ ಕಲೆಯ ಆಧಾರ ತೆಗೆದುಕೊಳ್ಳಬೇಕಾಗುವುದು. ಪ್ರತಿಯೊಬ್ಬ ಮನುಷ್ಯನಲ್ಲಿ ಕಲೆಯು ಜನ್ಮಜಾತವಾಗಿರುವುದು. ಮಾನವನ ಅಸ್ತಿತ್ವದ ಪ್ರಾರಂಭದ ಕಾಲದಿಂದಲೂ ವಿವಿಧ ಪ್ರಕಾರದ ಕಲೆಗಳ ನಿರ್ಮಾಣ ಮಾಡುವ ಅವನ ಪ್ರಯತ್ನ ನಮಗೆ ಕಂಡುಬಂದಿದೆ . ಜಗತ್ತಿನ ಎಲ್ಲ ಸಂಸ್ಕೃತಿಗಳಲ್ಲಿ ಕಲೆಯ ಏಳಿಗೆಯಾದದ್ದು ಕಂಡುಬರುವುದು. ಬಹಳ ಜನರಿಗೆ ಕಲೆಯಲ್ಲಿ ರುಚಿ ಇರುತ್ತದೆ. ಕಲೆಯ ನಿರ್ಮಾಣ ಮಾಡುವುದು, ಅನುಭವಿಸುವುದು ಇಲ್ಲವೆ ಅದಕ್ಕಾಗಿ ಆರ್ಥಿಕ ನೆರವು ನೀಡುವುದು ಮುಂತಾದವುಗಳಿಂದ ಜನರ, ಕಲೆಯೊಂದಿಗೆ ಸಂಬಂಧ ಬರುವುದು.*

## 3. ಕಲೆ ಎಂದರೇನು?

ಕಲೆಯ ಅತ್ಯಂತ ಸುಲಭವಾದ ವ್ಯಾಖ್ಯೆಯನ್ನು ಪ್ರಸಿದ್ಧ ಚಿತ್ರಕಾರರಾದ ಶ್ರೀ ದೇವೀಪ್ರಸಾದರು ಹೀಗೆ ಮಾಡಿರುವರು. ''ಯಾವ ಕೃತಿ ಸೌಂದರ್ಯಪೂರ್ಣವಾಗಿದೆ ಹಾಗೂ ಮಾನವನಿಗಾಗಿ ಅರ್ಥಪೂರ್ಣವಾಗಿದೆ. ಇಂತಹ ಯಾವುದೇ ಕೃತಿ, ಅದು ಕಲೆ.'' ಎಂದರೆ ನೀವು ಏನು ಮಾಡುವಿರೋ ಅದು ಸೌಂದರ್ಯಪೂರ್ಣವಾಗಿ, ಮಾನವನಿಗಾಗಿ ಅರ್ಥಪೂರ್ಣವಾಗಿ ಇದ್ದರೆ ಅದು ಕಲೆ. ನಾವೆಲ್ಲರೂ ಒಂದು ರೀತಿಯಲ್ಲಿ ಕಲಾಕಾರರೇ. ನಮ್ಮಲ್ಲಿಯ ಕಲೆಯ ಹಾಗೂ ಕಲಾಕಾರನ ವಿಕಾಸ ಮಾಡುವ ಅವಶ್ಯಕತೆ ಮಾತ್ರ ಇದೆ.

## 4. ದೈನಂದಿನ ಜೀವನದಲ್ಲಿ ಅವಿತುಕೊಂಡಿರುವ ಕಲೆಯನ್ನು ಗುರುತಿಸುವುದು

ಕಲೆ ಇಲ್ಲದ ಜೀವನದಲ್ಲಿ ನೀರಸವಾದೀತು ಕಲೆಯಿಂದಾಗಿ ಜೀವನ ಸುಂದರ ಹಾಗೂ ಆನಂದಮಯ ತುಂಬಿದ್ದು ಆಗುವುದು. ನಮ್ಮ ಜೀವನ ಕಲೆಯಿಂದ ಸುತ್ತುವರೆದಿದೆ. ರಂಗೋಲಿ, ಚಲನಚಿತ್ರ, ಕಸೂತಿ, ಬಟ್ಟೆಗಳಲ್ಲಿಯ ಬಣ್ಣಗಳ ಹೊಂದಾಣಿಕೆ, ವಿವಿಧ ಕೇಶರಚನೆಗಳು ಮುಂತಾದ, ಕಲೆಯ ಅನೇಕ ಉದಾಹರಣೆಗಳು ನಮಗೆ ಕಂಡುಬರುವವು.

ವರ್ಗದಲ್ಲಿ ಮಕ್ಕಳ ಗುಂಪುಗಳನ್ನು ಮಾಡಿ, ಅವರ ದಿನಂಪ್ರತಿಯ ಜೀವನದಲ್ಲಿ ಕಲೆಯ ಉದಾಹರಣೆಗಳನ್ನು ಹುಡುಕಲು ಹೇಳಿರಿ. ಪ್ರತಿಯೊಂದು ಗುಂಪುತನ್ನ ಮಾಹಿತಿಯನ್ನು ವರ್ಗದಲ್ಲಿ ಸಾದರ ಪಡಿಸಲಿ. ಯಾವುದೊಂದು ವಿಷಯದ ಬಗ್ಗೆ ವ್ಯಂಗ್ಯಚಿತ್ರವನ್ನೂ ಬಿಡಿಸಲಿ.

ವ್ಯಂಗ್ಯಚಿತ್ರಗಳು, ದೈನಂದಿನ ಜೀವನದಲ್ಲಿ ನಾವು ನೋಡುವ ಒಂದು ಕಲೆ ಆಗಿದೆ. **ಯಾವ ಚಿತ್ರಗಳಲ್ಲಿ ಅತೀ ಕಡಿಮೆ ರೇಶೆಗಳು, ಕಲ್ಪನೆ, ವಿನೋದ ಬುದ್ಧಿ,** ನಿರ್ಮಾಣದ ಕ್ಷಮತೆ ಇರುವುದೋ ಅದು ವ್ಯಂಗ್ಯಚಿತ್ರ.







ದೈನಂದಿನ ಜೀವನದಲ್ಲಿ ನಿಮಗೆ ಕಲೆಯ ಇನ್ನೂ ಕೆಲವು ಉದಾಹರಣೆಗಳನ್ನು ಶೋಧಿಸಲು ಸಾಧ್ಯವೆ?

## 5. ಕಲೆಯ ಪ್ರಕಾರಗಳ ಪರಿಚಯ

ಸಂಗೀತ , ನೃತ್ಯ, ನಾಟ್ಯ, ಶಿಲ್ಪಕಲೆ ಮುಂತಾದ ಕಲೆಗಳಿಗೆ 'ಕಲೆಗಳ ಪ್ರಕಾರ' ಎನ್ನುವರು. ಪ್ರಾಚೀನ ಭಾರತದಲ್ಲಿ ಅರವತ್ತ ನಾಲ್ಕು ಕಲೆಗಳಲ್ಲಿ ಪ್ರಾವೀಣ್ಯ ಪಡೆಯುವುದು ಸುಸಂಸ್ಕೃತಿಯ ಅಡಿಗಲ್ಲು ಎಂದು ತಿಳಿಯಲಾಗುತ್ತಿತ್ತು. ಕಲಾ ಪ್ರಕಾರಗಳಲ್ಲಿ ಸಾಮಾನ್ಯವಾಗಿ ಮಾಡಲಾಗುವ ಎರಡು ಭಾಗಗಳ ವರ್ಗೀಕರಣವನ್ನು ತಿಳಿದುಕೊಳ್ಳುವಾ.

### ದೃಶ್ಯ ಕಲೆ:

ಇದರಲ್ಲಿ, ಚಿತ್ರಕಲೆ, ಶಿಲ್ಪಕಲೆ, ಅಚ್ಚೊತ್ತುವಕಲೆ, ಕಸೂತಿ, ಛಾಯಾಚಿತ್ರಣ (ಫೋಟೋಗ್ರಾಫಿ), ವ್ಹಿಡಿಓ ನಿರ್ಮಾಣ ಚಲನಚಿತ್ರ ನಿರ್ಮಾಣ, ಸಾಹಿತ್ಯ, ವಾಸ್ತುಕಲೆ ಮುಂತಾದವುಗಳ ಸಮಾವೇಶ ಆಗುವುದು.






### ಪ್ರಯೋಗಜೀವಿ ಕಲೆ:

ಈ ಕಲೆಗಳಲ್ಲಿ, ವ್ಯಕ್ತಿ ಇಲ್ಲವೆ ವ್ಯಕ್ತಿಗಳ ಸಮೂಹ ಯಾವಾಗ ಪ್ರೇಕ್ಷಕರೆದುರು ತಮ್ಮ ಕಲೆಯನ್ನು ಸಾದರ ಪಡೆಸುವರೋ ಆಗ ಅವುಗಳ ಸಮಾವೇಶ ಇದರಲ್ಲಿ ಆಗುವುದು. ಇಂತಹ ಕಲೆಗಳನ್ನು ಸಾದರ ಪಡೆಸಲು ಕಲಾಕಾರನು ಪ್ರತ್ಯಕ್ಷವಾಗಿ ಉಪಸ್ಥಿತರಾಗಿರಬೇಕಾಗುವುದು. ಇದರಲ್ಲಿ ನೃತ್ಯ, ಸಂಗೀತ ನಾಟಕ, ನಾಟ್ಯ ವಾಚನ, ಮೂಕಾಭಿನಯ, ದಾರದ ಗೊಂಬೆಯಾಟ, ಸರ್ಕಸ್ಸು, ಕಾವ್ಯವಾಚನ, ಭಾಷಣಕಲೆ ಮುಂತಾದವುಗಳ ಸಮಾವೇಶವಾಗುವುದು. ಈ ಪ್ರಕರಣದಲ್ಲಿ ನಾವು ದೃಶ್ಯ ಕಲೆಗಳ ವಿಷಯದಲ್ಲಿ ಹೆಚ್ಚು ತಿಳಿದುಕೊಳ್ಳುವಾ.

## 6. ನಿಸರ್ಗದಲ್ಲಿಯ ಕಲೆಯನ್ನು ಅನುಭವಿಸುವುದು:

ವಿದ್ಯಾರ್ಥಿಗಳ ಗುಂಪುಗಳನ್ನು ಮಾಡಿರಿ. ಶಾಲೆಹಾಗೂ,. ಮನೆಯ ಪರಿಸರದಲ್ಲಿಯ ವೃಕ್ಷ, ಸಸಿ, ಹಣ್ಣುಗಳ ನಿರೀಕ್ಷಣೆ ಮಾಡಿರಿ. ಪ್ರತಿಯೊಂದು ಗುಂಪು ತಮಗೆ ಸಾಧ್ಯವಾದಷ್ಟು ಬಣ್ಣಗಳ ಹಾಗೂ ಛಾಯೆಗಳ ಎಲೆ, ಹೊವು ಹಣ್ಣುಗಳನ್ನು ಸಂಗ್ರಹ ಮಾಡಲಿ. ಅದರಲ್ಲಿಯ ಸುಮಾರು ಒಂದೇ ಬಣ್ಣದ ವಸ್ತುಗಳನ್ನು ಅಕ್ಕಪಕ್ಕದಲ್ಲಿಟ್ಟು ಚಿತ್ರದಲ್ಲಿ ತೋರಿಸಿದಂತೆ ಒಂದು ಬಣ್ಣದ ಚಕ್ರವನ್ನು ತಯಾರಿಸಿರಿ. ಪ್ರತಿಯೊಬ್ಬರ ಬಣ್ಣದ ಚಿತ್ರಗಳನ್ನು ನೋಡಲು ಸಮಯ ನೀಡಿರಿ.

**ಚರ್ಚಿಸಿರಿ:**

ಎಷ್ಟು ಬೇರೆ ಬೇರೆ ಬಣ್ಣದ ಛಾಯೆಗಳು ಸಿಕ್ಕವು? ಎಲೆಗಳ ಬಣ್ಣಗಳು ಹಾಗೂ ಋತುಗಳಲ್ಲಿ ಏನಾದರೂ ಸಂಬಂಧ ಕಂಡುಬಂದಿತೆ? ಎಲ್ಲ ಎಲೆಗಳ ವಾಸನೆ ಒಂದೇ ತರಹ ಇದೆಯೇ? ಎಲೆಗಳ ಸ್ಪರ್ಷ, ಆಕಾರ, ಹಾಗೂ ಅವುಗಳ ಮೇಲೆ ಇರುವ ನಕ್ಷಿ ಒಂದೆ ತರಹ ಇವೆಯೆ?

### ಬಣ್ಣದ ಚಕ್ರ





**ಬಣ್ಣಗಳ ಬೆಡಗು:** ನಿಸರ್ಗದಲ್ಲಿ ಯಾವ ಬಣ್ಣಗಳು ಕಂಡು ಬರುವವೋ ಅದರ ಮುಖ್ಯಕಾರಣ ಬೆಳಕು ಆಗಿದೆ. ಕಲೆಯ ದೃಷ್ಟಿಕೋನದ ಬಣ್ಣಗಳ ಮಾಹಿತಿ ತೆಗೆದುಕೊಳ್ಳುವುದು ಒಳ್ಳೆಯದು.



**ಮೊದಲನೆಯ ಶ್ರೇಣಿಯ ಬಣ್ಣಗಳು:** ಕೆಂಪು, ಹಳದಿ , ನೀಲಿ ಇವು ಪ್ರಾಥಮಿಕ ಇಲ್ಲವೆ ಮೊದಲನೆಯ ಶ್ರೇಣಿಯ ಬಣ್ಣಗಳಾಗಿವೆ. ಇವನ್ನು ಮೂಲ ಬಣ್ಣಗಳೊಂದೂ ಕರೆಯುವರು. ಕಾರಣ ಅವು ಬೇರೆಯಾವ ಬಣ್ಣಗಳನ್ನು ಸೇರಿಸಿ ಮಾಡಲು ಸಾಧ್ಯವಿಲ್ಲ.

**ದ್ವಿತೀಯ ಶ್ರೇಣಿಯ ಬಣ್ಣಗಳು:** ಎರಡು ಮೂಲ ಬಣ್ಣಗಳ ಮಿಶ್ರಣದಿಂದ ತಯಾರಾಗುವ ಎಂದರೆ ದ್ವಿತೀಯ ಶ್ರೇಣಿಯ ಬಣ್ಣಗಳು.

**ತೃತೀಯ ಶ್ರೇಣಿಯ ಬಣ್ಣಗಳು:** ಒಂದು ಮೂಲಬಣ್ಣ ಹಾಗೂ ಒಂದು ದ್ವಿತೀಯ ಶ್ರೇಣಿಯ ಬಣ್ಣಗಳ ಮಿಶ್ರಣದಿಂದ ತಯಾರಾದ ಬಣ್ಣ ತಯಾರಾಗುವದು.

ಎಲ್ಲ ಬಣ್ಣಗಳನ್ನು ಒಂದು ಚಿತ್ರದಲ್ಲಿ ಬಳಸಿದರೆ ಆ ಚಿತ್ರ ಒಂದಿಷ್ಟೂ ಚೆನ್ನಾಗಿ ಕಾಣಲಿಕ್ಕಿಲ್ಲ. ಅಲ್ಲಿ ಬಣ್ಣಗಳ ಗೊಂದಲ ವಾದದ್ದು ಕಂಡು ಬರುವುದು. ಸಂಗೀತದಲ್ಲಿ ಅನೇಕ ರಾಗಗಳಿವೆ. ಆ ರಾಗಗಳಲ್ಲಿ ವಿಶಿಷ್ಟ ಸ್ವರಗಳನ್ನಾರಿಸಿ ಉಪಯೋಗಿಸುವುದರಿಂದ ಅದರಲ್ಲಿ ಒಂದೇ ಸೂರು ಕೇಳಿಬರುತ್ತದೆ. ಚಿತ್ರ ಬಿಡಿಸುವಾಗಲೂ ಒಂದಕ್ಕೊಂದು ಹೊಂದಿಕೊಳ್ಳುವ ಬಣ್ಣಗಳ ಆಯ್ಕೆ ಮಾಡಿದರೆ ಚಿತ್ರ ಆಕರ್ಷಕವಾಗಿ ಕಂಡು ಬರುವುದು. ಯಾವುದೇ ಮೂಲಬಣ್ಣವನ್ನು ತೆಗೆದುಕೊಂಡರೆ ಪ್ರಾಥಮಿಕ ಬಣ್ಣಗಳ ಘಟಕಗಳಿಂದ ತಯಾರಾದ ದ್ವಿತೀಯ ಬಣ್ಣಗಳು ಅದಕ್ಕೆ ಸಂಬಂಧಿಸಿದ ಬಣ್ಣಗಳಾಗಿವೆ. ಉದಾ– ಹಸಿರು ಹಾಗೂ ಕೇಸರಿ ಇವು ಹಳದಿಗೆ ಸಂಬಂಧಪಟ್ಟ ಬಣ್ಣಗಳಾಗಿವೆ. ಕೇಸರಿ ಹಾಗೂ ನೇರಳೆ ಇವು ಕೆಂಪು ಬಣ್ಣಕ್ಕೆ ಸಂಬಂಧಪಟ್ಟ, ಹಸಿರು ಹಾಗೂ ನೇರಗಳೆಗಳು ನೀಲಿಗೆ ಸಂಬಂಧಪಟ್ಟು ಬಣ್ಣಗಳಾಗಿವೆ. ಈ ಬಣ್ಣಗಳ ಬೆರಕೆಯಿಂದ ಸುಸಂವಾದ ಸಾಧ್ಯವಾಗುತ್ತದೆ.

**ನೈಸರ್ಗಿಕ ಬಣ್ಣಗಳನ್ನು ತಯಾರಿ**



ಪರಿಸರದಲ್ಲಿಯ ಅನೇಕ ತರಕಾರಿ, ಹಣ್ಣು, ಹೂವು ಎಲೆ ಇವುಗಳಿಂದ ಬಣ್ಣಗಳನ್ನು ತಯಾರಿಸಬಹುದು. ಉದಾ– ಬೀಟಗಡ್ಡೆಯಿಂದ ಕೆಂಪು ಬಣ್ಣ, ಪಾಲಕದಿಂದ ಹಸಿರು. ಅರಿಷಿಣದಿಂದ ಹಳದಿ ಮುಂತಾದವು ನಿಮ್ಮ ಪರಿಸರದಲ್ಲಿಯ ನೈಸರ್ಗಿಕ ಸಾಧನಗಳಿಂದ ಆದಷ್ಟು ಬಣ್ಣಗಳನ್ನು ತಯಾರಿಸಿರಿ.

**ಕಲುಗಳಲ್ಲಿ ವಿವಿಧ ಆಕಾರಗಳನ್ನು ಕಾಣಬಹುದು.**



ವಿದ್ಯಾರ್ಥಿಗಳಿಗೆ ಪರಿಸರದಿಂದ ವಿವಿಧ ಆಕಾರಗಳ ಕಲ್ಲುಗಳನ್ನು ಸೇರಿಸಲು ಹೇಳಿರಿ. ಅವರು ತಮ್ಮ ಕಲ್ಪನಾಶಕ್ತಿಯನ್ನು ಉಪಯೋಗಿಸಿ ಆ ಕಲ್ಲುಗಳಲ್ಲಿ ಯಾವುದೇ ವಸ್ತು ಇಲ್ಲವೆ ಪ್ರಾಣಿ ಆಕಾರ ಕಂಡು ಬರುವುದೇ ಎಂಬುದನ್ನು ಅವರು ತಮ್ಮ ಕಲ್ಪನಾ ಶಕ್ತಿಗೆ ಒತ್ತುಕೊಟ್ಟು ನೋಡುವಂತೆ ಹೇಳಿರಿ. ಆ ಆಕಾರ ಸ್ಪಷ್ಟವಾಗಿ ಕಾಣುವಂತೆ ಮಾಡಲು ಅದಕ್ಕೆ ಬಣ್ಣ ಕೊಡಲು ಹೇಳಿರಿ. ಯಾವುದೇ ಪ್ರಕಾರದ ಬಣ್ಣವನ್ನು ಬಳಸಬಹುದು.

*ಸಾವಿರಾರು ವರ್ಷಗಳಿಂದ ಮಾನವನು ನಿಸರ್ಗದಲ್ಲಿಯ ಬಣ್ಣ, ಆಕಾರ, ಧ್ವನಿ ಹಾಗೂ ಬದಲಾಯಿಸುವ ಋತುಗಳಿಂದ ಪ್ರೇರಣೆ ಪಡೆಯುತ್ತ ಬಂದಿರುವನು. ನಾವು ನಿಸರ್ಗದ ಸನ್ನಿಧಿಯಲ್ಲಿ ಹೋದಂತೆ, ನಿಸರ್ಗದೊಂದಿಗೆ ಹತ್ತಿರದ ಸಂಬಂಧ ಬೆಳೆಸುವೆವು. ಆದರಿಂದಲೇ ನಮಗೆ ನಿಸರ್ಗದ ಸೌಂದರ್ಯದ ಸಾಕ್ಷಾತ್ಕಾರವಾಗುವುದು ಮತ್ತು ನಮ್ಮಲ್ಲಿ ಸೌಂದರ್ಯದೃಷ್ಟಿ ವಿಕಸಿತವಾಗುವುದು. ಇದೇ ಸೌಂದರ್ಯ ದೃಷ್ಟಿ ನಂತರ ನಮ್ಮ ಕಲೆಯಲ್ಲೂ ಪ್ರಕಟಿತವಾಗುವುದು. ಕಲೆಯನ್ನು ನಿರ್ಮಾಣ ಮಾಡಲು ಸರ್ವಪ್ರಥಮ ನಾವು ನಿಸರ್ಗದ ನಿರೀಕ್ಷಣೆ ಮಾಡಿ ಅದರಿಂದ ಕಲಿಯಬೇಕು.*

## 7. ಸ್ವಲ್ಪ ಕಲ್ಪನೆ ಮಾಡೋಣ

### ಕೈಕಾಲುಗಳ ಅಚ್ಚುಗಳಿಂದ ಚಿತ್ರ



ಸ್ವಂತದ ಕೈಕಾಲುಗಳ ಅಚ್ಚುಗಳನ್ನು ಉಪಯೋಗಿಸಿ, ಅದರಲ್ಲಿಂದ ಒಂದು ಪ್ರಾಣಿ, ಪಕ್ಷಿಗಳ ಇಲ್ಲವೆ ವಸ್ತುವಿನ ಚಿತ್ರ ತಯಾರಿಸಿರಿ. ಒಬ್ಬರಿನ್ನೊಬ್ಬರ ಚಿತ್ರಗಳನ್ನು ತಿಳಿದುಕೊಳ್ಳಿರಿ.

### ಶಿಲ್ಪಕಲೆ



ಖಡು, ಸಾಬಣ, ಬಣ್ಣದಬಳವ (ಕ್ರೆ ಆನ್) ಗಳಮೇಲೆ ಕರ್ಕಟಕ ಇಲ್ಲವೆ ಕತ್ತಿರಿ ಉಪಯೋಗಿಸಿ ಕೊರೆದು ನಕ್ಷೆ ತಯಾರಿಸಿರಿ. ಸ್ವತಃದ ಕಲ್ಪನೆಯಿಂದಲೂ ನಕ್ಷೆ ತಯಾರಿಸಿರಿ. ಮಣ್ಣಿನಿಂದ ವಿವಿಧ ಪ್ರಕಾರದ ವಸ್ತು, ಆಟಿಗೆ, ಹಣ್ಣು, ಪಾತ್ರೆ ಮುಂತಾದವುಗಳನ್ನು ಮಾಡುವುದೂ ಶಿಲ್ಪಕಲೆಯಾಗಿದೆ.

### ಕೊರೆದ ನಕ್ಷೆಯ ಕೆಲಸ:

ಯಾವ ರೀತಿ ಖಡು ಹಾಗೂ ಸಾಬೂನು ಇಲ್ಲವೆ ಬಣ್ಣದ ಬಳಪದ ಮೇಲೆ ಕೊರೆದ ನಕ್ಷೆಯ ಕೆಲಸ ಮಾಡಿದಿರಿ, ಅದೇ ರೀತಿ ಭಾರತದ ವಿವಿಧ ಪ್ರಾರ್ಥನೆಯ ಸ್ಥಳಗಳಲ್ಲಿ ಕೊರೆದ ನಕ್ಷೆ ಕೆಲಸ ಮಾಡಿದುದು ಕಂಡು ಬರುತ್ತದೆ. ಸಾಧ್ಯವಾದಷ್ಟು ನಿಮ್ಮ ಪರಿಸರದಲ್ಲಿ ಇಂತಹ ನಕ್ಷೆ ಮಾಡಿರುವ ಒಂದು ಕಟ್ಟಡಕ್ಕೆ ಭೇಟಿನೀಡಿ ಅದರ ನಿರೀಕ್ಷಣೆ ಮಾಡಿರಿ.



ಸೂರ್ಯಮಂದಿರ ಕೋಣಾರ್ಕ



ಜೈನ ಮಂದಿರ



ತಾಜಮಹಲ



ಸುವರ್ಣಮಂದಿರ, ಅಮೃತಸರ



ಚರ್ಚ

## 8. ವಿವಿಧ ದೃಶ್ಯ ಕಲೆ:



ದ್ವಿಮಿತೀಯ ಕಲೆ

ತೈಲಚಿತ್ರ/ಚಾರಕೋಲ ಅಕ್ರೈಲಿಕ್/ ಪೆನ್ಸಿಲ ಕ್ರೆಓನದಿಂದ ತೆಗೆದ ಚಿತ್ರ, ಗಾಜಿನ ಮೇಲೆ ತೆಗೆದ ಚಿತ್ರ, ಫೋಟೋ, ಪೋಸ್ಟರ, ವ್ಯಂಗ್ಯಚಿತ್ರ ಮೇಂದಿ, ರಂಗೋಲಿ ನೀರಿನ ಬಣ್ಣಗಳನ್ನು ಉಪಯೋಗಿಸಿ ತೆಗೆದ ಚಿತ್ರಗಳು.



ಇಲೆಕ್ಟ್ರಾನಿಕ್ ಕಲೆ

ಇಲೆಕ್ಟ್ರಾನಿಕ್ ಕಲೆ ಗಣಕ ಯಂತ್ರ ಉಪಯೋಗಿಸಿ ತೆಗೆದ ಚಿತ್ರ ವ್ಹಿಡಿಓ, ಫೋಟೋ ಪೋಸ್ಟರ ನಿರ್ಮಾಣ ವ್ಯಂಗ್ಯಚಿತ್ರಗಳನ್ನು ತೆಗೆಯುವುದು

ಮಕ್ಕಳ ಗುಂಪು ಮಾಡಿರಿ. ಕೊಟ್ಟು ಕಲೆಗಳ ಪ್ರಕಾರಗಳಿಂದ ಒಂದು ವಿಶಿಷ್ಟ ಕಲೆ ಆರಿಸಿ ಅದರಬಗೆಗೆ ಹೆಚ್ಚಿನ ಮಾಹಿತಿ ಹುಡುಕಿ ವರ್ಗದಲ್ಲಿ ಅದನ್ನು ಸಾದರ ಪಡಿಸಲು ಹೇಳಿರಿ.



ತ್ರಿಮಿತೀಯ ಕಲೆ

ಶಿಲ್ಪಕಲೆ, ಕಟ್ಟಿಗೆಯಲ್ಲಿಕೊರೆದ ಚಿತ್ರ, ಕಾಗದದಿಂದ ಮಾಡಿದ ವಸ್ತು, ಪ್ರಾಣಿಗಳನ್ನು ತಯಾರಿಸುವುದು, ರಂಗಮಂಚ ವ್ಯವಸ್ಥೆ, ಕಸೂತಿ, ಹೆಣಿಕೆ, ಹೋಲಿಗೆ

## 9. ದೃಶ್ಯಕಲೆಯಲ್ಲಿಯ ಐದು ಮೂಲಭೂತ ಘಟಕಗಳು:

ಯಾವುದೇ ದೃಶ್ಯಕಲೆ,ದ್ವಿಮಿತಿ ಅಥವಾ ತ್ರಿಮಿತಿಯಲ್ಲಿದ್ದುಒಂದು ಅಥವಾ ಹೆಚ್ಚುಮೂಲಭೂತ ಘಟಕಗಳನ್ನು ಹೊಂದಿರುತ್ತದೆ. ಯಾವುದೇ ದೃಶ್ಯಕಲೆಯಲ್ಲಿ ಇಂತಹ ಐದು ಮೂಲಭೂತ ಘಟಕಗಳನ್ನುನೋಡಬಹುದು. ತಯಾರಾದ ಕಲಾವಿಷ್ಕಾರ ಸೌಂದರ್ಯವು ಕಲಾವಿದನು ಘಟಕಗಳನ್ನು ಹೇಗೆ ಉಪಯೋಗಿಸುವನು ಎಂಬುದರ ಮೇಲೆ ಅವಲಂಬಿಸಿರುವುದು.





**ರೇಷೆಗಳು:** ರೇಷೆಗಳನ್ನು ಬೇರೆ ಬೇರೆ ಉದ್ದೇಶಗಳ ಪೊರೈಕೆಗಾಗಿ ಉಪಯೋಗಿಸಲ್ಪಡುವವು. ಉದಾ- ಯಾವುದೊಂದು ಶಬ್ದ ಶಬ್ದಸಮೂಹದ ಮೇಲೆ ಒತ್ತು ಕೊಡಲು, ನಕ್ಷೆ ತಯಾರಿಸಲು, ಆಕಾರ ತಯಾರಿಸಲು. ರೇಷೆಗಳ ವಿಶಿಷ್ಟ ರಚನೆಯಿಂದ ಚಿತ್ರದಲ್ಲಿ ಆಳದ, ಅಂತರದ ಆಭಾಸ ನಿರ್ಮಾಣವಾಗುವುದು ಉದಾ- ಕ್ಷಿತಿಜ ರೇಷೆಯಲ್ಲಿ ಒಂದೇ ಬಿಂದುವಿನಿಂದ ಸಿಗುವ ರೇಷೆಗಳು ರೈಲು ಹಳಿ.


**ಆಕಾರ:** ಚಿತ್ರದಲ್ಲಿಯ ಯಾವುದೇ ಒಂದು ಕ್ಷೇತ್ರದ ನಿಶ್ಚಿತವಾದ ವ್ಯಾಪ್ತಿ ಎಂದರೇನೇ ಆಕಾರ ದೃಶ್ಯಕಲೆಯಲ್ಲಿ ಮೂರು ಪ್ರಕಾರದ ಆಕಾರಗಳನ್ನು ಬಳಸುವರು. 1 ಭೌಮಿತಿಕ ಆಕಾರ (ವರ್ತುಳ, ಚೌಕೋನ, ತ್ರಿಕೋನ ಇತ್ಯಾದಿ) 2. ನೈಸರ್ಗಿಕ ಆಕಾರ (ಎಲೆ, ಹೊವು, ಮನುಷ್ಯ ಇತ್ಯಾದಿ) 3. ಅಮೂರ್ತ ಆಕಾರ (ಚಿನ್ಹೆ, ಪ್ರತೀಕ ಇತ್ಯಾದಿ) ವಿವಿಧ ಆಕಾರಗಳ ಉಪಯೋಗ ಮಾಡಿಕೊಂಡು ಕಲಾವಿಷ್ಕಾರದಲ್ಲಿಸೌಂದರ್ಯ ಹಾಗೂ ಅರ್ಥ ನಿರ್ಮಾಣ ಮಾಡಲಾಗುವುದು.



**ಬಣ್ಣ :** ಬಣ್ಣಗಳ ಉಪಯೋಗ ಸರಿಯಾಗಿ ಮಾಡಿದರೆ ಕಲಾವಿಷ್ಕಾರ ಹೆಚ್ಚು ಸೇರುತ್ತದೆ, ಅದರಲ್ಲಿ ಆಸಕ್ತಿ ನಿರ್ಮಾಣ ವಾಗುತ್ತದೆ, ನೋಡುವವರ ಭಾವನೆಗಳಿಗೆ ಆಕರ್ಷಣೆ ನಿರ್ಮಾಣ ಮಾಡಿದಂತೆ ಆಗುತ್ತದೆ. ಕೆಲವು ವಿಶಿಷ್ಠ ಭಾಗಗಳು ಸ್ವಲ್ಪವಾಗಿ ಅಧೋರೇಖಿತವಾಗುವವು.



**ಛಾಯಾಭೇದ:** ನೆರಳು ಬೆಳಕಿನ ವಿವಿಧ ಶ್ರೇಣಿಗಳೆಂದರೆ ಛಾಯಾಭೇದ.ಯಾವುದೊಂದು ವಸ್ತುವಿನ ಮೇಲೆ ಪ್ರಕಾಶಬಿದ್ದರೆ, ಆ ಪ್ರಕಾಶದ ಹೆಚ್ಚು ಕಡಿಮೆ, ಪರಿಣಾಮದಿಂದ ಅದರ ಛಾಯೆಯ ಪ್ರಮಾಣ ಹೆಚ್ಚು ಕಡಿಮೆ ಆಗುವುದು ಹಾಗೂ ಛಾಯಾ ಭೇಧಗಳಿಂದ ವಸ್ತುವಿನ ಘಟನೆಯ ಅರಿವು ಆಗುವುದು. ವಾಸ್ತವವಾದಿ ಚಿತ್ರದಲ್ಲಿಈ ಪ್ರಕಾರದ ವಿವಿಧ ಛಾಯಾಭೇದಗಗಳನ್ನುನಮಗೆ ತೋರಿಸಬೇಕಾಗುವುದು.



**ಗುಣಮಟ್ಟ :** ಒಂದು ವಸ್ತುವಿನ ಸ್ಪರ್ಷಮಾಡಿದರೆಹೇಗೆ ಅನಿಸುವುದೊ ಅದಕ್ಕೆ ಗುಣಮಟ್ಟಎನ್ನುವರು. ಸ್ಪರ್ಷಗಳು ಮೃದು, ಒರಟು, ಚೂಪು ಮುಂತಾದ ಗುಣಮಟ್ಟಗಳು ಇರುವವು. ಆ ಗುಣಮಟ್ಟವನ್ನು ಕಲಾವಿದನಿಗೆ ತನ್ನ ಕಲಾವಿಷ್ಕಾರದಲ್ಲಿ ಇದ್ದಹಾಗೆಯೇ ತೋರಿಸಲು ಸಾಧ್ಯವಾದರೆ ಹೆಚ್ಚು ಆಸಕ್ತಿ ನಿರ್ಮಾಣವಾಗುವುದು, ಆ ಕಲಾವಿಷ್ಕಾರವೂ ಜೀವಂತ ವೆನಿಸುವುದು.

**ಸ್ಥಿರಚಿತ್ರ :** ಮುಖ್ಯವಾಗಿ ನಿರ್ಜಿವ ವಸ್ತುಗಳ ರಚನೆಯ ಚಿತ್ರವೇ ಸ್ಥಿರಚಿತ್ರ. ವಿವಿಧ ಸ್ಥಿರಚಿತ್ರಗಳಲ್ಲಿ ಮೇಲಿನ ಐದು ಘಟಕಗಳನ್ನು ಹೇಗೆ ಉಪಯೋಗಿಸುವರು ಎಂಬುದರ ನಿರೀಕ್ಷಣೆ ಮಾಡಿರಿ.





**ಸ್ಮರಣಚಿತ್ರ:** ತಮ್ಮ ಅನುಭವಗಳಿಂದ ಚಿತ್ರಿಸಿದ ಪ್ರಸಂಗಳಿಗೆ, ದೃಶ್ಯಗಳಿಗೆ ಸ್ಮರಣಚಿತ್ರಗಳೆನ್ನುವರು ವಿವಿಧ ಸ್ಮರಣಚಿತ್ರಗಳಲ್ಲಿ ಮೇಲಿನ ಐದು ಘಟಕಗಳ ಉಪಯೋಗ ಹೇಗೆ ಮಾಡಲಾಗಿದೆ ಎಂಬುದರ ನಿರೀಕ್ಷಣೆ ಮಾಡಿರಿ.

ವಿದ್ಯಾರ್ಥಿಗಳಿಗೆ ಒಂದು ಸ್ಥಿರಚಿತ್ರ ಹಾಗೂ ಒಂದು ಸ್ಮರಣಚಿತ್ರ ಬಿಡಿಸಲುಹೇಳಿರಿ.

## 11. ಬನ್ನಿರಿ ಕಲಿಯುವಾ:

### ಅಕ್ಷರ ಲೇಖನ

ದೇವನಾಗರಿ ಹಾಗೂ ರೋಮನ್ ಅಕ್ಷರ ಲಿಪಿಯಲ್ಲಿ ಎಲ್ಲ ಅಕ್ಷರಗಳು ವರ್ತುಳ, ಅರ್ಧ ವರ್ತುಳ, ತ್ರಿಕೋನ, ಚೌಕೋನ ಹಾಗೂ ಸರಳ ರೇಷೆಗಳನ್ನಾಧರಿಸಿವೆ.



(1) ಬ್ರಶ್ (2) ಕಟ್ನಿಬ್

(3) ಬೋರು (ದಂಟು) (4) ಸ್ಕೆಚ್‌ಪೆನ್

(5) ಕಟ್‌ಸ್ಕೆಚ್‌ಪೆನ್ (6) ಮಾರ್ಕರ್ಸ್

(7) ಪ್ಲೆಟ್‌ಬ್ರಶ್ ಮುಂತಾದವು

ವಿವಿಧ ಸಾಧನಗಳನ್ನು ಬಳಸಿಅಕ್ಷರಗಳಿಗೆ ಹೇಗೆ ಬೇರೆ ಬೇರೆ ತಿರುವು ಸಿಗುವುದು ಎಂಬುದನ್ನು ಕೆಳಗೆ ನೋಡಬಹುದು.


| ಬಾಲ ಭಾರತಿ | ಬಾಲ ಭಾರತಿ | ಬಾಲ ಭಾರತಿ | ಬಾಲ ಭಾರತಿ |
|---|---|---|---|
| (1) ಬ್ರಶ್ | (2) ಕಟ್ಸ್‌ನಿಬ್ | (3) ಬೋರು (ದಂಟು) | (4) ಸ್ಕೆಚ್ ಪೆನ್ನು |
| ಬಾಲ ಭಾರತಿ | ಬಾಲ ಭಾರತಿ | ಬಾಲ ಭಾರತಿ | |
| (5) ಕಟ್ ಸ್ಕೆಚ್ ಪೆನ್ | (6) ಮಾರ್ಕರ್ಸ್ | (7) ಫ್ಲ್ಯಾಟ್‌ಬ್ರಶ್ | |


**ಅಕ್ಷರ ಬರೆಯುವ ರೂಢಿ ಮಾಡಿರಿ**

## ಭೂಮಿತಿಯ ನಕ್ಷೆ - ಕರ್ತವ್ಯ ಭೂಮಿತಿ

### ಕರ್ತವ್ಯ ಭೂಮಿತಿ (Plane Practical Geometry)

ಶಾಲೆಯ ಅಭ್ಯಾಸಕ್ರಮದಲ್ಲಿ, ಗಣಿತದಲ್ಲಿ ಭೂಮಿತಿಯ ರಚನೆಗಳ ಉಪಯೋಗವಾಗುತ್ತದೆ.ಅದರಂತೆಯೇ ಸಂಕಲ್ಪ ಚಿತ್ರಗಳಲ್ಲೂ ವಿವಿಧ ರಚನೆಗಳು, ಬಾಷ್ಯ ಆಕಾರ ಅದರಂತೆಯೇ ಪ್ರಮಾಣಬದ್ದತೆಸ್ಥೂಲನಕ್ಷೆ ಭೂಮಿತಿಯ ರಚನೆಗಳ ಉಪಯೋಗ ಮಾಡುವರು. ಸಂಕಲ್ಪ ಚಿತ್ರಗಳಲ್ಲೂ ವಿವಿಧ ರಚನೆ, ಬಾಹ್ಯ ಆಕಾರ ಅದರಂತೆ ಪ್ರಮಾಣಬದ್ಧ ಸ್ಥೂಲನಕ್ಷೆಗಾಗಿ ಸೂಕ್ಷ್ಮತೆಗಳನ್ನು ಅದರಂತೆಯೇ ಅಳತೆಯಲ್ಲಿಯಸೂಕ್ಷ್ಮತೆಗಳನ್ನುನಿರ್ಮಿಸಲೂ ಬರುವುದು.





ಗಣಿತ ಪುಸ್ತಕಗಳ ಆಧಾರ ಪಡೆದು ಭೂಮಿತಿಯ ವಿವಿಧ ರಚನೆಗಳನ್ನು ಹೇಗೆ ನಿರ್ಮಿಸಬಹುದು, ಅಂತೆಯೇ ವಿವಿಧ ಭೂಮಿತಿಯ ಆಕಾರಗಳನ್ನು ತಮ್ಮ ಸುತ್ತಮುತ್ತಲೂ ಎಲ್ಲಿ ನೋಡಲು ಸಿಗುವವು ಎಂಬುದರ ಚರ್ಚೆ ಮಾಡಿರಿ. ಹೆಚ್ಚಿನ ಮಾಹಿತಿಗಾಗಿ QR Code ದ ಉಪಯೋಗ ಮಾಡಿರಿ.

## 12. ಅಭಿವ್ಯಕ್ತಿಯಲ್ಲಿಯ ವೈವಿದ್ಯತೆ.

ಬೇರೆ ಬೇರೆ ಚಿತ್ರಕಾರರು ತೆಗೆದ ಚಿತ್ರಗಳನ್ನು ಕೆಳಗೆ ನೋಡಿರಿ. ಪ್ರತಿಯೊಂದು ಚಿತ್ರದಲ್ಲಿ ಚಿತ್ರಕಾರನು ಸೂರ್ಯೋದಯವನ್ನು ತೋರಿಸುವ ಪ್ರಯತ್ನಮಾಡಿರುವನು. ಪ್ರತಿಯೊಂದುಚಿತ್ರ ಭಿನ್ನವಾಗಿದೆ,ಪ್ರತಿಯೊಬ್ಬರ ಅಭಿವ್ಯಕ್ತಿಯಶೈಲಿ ಬೇರೆ ಬೇರೆ ಇದೆ. ಅವುಗಳಲ್ಲಿ ಸರಿ ಅಥವಾ ತಪ್ಪುಗಳಲ್ಲಿ ಪ್ರತಿಯೊಬ್ಬರ ಅಭಿವ್ಯಕ್ತಿ ಬಹಳ ವೈಯಕ್ತಿಕವಾಗಿರುತ್ತದೆ.ಹಾಗೂ ಆ ಕಲಾವಿಧನಿಗಾಗಿ ಅದು ಅರ್ಥಪೂರ್ಣವಾಗಿರುವುದು. **ಈಗ ಪ್ರತಿಯೊಬ್ಬರು ತಮ್ಮ ಕಲ್ಪನೆಗನುಸರಿಸಿ ಬೇಕಾದ ವಿಷಯದಲ್ಲಿ ತಮಗೆ ಇಷ್ಟವಾದ ಮಾಧ್ಯಮದ ಉಪಯೋಗಮಾಡಿ ಚಿತ್ರ ಬಿಡಿಸಬೇಕು.** ಒಬ್ಬರಿನ್ನೊಬ್ಬರಚಿತ್ರ ನೋಡಿರಿ. ಚಿತ್ರಗಳಬಗ್ಗೆ ಒಳ್ಳೆಯದು ಕೆಟ್ಟದ್ದುಎಂಬ ವಿಚಾರ ಮಾಡದೆ ಅದು ವೈಯಕ್ತಿಕಅಭಿವೃತ್ತಿ ಎಂದು ತಿಳಿಯಿರಿ.





## 13. ಕಲೆಯ ರಸಸ್ವಾದ

ನಿತ್ಯ ಜೀವನದ ಉದಾಹರಣೆ– ಯಾವುದೇ ಆಹಾರ ತಯಾರಿಸುವಾಗ ಬೇರೆ ಬೇರೆ ಪದಾರ್ಥಗಳನ್ನು ಹಾಕುವರು. ಆದರೆ ಪದಾರ್ಥದ ರುಚಿ ಹೇಗಿದೆ ಎಂಬುದನ್ನುನಮ್ಮ ತಾಯಿ/ತಂದೆ/ಹಾಟೆಲಿನಲ್ಲಿಯಅಡುಗೆಯವ,ಇವರಲ್ಲಿಯಾರು ಮಾಡಿರುವರು ಎಂಬುದರಮೇಲೆ ಅವಲಂಬಿಸಿರುವುದು. ಪ್ರತಿಯೊಬ್ಬರೂ ಅವೇ ಪದಾರ್ಥಗಳನ್ನು ಬಳಸುತ್ತಿದ್ದರೂ, ಅವುಗಳ ಪ್ರಮಾಣ ಹಾಗೂ ಅಡುಗೆ ಮಾಡುವ ಶೈಲಿಯಲ್ಲಿ ಭೇಧ ಇರುವುದರಿಂದ ತಯಾರಾದ ಪದಾರ್ಥದ ರುಚಿ, ಅದರ ಬಣ್ಣ ಬೇರೆ ಇರುವುದು.

ಅದರಂತೆಯೇ ದೃಶ್ಯ ಈಲೆಗಳಲ್ಲೂ ಕಲಾವಿದನು ಕಲೆಯ ಐದು ಮೂಲಭೂತ ಘಟಕಗಳನ್ನು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸಿ ಕಲಾವಿಷ್ಕಾರ ಮಾಡುವನು. ಆ ಮೂಲಭೂತ ಘಟಕಗಳನ್ನು ಹೇಗೆ ಉಪಯೋಗಿಸಿರುವರು ಹಾಗೂ ಆ ಕಲಾವಿಷ್ಕಾರದ ಸೌಂದರ್ಯವನ್ನು ಹೇಗೆ ಬೆಳೆಸಿದರು ಎಂಬುದನ್ನು ತಿಳಿಯುವುದು ಎಂದರೇನೇ ಕಲೆಯ ರಸಾಸ್ವಾದ ಸವಿಯಲು ಬರುವುದು.



## 14. ಜಗತ್ಪ್ರಸಿದ್ಧರಾದ ಕೆಲವು ಕಲಾವಿದರು:

ಜಗತ್ತಿನಲ್ಲಿ ಅನೇಕ ಕಲಾವಿದರು ಶ್ರೇಷ್ಠರಾಗಿದ್ದಾರೆ. ಅವರಲ್ಲಿ ಕೆಲವೇ ಜಗತ್ಪ್ರಸಿದ್ಧ ಕಲಾವಿದರ ಸಂಕ್ಷಿಪ್ತ ಪರಿಚಯವನ್ನು ನೋಡುವಾ.

### ರಾಜಾ ರವಿ ವರ್ಮಾ (1848-1906) :



ರಾಜಾ ರವಿ ವರ್ಮಾ ಇವರು ಪ್ರಸಿದ್ಧ ಭಾರತೀಯ ಚಿತ್ರಕಾರರಾಗಿದ್ದರು. ಅವರ ಜನ್ಮ ಕೇರಳದಲ್ಲಿ ಆಯಿತು. ಹಿಂದೂ ದೇವತೆಗಳ ಹಾಗೂ ಪುರಾಣದಲ್ಲಿಯ ಪ್ರಸಂಗಗಳ ಚಿತ್ರ ಬಿಡುಸುವುದರಲ್ಲಿ ಅವರು ಬಹಳ ಪ್ರಸಿದ್ಧರಾಗಿದ್ದರು.ಯುರೋಪದ ಶೈಲಿ ಹಾಗೂ ಭಾರತೀಯ ಸಂವೇದನೆಯ ಸುಂದರವಾದ ಸಂಗಮ ಅವರ ಚಿತ್ರದಲ್ಲಿ ಕಾಣಿಸುವುದು.



### ವಿನ್ಸೆಂಟ್ ವ್ಹನ್ ಗಾಗ್ (1853-1890) :

ಇವರು ಡಚ್ಚ ಚಿತ್ರಕಾರರಾಗಿದ್ದರು. ಸ್ಪಷ್ಟವಾದ ಬಣ್ಣ, ನಾಟ್ಯಪೂರ್ಣವಾದ/ಕಣ್ಣಿನಲ್ಲಿ ತುಂಬುವಂತಹ, ಬ್ರಶ್‌ದ ಅಡ್ಡತಿಡ್ಡಾದ ಗೆರೆಗಳು ಅವರ ಚಿತ್ರಗಳ ವೈಶಿಷ್ಟ್ಯವಾಗಿದೆ. ಮೇಲನ ಚಿತ್ರದಲ್ಲಿ ಈ ಎಲ್ಲ ವೈಶಿಷ್ಟ್ಯಗಳನ್ನು ನಾವು ನೋಡಬಹುದು.

### ಪಾಬ್ಲೊ ಪಿಕಾಸೋ (1881-1973)



ಪಿಕಾಸೋ ಇರುವ ಸ್ಪ್ಯಾನಿಶ್ ಚಿತ್ರಹಾಗೂ ಶಿಲ್ಪಕಾರರಾಗಿದ್ದರು. 20 ನೆಯ ಶತಮಾನದ ಶ್ರೇಷ್ಠ ಚಿತ್ರಕಾರರೆಂದು ಇವರು ಪ್ರಸಿದ್ಧರಾಗಿರುವರು. ಅವರು ಸ್ವತಃ ಒಂದು ಪ್ರತ್ಯೇಕ ಶೈಲಿಯ ನಿರ್ಮಾಣ ಮಾಡಿದರು ಅದಕ್ಕೆ 'ಕ್ಯುಬಿಝಮ್' ಎನ್ನುವರು. ಅವರ ಚಿತ್ರಗಳಲ್ಲಿ ವ್ಯಕ್ತಿ ಹಾಗೂ ವಸ್ತುಗಳ ರೇಖಾಚಿತ್ರಗಳನ್ನು ತುಂಡರಿಸಿ ಪುನಃ ಅವನ್ನು ವ್ಯಕ್ತಿಮಂಡಿಸಿ ಅಮೂರ್ತ ಆಕಾರವನ್ನಾಗಿ ಮಾಡಿದುದನ್ನು ನಾವು ನೋಡಬಹುದು.



### 'ಜಾರ್ಜಿಯಾ ಓ' ಕೀಫ್ (1887-1986) :

ಇವರು ಅಮೇರಿಕನ್ ಚಿತ್ರಕಾರರು. ಇವರು 20ನೆಯ ಶತಮಾನದ ಒಬ್ಬ ಮಹತ್ವದ ಮಹಿಳಾ ಚಿತ್ರಕಾರರೆಂದು ಗಣಿಸಲ್ಪಡುವರು. ಅವರ ಹೊಸತನದ ಕಲಾಕೃತಿಗಳಿಗಾಗಿ ಅವರು ಪ್ರಸಿದ್ಧರಾಗಿರುವರು.ಅವರ ಚಿತ್ರಗಳಲ್ಲಿಯ ಎದ್ದು ಕಾಣುವ ಹೂವು, ನಾಟ್ಯಮಯ ಕಟ್ಟಡಗಳು, ಕಣ್ಣಲ್ಲಿ ತುಂಬುವ ಭೂಪ್ರದೇಶ, ಮರಳುಗಾಡು ಮುಂತಾದ ಬಹಳ ಪ್ರಸಿದ್ಧವಾಗಿವೆ.

## ಜೆಮಿನಿ ರಾಯ : (1887-1972)



ಇವರು ಭಾರತದ ಚಿತ್ರಕಾರರು. 1995ರಲ್ಲಿ ಭಾರತ ಸರಕಾರವು ಅವರಿಗೆ ಪದ್ಮಭೂಷಣ ಪುರಸ್ಕಾರ ನೀಡಿ ಗೌರವಿಸಿತು. ಅವರು ಗುರುದೇವ ರವೀಂದ್ರನಾಥ ಟಾಗೋರರ ಹತ್ತಿರದ ಶಿಷ್ಯರಾಗಿದ್ದರು. ಭಾರತದಲ್ಲಿ ಆಧುನಿಕ ಚಿತ್ರಕಲೆಯ ವಿಕಾಸದಲ್ಲಿಅವರಕಲ್ಪಕತೆಹಾಗೂನವನಿರ್ಮಾಣಮಹತ್ವದಪಾತ್ರನಿರ್ವಹಿಸಿದವು

## ಅಮೃತಾ ಶೇರಗಿಲ್: (1913-1941)



ಭಾರತದಲ್ಲಿ ಆಗಿಹೋದ ಸರ್ವಾಧಿಕ ಪ್ರತಿಭೆಯುಳ್ಳ ಚಿತ್ರಕಾರರಲ್ಲಿ ಇವರು ಒಬ್ಬರು. 28 ವರ್ಷಗಳಷ್ಟು ಕಡಿಮೆ ಆಯುಷ್ಯದಲ್ಲಿ ಅವರು ಭಾರತದ ಚಿತ್ರಕಲೆಯಲ್ಲಿ ತಮ್ಮ ವಿಶಿಷ್ಠ ಶೈಲಿಯನ್ನು ಅಚ್ಚೊತ್ತಿದವರಾದರು. ಅವರ ಚಿತ್ರಗಳಲ್ಲಿ ನಮಗೆ ಭಾರತೀಯ ಹಾಗೂ ಪಾಶ್ಚಾತ್ಯ ಶೈಲಿಗಳ ಅಪೂರ್ವ ಮಿಲನ ಕಂಡು ಬರುವುದು. ಆದುದರಿಂದ ಅವರ ಚಿತ್ರಗಳು ಭಾರತೀಯ ಭೂಮಿಯಲ್ಲಿಯೂ ಬೇರೆ ತನವನ್ನು ತೋರಿಸುವವು.

## ಕೆ. ಜಿ ಸುಬ್ರಮಣ್ಯಮ್: (1924-2016)



ಈ ಭಾರತೀಯ ಚಿತ್ರಕಾರರನ್ನು ಸರಕಾರವು 2012ರಲ್ಲಿ ಪದ್ಮವಿಭೂಷಣ ಕೊಟ್ಟು ಗೌರವಿಸಿತು. ಇವರು ಅಷ್ಟಾವಧಾನ ಹೊಂದಿದ ವ್ಯಕ್ತಿಯಾಗಿದ್ದರು. ಚಿತ್ರಕಾರ, ಶಿಕ್ಷಕ, ಕಥಾಕಾರ, ಕವಿ, ವಸ್ತ್ರ ರಚನಾಕಾರರಾಗಿ ಅವರು ಎಲ್ಲ ಭೂಮಿಕೆಗಳಲ್ಲೂ ಶ್ರೇಷ್ಠರಾಗಿದ್ದರು. ಪರಂಪರೆಗೆ ಆಹ್ವಾನ ನೀಡಿ ಹಳೆಯ ಕಲ್ಪನೆಗಳಿಗೆ ವಿರೋಧ ಮಾಡುವಲ್ಲಿ ಅವರಿಗೆ ರುಚಿ ಇತ್ತು.




## ಆಬಾಲಾಲ್ ರಹಿಮಾನ್:

ಇವರು ದೃಷ್ಟಾವಂತ, ಪ್ರತಿಭೆಹೊಂದಿದ ಚಿತ್ರಕಾರರಾಗಿದ್ದರು. ಇವರು ಜನ್ಮ 1856 ರಿಂದ 1860ರ ಸುಮಾರಿನಲ್ಲಿ ಕೋಲ್ಹಾಪುರದ ಕಾಸಾರ ಓಣಿಯಲ್ಲಿ ಆಯಿತು. 1888ರಲ್ಲಿ ಅವರ ಚಿತ್ರಕ್ಕೆವ್ಹಾಯ್ಸರಾಯರಸುವರ್ಣ ಪದಕ ಸಿಕ್ಕಿತು. ಶಾಹೂ ಮಹಾರಾಜರು ಆಬಾಲಾಲ್ ಅವರ ಚಿತ್ರಗಳನ್ನುನೋಡಿ ಅವರನ್ನು ದರಬಾರಿನ ಚಿತ್ರಕಾರರನ್ನಾಗಿನೇಮಿಸಿಕಕೊಂಡರು. ಜಲರಂಗದ ಮೇಲೆ ಅವರಿಗೆ ಪೂರ್ಣ ಪ್ರಭುತ್ವ ಇತ್ತು. ರಾಜ ದರಬಾರದಲ್ಲಿದ್ದಾಗ ಅವರು ಪ್ರಾಣಿ, ಪಕ್ಷಿ, ಬೇಟೆಯ ದೃಶ್ಯಗಳು ಪೋರ್ಟ್ರೇಟ್ಸ್, ರಥಣಂದ ಸಾಗುವ ಮೆರವಣಿಗೆ ಮುಂತಾದವುಗಳ ಚಿತ್ರ ಬಿಡಿಸಿ ಸ್ವತಃದ ಪ್ರತಿಭೆ ತೇರಿಸಿಕೊಟ್ಟರು.

ನಿಸರ್ಗ ಚಿತ್ರಗಳು, ಪೆನ್ಸಿಲ್ ಸ್ಕೆಚಸ್, ಶೇಡಿಂಗ್, ಫಿಂಗರ ಪ್ರಿಂಟಿಂಗ್ ಮುಂತಾದ ವಿವಿಧ ತಂತ್ರ ಪದ್ಧತಿಗಗಳ ಉಪಯೋಗ ಮಾಡಿ ಅವರು ಚಿತ್ರಗಳ ನಿರ್ಮಾಣ ಮಾಡಿದರು.

## ಶಿಲ್ಪಕಾರ - ರಾವ್‌ಬಹದ್ದೂರ್ ಗಣಪತರಾವ್ ಮ್ಹಾತ್ರೆ (1876-1947)



ರಾವ್ ಬಹದ್ದೂರ್ ಗಣಪತರಾವ್ ಮ್ಹಾತ್ರೆ (1876ರಿಂದ 1947) ಮಹಾರಾಷ್ಟ್ರದ ಆಧುನಿಕ ಕಾಲದ ಪ್ರಸಿದ್ಧ ಶಿಲ್ಪಕಾರರು. ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಸೇರಿದರು. ಅವರ 'ಮಂದಿರ ಪಥ ಗಾಮಿನಿ' ಎಂಬ ಶಿಲ್ಪ ಬಹಳೇ ಪ್ರಸಿದ್ಧಿ ಪಡೆಯಿತು. ಮಂದಿರದತ್ತ ಹೋಗುತ್ತಿರುವ ಈ ಸ್ತ್ರೀಯ ಶಿಲ್ಪಾಕೃತಿಯ ಭಂಗಿ ಅಪ್ಪಟ ಭಾರತೀಯ (ಮಹಾರಾಷ್ಟ್ರ)ದ್ದು .ಅದರ ಮೇಲೆ ಒಂದಿಷ್ಟೂ ಬ್ರಿಟಿಷ್ ಕಲೆಯ ಪ್ರಭಾವವಿಲ್ಲ. ಆವಳು ಉಟ್ಟ ಒಂಭತ್ತು ಮೊಳದ ಸೀರೆಯ ಮಡಿಕೆಗಳಿಂದ ಅವಳ ಶರೀರದ ಸೌಷ್ಠವ ವ್ಯಕ್ತವಾಗುತ್ತದೆ.ಅವಳ ಕೇಶರಚನೆ ಒಂದು ಕಾಲಿನ ಮೇಲೆ ಭಾರಕೊಟ್ಟು, ಹಿಮ್ಮಡಿಯನ್ನು ಸ್ವಲ್ಪ ಎತ್ತಿದ ಮೊಣಕಾಲಲ್ಲ ಸ್ವಲ್ಪ ಮಣಿದ ಭಂಗಿ ಇವುಗಳಿಂದ ವ್ಯಕ್ತ ವಾಗುವ ಅವಳ ಮಂದಿರದತ್ತ ಹೋಗುತ್ತಿರುವ ಅವಿರ್ಭಾವ ಅತ್ಯಂತ ಲಯಬದ್ಧವಾಗಿದೆ. ಅಲ್ಲದೆ ಅವಳ ಕೈಗಳು, ಬೆರಳು ಕಲಾತ್ಮಕವಾದ ಹಾಗೂ ನಾಜೂಕಾದ ಕಾಲುಗಳ ಶಿಲ್ಪವನ್ನು ಮ್ಹಾತ್ರೆಯವರು ಬಹಳೇ ಕೌಶಲ್ಯದಿಂದ ಕಟಿದಿದ್ದಾರೆ.

ಅವರು ಶಿಲ್ಪ ನಿರ್ಮಿತಿಗಾಗಿ ಬೇರೆ ಬೇರೆ ಮಾಧ್ಯಮಗಳ ಮೇಲೆ ತೈಯಾಡಿಸಿದರು. ಆದರೆ ಸಂಗಮರವರಿಯ ಮೇಲೆ ಅವರ ಹಿಡಿತ ಸರ್ವೋತ್ಕೃಷ್ಠಎಂಬುದು ಸ್ಪಷ್ಟವಾಗುತ್ತದೆ.ಆಧುನಿಕ ಭಾರತದ ಶಿಲ್ಪಕಲೆಯ ಇತಿಹಾಸದಲ್ಲಿ ಅವರದು ಮೇಲುಗೈ. ಪಶ್ಚಿಮದ ಶಿಲ್ಪಕಲೆಯ ವಾಸ್ತವವಾದಿ ಪದ್ದತಿಯನ್ನು ಅಭ್ಯಸಿಸಿ ಅದರ ಆವಿಷ್ಕಾರವನ್ನು ಸ್ವತಃದ ಶೈಲಿಯಲ್ಲಿ ವಿಶೇಷವಾದ ರೀತಿಯಲ್ಲಿ ಮಾಡಿರುವ ಆಧುನಿಕ ಶಿಲ್ಪಕಾರರು ಇವರು.

ಮೇಲಿನ ಯಾವುದೇ ಒಬ್ಬ ಕಲಾಕಾರನ್ನು ಆರಿಸಿ, ಅವರ ಸಾಕಷ್ಟು ಚಿತ್ರಗಳನ್ನು ನೋಡಿರಿ. ಅವರ ಚಿತ್ರಗಳಲ್ಲಿ ಅವರು ಚಿತ್ರಕಲೆಯ ಮೂಲಭೂತ ಘಟಕಗಳ ಉಪಯೋಗ ಹೇಗೆ ಮಾಡಿರುವರು ಎಂಬುದನ್ನು ಅಭ್ಯಸಿಸಿರಿ.

## 15. ಕೆಲವು ಭಾರತೀಯ ಜಾನಪದ ಕಲೆಗಳು:

ಜಾನಪದ ಕಲೆಗಳು ಎಂದರೆ ಜನರು ಕಲೆ. ಪ್ರಾಚೀನ ಕಾಲದಿಂದ ಚಿತ್ರ ಹಾಗೂ ಇತರ ಕಲೆಗಳನ್ನು ಒಂದು ತಲೆಯಾರಿನಿಂದ ಇನ್ನೊಂದು ತಲೆಮಾರಿಗೆ ಸಾಗಿಸಲಾಗುತ್ತಿತ್ತು ಇನ್ನೂ ಸಹ ದೇಶದ ವಿವಿಧ ಭಾಗಗಳಲ್ಲಿ ಇದು ನಡೆದು ಬರುತ್ತಿದೆ. ಪ್ರಾಚೀನಕಾಲದಲ್ಲಿ ಚಿತ್ರಗಳನ್ನು ತಯಾರಿಸಲು ಮಣ್ಣು, ಕೆಸರು, ಎಲೆ ಹಾಗೂ ಇದ್ದಲಿಯ ಉಪಯೋಗಮಾಡಿ ನೈಸರ್ಗಿಕ ಬಣ್ಣಗಳನ್ನು ತಯಾರಿಸುತ್ತಿದ್ದರು. ಈ ಬಣ್ಣಗಳಿಂದ ತೊಗಲು ಇಲ್ಲವೆ ಬಟ್ಟೆಗಳ ಮೇಲೆ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು. ಇದರಲ್ಲಿಯ ಕೆಲವು ವಿಶಿಷ್ಠ ಜನರ ಬಗ್ಗೆ ನಾವು ತಿಳಿದುಕೊಳ್ಳುವಾ.

### ಮಧುಬನಿ:



ಈ ಕಲೆಗೆ ಮಿಥಿಲಾ ಚಿತ್ರಕಲೆಯ ಶೈಲಿ ಎಂದೂ ಹೇಳುವರು, ಕಾರಣ ಇದರ ಉಗಮ ಜನಕರಾಜನ (ರಾಮಾಯಣದ ಸೀತೆಯ ತಂದೆ) ಮಿಥಿಲಾ (ಈಗ ನೇಪಾಳ ಹಾಗೂ ಬಿಹಾರದ ಕೆಲವು ಭಾಗ) ರಾಜ್ಯದಲ್ಲಿ ಆಯಿತು. ಹೆಚ್ಚಾಗಿ ಮಹಿಳೆಯರು ಈ ಚಿತ್ರಗಳನ್ನು ತಯಾರಿಸುವರು. ಇದರಲ್ಲಿ ಹೆಚ್ಚಾಗಿ ಭೂಮಿತಿಯ ಆಕಾರಗಳನ್ನು ಬಳಸುವರು. ಕಲೆಯ ಈ ಪ್ರಕಾರದ ಬಗ್ಗೆ ಯಾರಿಗೂ ಹೆಚ್ಚು ತಿಳಿದಿರಲಿಲ್ಲ. ಆದರೆ 1930ರಲ್ಲಿ ಬ್ರಿಟಿಷರಿಗೆ ಭೂಕಂಪಗ್ರಸ್ತ ಮನೆಯ ಭಾಗಗಳಲ್ಲಿ ಕೆಲವು ಮಧುಬನಿ ಚಿತ್ರಗಳು ದೊರೆತವು. ಅದರ ನಂತರ ಈ ಕಲೆ ಬೆಳಕಿಗೆ ಬಂದು ಪ್ರಸಿದ್ಧಿ ಪಡೆಯಿತು. ಸುಮಾರು ಚಿತ್ರಗಳಲ್ಲಿ ದೇವತೆ, ಎಲೆಗಳು ಹೂವು ಹಾಗೂ ಪ್ರಾಣಿಗಳು ಕಂಡುಬರುವವು.

**ವಾರಲಿ :**

ಕ್ರಿಸ್ತಶಕ ಪೂರ್ವ 2500ದಲ್ಲಿ ಪಶ್ಚಿಮ ಘಟ್ಟದಲ್ಲಿಯ ವಾರಲಿ ಬುಡಕಟ್ಟಿನಲ್ಲಿ ಈ ಕಲೆಯ ಉಗಮಾಯಿತೆಂದು ಹೇಳಲಾಗುವುದು. ಇದರಲ್ಲಿ ಪ್ರಮುಖವಾಗಿ ವರ್ತುಳ, ತ್ರಿಕೋನ, ಚೌರಸಗಳನ್ನು ಉಪಯೋಗಿಸಿ ವಿವಿಧ ಆಕಾರ, ಮಾನವ ಆಕೃತಿ, ಮೀನುಗಾರಿಕೆ ಭೇಟೆಗಾರಿಕೆ ಹಬ್ಬ-ಹರಿದಿನ,ನೃತ್ಯ ಮುಂತಾದ ದೈನಂದಿನ ಜೀವದದಲ್ಲಿಯ ಪ್ರಸಂಗಗಳ ಚಿತ್ರಗಳನ್ನು ಬಿಡಿಸುವರು. ಈ ಚಿತ್ರಗಳಲ್ಲಿಯ ಮಹತ್ವದ ವೈಶಿಷ್ಟ್ಯವಾದರೆ ಮಾನವ ಆಕೃತಿ. ಒಂದು ವರ್ತುಳ (0) ಎರಡು ತ್ರಿಕೋನಗಳಿಂದ ಈ ಆಕೃತಿ ತೆಗೆಯಲ್ಪಡುವುದು. ವಾರಲಿ ಕಲೆಯಲ್ಲಿದಟ್ಟಕೆಂಪು ಅಥವಾ ಇನ್ನಿತರದಟ್ಟ ಬಣ್ಣದ ಹಿನ್ನೆಲೆಯಲ್ಲಿಬಿಳಿ ಬಣ್ಣದಿಂದ ಚಿತ್ರ ಬಿಡಿಸುವರು.





**ಗೊಂಡ :** ಮಧ್ಯಪ್ರದೇಶದಲ್ಲಿಯಗೊಂಡ ಬುಡಕಟ್ಟಿನ ಶೈಲಿ ದೈನಂದಿನ ಜೀವನದಲ್ಲಿ ಬರುವ ನಿಸರ್ಗದ ಮಹತ್ವವನ್ನು ಈ ಶೈಲಿಯಚಿತ್ರಗಳಲ್ಲಿನೋಡಬಹುದು.ದಟ್ಟಹಾಗೂ ಕಣ್ಣುಸೆಳೆಯುವ ಪದ್ಧತಿಯ ರಂಗಸಂಗತಿ ಇರುವ ಈಶೈಲಿಯ ಚಿತ್ರಗಳಲ್ಲಿ ಹೂವೂ, ಹಣ್ಣು ಮರ, ಪ್ರಾಣಿ ಇವು ಹೆಚ್ಚಾಗಿ ಕಂಡು ಬರುವವು. ಇದ್ದಿಲು, ಸೆಗಣಿ, ಎಲೆಗಳು ಬಣ್ಣದ ಮಣ್ಣು ಇವುಗಳಿಂದ ಚಿತ್ರಗಳನ್ನು ಬಿಡಿಸುವರು. ಸಮೀಪದಿಂದ ನೋಡಿದರೆ ಈ ಚಿತ್ರಗಳು ಬಿಂದು ಹಾಗೂ ರೇಷೆಗಳಿಂದ ಮಾಡಿದ್ದು ಕಂಡುಬರುತ್ತದೆ. ಈಗ ಅಕ್ರೈಲಿಕ್‌ಬಣ್ಣಗಳನ್ನು ಉಪಯೋಗಿಸಿ ಈ ಶೈಲಿಯ ಚಿತ್ರಗಳನ್ನು ಅನೇಕ ಸ್ಥಳಗಳಲ್ಲಿ ತೆಗೆದದ್ದು ಕಂಡು ಬರುತ್ತದೆ.

**ತಂಜೋರ :**

ತಂಜೋರ ಇಲ್ಲವೆ ತಂಜಾವೂರ ಈ ಚಿತ್ರಶೈಲಿ1600 ನೆಯ ಇಸವಿಯಲ್ಲಿ ತಂಜಾವೂರದಲ್ಲಿ ಉದಯಕ್ಕೆ ಬಂದಿತು ತಂಜೊರ ಚಿತ್ರಕಲೆಯಲ್ಲಿ ಬಂಗಾರದ ತೆಳುವಾದ ತಗಡನ್ನು ಉಪಯೋಗಿಸುವ ವಾಡಿಕೆ ಇದ್ದುದರಿಂದ ಈ ಚಿತ್ರಗಳಲ್ಲಿ ಹೊಳಪು ಇರುವುದು. ಕಟ್ಟಿಗೆಯಲ್ಲಿ ತೆಗೆದ ಈ ಚಿತ್ರಗಳಲ್ಲಿ ದೇವಿ, ದೇವರ ಬಗ್ಗೆ ಇರುವ ಭಕ್ತಿ ಭಾವನೆ ಕಂಡುಬರುವುದು. ಈ ಶೈಲಿಯಲ್ಲಿ ಮರಾಠಾ, ದಬ್ಬನ ಹಾಗೂ ಯುರೋಪದ ಶೈಲಿಗಳ ಅದ್ವಿತೀಯವಾದ ಸಂಯೋಜನೆ ಇದೇ.





**ಕಲಮಕಾರಿ:**

ಕಲಮಕಾರಿ ಇದರ ಅರ್ಥವೆಂದರೆ ಪೆನ್ನಿನಿಂದ ಬಿಡಿಸಿದ ಚಿತ್ರ. ಇತ್ತೀಚಿಗೆ ಈ ಶೈಲಿಯ ಚಿತ್ರಗಳನ್ನು ಸೀರೆ ಹಾಗೂ ಇನ್ನಿತರ ಪಾರಂಪಾರಿಕ ಬಟ್ಟೆಗಳ ಮೇಲೆ ಉಪಯೋಗಿಸುವುದು ಕಂಡುಬರುತ್ತದೆ. ಇದರಲ್ಲೂ ಪ್ರಾಣಿ, ಪಕ್ಷಿ ಎಲೆ, ಹೂವುಗಳು ಹಾಗೂ ಮಹಾಭಾರತದಲ್ಲಿಯ ಪ್ರಸಂಗಗಳನ್ನು ಚಿತ್ರಿಸಿದ್ದುಕಂಡುಬರುತ್ತದೆ.

## 16. ಭಾರತೀಯ ಕಸೂತಿಯ ಕೆಲವು ಜನಪ್ರಿಯ ಪ್ರಕಾರಗಳು:

ಫುಲ್ಕಾರಿ



ಚಿಕನ್‌ಕಾರಿ



ಜರದೋಸಿ



ಕಾಶಿದಾಕಾರಿ



ರಾಜಸ್ಥಾನಿ ತೇಪೆಕೆಲಸ



## 17. ಕಲಾವಿದರೊಂದಿಗೆ ಸಂವಾದ:

- ನಿಮ್ಮ ಶಾಲೆ ಅಥವಾ ಮನೆಯ ಹತ್ತಿರ ಇರುವ ಯಾವುದೇ ಒಬ್ಬ ಕಲಾವಿದರ ಹೆಸರನ್ನು ನಿರ್ಧರಿಸಿರಿ. ಚಿತ್ರಕಲೆ, ಮಣ್ಣಿನಕೆಲಸ ಯಾವುದೇ ದೃಶ್ಯಕಲೆಗೆ ಸಂಭವಿಸಿದ ವ್ಯಕ್ತಿ ಆಗಿರಲಿ.
- ಗುಂಪಿನಲ್ಲಿ ಒಂದು ಪ್ರಶ್ನೆಗಳ ಪಟ್ಟಿ ತಯಾರಿಸಿರಿ ಮತ್ತು ಕಲಾವಿದರೆಂದು ಅವರ ಇಂದಿನವರೆಗಿನ ಪ್ರವಾಸದ ಬಗ್ಗೆ ಅವರೊಡನೆ ಮಾತನಾಡಿರಿ.
- ಇದರ ಒಂದು ವರದಿ ತಯಾರಿಸಿರಿ. ಸಾಧ್ಯವಾದರೆ ಅವರ ಕೆಲಸದ ಫೋಟೋಗಳನ್ನು (ಮಾತನಾಡುವಾಗಿನ) ಜೋಡಿಸಿರಿ.
- ಆ ಕಲಾವಿದನು ತನ್ನದೇ ಆದ ಒಂದು ಶೈಲಿ ನಿರ್ಮಾಣ ಮಾಡಿದ್ದರೆ ಅದನ್ನು ಅವರು ಮಾಡಿದ ಕೆಲಸದಿಂದ ಕಂಡುಬರುವುದೇ ಎಂಬುದನ್ನು ಶೋಧಿಸಿರಿ. ದೃಶ್ಯಕಲೆಯಲ್ಲಿಯ ಮೂಲಭೂತ ಘಟಕಗಳ ಉಪಯೋಗವನ್ನು ಅವರು ಹೇಗೆ ಮಾಡುವರು ಎಂಬುದರ ಬಗ್ಗೆ ಅವರೊಂದಿಗೆ ಚರ್ಚೆ ಮಾಡಿರಿ.



## 18. ಮಾನವ ಜೀವನದಲ್ಲಿ ಕಲೆಯ ಮಹತ್ವ

ಪ್ರಾರಂಭದಲ್ಲಿ ಚರ್ಚಿಸಿದಂತೆ ಅಭಿವ್ಯಕ್ತಿ ಇದು ಪತಿಯೊಬ್ಬನ ಅವಶ್ಯಕತೆ ಇದೆ. ಇಂದಿನ ತರುಣ-ತರುಣಿಯರ ಜೀವನದಲ್ಲಿ ಅಭಿವ್ಯಕ್ತಮಾಡುವ ಅವಕಾಶವಿದೆ ಹಾಗೂ ಅಭಿವ್ಯಕ್ತ ಮಾಡಲು ಹಕ್ಕಿನ ಸ್ಥಾನ ಸಿಗುವುದು ಅತ್ಯವಶ್ಯವಾಗಿದೆ.ತಮ್ಮ ಭಾವನೆ, ವಿಚಾರ, ಅನಿಸಿಕೆ, ಅನುಭವಗಳನ್ನುಮಂಡಿಸಲು, ಇನ್ನೊಬ್ಬರವರೆಗೆ ತಲುಪಿಸಲು, ಅದರಂತೆಯೇ ಇತಿಹಾಸದ ಸಂದರ್ಭಗಳನ್ನುಅರಿತುಕೊಂಡು, ತಮ್ಮ ಸುತ್ತಮುತ್ತಲುಘಟಿಸುವ ಪ್ರಸಂಗಗಳನ್ನು ಅರ್ಥ ಮಾಡಿಕೊಳ್ಳಲು ಈ ಕಲೆಯು ಒಂದು ಮಾಧ್ಯಮವಾಗಬಲ್ಲದು.ಕಲೆಯ ಮಹತ್ವ ತಿಳಿಸುವ ಕೆಲವು ಕಾರಣಗಳನ್ನು ಕೆಳಗೆ ಕೊಟ್ಟಿದೆ.

ಮೆದುಳಿನ ಸಂಶೋಧನೆಯಲ್ಲಿ ಕಂಡುಬಂದುದು ಏನೆಂದರೆ ಕಲೆಗಳಿಂದ ಪ್ರಶ್ನೆಬಿಡಿಸುವ, ವಿಶ್ಲೇಷಣೆ ಮಾಡುವ ಕೌಶಲ್ಯಗಳ ವಿಕಾಸವಾಗುವುದು. ಇದರಿಂದ ಶಾಲೆಯಲ್ಲಿ ಆಗುವ ಪ್ರಗತಿಯಲ್ಲಿ ಹೆಚ್ಚಳ ಆಗೇ ಆಗುವುದು. ನೌಕರಿ/ವ್ಯವಸಾಯಕ್ಕೆ ಬೇಕಾಗುವ ಕೌಶಲ್ಯಗಳ ಬೆಳವಣಿಗೆಯೂ ಆಗುತ್ತದೆ.

ಕಲೆಯಿಂದ ಬೌದ್ಧಿಕ ವಿಕಾಸವಾಗುವುದು ನಮ್ಮ ಸೌಂದರ್ಯದ ದೃಷ್ಟಿ, ಸೃಜನಶೀಲತೆ ಬೆಳೆಯುವುದು. ನಮ್ಮ ಕಲ್ಪನಾಶಕ್ತಿಯ ವಿಕಾಸ ಹೊಂದುವ ಅವಸರ ದೊರೆಯುವುದು.



ನಮಗಿಂತ ಭಿನ್ನರಾಗಿರುವವರ ಕಲೆಯೊಂದಿಗೆ ನಾವು ಎಷ್ಟು ಹೊಂದಿಕೊಳ್ಳುವೆವೋ, ಅಷ್ಟು ಅವರ ಸಂಸ್ಕೃತಿ, ಇತಿಹಾಸ, ಶ್ರದ್ಧೆ, ವಿಚಾರ ಪದ್ಧತಿಗಳೊಂದಿಗೆ ಹೊಂದಿಕೊಳ್ಳುವೆವು ಅದರಿಂದ ನಮ್ಮ ಮನಸ್ಸಿನಲ್ಲಿ ಅವರ ಬಗ್ಗೆ ಆದರ ತನ್ನತನದ ಭಾವನೆ ನಿರ್ಮಾಣವಾಗುತ್ತದೆ. ಇದರಿಂದ ನಮ್ಮಲ್ಲಿ ಸಹನಶೀಲತೆ ಹೆಚ್ಚುವುದು.

## ಮೌಲ್ಯಮಾಪನ

| ಭಾರಾಂಶ 10% | | | | |
|---|---|---|---|---|
| ಮಾನದಂಡ | ಬಹಳ ಚೆನ್ನಾಗಿ (ಉತ್ತಮ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಗುಣಗಳು |
| ಉಪಕ್ರಮದಲ್ಲಿಯ ಸಹಭಾಗ | ಸರ್ವ ಸ್ವಾಧ್ಯಾಯ/ ಕಾರ್ಯಶೀಲದಿಂದ್ದುಉತ್ಸಾಹದಿಂದ ಪೂರ್ಣ ಮಾಡುವುದು. ಪ್ರಕರಣದಲ್ಲಿಯಮತ್ತು ಪುಸ್ತಕದಲ್ಲಿಯ ಎಲ್ಲ ಕೃತಿಗಳನ್ನ ಪೂರ್ಣಮಾಡಿದನು. | ಎಲ್ಲ ಕೃತಿಗಳನ್ನು ಪೂರ್ಣಮಾಡಿದನು. | ಎರಡನೆಯವರ ನೋಡಿ ಉತ್ತರಗಳನ್ನುಬರೆದನು | |
| ಕಲಾವಿಷ್ಕಾರದಲ್ಲಿ ಕಲ್ಪಕತೆಕಂಡು ಬರುತ್ತದೆ | ವಿದ್ಯಾರ್ಥಿಗಳನ್ನು ತಯಾರಿಸಿದ ಕಲಾವಿಷ್ಕಾರದಲ್ಲಿ ಕಲ್ಪಕತೆ ಕಂಡುಬರುತ್ತದೆ. | ಮರ್ಯಾದಿತ ಕಲ್ಪಕತೆಕಂಡು ಬರುತ್ತದೆ | ಯಾವುದೇ ಪ್ರಕಾರದ ಕಲ್ಪಕತೆ ಕಂಡುಬರುವುದಿಲ್ಲ. ಎರಡನೆಯವರ ನೋಡಿ ಕೆಲಸ ಮಾಡಿದನು. | |
| ಕಲಾಕಾರನ ಸಂದರ್ಶನ | ಪಾಠದಲ್ಲಿವ್ಯಕ್ತಮಾಡಿದ ಸಂಕಲ್ಪನೆಗಳ ಸಂದರ್ಭದಲ್ಲಿ ಕಲಾಕಾರನ ಸಂದರ್ಶನ ತೆಗೆದುಕೊಳ್ಳಲಾಗಿದೆ.ಮತ್ತು ಕಲಾಕಾರನಿಂದ ಸಾಕ್ಷಿ ಅಥವಾ ಪತ್ರ ಮರಳಿ ತರಲಾಯಿತು. | ಸಂದರ್ಶನ ಪಾಠದಲ್ಲಿಯ ಆಶೆಗೆ ಸಂಬಂಧ ಇರಲಿಲ್ಲ. ಸಾಕ್ಷಿ ಅಥವಾ ಪತ್ರ ಮರಳಿ ತರಲೇ ಇಲ್ಲ. | ಸಂದರ್ಶನ ತೆಗೆದುಕೊಳ್ಳಲಿಲ್ಲ. | |



ಏನಾಯತು ಸಮೀನಾ? ನೀನು ಚಿಂತೆಯಲ್ಲಿ ಇದ್ದಂತೆ ಕಾಣುತ್ತದೆ.
ನೆನಪಿಕೊಳ್ಳು. ನೀನು ನನಗೆ ಕಿಶೋರಾವಸ್ಥೆಯಲ್ಲಿ ಮೆದುಳಿನ ಬಗ್ಗೆ ಹೇಳಿದ್ದಿ ಅಲ್ಲವೆ? ಈಗ ನಾನು ಸಂಕಟ ಅನುಭವಿಸುವ ವರ್ತನೆಯನ್ನು ತದೆಯುವ ಪ್ರಯತ್ನಮಾಡುತ್ತೇನೆ. ಆದರೆ ನನ್ನ ಕೆಲವುಗೆಳೆಯ/ಗೆಳೆಯತಿಯರಿಗೆ ಇನ್ನೂ ಏನು ತಿಳಿಯುವುದು. ಈ ವಿಷಯ ನನಗೆ ಬಹಳ ತ್ರಾಸದಾಯಕವೆನಿಸುತ್ತದೆ. ಇದರಿಂದ ಸಂಘರ್ಷ ನಿರ್ಮಾಣವಾಗುತ್ತದೆ.
ನೀವು ಗೆಳೆಯರೊಂದಿಗೆ ಆದ ಸಂಘರ್ಷ ಹೇಳಿ ಬಗೆ ಹರಿಸುತ್ತೀರಿ? ಕೆಟ್ಟ ಪ್ರವೃತ್ತಿಯುಳಿದ ಮನುಷ್ಯರಂತೆನೀವು ಸುತ್ತಮುತ್ತಲು ಕೂಡಾ ಒಬ್ಬರೊಬ್ಬರಿಗೆ ಈ ರೀತಿಯ ಚೇಷ್ಟೆ ಮಾಡುತ್ತಿರಬಹುದೇನು?
ಇಲ್ಲ, ನಾವು ದೊಡ್ಡ ಹುಡುಗರಂತೆ ಒಬ್ಬರನ್ನೊಬ್ಬರೊಂದಿಗೆ. ಕಾಫಿ ಕುಡಿಯುತ್ತಾ ಕುಡಿಯುತ್ತಾ. ಮಾತಾಡುತ್ತಾ ಸಂಘರ್ಷ ಬಗೆಹರಿಸುತ್ತೇವೆ.
ಸಮೀನಾ, ಅದು ಸರಳವಿದೆ, ನಿನಗೆ ಕೇವಲ ಸಂಘರ್ಷ ಬಗೆಹರಿಸುವ ತಂತ್ರ ಕಲಿಯಬೇಕಾಗಿತ್ತು.

# 6 ಸಂಘರ್ಷವನ್ನು ಬಗೆಹರಿಸುವುದು

### ಎರಡೂ ಬದಿಯ ಹಿತವನ್ನು ಸಾಧಿಸುವದು...

BI72UB

**ಉದ್ದೇಶಗಳು:**

(1) ಸಂಘರ್ಷವೆಂದರೇನು ಎಂಬುದನ್ನು ಸ್ವಂತ ಶಬ್ಧಗಳಲ್ಲಿ ತಿಳಿ ಹೇಳಲು ಬರುವುದು.

(2) ಪ್ರಶ್ನೆಯಸ್ವರೂಪವನ್ನುನೋಡಿ ಸಂಘರ್ಷವನ್ನು ಬಿಡಿಸುವ ಯೋಗ್ಯವಾದಪದ್ಧತಿಯನ್ನುಆರಿಸಿಕೊಳ್ಳುವುದು ಮತ್ತು ಅದರ ಸ್ಪಷ್ಟೀಕರಣ ಮಾಡಲು ಬರುವುದು.

(3) ಸಮವಯಸ್ಸಿನಜನರ ಒತ್ತು ಇಲ್ಲವೆ ಒತ್ತಡವೆಂದರೇನು? ಅದರ ಪ್ರಕಾರಗಳುಯಾವವು? ಎಂಬುದನ್ನುಸ್ವಂತ ಶಬ್ದಗಳಲ್ಲಿ ತಿಳಿಹೇಳಲು ಬರುವದು.


(4) ಪಾಠದಲ್ಲಿ ಕೊಡಲಾದ ಮಾರ್ಗದರ್ಶಕ ರೂಪರೇಷೆಗಳನ್ನು ಉಪಯೋಗಿಸಿ, ದೈನಂದಿನ ಜೀವನದಲ್ಲಿಯ ಸಂಘರ್ಷ, ಎರಡೂ ಬದಿಯ ಹಿತವನ್ನು ಸಾಧಿಸಿ (Win-win ಪದ್ದತಿಯಿಂದ) ಬಿಡಿಸಲು ಬರುವುದು.

ಮೊದಲನೆಯ ಪ್ರಕರಣದಲ್ಲಿ ನಾವು ಪ್ರತಿಯೊಬ್ಬ ವ್ಯಕ್ತಿ ಭಿನ್ನವಾಗಿದ್ದಾನೆ ಮತ್ತು ಪ್ರತಿಯೊಬ್ಬನ ಬಲಸ್ಥಾನಗಳು ಭಿನ್ನ ಭಿನ್ನವಾಗಿ ಇರುತ್ತವೆ ಎಂಬುದನ್ನು ಕಲಿತಿದ್ದೇವೆ

ಹೇಗೆ ತಮ್ಮ ಕೈಮ ಪೂರ್ಣಕಾರ್ಯಕ್ಷಮತೆಯನ್ನು ಉಪಯೋಗಿಸಲು ಐದು ಬೆರಳುಗಳ ಅವಶ್ಯಕತೆ ಇರುವುದೋ ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಯಲ್ಲಿಯ ವೈಶಿಷ್ಟ್ಯಗಳನ್ನು ಕಾಪಾಡಿದರೇನೇ ನಾವು ಒಟ್ಟಿಗೆ ಸಮಾಜದ ಪ್ರಗತಿಯನ್ನು ಮಾಡಬಹುದು ಮತ್ತು ಆನಂದದಿಂದ ಇರಬಹುದು. ದೈನಂದಿನ ಜೀವನದಲ್ಲಿ ತಮ್ಮ ಗೆಳೆಯ-ಗೆಳತಿಯರು, ಸಂಬಂಧಿಕರು, ಶಿಕ್ಷಕರು, ನೆರೆಹೊರೆಯವರು ನಮಗೆ ಆನಂದ ಮತ್ತು ಸಮಾಧಾನದ ಬದಕನ್ನು ಜೀವಿಸಲು ಸಹಾಯ ಮಾಡುತ್ತಿರುವರು. ಹಲವಾರುಸಲ ನಾವು ಕೆಲಸದಲ್ಲಿ ಎಷ್ಟೊಂದು ಮಗ್ನರಾಗಿರುತ್ತೇವೆಂದರೆ,ಜನರು ನಮಗಾಗಿ ಮಾಡಿದ ಚಿಕ್ಕಪುಟ್ಟ ಉಪಕಾರಗಳ ಅರಿವು ನಮಗೆ ಆಗುವುದಿಲ್ಲ.



ತಾಯಿಯು ದಿನಾಲು ನಿಮಗೆ ಶಾಲೆಗಾಗಿ ಸಮಯಕ್ಕೆ ಸರಿಯಾಗಿ ಎಬ್ಬಿಸುವಳು.




ಗೆಳತಿಯು ಆಕೆಯ ಇಷ್ಟವಾದ ಚಾಕಲೇಟನ್ನು ನಿಮ್ಮೊಂದಿಗೆ ಹಂಚಿ ತಿನ್ನುತ್ತಾಳೆ.



ಪಕ್ಷಿಗಳ ಸ್ವರ ಕೇಳಿ ನಾವು ಆನಂದಿತರಾಗುತ್ತೇವೆ.



ಗುರುಗಳು ನಿಮ್ಮ ಕೆಲಸವನ್ನು ನೋಡಿ ಹೊಗಳುತ್ತಾರೆ.

## ನಡೆಯಿರಿ ಆಟ ಆಡೋಣ...



ಎಲ್ಲ ವಿದ್ಯಾರ್ಥಿಗಳು ತಮ್ಮ ಕಣ್ಣು ಮುಚ್ಚಬೇಕು. ಪ್ರತಿಯೊಬ್ಬರು ಸಂಪೂರ್ಣ ದಿವಸದಲ್ಲಿ ನಿಮಗಾಗಿ ನೆರೆಹೊರೆಯವರು ಮಾಡಿದ ಚಿಕ್ಕಪುಟ್ಟ ಉಪಕಾರ/ ಸಹಾಯಗಳನ್ನು ನೆನಪಿಸಿರಿ. ಮನಸ್ಸಿನಲ್ಲಿಯೇ ಆ ಜನರಿಗೆ ಕೃತಜ್ಞತೆಯನ್ನುಸಲ್ಲಿಸಿರಿ. ಇದಕ್ಕಾಗಿ ಒಂದು ಮಿನಿಟು ವೇಳೆ ಕೊಡಬೇಕು.

ಒಮ್ಮೊಮ್ಮೆ ವಿವಿಧ ಕಾರಣಗಳಿಂದ ಜನರೊಂದಿಗೆ ನಮ್ಮ ಮತ ಭೇದ ಉಂಟಾಗುವದು. ಯಾವಾಗ ನಮ್ಮ ಮನಸ್ಸಿನಂತೊ ಕಾರ್ಯನಡೆಯುವುದಿಲ್ಲವೋ, ಆಗ ನಾವು ನಿರಾಸೆಗೊಳ್ಳುತ್ತೇವೆ, ವಾದ ಹಾಕುತ್ತೇವೆ, ಜಗಳ ತೆಗೆಯುತ್ತೇವೆ. ಮತ್ತು ಒಮ್ಮೊಮ್ಮೆ ನಮ್ಮಿಂದ ಅವರ ಅಪಮಾನವೂ ಆಗುತ್ತದೆ. ಇಂಥ ಪರಿಸ್ಥಿತಿಗೆ ಸಂಘರ್ಷಾತ್ಮಕ ಪರಿಸ್ಥಿತಿ ಎಂದು ಕರೆಯುವರು.

ಕೃತಜ್ಞತೆಯನ್ನು ಸಲ್ಲಿಸಿದ ನಂತರ ಹೇಗೆ ಅನ್ನಿಸಿತು? ಸಮಾಧಾನವೆನಿಸಿದೆಯೆ? ಕಾರಣಗಳನ್ನು ಹೇಳಿರಿ ಎಂದು ವಿದ್ಯಾರ್ಥಿಗಳಿಗೆಕೇಳಬೇಕು. ವರ್ಷಗಳ ನಡು ನಡುವೆ ಈ ಉಪಕ್ರಮವನ್ನು ತೆಗೆದುಕೊಳ್ಳಬೇಕು.

### 1. ಸಂಘರ್ಷವು ಯಾವಾಗ ನಿರ್ಮಾಣವಾಗುವುದು?



ಒಬ್ಬ ವ್ಯಕ್ತಿಗೆ ಇಲ್ಲವೆ ಸಮೂಹಕ್ಕೆ, ಎರಡನೆಯ ವ್ಯಕ್ತಿ ಇಲ್ಲವೆ ಸಮೂಹಕ್ಕಿಂತ ಭಿನ್ನವಾದಸಂಗತಿ ಬೇಕಾಗಿರುತ್ತದೆ.ಆಗ ಒಂದೊಂದುಸಲ ಅವರಲ್ಲಿ ಯಾರಾದರೊಬ್ಬ ವ್ಯಕ್ತಿಯ ಮನಸ್ಸಿನಡೆ ಆಗುತ್ತದೆ ಆಗ ಇಂಥ ಪರಿಸ್ಥಿತಿಗೆ ಸಂಘರ್ಷ ನಿರ್ಮಾಣದ ಪರಿಸ್ಥಿತಿ ಅನ್ನುವರು.

ಕೆಳಗೆ ಕೆಲ ದೈನಂದಿನ ಪ್ರಸಂಗಗಳನ್ನು ಕೊಡಲಾಗಿದೆ. ಇವುಗಳಲ್ಲಿ ನಿಮ್ಮ ಅಭಿಪ್ರಾಯದಂತೆ ಯಾವ ಪರಿಸ್ಥಿತಿಗಳು ಸಂಘರ್ಷಾತ್ಮಕ ವಾಗಿವೆ ಮತ್ತು ಯಾವವು ಇಲ್ಲ ಎಂಬುದನ್ನು 'ಸರಿ' ಇಲ್ಲವೆ 'ತಪ್ಪು' ಎಂದು ಬರೆದು ಸ್ಪಷ್ಟಪಡಿಸಿರಿ.

(1) ಹೊಸದಾಗಿ ಬಂದ ಒಂದು ಚಿತ್ರಪಟ (ಸಿನೇಮಾ)ದ ಹಾಡುಗಳು ನಿಮಗೆ ಹಿಡಿಸಿವೆ, ಆದರೆ ನಿಮ್ಮ ಗೆಳೆಯ ಇಲ್ಲವೆ ಗೆಳತಿಗೆ ಅದು ಹಿಡಿಸಿಲ್ಲ.

(2) ನಿಮ್ಮ ತಾಯಿಯ ವಿಚಾರದಂತೆ ನೀವು ರಾತ್ರಿ ಊಟಕ್ಕೆ ಮೊದಲು ಗೃಹಪಾಠಮುಗಿಸಬೇಕು.ಆದರೆನಿಮಗೆ ಅದೇ ಸಮಯದಲ್ಲಿ ಆಟ ಆಡುವುದಿದೆ.

(3) ನಿಮಗೆ ಕ್ರಿಕೇಟ ಆಡುವದು ಹಿಡಿಸುತ್ತದೆ ಮತ್ತು ನಿಮ್ಮ ಗೆಳೆಯ ಇಲ್ಲವೆ ಗೆಳತಿಗೆ ಫುಟಬಾಲ್ ಆಡಲು ಹಿಡಿಸುವುದು

(4) ನಿಮಗೆ ಮೋಟರ-ಸಾಯಕಲ್ ಕೊಂಡುಕೊಳ್ಳುವದಿದೆ ಆದರೆ ನಿಮ್ಮ ಪಾಲಕರು ಇದಕ್ಕೆ ಸಿದ್ದರಿಲ್ಲ.ಅವರ ವಿಚಾರದಂತೆ ನಿಮ್ಮ ಶಿಕ್ಷಣ ಮುಗಿದನಂತರ ಮೋಟರ ಸಾಯಕಲ್ ಕೊಂಡು ಕೊಳ್ಳುವದು ಯೋಗ್ಯವಾಗಬಹುದು.

ಪ್ರತಿಯೊಂದುಘಟನೆಯಮೇಲೆ ಚರ್ಚೆ ಮಾಡಿರಿ. ವಿದ್ಯಾರ್ಥಿಗಳಿಗೆ ತಿಳಿಸಿಹೇಳಬೇಕಾಗುತ್ತದೆ, ಏನೆಂದರೆ ಎರಡನೇಯ ಮತ್ತು ನಾಲ್ಕನೆಯ ಪ್ರಸಂಗವು ಸಂಘರ್ಷಾತ್ಮಕವಾಗಿದೆ. ಏಕೆಂದರೆ ಅಭ್ಯಾಸ ಮತ್ತು ಆಟ ಈ ಎರಡೂ ಕ್ರಿಯೆಗಳುಒಂದೆ ವೇಳೆಗೆ ಮಾಡಲು ಸಾಧ್ಯವಿಲ್ಲ. ಹಾಗೆಯೇ ಮೊಟರ ಸೈಕಲ ಕೊಂಡು ಕೊಳ್ಳುವದು ಮತ್ತು ಕೊಂಡುಕೊಳ್ಳಲಾಗದು ಇವು ಒಂದೇ ವೇಳೆಗೆ ಸಾಧ್ಯವಾಗುವುದಿಲ್ಲ. ಮೋಟರ ಸಾಯಕಲ ನಡೆಸಲು ಡ್ರಾಯವ್ಹಿಂಗ ಲಾಯಸನ್ಸ್ ಅವಶ್ಯಕತೆಇರುವದು.
ಮೊದಲನೆ ಮತ್ತು ಮೂರನೆ ಪ್ರಸಂಗಗಳ ಸಂಘರ್ಷಾತ್ಮಕವಾಗಿಲ್ಲ. ಇದರಲ್ಲಿ ಕೇವಲ ಮತಭಿನ್ನತೆ ಇವೆ. ಒಂದೇ ವೇಳಗೆ ಇಬ್ಬರಿಗೂ ತಮ್ಮ ತಮ್ಮ ಬೇರೆ ಹೇಳಿಕೆಗಳು ಇಲ್ಲವೆ ಬೇಕು-ಬೇಡಿಕೆಗಳುಇರಬಹುದು.


## ಕೆಳಗಿನವುಗಳಲ್ಲಿಯ ಯಾವ ಸಂಬಂಧಗಳಲ್ಲಿ ಸಂಘರ್ಷವಾಗಲಾರದು ಎಂಬುದನ್ನು ಗುರುತಿಸಿರಿ.

ಪ್ರತಿಯೊಂದು ಸಂಬಂಧದ ಕುರಿತು ಚರ್ಚೆ ಮಾಡಿರಿ. ಇವುಗಳಲ್ಲಿಯ ಯಾವ ಸಂಬಂಧದಲ್ಲಿ ಎಂದಿಗೂ ಸಂಘರ್ಷವಾಗುವುದಿಲ್ಲ ಎಂದು ನಿಮಗೆ ಅನಿಸುತ್ತದೆ? ಎಂದು ವಿದ್ಯಾರ್ಥಿಗಳಿಗೆ ಕೇಳಿರಿ. ಬಂದ ಉತ್ತರಗಳಿಂದ ಚರ್ಚೆ ಮಾಡಿರಿ ಮತ್ತು ಸಂರ್ಘದ ಕಾರಣ ತಿಳಿದುಕೊಳ್ಳಿರಿ.

ಸಂಘರ್ಷ ಮತ್ತು ಮತಭಿನ್ನತೆ ಇವೆರಡೂ ಬೇರೆ ಬೇರೆಯಾಗಿವೆ ಎಂಬದನ್ನು ಸ್ಪಷ್ಟ ಪಡಿಸಿರಿ.



ಪಾಲಕ ಮತ್ತು ಮಗ/ಮಗಳು



ತಂದೆ-ತಾಯಿ



ಸಹೋದರ / ಸಹೋದರಿ



ಇಬ್ಬರು ಗೆಳೆಯರು/ಗೆಳತಿಯರು



ಒಡೆಯ ಮತ್ತು ನೌಕರ



ಇಬ್ಬರು ಅಪರಿಚಿತ ವ್ಯಕ್ತಿಗಳು



ಶಿಕ್ಷಕ ಮತ್ತು ವಿದ್ಯಾರ್ಥಿ

***ಗಮನಿಸಬೇಕಾದ ಅಂಶಗಳು :***

*ಪ್ರತಿಯೊಂದು ಸಂಬಂಧದಲ್ಲಿ ಮತಭಿನ್ನತೆ ಇರಬಹುದು. ಆದರೆ ಇಂಥ ಪ್ರಸಂಗಗಳನ್ನು ಯೋಗ್ಯ ರೀತಿಯಿಂದ ಬಗೆಹರಿಸಿದರೆ ಸಂಘರ್ಷಾತ್ಮಕ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಕಡಿಮೆಯಾಗುವುದು.*

## ಬನ್ನಿ ಕಲಿಯೋಣ


### 2. ಸಂಘರ್ಷ ಬಗೆಹರಿಸುವ ವಿವಿಧ ಪದ್ಧತಿಗಳು:



ಕೆಳಗೆ ಒಂದು ಕಾಲ್ಪನಿಕ ಸಂಘರ್ಷ ಮತ್ತು ಅದನ್ನು ಬಗೆಹರಿಸುವ ವಿವಿಧ ಮಾರ್ಗಗಳನ್ನು ಕೊಡಲಾಗಿದೆ. ಅವುಗಳಲ್ಲಿ ಪ್ರತಿಯೊಂದು ಮಾರ್ಗವನ್ನು ತಿಳಿದುಕೊಳ್ಳೋಣ.

**ಪ್ರಸಂಗ :**

ಪಾಲಕರು ನಿಮಗೆ ಮತ್ತು ನಿಮ್ಮ ಸಹೋದರನಿಗೆ ಉಪಯೋಗಿಸಲು ಒಂದು ಹೊಸ ಸಾಯಕಲ ತಂದಿದ್ದಾರೆ. ಅವರ ಅಭಿಪ್ರಾಯದಂತೆ ನೀವಿಬ್ಬರೂ ಕೂಡಿ ಅದನ್ನು ಉಪಯೋಗಿಸಬೇಕು. ಆದರೆ ನಿಮಗಿಬ್ಬರಿಗೂ ಆ ಸಾಯಕಲ್ಲು ಕೇವಲ ಸ್ವಂತಕ್ಕಾಗಿ ಬೇಕಾಗಿದೆ. ನೀವು ಏನು ಮಾಡುವಿರಿ?




ದುರ್ಲಕ್ಷ್ಯ ಮಾಡುವುದು

(1) ನೀವು ಸಮಸ್ಯೆಯ ಕಡೆಗೆ ದುರ್ಲಕ್ಷ್ಯ ಮಾಡುವಿರಿ?



(ಸ್ವಂತದ್ದೇ ನಿಜ ಮಾಡುವುದು)

(2) ನೀವು ನಿಮ್ಮ ಸಹೋದರ ಇಲ್ಲವೆ ಸಹೋದರಿಯೊಂದಿಗೆ ಜಗಳ ಮಾಡುವಿರಿ ಮತ್ತು ಸಾಯಕಲನ್ನು ನೀವೇ ಉಪಯೋಗಿಸುವುದಾಗಿ ಕಡ್ಡಾಯವಾಗಿ ಹೇಳುವಿರಿ.



(ಹಿಂಜರಿಯುವಿಕೆ)

(3) ನೀವು ಸಾಯಕಲ್ಲಿನ ಮೇಲಿನ ನಿಮ್ಮ ಹಕ್ಕನ್ನು ಬಿಟ್ಟು ಬಿಡುವಿರಿ. ಮತ್ತು ನಿಮ್ಮ ಸಹೋದರನಿಗೆ ಅದನ್ನು ಉಪಯೋಗಿಸಲು ಕೊಡುವಿರಿ.



**(ಒಪ್ಪಂದ ಮಾಡುವುದು)**

(4) ಸಮಸ್ಯೆಯ ಬಿಡುಗಡೆಯಾಗುವತನಕ ಯಾರೂ ಅದನ್ನು ಉಪಯೋಗಿಸಕೂಡದು ಎಂದು ನೀವು ನಿರ್ಧರಿಸುವಿರಿ.

(5) ನೀವು ಮತ್ತು ನಿಮ್ಮ ಸಹೋದರರು ಒಟ್ಟಿಗೆ ಸೇರಿ ಇಬ್ಬರ ಅನುಕೂಲತೆಯನ್ನು ನೋಡಿ ನಿಯೋಜನೆ ಮಾಡುವಿರಿ ಮತ್ತು ಸಾಯಕಲನ್ನು ಉಪಯೋಗಿಸಲು ಒಂದು ವೇಳಾಪತ್ರಿಕೆಯನ್ನು ಮಾಡುವಿರಿ.



(ಇಬ್ಬರಹಿತ)

**ಚರ್ಚೆ ಮಾಡಿರಿ:**
ಮೇಲಿನವುಗಳಲ್ಲಿ ಯಾವ ಪದ್ಧತಿಯು ಸಂಘರ್ಷವನ್ನು ಬಗೆಹರಿಸಲು ಎಲ್ಲಕ್ಕೂ ಯೋಗ್ಯವಾಗಿದೆ? ಅದೇ ಪದ್ಧತಿಯು ಯಾವಾಗಲೂ ಯೋಗ್ಯವಾಗಿರಬಹುದೇ?

## 3. ಸಂಘರ್ಷವನ್ನು ಬಗೆಹರಿಸಲು ಯಾವ ಪದ್ದತಿಯು ಎಲ್ಲಕ್ಕೂ ಯೋಗ್ಯವಾಗಿದೆ ?

ಬೇರೆ ಬೇರೆ ಪ್ರಸಂಗಗಳಲ್ಲಿ ಸಂಘರ್ಷವನ್ನು ಬಿಡಿಸುವ ಬೇರೆಬೇರೆ ಪದ್ಧತಿಗಳ ಕುರಿತು ಕೆಳಗೆ ಒಂದು ಮಾರ್ಗದರ್ಶಕ ರೂಪರೇಷೆಯನ್ನು ಕೊಡಲಾಗಿದೆ.

| ಪದ್ದತಿಗಳು | ಯಾವಾಗ ಉಪಯೋಗಿಸಬೇಕು | ಉದಾಹರಣೆ |
|---|---|---|
| (1) ದುರ್ಲಕ್ಷ್ಯ ಮಾಡುವುದು. | • ಚಿಕ್ಕ ಮಟ್ಟ ಸಮಸ್ಯೆ<br>• ಯಾವಾಗಾದರೊಮ್ಮೆ ಘಟಿಸುವ ಸಮಸ್ಯೆ | ಚಿಕ್ಕ ತಮ್ಮ ಎಂದಾದರೊಮ್ಮೆ ನಿಮ್ಮ ಗಡಿಯಾರವನ್ನು ಹಾಕಿಕೊಂಡು ಶಾಲೆಗೆ ಹೋಗುವನು |
| (2) ಸ್ವಂತದ್ದೇ ನಿಜ ಮಾಡುವದು. | • ತಾತ್ಕಾಲಿಕ<br>• ತುರ್ತುಪರಿಸ್ಥಿತಿಯಲ್ಲಿನಿಲ್ಲಲು ಸಾಧ್ಯವಾಗುವುದಿಲ್ಲವೋ ಆವಾಗ<br>• ವೇಳೆ ಕಡಿಮೆ | ನೀವು ಮತ್ತು ನಿಮ್ಮ ಗೆಳತಿ ಅರಣ್ಯದಲ್ಲಿ ಕಳೆದು ಕೊಂಡಿದ್ದೀರಿ ಮತ್ತು ಕತ್ತಲೆ ಬೀಳುವದರೊಳಗೆ ನಿಮಗೆ ಮರಳುವುದಿದೆ. ನಿಮಗೆ ಸರಿಯಾದ ದಾರಿ ಗೊತ್ತಿದೆ ಆದರೆ ನಿಮ್ಮ ಗೆಳತಿಗೆ ಒಂದು ಬೇರೆ ಹೊಸ ದಾರಿ ಶೋಧಿಸುವುದಿದೆ |
| (3) ಹಿಂಜರಿಯುವಿಕೆ | • ಹಿಂಜರಿಯುವುದರಿಂದ ಅಷ್ಟೇನೂ ನಿಮ್ಮ ಹಾನಿಯಾಗುವದಿಲ್ಲ ಆದರೆ ಎದುರಿನವನಿಗೆ ಬಹಳ ಲಾಭ ವಾಗುವುದು. | ಬಸ್ಸಿನಲ್ಲಿ ಒಂದೇ ಜಾಗ ಉಳಿದಿದೆ. ನಿಮಗೆ ಮತ್ತು ಒಬ್ಬ ವಯಸ್ಕರ ವ್ಯಕ್ತಿ ಹೀಗೆ ಇಬ್ಬರಿಗೂ ಅದರ ಮೇಲೆ ಕೊಡುವುದಿದೆ. |
| (4) ಒಮ್ಮತ ವಾಗುವುದು | • ಸಮಸ್ಯೆ ತಾತ್ಪೂರ್ತಿಕ ಪರಿಹಾರ ಬೇಕಾಗಿದೆ. | ನಿಮಗೆ ಮತ್ತು ನಿಮ್ಮ ಸಹೋದರರಿಗೆ ಒಂದೇ ವೇಳೆಗೆ ಟಿ.ವ್ಹಿಯಲ್ಲಿ ತಮ್ಮ ತಮ್ಮ ಇಷ್ಟವಾದ ಕಾರ್ಯಕ್ರಮ ನೋಡುವುದಿದೆ. |
| (5) ಇಬ್ಬರ ಹಿತ (Win-Win) | • ಮಹತ್ವದ ಪ್ರಶ್ನೆ<br>• ಯಾವಾಗ ಎರಡನೆಯವರ ಹೇಳಿಕೆಯನ್ನು ತಿಳಿದುಕೊಳ್ಳಲು ಸಮಯವಿದೆ. | ನಿಮ್ಮ ತಾಯಿಗೆ ನಿಮ್ಮ ಒಬ್ಬ ಗೆಳೆಯ ಅಥವಾ ಗೆಳತಿ ಹಿಡಿಸುವುದಿಲ್ಲ ಮತ್ತು ಅವಳ ವಿಚಾರದಂತೆ ನೀವು ಅವನಿಂದ/ಅವಳಿಂದ ದೂರವಿರಬೇಕು. |

ಮೇಲಿನ ಅಂಶಗಳನ್ನು ಕೇವಲ ಮಾರ್ಗದರ್ಶವೆಂದು ಉಪಯೋಗಿಸಬೇಕು. ಪ್ರತಿಯೊಬ್ಬ ವ್ಯಕ್ತಿ ಮತ್ತು ಪರಿಸ್ಥಿತಿಗೆ ಅನುಸರಿಸಿ ಯಾವ ಪದ್ದತಿ ಯೋಗ್ಯವಾಗಬಹುದು ಎಂದು ನೋಡಿ, ಬದಲಿಸಬಹುದು.

***ಗಮನಿಸಬೇಕಾದ ಅಂಶಗಳು :***

- *ಮಹತ್ವದ ಮತ್ತು ದೀರ್ಘಕಾಲದ ಪರಿಣಾಮ ಮಾಡುವ ಸಂಘರ್ಷವನ್ನು ಬಗೆಹರಿಸುವ ವಿನ್-ವಿನ್ ಈ ಪದ್ದತಿಯು ಯೋಗ್ಯವಾಗಿದ್ದೂ ಪ್ರತಿಯೊಂದು ಪ್ರಸಂಗದಲ್ಲಿ ಅದನ್ನು ಕಾರ್ಯರೂಪಕ್ಕೆ ತರಲು ಕಠಿಣವಾಗುವುದು.*
- *ವಿನ್-ವಿನ್ ಪದ್ದತಿಯನ್ನು ಕಾರ್ಯರೂಪಕ್ಕೆ ತರಲು ಎರಡು ವಿರುದ್ಧ ದೃಷ್ಟಿಕೋನ ಇರುವ ಜನರನ್ನು ಒಟ್ಟಿಗೆ ತರಬೇಕಾಗುವುದು. ಇನ್ನೊಬ್ಬರ ವಿಚಾರ, ಭಾವನೆ ತಿಳಿದುಕೊಳ್ಳುವ ಸಿದ್ಧತೆ ಬೇಕಾಗುವುದು. ಇನ್ನೊಬ್ಬರ ಕುರಿತು ಮನಸ್ಸಿನಲ್ಲಿ ಪೂರ್ವಗ್ರಹ ಇರಕೂಡದು. ಇಬ್ಬರದೂ ಹಿತವಾಗಬೇಕು ಎಂದು ಮನಸ್ಸಿನಿಂದ ಅನ್ನಿಸಬೇಕು.*

## ಸ್ವಲ್ಪ ವಿಚಾರ ಮಾಡೋಣ


ಕೆಳಗಿನ ಪ್ರಸಂಗಗಳಲ್ಲಿ ನೀವು ಸಂಘರ್ಷ ಬಿಡಿಸಲು ಯಾವ ಪದ್ಧತಿಯನ್ನು ಉಪಯೋಗಿಸುವಿರಿ? ನಿಮ್ಮ ವಹಿಯಲ್ಲಿ ಬರೆಯಿರಿ.




1. ಮನೆಯಲ್ಲಿಯ ಕಾಯಿಲೆಯುಳ್ಳ ವ್ಯಕ್ತಿಗೆ ಕೂಡಲೇ ಆಸ್ಪತ್ರೆಗೆ ಒಯ್ಯುವುದು ಅವಶ್ಯಕವಾಗಿದೆ ನಿಮ್ಮ ವಿಚಾರದಂತೆ ಸಮೀಪದ ದವಾಖಾನೆಯಲ್ಲಿ ಸೇರಿಸಬೇಕು. ಆದರೆ ನಿಮ್ಮ ಸಹೋದರಿಗೆ ಸ್ವಲ್ಪ ದೂರದ ಆದರೆ ಹೆಚ್ಚು ಅನುಕೂಲವುಳ್ಳ ದವಾಖಾನೆಗೆ ಸೇರಿಸಬೇಕೆಯು ಅನಿಸುತ್ತದೆ.

ವಿದ್ಯಾರ್ಥಿಗಳ ಗುಂಪು ತಯಾರಿಸಿರಿ. ಪ್ರತಿಯೊಂದು ಗುಂಪಿಗೆ ಕೆಳಗಿನ ಒಂದು ಪ್ರಸಂಗ ಕೊಡಿರಿ.
ಅವರಿಗೆ ಚರ್ಚೆಗಾಗಿ ಹತ್ತು ನಿಮಿಷಗಳ ವೇಳೆ ಕೊಡಿರಿ. ಪ್ರತಿಯೊಂದು ಗುಂಪಿನಲ್ಲಿಯ ಒಬ್ಬನು ಸಾದರಪಡಿಸಿದಾಗ ಅವರು ಯಾವ ಪದ್ಧತಿಯನ್ನು ಉಪಯೋಗಿಸಬಹುದು?

2. ನಿಮ್ಮ ಊರಿನ ಮಹಾವಿದ್ಯಾಲಯದಲ್ಲಿ ನಿಮಗೆ ಬೇಕಾದ ಕೋರ್ಸ ಇಲ್ಲ. ನಿಮಗೆ ಸಮೀಪದ ಪಟ್ಟಣದಲ್ಲಿ ಮುಂದಿನ ಶಿಕ್ಷಣಕ್ಕಾಗಿ ಹೋಗಬೇಕಾಗಿದೆ ಆದರೆ ನಿಮ್ಮ ತಂದೆ-ತಾಯಿಯವರು ಇದಕ್ಕೆ ಒಪ್ಪುತ್ತಿಲ್ಲ ಏಕೆಂದರೆ ಅವರಿಗೆ ನಿಮ್ಮ ಸುರಕ್ಷಿತತೆಯ ಕಾಳಜಿ ಇದೆ.







3. ನಿಮಗೆ ನಿಮ್ಮ ಗೆಳೆಯರ ಜೊತೆಗೆ ಒಂದು ವಿಶಿಷ್ಟ ಚಿತ್ರಪಟ ನೋಡುವುದಿದೆ. ಆದರೆ ನಿಮ್ಮ ಗೆಳೆಯರಿಗೆ ಬೇರೆಯೇ ಚಿತ್ರಪಟ ನೋಡುವುದಿದೆ. ಅವರ ಅಭಿಪ್ರಾಯದಂತೆ ನೀವೂ ಕೂಡಾ ಅದೇ ಚಿತ್ರಪಟ ನೋಡಬೇಕು.

4. ನಿಮಗೆ ನಿಮ್ಮ ಗೆಳೆಯ-ಗೆಳತಿಯರ ಜೊತೆಗೆ ಪ್ರವಾಸಕ್ಕೆ ಹೋಗಬೇಕಾಗಿದೆ ಆದರೆ ಇದರಿಂದ ಬಹಳಷ್ಟು ಹಣ ಹಾಳಾಗಬಹುದು ಎಂದು ನಿಮ್ಮ ಪಾಲಕರಿಗೆ ಅನಿಸುತ್ತದೆ.



**ಸಂಘರ್ಷ ಬಗೆಹರಿಸುವ ಪದ್ಧತಿಗಳು:**
ದುರ್ಲಕ್ಷ್ಯ ಮಾಡುವುದು.
ಸ್ವಂತದ್ದೇ ನಿಜಮಾಡುವುದು.
ಹಿಂಜರಿಯುವುದು.
ಒಮ್ಮತ ವಾಗುವುದು
ವಿನ್-ವಿನ್.



5. ನಿಮಗೆ ನಿಮ್ಮ ಕಕ್ಕನ ಮಗಳೊಂದಿಗೆ ಒಂದು ದಿವಸ ಪ್ರವಾಸಕ್ಕೆ ಹೋಗುವುದಿದೆ. ಆದರೆ ಮನೆಯಲ್ಲಿ ನಿಮ್ಮ ಅಜ್ಜಿಯು ಒಂಟಿಯಾಗಿದ್ದಾಳೆ ಮತ್ತು ನೀವು ಮನೆಯಲ್ಲಿ ಇರುವುದು ಮಹತ್ವದ್ದಾಗಿದೆ.

## ಮೋಜು ಮಾಡೋಣ.

- ವರ್ಗದಲ್ಲಿಯ ಎಲ್ಲಕ್ಕೂ ಬಲಶಾಲಿ ಹುಡುಗ/ಹುಡುಗಿಗೆ ಮುಷ್ಠಿಯನ್ನು ಮುಚ್ಚಲು ಹೇಳಿರಿ.
- ಇತರ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಒಬ್ಬೊಬ್ಬರಾಗಿ ಆ ಹುಡುಗ/ ಹುಡುಗಿಯ ಮುಷ್ಠಿಯನ್ನು ತೆರೆಸಲು ಪ್ರಯತ್ನಿಸಬೇಕು
- ಯಾರಿಗೂ ಶಾರೀರಿಕ ಗಾಯವಾಗಕೂಡದು.
- ಯಾವ ಪದ್ಧತಿಯನ್ನು ಉಪಯೋಗಿಸಿ ಯಶಸ್ಸು ದೊರಕಿತು? ಇಲ್ಲಿ ವಿನ್-ವಿನ್ ಪದ್ದತಿಯನ್ನು ಹೇಗೆ ಉಪಯೋಗಿಸುವಿರಿ?


### 4. ಸಂಘರ್ಷವನ್ನು ನಿವಾರಿಸುವಾಗ ಗಮದಲ್ಲಿಟ್ಟು ಕೊಳ್ಳುವ ಅಂಶಗಳು:

### ಅ. ಬೇರೆಯವರ ದೃಷ್ಟಿಕೋನವನ್ನು ತಿಳಿದುಕೊಳ್ಳುವುದು:

ಯಾರು ತಪ್ಪು, ಯಾರು ಸರಿ?
ಕೆಳಗಿನ ಚಿತ್ರ ನೋಡಿರಿ ಮತ್ತು ಪ್ರತಿಯೊಂದು ಚಿತ್ರದಲ್ಲಿ ತೋರಿಸಿದ ಇಬ್ಬರು ವ್ಯಕ್ತಿಗಳಲ್ಲಿ ಯಾರರು ತಪ್ಪು ಮತ್ತು ಯಾರು ಸರಿ ಇದರ ಚರ್ಚೆ ಮಡಿರಿ.

ಪ್ರತಿಯೊಂದು ಚಿತ್ರದ ಮೇಲೆ ಚರ್ಚೆ ಮಾಡಿರಿ. ವಿದ್ಯಾರ್ಥಿಗಳಿಗೆ ಕೇಳಿ, ಯಾರು ತಮ್ಮ ಮತ್ತು ಯಾರು ಸರಿ ಇದ್ದಾರೆ ? ಏಕೆ?






ಈ ಚಿತ್ರದಲ್ಲಿ ನಿಮಗೆ ತರುಣ ಸ್ತ್ರೀ ಕಾಣಿಸುತ್ತಿದ್ದಾಳೆ ಅಥವಾ ದೊಡ್ಡ ಮೂಗಿನ ಮುದುಕಿ?








***ಗಮನಿಸಬೇಕಾದ ಅಂಶಗಳು:***

*ದೃಷ್ಟಿಕೋನವೆಂದರೆ ವಿಶಿಷ್ಟವೃತ್ತಿ ಇಲ್ಲವೇ ಸಂಗತಿಗಳನ್ನು ನೋಡುವ ಪದ್ಧತಿ*
*ನಮ್ಮ ದೃಷ್ಟಿಕೋನವು ನಾವು ಯಾವುದೇ ಸಂಗತಿಗಳ ಕಡೆಗೆ, ಘಟನೆಗಳ ಕಡೆಗೆ ಹೇಗೆ ನೋಡುತ್ತೇವೆ ಇದನ್ನು ಸೂಚಿಸುತ್ತದೆ.*
*ಇತರರ ದೃಷ್ಟಿಕೋನವನ್ನು ತಿಳಿದುಕೊಳ್ಳುವುರಿಂದ ನಮಗೆ ಅವರ ವಿಚಾರ ಇಲ್ಲವೆ ಅವರ ಭಾವನೆ ಹೆಚ್ಚು ಸರಿಯಾಗಿ ತಿಳಿಯುತ್ತವೆ.*
*ಇದರಿಂದ ಸಕಾರಾತ್ಮಕ ಮನೋಭಾವನೆ ವಿಕಸಿತವಾಗುತ್ತದೆ.*

## ಬ. ತಪ್ಪು ತಿಳುವಳಿಕೆಯನ್ನು ಬಿಟ್ಟು ಬಿಡಿ:

ನಡೆಯಿರಿ, ನಾವು ಒಂದು ಚಿಕ್ಕ ನಾಟಕವನ್ನು ಸಾದರ ಪಡಿಸೋಣ ನಮಿತಾ, ಟೀನಾ ಮತ್ತು ರಾಖಿ ಇವರು ವರ್ಗಗೆಳತಿಯರಿದ್ದಾರೆ.

ಚಿಕ್ಕ ನಾಟಕವನ್ನು ಸಾದರ ಪಡಿಸಲು ವಿದ್ಯಾರ್ಥಿಗಳ ಆಯ್ಕೆ ಮಾಡಿರಿ ಪೂರ್ಣ ವರ್ಗದ ಮುಂದೆ ನಾಟಕವನ್ನು ಸಾದರ ಪಡಿಸಿರಿ. ಇತರ ವಿದ್ಯಾರ್ಥಿಗಳು ಲಕ್ಷ್ಯಕೊಟ್ಟು ನೋಡಬೇಕು.








ನಮಿತಾ ಹೋಗುವಳು ಮತ್ತು ರಾಖಿ ವರ್ಗದಿಲ್ಲ ಬರುವಳು















ರಾಖಿ ಅಳುವಳು ಮತ್ತು ಹೊರಗೆ ಹೋಗುವಳು.

**ಚರ್ಚೆ ಮಾಡಿರಿ:**

- ಟೀನಾ ಉದ್ದಟವಾಗಿ ಏಕೆ ವರ್ತಿಸಿದಳು?
- ನಮಿತಾಳು ಹೇಳಿದ ಮಾತಿನ ಮೇಲೆ ವಿಶ್ವಾಸವಿಡಲು ಟಿನಾಳಿಗೆ ಏನಾದರೂ ಆಧಾರ ವಿತ್ತೇ?
- ರಾಖಿಯ ಕುರಿತು ತಪ್ಪುತಿಳಿವಳಿಕೆ ಹಾಗೆಯೇ ಇದ್ದರೆ ಟೀನಾ ಮತ್ತು ರಾಖಿ ಇವರಲ್ಲಿಯ ಸಂಘರ್ಷ ಬಗೆಯಹರಿಯಬಹುದೇ?

## 7 ಕ. ಅಭಿಪ್ರಾಯ ನೀಡುವಲ್ಲಿ ಅವಸರ ಬೇಡ:

ಕೆಳಗಿನ ಪ್ರಸಂಗಗಳಅರ್ಥ ಹೇಳಿರಿ.

ಕೆಳಗಿನ ವಾಕ್ಯಗಳನ್ನು ಓದಿರಿ. ಮಕ್ಕಳಿಗೆ ಪ್ರತಿಯೊಂದು ವಾಕ್ಯ ಓದಿದ ನಂತರ ಅವರ ಮೊದಲ ಪ್ರತಿಕ್ರಿಯೆ ಏನು ಎಂಬುದನ್ನು ಕೇಳಿರಿ.



(1) ನಿಮಗೆ ರಾತ್ರಿಯ ವೇಳೆಯಲ್ಲಿ ಒಬ್ಬ ಮನುಷ್ಯ ಒಂದು ಮನೆಯ ಬೇಲಿಯಿಂದ ಒಳಗೆ ಹೋಗುವುದು ಕಾಣಿಸುವುದು.



(2) ಒಬ್ಬ ಹುಡುಗ ಡ್ರಾವರದಲ್ಲಿ ಕೈಹಾಕುತ್ತಿರುವನು. ಅವನ ಕೈಯಲ್ಲಿ ಹಣ ಇದೇ. ಕೋಣೆಯಲ್ಲಿಯಾರೂ ಇಲ್ಲ.



(3) ದಾರಿಯ ಮೇಲೆ ಒಂದು ಅಪಘಾತವಾಗಿದೆ. ಒಬ್ಬ ಮನುಷ್ಯನು ಮೋಟರ ಸಾಯಕಲ ಮೇಲೆ ಘಟನೆಯ ಸ್ಥಳದಿಂದ ಜೋರಾಗಿ ದೂರ ನಡೆದಿದ್ದಾನೆ.



(4) ಒಬ್ಬ ಮನುಷ್ಯನ ಬೆನ್ನಲ್ಲಿ ಸೇರಿದ ಮೊಳೆಯನ್ನು ಎರಡನೆಯ ವ್ಯಕ್ತಿಯು ಹಿಂದಿನಿಂದ ಹಿಡಿದಿದ್ದಾನೆ.

**ನಿಜವಾಗಿ ಏನು ಘಟಿಸಿದೆ:**

(1) ಮೊದಲನೆಯ ಪ್ರಸಗದಲ್ಲಿಯ ಮನುಷ್ಯನು ಹೊರಗೆ ಹೋಗುವಾಗ ಮುಖ್ಯ ಪ್ರವೇಶದ್ವಾರದರೇಲಿಕ್ಕೆಗಳನ್ನುಮರೆತು ಹೋಗಿದ್ದನು.ಮತ್ತು ರಾತ್ರಿ ಬಹಳ ತಡಮಾಡಿ ಮರಳಿದನು. ಅವನಿಗೆ ಬೇಲ್ ಬಾರಿಸಿ ಮನೆಯವರಿಗೆ ಎಬ್ಬಿಸವುದಿರಲಿಲ್ಲ.ಅನಕ್ಕಾಗಿ ಅವನು ಬೇಲಿಯನ್ನುಹಾರಿಒಳಗೆ ಹೋಗಿದ್ದನು.

(2) ಮಗನು ತಾಯಿಯು ಕೊಟ್ಟ ಹಣವನ್ನು ಡ್ರಾವರದಲ್ಲಿಮರಳಿ ಇಡುತ್ತಿದ್ದನು.

(3) ಮೋಟರ ಸಾಯಿಕಲ್ ಮೇಲಿನ ಮನುಷ್ಯನು ಸಮೀಪದ ಪೋಲಿಸ ಸ್ಟೇಶನದಿಂದ ಸಹಾಯ ಪಡೆಯಲು ವೇಗವಾಗಿ ಹೋಗುತ್ತಿದ್ದನು.

(4) ಯಾವ ಮನುಷ್ಯನು ಕೈಯಲ್ಲಿ ಮೊಳೆ ಹಿಡಿದಿದ್ದನೋ ಅವನು ನಿಜವಾಗಿ ಮೊಳೆ ತೆಗೆಯುವ ಪ್ರಯತ್ನಮಾಡುತ್ತಿದ್ದಾನೆ.


**ಚರ್ಚೆ ಮಾಡಿರಿ.**

ಈ ಉತ್ತರಗಳನ್ನು ಓದಿ ನಿಮಗೆ ಆಶ್ಚರ್ಯವೆನಿಸಿತೆ? ನೀವು ತಕ್ಷಣ ಅಭಿಪ್ರಾಯ ತಯಾರಿಸಿದಿರಾ? ನೀವು ಯಾವಾಗಲೂ ಹೀಗೆ ಮಾಡುತ್ತೀರಾ?

***ಗಮನಿಸಬೇಕಾದ ಅಂಶಗಳು:***

- *ಅಭಿಪ್ರಾಯವನ್ನು ನೀಡುವ ಅವಸರ ಮಾಡುವುದು ಅಂದರೆ ಸರಿಯಾಗಿ ವಿಚಾರ ಮಾಡದೇ ಮೇಲ್ನೋಟದ ಮಾಹಿತಿಯ ಆಧಾರದ ಮೇಲೆ ಯಾವುದೇ ಒಂದು ಅಂಶ ಒಳ್ಳೆಯದು ಇಲ್ಲವೆ ಕೆಟ್ಟದು ಎಂದು ನಿರ್ಧಾರ ಮಾಡುವುದು. ಹೀಗಾಗಲು ಕಾರಣ ನಾವು ನಮ್ಮ ಪೂರ್ವಾನುಭವದ ಆಧಾರ ಪಡೆದು ಯಾವುದೇ ಹೊಸ ಅಂಶಗಳ ಅರ್ಥ ಹಚ್ಚಲು ಪ್ರಯತ್ನಿಸುತ್ತೇವೆ, ಹೊಸ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಳ್ಳುವುದಿಲ್ಲ.*
- *ಪ್ರತಿಯೊಬ್ಬ ವ್ಯಕ್ತಿಯು ಹೀಗೆ ವಿಚಾರ ಮಾಡಲು ಅವನ ಪೂರ್ವಾನುಭವ ಕಾರಣೀಭೂತವಾಗಿರುತ್ತದೆ. ಈ ಅನುಭವ ತಿಳಿದುಕೊಳ್ಳುವುದು ಮಹತ್ವದ್ದಾಗಿದೆ.*
- *ಸಂಘರ್ಷವನ್ನು ಬಗೆಹರಿಸಲು ಯಾವಾಗಲೂ ಮೂರು ಅಂಶಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು ಇನ್ನೊಬ್ಬರ ದೃಷ್ಟಿಕೋನವನ್ನುತಿಳಿದುಕೊಳ್ಳಿರಿ, ಅಪನಂಬಿಕೆ ದೂರವಿಡಿರಿ, ಅಭಿಪ್ರಾಯವನ್ನು ಹೇಳಲು ಅವಸರ ಮಾಡಬೇಡಿರಿ.*

## 5. ಸಮಯವಯಸ್ಕರ ಒತ್ತಡ (Peer Pressure) ಕಿಶೋರಾವಸ್ಥೆಯಲ್ಲಿಯ ಸಂಘರ್ಷದ ಒಂದು ಮಹತ್ವದ ಕಾರಣ:




### ಸಮವಯಸ್ಕರು ಎಂದರೆಯಾರು?

ಸಮಯವಸ್ಕರೆಂದರೆಸಾಮಾನ್ಯವಾಗಿಒಂದೇ ಮಯಸ್ಕಿನ ಗುಂಪಿನಲ್ಲಿಯವ್ಯಕ್ತಿ ವರ್ಗಮಿತ್ರರು, ಮಿತ್ರರು, ಸಹೋದರರು, ಇತರ ಶಾಲೆಗಳಲ್ಲಿಯ, ಪಟ್ಟಣಗಳಲ್ಲಿಯ, ದೇಶಗಳಲ್ಲಿಯ ಅದೇ ವಯಸ್ಸಿನ ಹುಡುಗ/ಹುಡುಗಿಯರು.

### ಸಮವಯಸ್ಕರ ಒತ್ೆತ್ತಡ (Peer Pressure) ಅಂದರೇನು?

ಮನುಷ್ಯನುಸಾಮಾಜಿಕ ಪ್ರಾಣಿಯಾಗಿದ್ದಾನೆ.ಅಂತೆಯೇ ಯಾವುದೇ ವ್ಯಕ್ತಿಗೆಯಾವುದೇ ದೊಡ್ಡ ಸಮೂಹದಲ್ಲಿ ಭಾಗಿಯಾಗಬೇಕೆಂಬ ಇಚ್ಛೆ ಇರುವುದು ಅತ್ಯಂತನೈಸರ್ಗಿಕವಾಗಿದೆ.ಗುಂಪಿನಿಂದ ಹೊರತೆಗೆದರೆ ಅನೇಕ ಜನರಿಗೆ ಅಸುರಕ್ಷಿತವೆನಿಸುವುದು.ತನ್ನ ಸಮವಯಸ್ಸಿನ ಜನಸಮೂಹದಲ್ಲಿ ಭಾಗಿಯಾಗಲು, ಅವರಂತೆ ಇರಲು ಯಾವುದಾದರೂ ಒತ್ತಡ ಇಲ್ಲವೆ ಒತ್ತು ಅನಿಸಿದರೆ ಅದಕ್ಕೆ 'ಸಮಯಸ್ಕಜನರ ಒತ್ತಡ' (ಪಿಅರ ಪ್ರೆಶರ) ಎಂದು
ಕರೆಯುತ್ತಾರೆ.

### ಕಿಶೋರ ಅವಸ್ಥೆಯಲ್ಲಿಯ ಪಿಅರ ಪ್ರೆಶರ:

ಕಿಶೋರಾವಸ್ಥೆಯಲ್ಲಿ ಮಕ್ಕಳು ಹಲವಾರು ಶಾರೀರಿಕ ಮತ್ತು ಮಾನಸಿಕ ಬದಲಾವಣೆಗಳಿಂದ ಹೋಗುತ್ತಿರುತ್ತಾರೆ.ಈ ಕಾಲದಲ್ಲಿ, ಗೆಳೆಯ/ಗೆಳತಿಯರ ವರ್ಗದಲ್ಲಿಯ ಹುಡುಗ/ಹುಡುಗಿಯರ ಪ್ರಭಾವ ಆಗುವುದು. ತನ್ನ ಗೆಳೆಯ-ಗೆಳತಿಯರು, ವರ್ಗದಲ್ಲಿಯ ಹುಡುಗ-ಹುಡುಗಿಯರು ಗುಂಪಿನಲ್ಲಿ ತನನ್ನು ಸೇರಿಸಿಕೊಳ್ಳಬೇಕು,ತಾನೂ ಅವರ ಹಾಗೆಯೇ, ಅವರಲ್ಲಿಯ ಒಬ್ಬನಾಗಿ ಇರಬೇಕು ಈ ಎಂಬಿ ಬಹುದೊಡ್ಡ ಒತ್ತಡವು ಕಿಶೋರ ಅವಸ್ಥೆಯಲ್ಲಿಯಮಕ್ಕಳಿಗೆ ಕಂಡುಬರುವುದು. ಗೆಳೆಯರ ಗುಂಪಿನಿಂದ ಬೇರ್ಪಡೆಯಾದರೆ ಅವರಿಗೆ ಅಸುರಕ್ಷಿತ ವೆನಿಸುವದು. ಅಂತೆಯೇ ಗುಂಪಿನಲ್ಲಿ ಸೇರಲು ಬೇಕಾದದ್ದನ್ನುಮಾಡಲು ಅವರು ಸಿದ್ಧನಾಗಿರುವರು.ಹಲವಾರು ಸಲ ಇದರಿಂದ ಸಂಘರ್ಷಾತ್ಮಕ ಪ್ರಸಂಗಗಳು ನಿರ್ಮಾಣವಾಗುವವು. ಪಿಅರ ಪ್ರೆಶರ ಇದು ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ರೀತಿಯಲ್ಲಿ ಇರಬಹುದು.

**ಸಕಾರಾತ್ಮಕ ಪಿಅರ ಪ್ರೆಶರ:** ಅಭ್ಯಾಸ ಮಾಡುವ, ಹೆಚ್ಚು ಶ್ರಮ ಮಾಡುವ, ಚೆನ್ನಾಗಿ ವರ್ತಿಸುವ ಪಿಅರ ಪ್ರೆಶರ ಮನುಷ್ಯನ ಪ್ರಗತಿಯ ದೃಷ್ಟಿಯಿಂದ ಮಹತ್ವದ್ದಾಗಬಹುದು.

**ನಕಾರಾತ್ಮಕ ಪಿಅರ ಪ್ರೆಶರ:** ಗಂಡಾಂತರವನ್ನೆತ್ತಿಕೊಳ್ಳುವ, ಹೊಣೆಗಾರಿಕೆ ಇಲ್ಲದ ವರ್ತನೆ, ಇರುವ ಪಿಅರ ಪ್ರೆಶರ ಕಿಶೋರಾವಸ್ಥೆಯಲ್ಲಿನ ಮಕ್ಕಳ ಜೀವನಕ್ಕೆ ಗಂಡಾತರವನ್ನು ತರಬಹುದು.

ವಿದ್ಯಾರ್ಥಿಗಳಿಗೆಅವರ ದಿನನಿತ್ಯದಜೀವನದಲ್ಲಿ ಇಂಥ ಪಿಅರ ಪ್ರೆಶರ ಎಲ್ಲಾದರೂ ಅನುಭವಿಸಿದ್ದ ಉದಾಹರಣೆಗಳನ್ನುಕೇಳಿರಿ. ಕೊಟ್ಟ ಪ್ರತಿಯೊಂದು ಪ್ರಕಾರದ ಒಂದು ಉದಾಹರಣೆಯನ್ನುಮಕ್ಕಳಿಗೆ ವಹಿಯಲ್ಲಿ ಬರೆದಿಡಲು ಹೇಳಿರಿ.

### ನಕಾರಾತ್ಮಕ ಪಿಅರ ಪ್ರೆಶರದ ಪ್ರಕಾರಗಳು:

### 1. ಒಪ್ಪದೇ ಇರುವ ಪಿಅರ ಪ್ರೆಶರ:

ಯಾವುದೇ ಒಂದು ಕೆಲಸ ನೀವು ಮಾಡದಿದ್ದರೆ ನಿಮ್ಮನ್ನುಗುಂಪಿನಿಂದ ಬೇರ್ಪಡಿಸುವ ಇಲ್ಲವೆ ನಿಮ್ಮೊಂದಿಗಿದ್ದ ಸಂಬಂಧವನ್ನು ಮುರಿದು ಬಿಡುವ ಬೆದರಿಕೆ ನಿಮ್ಮ ಗೆಳೆಯ-ಗೆಳತಿಯರು ನಿಮಗೆ ತೋರಿಸುವುದು.




## 2. ಅಪಮಾನಿತನಾಗುವ ಪಿಅರ ಪ್ರೆಶರ:

ನೀವು ಯಾವುದೇ ಕೃತಿ ಮಾಡದಿದ್ದರೆ ನಿಮಗೆ ಅಣಕಿಸುವುದು, ನಿಮ್ಮನ್ನು ಅಪಮಾನಮಾಡುವುದು, ನಿಮ್ಮನ್ನು ಚುಡಾಯಿಸುವುದು. ಉದಾ: ನೀವು ಒಂದು ವಿಶಿಷ್ಟ ಪ್ರಕಾರದ ಬಟ್ಟೆ ತೊಡದಿದ್ದರೆ ನಿಮ್ಮ ಗೆಳೆಯ/ಗೆಳತಿಯರು ನಿಮ್ಮನ್ನು ಅಣಕಿಸುತ್ತಾರೆ.

## 3. ಕಾರಣಗಳನ್ನು ಹೇಳಿ ಒಪ್ಪಿಕೊಳ್ಳುವಂತೆ ನಿರ್ಮಾಣ ಮಾಡಿದ ಪಿಅರ ಪ್ರೆಶರ:

ನಿಮಗೆ ಬೇರೆ ಬೇರೆ ಪ್ರಕಾರದ ಅಯೋಗ್ಯ ಕಾರಣಗಳನ್ನು ಹೇಳುವುದು. ಇದರಿಂದ ನಿಮಗೆ ನಿಮ್ಮ ನಿಜವನ್ನು ಸ್ಪಷ್ಟವಾಗಿ ಮಂಡಿಸಲು ಬರುವುದಿಲ್ಲ, ಅದರ ಸಮರ್ಥನೆ ಮಾಡಲು ಬರುವುದಿಲ್ಲ ಉದಾ: ಯಾವಾಗಾದರೊಮ್ಮೆ ಶಾಲೆಗೆ ಹೋಗದೆ ಚಿತ್ರಪಟ ನೋಡುವುದು ಸುಳ್ಳು ಹೇಳುವುದು, ಇದರಿಂದ ಯಾವುದೇ ಹಾನಿಯಗುವುದಿಲ್ಲವೆಂದುನಿಮ್ಮ ಗೆಳೆಯರು ನಿಮಗೆ ಮನವರಿಕೆ ಮಾಡುವರು.





## 4. ಉದಾಹರಣೆ ಮೂಲಕ ನಿರ್ಮಾಣವಾದ ಪಿಅರ ಪ್ರೆಶರ

ನಿಮ್ಮ ಗೆಳೆಯ/ಗೆಳತಿಯರು ಯಾವುದೋ ಕೃತಿ ಮಾಡುತ್ತಾರೆ ಮತ್ತು ನಿಮ್ಮ ಮೇಲೆ ಯಾರೂ ಒತ್ತಾಯ ಮಾಡುವುದಿಲ್ಲ, ಆದರೂ ನಿಮಗೆ ಸ್ವತಃ ಹಾಗೆ ಮಾಡಬೇಕೆನ್ನಿಸುವುದು.

ಉದಾ: ನಿಮ್ಮ ಗುಂಪಿನಲ್ಲಿಯ ಪ್ರತಿಯೊಬ್ಬರು ಇಂಗ್ಲಿಷಿನಲ್ಲಿ ಮಾತನಾಡುತ್ತಾರೆ. ನಿಮಗೆ ಇಂಗ್ಲಿಷ್ ಮಾತನಾಡಲು ಯಾರೂ ಒತ್ತಾಯ ಮಾಡುವುದಿಲ್ಲ, ಆದರೂ ನಿಮಗೆ ಸ್ವತಃ ಕೀಳರಿಮೆ ಅನಿಸುವುದು. ಮತ್ತು ನಿಮ್ಮ ಆತ್ಮವಿಶ್ವಾಸಕಡಿಮೆಯಾಗುವುದು.

ಪಿಅರ ಪ್ರೆಶರದ ಮೇಲಿನ ಉದಾಹರಣೆಗಳಿಂದ ನಮ್ಮ ಗಮನಕ್ಕೆ ಬರುವ ವಿಷಯವೆಂದರೆ, ಗೆಳೆಯರ ಜೊತೆಗೆ ಇರುವಾಗ ಕೆಲವೊಂದು ಸಂಗತಿಗಳನ್ನು ಇಚ್ಛೆ ಇರದಿದ್ದರೂ ಮಾಡಬೇಕಾಗುತ್ತದೆ. ಇದಕ್ಕೆ 'ಸಮವಯಸ್ಕರ ಒತ್ತಡ' ಎಂದು ಸಂಬೊಧಿಸಲಾಗುತ್ತದೆ.

## 6. ಸಂಘರ್ಷವನ್ನು ಬಗೆಹರಿಸುವ ಮೆಟ್ಟಿಲುಗಳು:

- ಮೀನಾಕ್ಷಿಗೆ ಪಕ್ಕದ ಪಟ್ಟಣದಿಲ್ಲಮುಂದಿನ ಶಿಕ್ಷಣಕ್ಕಾಗಿ ಹೋಗ ಬೇಕಾಗಿದೆ. ಏಕೆಂದರೆ ಅಲ್ಲಿ ಆಕೆಯ ನೆಚ್ಚಿನ ಕೋರ್ಸ್‌ಗಳ ಅನೇಕ ಒಳ್ಳೆಯ ಮಹಾವಿದ್ಯಾಲಯಗಳಿವೆ.
- ಆದರೆ ಆಕೆಯ ಪಾಲಕರ ವಿರೋಧ ಎದೆ. ಏಕೆಂದರೆ ಅವರಿಗೆ ಅವಳ ಸುರಕ್ಷಿತತೆಯ ಕಾಳಜಿ ಇದೆ.
- ಮೀನಾಕ್ಷಿ ಏನು ಮಾಡಬೇಕು ?

### ಮೆಟ್ಟಿಲು 1. ನಿಲ್ಲಿ ಮತ್ತು ವಿಚಾರಮಾಡಿ :

ದೀರ್ಘ ಶ್ವಾಸತಗೆದುಕೊಳ್ಳಿ, ಸಿಟ್ಟಿನ ಭರದಲ್ಲಿವಾದಹಾಕಲು, ಜಗಳ ಮಾಡಲು ಹೋಗಬೇಡಿ. ನಾವು ಸಿಟ್ಟಿಗೆದ್ದರೆಯಾವ ದಾರಿಯೂ ಸಿಗಲಾರದು. ಸಂಘರ್ಷವು ಯಾವಾಗ ಮುಗಿಯುವುದೆಂದರೆ ನಾವು ಶಾಂತ ತಲೆಯಿಂದ ಸರಳ, ಸ್ಪಷ್ಟವಿಚಾರಮಾಡಿದಾಗ ಮಾತ್ರ

ಮೀನಾಕ್ಷಿ ತನ್ನ ಪಾಲಕರಿಗೆ ಪಟ್ಟಣಕ್ಕೆ ಹೋಗುವುದರ ಲಾಭಗಳನ್ನು ತಿಳಿಹೇಳುವಳು. ಆದರೂ ಅವಳ ಪಾಲಕರು ಆಕೆಗೆ ಕಳಿಸಲು ಸಿದ್ದರಾಗುವುದಲ್ಲಿ. ಆದರೆ ಮೀನಾಕ್ಷಿ ಜಗಳ ಮಾಡುವುದಿಲ್ಲ. ಆಕೆಯು ಈ ಸಂಘರ್ಷಾತ್ಮಕ ಪರಿಸ್ಥಿತಿಯ ಬಗ್ಗೆ ಬಹಳ ಸಲ ವಿಚಾರ ಮಾಡುವಳು:

### ಮೆಟ್ಟಿಲು 2. ಶಬ್ದಗಳಲ್ಲಿ ಮಂಡಿಸಿರಿ:

ಸಂಘರ್ಷವನ್ನು ಕೆಲವೇ ಶ್ಬುಗಳಲ್ಲಿ ಮಡಿಸಿರಿ. ನೀವು ಕೆಳಗಿನಂತೆ ಮಂಡಿಸಬಹುದು.

ಸಂಘರ್ಷ ಹೀಗಿದೆ ಅಂದರೆ...........……........

ಮೀನಾಕ್ಷಿಯು ತನ್ನ ಜೀವನದ ಸಂಘರ್ಷವನ್ನು ಕೆಳಗಿನಂತೆ– ಮಂಡಿಸುವಳು

ಸಂಘರ್ಷ ಹೀಗಿದೆ, ಅಂದರೆ 'ನಾನು ಮುಂದಿನ ಶಿಕ್ಷಣಕ್ಕಾಗಿ ಪಟ್ಟಣಕ್ಕೆ ಹೋಗಬೇಕೊ' ಇಲ್ಲವೆ 'ಊರಲ್ಲಿಯೇ ಇರಬೇಕೊ'

### ಮೆಟ್ಟಿಲು 3. ಇತರರ ಮಾತು ಕೇಳಿ:

ಇನ್ನೊಬ್ಬರ ಮಾತು ಕೇಳಿರಿ. ನಿಮ್ಮ ಅಭಿಪ್ರಾಯ ನೀಡುವ ಅವಸರ ಮಾಡದೇ, ಯಾರು ತಪ್ಪ, ಯಾರು ಸರಿ ಎಂಬ ವಿಚಾರ ಮಾಡದೇ. ಎದುರಿನವರ ಮಾತು ಕೇಳಿರಿ.

ಮೀನಾಕ್ಷಿ ಶಾಂತವಾಗಿ ತನ್ನ ಪಾಲಕರ ಹೇಳಿಕೆಯನ್ನು ಕೇಳಿಸಿಕೊಳ್ಳುತ್ತಾಳೆ. ಅವರ ವಿಚಾರ ತಿಳಿದುಕೊಳ್ಳುವ ಪ್ರಯತ್ನಮಾಡುತ್ತಾಳೆ ಅವರಿಗೆ ಹೀಗೇಕೆ ಅನ್ನಿಸುವುದುಎಂಬುದರ ಕಾರಣಗಳನ್ನು ತಿಳಿದುಕೊಳ್ಳುತ್ತಾಳೆ.

### ಮೆಟ್ಟಿಲು 4. ಎರಡೂ ಕಡೆಯ 'ಅವಶ್ಯಕತೆ' ತಿಳಿದುಕೊಳ್ಳಿರಿ:

ಹಲವಾರು ಸಲ ವ್ಯಕ್ತಗೆಒಂದು ಯಾವುದೋ ಕೃತಿಮಾಡಿಕೊಳ್ಳುವುದಿರುತ್ತದೆ. ಆದರೆ ಅದರ ಹಿಂದೆ ಅದರ ವಿಚಾರ, ಅದರ ಅವಶ್ಯಕತೆ. ಬೇರೆಯೇ ಇರುತ್ತದೆ. ಬೇಕಾದ ಕೃತಿಯ ಕಡೆಗೆ ನೋಡದೆ 'ಅವಶ್ಯಕತೆ' ಯ ಕಡೆಗೆ ನೋಡಿರಿ. ಕೆಳಗಿನಂತೆ ಯೊಚನೆ ಮಾಡಿರಿ.

ನನ್ನ ಅವಶ್ಯಕತೆ...................

ಅವರ / ಎದುರಿನವರ ಅವಶ್ಯಕತೆ..........

ಮೀನಾಕ್ಷಿ ಕೆಳಗಿನಂತೆ ಬರೆಯುತ್ತಾಳೆ–

ನನಗೆ ಒಳ್ಳೆಯ ಶಿಕ್ಷಣದ ಅವಶ್ಯಕತೆ ಇದೆ, ಅವರಿಗೆ ನನ್ನ ಸುರಕ್ಷಿತತೆಯ ಅವಶ್ಯಕತೆ ಇದೆ.

**ಇದನ್ನು ಗಮನದಲ್ಲಿಟ್ಟುಕೊಳ್ಳಿರಿ:** –ಎದುರಿನವರ ಅವಶ್ಯಕತೆಯನ್ನು ತಿಳಿದುಕೊಳ್ಳಲು ಸತತವಾಗಿ 'ಏಕೆ' ಎಂಬ ಪ್ರಶ್ನೆಕೇಳುತ್ತಿರಿ. ಎದುರಿನವರಿಗೆ ಏಕೆ ಯಾವುದೊ ಕೃತಿ/ಅಂಶ ಆಗಬೇಕಾಗಿದೆ? ಉದಾ: ಮೀನಾಕ್ಷಿಯ ಪಾಲಕರಿಗೆ ಆಕೆಯನ್ನು ಪಟ್ಟಣಕ್ಕೆ ಏಕೆ ಕಳಿಸುವುದಾಗುವುದಿಲ್ಲ?

### ಮೆಟ್ಟಿಲು 5. ಉಪಾಯಗಳ ವಿಚಾರ ಮಾಡಿರಿ:

ಎರಡೂ ಬದಿಯ ಅವಶ್ಯಕತೆಯನ್ನು ಪೂರೈಸುವ ಯಾವ ವ್ಯವಹಾರಿಕ ಮಾರ್ಗವಿದೆ ಎಂಬುದನ್ನು ಶೊಧಿಸಿರಿ. ಇಬ್ಬರಿಗೂ ಸಮಾಧಾನ ಮಾಡುವಂತಹ ಯಾವ ಮಾರ್ಗ ಇರಬಹುದು?

ಮೀನಾಕ್ಷಿಯು ಎಂದು ವಿಚಾರ ಮಾಡುತ್ತಾಳೇ ಎರಡೂ ಬದಿಯ ಅವಶ್ಯಕತೆಗಳ ಪೂರ್ತತೆಯನ್ನು ಹೇಗೆ ಮಾಡಲು ಬರಬಹುದು?

**ಉಪಾಯ :** ಮೀನಾಕ್ಷಿ ಪಟ್ಟಣಕ್ಕೆ ಹೋಗಿ ಕಲಿಯಲು ಹೋಗಬಹುದು ಹಾಗೂ ಅವಳ ಪಾಲಕರಿಗೆ ಅವಳ ಸುರಕ್ಷಿತತೆಯ ಕುರಿತು ವಿಶ್ವಾಸವೂ ಮೂಡುವಂತೆ ಏನಾದರೂ ಮಾಡಲು ಸಾಧ್ಯವೇ?

### ಮೆಟ್ಟಿಲು 6. ನಿಮ್ಮ ಅಂಶಗಳನ್ನು ಸಿದ್ಧ ಪಡಿಸಿರಿ:

ನೀವು ಶೋಧಿಸಿದ ಮಾರ್ಗ ಇಲ್ಲವೆ ಉಪಾಯ ಹೇಗೆ ಯೋಗ್ಯವಾಗಿದೆಎಂಬುದನ್ನು ಸಿದ್ಧಪಡಿಸಲು ಮಾಹಿತಿಯನ್ನು ಸಂಗ್ರಹಿಸಿರಿ, ತಜ್ಞರ ಮತವನ್ನು ಪಡೆಯಿರಿ. ಜನರಿಗೆ ಭೆಟಿಯಾಗಿರಿ, ಈ ಹಿಂದೆ ಯಾರಾದರೂ ಹೀಗೆ ಮಾಡಿದ್ದಾರೆಯೆಎಂಬುದನ್ನು ಶೋಧಿಸಿರಿ. ಮೀನಾಕ್ಷಿ ಪಟ್ಟಣದಲ್ಲಿಯತನ್ನ ಸಂಬಂಧಿಕರಿಗೆ ಇಲ್ಲವೆ ಗೆಳೆಯ-ಗೆಳತಿಯರಿಗೆತನ್ನ ಪಾಲಕರೊಂದಿಗೆ ಮಾತನಾಡಲು ಹೇಳುವಳು ಅವಳಿಗಿಂತ ಮೊದಲು ಅವಳ ಊರಿಂದ ಅಭ್ಯಾಸಮಾಡಲು ಪಟ್ಟಣಕ್ಕೆ ಹೋಗಿದ್ದ ಹುಡಗಿಯರನ್ನುಕರೆದು ತಂದೆ-ತಾಯಿಗೆಭೆಟ್ಟಿ ಮಾಡಿಸುತ್ತಾಳೆ, ಪಟ್ಟಣದಲ್ಲಿರುವಹುಡುಗಿಯರ ಸುರಕ್ಷಿತ, ವಿಶ್ವಾಸವುಳ್ಳ ವಸತಿಗೃಹಗಳಮಾಹಿತಿಯನ್ನುಸಂಗ್ರಹಿಸುವಳು.ಅವಳು ತನ್ನ ಪಾಲಿಕರಿಗೆ ತಾನು ಸ್ವಂತದ ಕಾಳಜಿ ವಹಿಸಬಲ್ಲೆ ಎಂಬ ಭರವಸೆಯನ್ನು ಕೊಡುವಳು.

## ನಡೆಯಿರಿ, ಕಲಿತಿದ್ದನ್ನು ಉಪಯೋಗಿಸಿರಿ ನೋಡೋಣ!

ನಿಮ್ಮ ಎಲ್ಲಕ್ಕೂ ಒಳ್ಳೆಯ ಗೆಳೆಯನ್ನು ಇತ್ತಿತ್ತಲಾಗಿ ಧೂಮ್ರಪಾನವನ್ನು ಮಾಡಲು ಪ್ರಾರಂಭಿಸಿದ್ದಾನೆ. ಆತನ ಸ್ವಂತದ ಒಳತಿಗಾಗಿ ಅವನು ಅದನ್ನು ನಿಲ್ಲಿಸಬೇಕೆಂದು ನಿಮಗೆ ಅನ್ನಿಸುವುದು ಆದರೆ ನಿಮಗೆ ಅಂಜಿಕೆ ಇದೆ. ಏನೆಂದರೆ ಅವನು ದುರ್ಲಕ್ಷ್ಯಿಸಬಹುದು.ಮತ್ತು ನಿಮ್ಮ ಒಬ್ಬ ಮಿತ್ರ ದೂರಾಗಬಹುದು.

ನಿಮ್ಮ ಗೆಳೆಯ/ಗೆಳತಿಯರು ನಿಮಗೆ ಹೆದ್ದಾರಿ (ಹಾಯವೆ)ಯ ಮೇಲೆ ಸಾಯಕಲ ರೇಸ (ಸ್ಪರ್ಧೆ) ಮಾಡುವಂತೆ ಅಹ್ವಾನಿಸಿದ್ದಾರೆ. ಯಾವಾಗ ನೀವು ಇಲ್ಲವೆಂದಿದ್ದಿರೋ ಆಗ ಅವರು ನಿಮಗೆ ಅಂಜುಬುರುಕ/ಅಂಜುಬುರುಕಿಎಂದು ಚುಡಾಯಿಸಹತ್ತಿದರು.

ನಿಮಗೆ ಒಬ್ಬ ಗೆಳೆಯನ ಇಲ್ಲವೆ ಗೆಳತಿಯರ ಹುಟ್ಟುಹಬ್ಬಕ್ಕೆಆಗ್ರಹ ಮಾಡಿ ಕರೆದಿದ್ದಾರೆ. ಆದರೆ ಮರುದಿವಸವೇ ನಿಮ್ಮ ಪರೀಕ್ಷೆ ಇದೆ. ಮತ್ತು ಅದಕ್ಕಾಗಿ ನಿಮಗೆ ಅಭ್ಯಾಸಮಾಡುವ ಅವಶ್ಯಕತೆಇದೆ.

ನಿಮ್ಮ ವರ್ಗದಲ್ಲಿ ಒಬ್ಬ ಹೊಸ ವಿದ್ಯಾರ್ಥಿನಿ ಬಂದಿದ್ದಾಳೆ ನಿಮ್ಮ ಗೆಳೆಯರು ಆಕೆಯ ಚೇಷ್ಟೆ ಮಾಡುವ ಯೋಜನೆಯನ್ನು ರೂಪಿಸುತ್ತಾರೆ. ನೀವು ಅದರಲ್ಲಿ ಸೇರುವಂತೆ ಹೇಳುತ್ತಾರೆ. ನಿಮಗೆ ಅದರಲ್ಲಿ ಸೇರುವಂತೆ ಹೇಳುತ್ತಾರೆ ನಿಮಗೆ ಅದರಲ್ಲಿ ಸಹಭಾಗಿಯಾಗುವಮನಸ್ಸಿನಲ್ಲಿನೀವು ಏನು ಮಾಡುವಿರಿ?

ನಿಮಗೆ ಆಟದಲ್ಲಿ ವಿಶೇಷ ಅಭಿರುಚಿ ಇದೆ. ಆದರಲ್ಲಿಯೇ ನಿಮ್ಮ ಭವಿಷ್ಯ ರೂಪಿಸುವುದಿದೆಆದರೆ ನಿಮ್ಮ ಪಾಲಕರ ಅಭಿಪ್ರಾಯದಂತೆ ನೀವು ಹತ್ತನೆಯ ತರಗತಿ ನಂತರ ವಿಜ್ಞಾನ ಶಾಖೆಯಲ್ಲಿ ಓದಬೇಕು. ಏಕೆಂದರೆ ಆಟದಲ್ಲಿ ಹೆಸರು ಗಳಿಸಿದವರಿಗೆ ಬಹಳ ಹಣ ಸಿಗುವುದಿಲ್ಲಎಂದು ಅವರಿಗೆ ಅನ್ನಿಸುತ್ತದೆ.

ವರ್ಗದಲ್ಲಿಯ ಮಕ್ಕಳನ್ನು ಗುಂಪಿನಲ್ಲಿ ವಿಂಗಡಿಸಿ ಪ್ರತಿಯೊಂದು ಗುಂಪಿಗೆ ಒಂದು ಸಂಘರ್ಷಾತ್ಮಕ ಪರಿಸ್ಥಿತಿಯ ಮೇಲೆ ವಿಚಾರ ಮಾಡಲು ಹೇಳಬೇಕು.
ಪುಸ್ತಕದಲ್ಲಿ ಕೊಟ್ಟ ಮೆಟ್ಟಿಲುಗಳನ್ನು ಉಪಯೋಗಿಸಿ ಆ ಸಂಘರ್ಷವನ್ನು ಹೇಗೆ ಬಿಡಿಸಲು ಬರಬಹುದು ಈ ಕುರಿತು ಅವರ ವಹಿಯಲ್ಲಿ ಬರೆಯಲು ಹೇಳಬೇಕು.
ಚರ್ಚೆಗಾಗಿ 10 ನಿಮಿಷಗಳ ಅವಧಿ ಕೊಡಿರಿ. ಪ್ರತಿಯೊಂದು ಗುಂಪಿಗೆ ಅವರ ಪ್ರಶ್ನೆಗಳ ಮತ್ತು ಉಪಾಯಗಳ ಕುರಿತು ಚಿಕ್ಕ ನಾಟಕ ಸಾದರ ಪಡಿಸಲು ಹೇಳಿರಿ.
ಸ್ವಂತದ ಅನುಭವವನ್ನೂ ಸಹ ಉಪಯೋಗಿಸಬಹುದು.

***ಗಮನಿಸಬೇಕಾದ ಅಂಶಗಳು:***

- *ಯಾವುದೇ ಸಂಘರ್ಷ ಬಗೆಹರಿಸುವಾಗ ಒಂದು ವೇಳೆ ನೀವು ತಪ್ಪಿದ್ದೀರಿಎಂದು ನಿಮಗೆ ಅನಿಸಿದರೆ ಕೂಡಲೇ ಕ್ಷಮೆ ಕೇಳಿರಿ.*
- *ಒಂದು ವೇಳೆ ಬೇರೆ ತಂಡದವರು ನಿಮ್ಮನ್ನು ಅರಿತು ಕೊಳ್ಳುವ ಪ್ರ ಯತ್ನ ಮಾಡಿದರೆ ಅವರಿಗೆ ಆಭಾರ ಮನ್ನಿಸಿರಿ.*
- *ಯೋಗ್ಯ ವಿದ್ದಲ್ಲಿ ಕ್ಷಮೆ ಬೇಡುವುದು ಇಲ್ಲವೆ ಆಭಾರ ಮನ್ನಿಸುವದು ಇವುಗಳಿಂದ ಸಂಘರ್ಷ ಕಡಿಮೆಯಾಗುವುದು. ಮತ್ತು ವ್ಯಕ್ತಿಮತ್ವ ರೂಪಿಸಲು ಸಹಾಯ ವಾಗುವುದು.*
- *ಸಮಸ್ಯೆ ಯ ಉಗಮವನ್ನು ಶೋಧಿಸಿ ಯಾವ ಯಾವ ಯೋಗ್ಯ ಪರ್ಯಾಯಗಳು ಉಪಲಬ್ದವಾಗಿವೆಮತ್ತು ಅವು ಹೇಗೆ ಉಪಯೋಗಿಸಬಹುದು ಎಂಬುದರ ಮಾಹಿತಿ ಪಡೆದುಕೊಳ್ಳಿರಿ.*
- *ಹೇಗೆ ವ್ಯಕ್ತಿ-ವ್ಯಕ್ತಿಗಳಲ್ಲಿಸಂಘರ್ಷ ವಿರುವವೋ ಹಾಗೆಯೆ ವ್ಯಕ್ತಿಯ ಅಂತರಂಗದಲ್ಲೂ ಸಂಘರ್ಷ ವಿರುವವು. ಅವುಗಳಿಗೆ ಅಂತರಿಕ ಸಂಘರ್ಷವೆಂದು ಸಂಭೋಧಿಸುವರು. ಉದಾ: ನಮಗೆ ಪ್ರಾಮಾಣಿಕತೆಮಹತ್ವದ್ದು ಎಂದು ಅನಿಸುತ್ತದೆ. ಆದರೆ ಕೆಲ ಪರಿಸ್ಥಿತಿಯಲ್ಲಿ ಪ್ರಾಮಾಣಿಕರಾಗಿ ಇರಲು ನಮಗೆ ಧೈರ್ಯವಾಗುವುದಿಲ್ಲ. ಇಂಥ ವೇಳೆಗೆ ನಮ್ಮ ಮನಸ್ಸಿನಲ್ಲಿ ಒಂದು ಸಂಘರ್ಷ ನಿರ್ಮಾಣವಾಗುವುದು. ಇಂಥ ಸಂಘರ್ಷಗಳನ್ನು ಎದುರಿಸುವ ಕೌಶಲ್ಯ ಗಳನ್ನೂನಾವು ಕಲಿಯಬೇಕು.*

## ಮೌಲ್ಯಮಾಪನ

| ಭಾರಾಂಶ 10% | | | | |
|---|---|---|---|---|
| **ಮಾನದಂಡ** | **ಉತ್ತಮ (ಬಹಳ ಒಳ್ಳೆಯ)** | **ಯೋಗ್ಯ (ಸಮಾಧಾನಕಾರಕ)** | **ಅಯೋಗ್ಯ (ಅಸಮಾಧಾನಕಾರಕ)** | **ಗುಣಗಳು** |
| **ವರ್ಗ ಕಾರ್ಯದಲ್ಲಿ ಸಹಭಾಗ** | ಈ ಪ್ರಕರಣದಲ್ಲಿಕೊಟ್ಟ ಎಲ್ಲಕೃತಿಗಳನ್ನು ಉತ್ಸಾಹದಿಂದ ಮಾಡಿ ವಹಿಯಲ್ಲಿ ಯೋಗ್ಯ ರೀತಿಯಿಂದ ಬರೆದಿಡಲಾಗಿದೆ. | ಎಲ್ಲ ವರ್ಗದಲ್ಲಿಯ ಕೃತಿಗಳನ್ನು ಪೂರ್ಣ ಮಾಡಲಾಗಿದೆ. | ಇತರರ ವಹಿ ನೋಡಿ ಕೃತಿಗಳನ್ನು ಪೂರ್ಣ ಮಡಲಾಗಿದೆ. | |
| **ಪುಸ್ತಕದಲ್ಲಿ ಕೊಟ್ಟ ಮೆಟ್ಟಿಲುಗಳ ಆಧಾರದಿಂದ ಸಂಘರ್ಷವನ್ನು ಬಗೆಹರಿಸುವುದು.** | ಪ್ರತಿಯೊಂದುಮೆಟ್ಟಿಲುಗಳ ವಿಚಾರ ಮಾಡಿ ವಿವರವಾಗಿ ಬರೆದು ಕೊಟ್ಟ ಪ್ರಸಂಗದಿಂದ ವಿನ್-ವಿನ್ ಮಾರ್ಗ ಶೋಧಿಸಲಾಯಿತು. | ಕೆಲ ಮೆಟ್ಟಿಲುಗಳನ್ನು ಬಿಡಲಾಯಿತು, ಶೋಧಿಸಿದ ಉಪಾಯಗಳ ಒಳ್ಳೆಯ ಸ್ಪಷ್ಟೀಕರಣ ಕೊಡಲು ಆಗಿಲ್ಲ | ಉಪಯೋಜನೆ ಮಾಡಲು ಒಂದೇ ಇಲ್ಲ. | |


ಧೈರ್ಯಧರ,ನಿನಗೂ ತ್ರಿಕೋನನಿರ್ಮಿತಿ ತಿಳಿಯಲು ಕಠಿಣ ವಾಯಿತಲ್ಲ?
ತ್ರಿಕೋನನಿರ್ಮಿತಿ? ಹಂ.......ವನಗೆ ಚೆನ್ನಾಗಿ ನೆನಪಿಗೆ ಬರುತ್ತಿಲ್ಲ....ಈಗ ಬಹಳ ಕಾಲ ಆಗಿ ಹೋಗಿದೆ ಅದಕ್ಕೆ.
ನನಗಂತೂ ಹೀಗೆ ಅನ್ನಿಸುತ್ತದೆ,ನಾನು ಗಣಿತಕ್ಕಾಗಿ ಹುಟ್ಟಿಲ್ಲ. ಗಣಿತ ತಿಳಿದುಕೊಳ್ಳುವಕ್ಷಮತೆ ಬಹುಶಃ ಈ ಜನ್ಮದಲ್ಲಿಲ್ಲ. ನೀನು ನಿನ್ನ ಶಕ್ತಿಯನ್ನು ಜನ್ಮತಃ ಪಡೆದುಕೊಂಡು ಬಂದಿಯಲ್ಲ? ಹಾಗೆಯೇ?
ಅರೇ ನಿಲ್ಲು....ಇಲ್ಲಾ! ಮಿತ್ರ,ನನ್ನ ಜೀವನದಲ್ಲಿಯೂ ಬಹಳ ಕೆಟ್ಟ ದಿನಗಳು ಬಂದು ಹೋಗಿವೆ, ಗಿಡದಿಂದ ಕೆಳಗಿಳಯುವಾಗ ಬೀಳುವುದು, ಹಾರುವಾಗ ಬೀಳುವುದು. ಕೆಲವೊಮ್ಮೆಯಂತೂ ನನ್ನ ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು....ಆಗ ನಾನೂ ಸಹ ಸಂಪೂರ್ಣವಾಗಿ:ಸೋತ್ತಿದ್ದೇನೆ ಎಂದು ಅನಿಸಿತ್ತು
ಆದರೆ ನಾನು ಬಹಳ ಪರಿಶ್ರಮ ಮಾಡಿದೆ... ಯಾರೊ ಹೀಗೆ ಧೈರ್ಯಧರನಾಗಿಜನಿಸುವುದಿಲ್ಲ. ಅದನ್ನು ಗಳಿಸಬೇಕಾಗುತ್ತದೆ.
ಇತ್ತಿತ್ತಲಾಗಿಈ ಕುರಿತು ಒಂದು ಸಂಶೋಧನೆಯಾಗಿದೆ....ಅದು ನಿನಗೆ ತಿಳಿದುಕೊಳ್ಳಲು ಇಷ್ಟವೇ?

# 7 ಬೆಳವಣಿಗೆಗೆ ಪೂರಕವಾದ ಮಾನಸಿಕತೆ

## ನಿಮ್ಮಲ್ಲಿಯ ಕ್ಷಮತೆಯನ್ನು ವೃದ್ಧಿ ಮಾಡುವುದು...

BIFXVY

**ಉದ್ದೇಶಗಳು:**

(1) ಬುದ್ಧಿಮತ್ತೆ /ಕೌಶಲ್ಯ /ಕ್ಷಮತೆಇವುಗಳಲ್ಲಿ ಪ್ರಶಿಕ್ಷಣ,ಪ್ರತಿಕ್ರಿಯೆಮತ್ತು ಅಭ್ಯಾಸ ಇವುಗಳ ಸಹಾಯದಿಂದ ಸುಧಾರಣೆ ಯಾಗುವುದು, ಈ ವಿಧಾನದ ಸ್ಪಷ್ಟೀಕರಣಮಾಡುವದು.

(2) 'ಬೆಳವಣಿಗೆಗೆ ಪೂರಕವಾದ ಮಾನಸಿಕತೆ'(Growth Mindset) ಈ ಸಂಜ್ಞೆಯನ್ನು ಸ್ವಂತದ ಶಬ್ದದಲ್ಲಿ ಸ್ಪಷ್ಟಪಡಿಸುವುದು.

(3) 'ಸಂಕುಚಿತ ಮಾನಸಿಕತೆ' ಮತ್ತು 'ಬೆಳವಣಿಗೆಗೆ ಪೂರಕ ವಾದ ಮಾನಸಿಕತೆ' ಇವುಗಳಲ್ಲಿಯ ಅಂತರವನ್ನು ಗುರುತಿಸಲು ಬರುವುದು

(4) ದೈನಂದಿನ ವ್ಯವಹಾರದಲ್ಲಿಯ ಪ್ರಸಂಗಗಳಿಗೆ 'ಬೆಳವಣಿಗೆಗೆ ಪೂರಕವಾದ ಮಾನಸಿಕತೆ' ಈ ಸಂಕಲ್ಪನೆಯ ಉಪಯೋಗ ಮಾಡಿ ರಚನಾತ್ಮಕ ಪ್ರತಿಕ್ರಿಯೆಕೊಡುವುದು

(5) ಬೆಳವಣಿಗೆಗೆ ಪೂರಕವಾದ ಮಾನಸಿಕತೆ ಈ ಸಂಕಲ್ಪನೆಯ ಆಧಾರ ಪಡೆದು ಸ್ವಂತದ ಕ್ಷಮತೆಗಳಲ್ಲಿಸುಧಾರಣೆ ಮಾಡುವ ದೃಷ್ಟಿಯಿಂದಕಾರ್ಯನಿಯೋಜನೆಯ ರೂಪರೇಷೆ (Design)ತಯಾರಿಸಲು ಬರುವುದು.

## 1. ಬುದ್ಧಿಮತ್ತೆ ಮತ್ತು ಕ್ಷಮತೆ ಇವುಗಳ ಕುರಿತು ನಿಮಗೇನು ಗೊತ್ತಿದೆ?

ಕೆಳಗೆ ಕೆಲವೊಂದು ವಿಧಾನಗಳನ್ನು ಕೊಡಲಾಗಿದೆ ಅವುಗಳಲ್ಲಿ ಕೆಲ ವಿಧಾನಗಳು ಸತ್ಯವಾಗಿರಬಹುದು ಮತ್ತು ಕೆಲ ವಿಧಾನಗಳು ಅಸತ್ಯವಾಗಿರಬಹುದು. ನೀವು ನಿಮ್ಮ ಅನುಭವದಿಂದ ವಿಧಾನಗಳು ಸತ್ಯವೋ, ಅಸತ್ಯವೋ ಎಂಬುದನ್ನ ನಿರ್ಧರಿಸಿರಿ.

> ದಯವಿಟ್ಟು ಲಕ್ಷ್ಯದಲಿಡಿ.ಇಲ್ಲಿ ಯಾವುದೇ ವಿಧಾನ ಸರಿಯಾಗಿಲ್ಲ, ಇಲ್ಲಿ ವಿದ್ಯಾರ್ಥಿಗಳ ಪ್ರತಿಕ್ರಿಯೆ ಲಕ್ಷ್ಯದಲ್ಲಿಟುಕೊಂಡು ಅದರ ಮೇಲೆ ವರ್ಗದಲ್ಲಿ ಚರ್ಚೆ ನಡೆಸುವ ಅಪೇಕ್ಷೆ ಇದೆ
> ವಿದ್ಯಾರ್ಥಿಗಳಿಗೆ ಅವರ ತಿಳಿವಳಿಕೆಗೆ ಆಧರಿಸಿದ ಉತ್ತರಗಳನ್ನು ನಿರ್ಧರಿಸಲು ಮುಕ್ತವಾಗಿ ಬಿಡಿರಿ.

- ಬುದ್ಧಿಮತ್ತೆಯುಅನುವಂಶಿಕತೆಯಿಂದ ಬರುತ್ತದೆ.
- ವಯಸ್ಸು ಹೇಗೆ ಹೆಚ್ಚುತ್ತ ಹೋಗುತ್ತದೆ ಹಾಗೆ ಅದು ಹೆಚ್ಚುವುದೂ ಇಲ್ಲ, ಕಡಿಮೆಯಾಗುವುದೂ ಇಲ್ಲ

ಸತ್ಯ | ಅಸತ್ಯ

- ನವನಿರ್ಮಿತೆಯ ಕ್ಷಮತೆಯು ಕೇವಲ ಜನ್ಮದಿಂದಲೇ ಸಿಗುವುದು
- ಪ್ರತಿಭೆಯನ್ನುದೊರಕಿಸಲು ಬರುವುದಿಲ್ಲ.

ಸತ್ಯ | ಅಸತ್ಯ

- ಪ್ರತಿಭಾವಂತಜನರು ಎಂದಿಗೂ ಅಯಶಸ್ವಿಯಾಗುವುದಿಲ್ಲ

ಸತ್ಯ | ಅಸತ್ಯ

- ಬಾಲ್ಯಾವಸ್ಥೆಯಲ್ಲಿಒಳ್ಳೆಯ ಕೃತಿ ಮಾಡಲು ಬರದಿದ್ದರೆ ಭವಿಷ್ಯದಲ್ಲಿ ಎಂದಿಗೂ ಒಳ್ಳೆಯ ಕೃತಿ ಮಾಡಲು ಬರುವುದಿಲ್ಲ.

ಸತ್ಯ | ಅಸತ್ಯ

- ಪ್ರತಿಭಾವಂತ ಜನರಿಗೆ ಕಠಿಣ ಪರಿಶ್ರಮ ಮಾಡಬೇಕಾಗುವುದಿಲ್ಲಇಲ್ಲವೆ ಸುಧಾರಣೆ ಮಾಡುವ ಅವಶ್ಯಕತೆ ಇರುವುದಿಲ್ಲ. ಅವರು ಸ್ವಾಭಾವಿಕವಾಗಿ ಎಲ್ಲವನ್ನೂಮಾಡಬಲ್ಲರು.

ಸತ್ಯ | ಅಸತ್ಯ

- ನಿಮಗೆ ಒಂದು ಕೃತಿ ಚನ್ನಾಗಿ ಮಾಡಲು ಬರುವುದು ಎಂದರೆ ಅದು ನಿಮ್ಮ ಹಣೆಬರಹದ ಭಾಗವಿರುವುದು.

ಸತ್ಯ | ಅಸತ್ಯ

## ಕಥೆಯು ವಾಸ್ತವವಾಗಿದೆಯೋ ಅಥವಾ ಕಾಲ್ಪನಿಕವಾಗಿದೆ?

(1) ಶಾಲೆಯ ಬಾಸ್ಕೆಟಬಾಲ ಸಂಘದಲ್ಲಿ ಒಬ್ಬ ಹುಡುಗನು ಆಯ್ಕೆಯಾಗಲಿಲ್ಲ, ಏಕೆಂದರೆ ಅವನ ಆಟ ಆ ದರ್ಜೆಯದಾಗಿರಲಿಲ್ಲ, ಆದರೆ ಇದೇ ಹುಡುಗನು ಮುಂದೆ ಅಂತರರಾಷ್ಟ್ರೀಯ ದರ್ಜೆಯ ಬಾಸ್ಕೆಟಬಾಲ ಆಟಗಾರನೆಂದು ಹೆಸರು ಪಡೆದನು

(2) ಒಬ್ಬ ವ್ಯಕ್ತಿಯಲ್ಲಿ ಯಾವುದೇ ರೀತಿಯ ಸೃಜನಶೀಲತೆ ಇಲ್ಲ ಮತ್ತು ಸ್ವಂತದ ಯಾವುದೇ ಕಲ್ಪನೆಗಳ ವಿಸ್ತಾರ ಇಲ್ಲವೆಂದು ಪರಿಗಣಿಸಲಾಯಿತು ಅದೇ ವ್ಯಕ್ತಿ ಮುಂದೆ ಅತ್ಯಂತ ಯಶಸ್ವೀ ವ್ಯಂಗ್ಯ ಚಿತ್ರಕಾರನೆಂದು ಹೆಸರು ಪಡೆದನು

(3) ಒಬ್ಬ ಹುಡುಗಿಯು ರಸ್ತೆಯ ಅಪಘಾತದಲ್ಲಿ ತನ್ನದೊಂದು ಕಾಲು ಕಳೆದುಕೊಡಿದ್ದಳೋ ಆಕೆ ಮೌಂಟ ಏವ್ಹರೆಸ್ಟ ಶಿಖರವನ್ನು ಏರಿದಳು

(4) ಯಾವ ವಿದ್ಯಾರ್ಥಿಗೆ ಏನೇನೂ ಬರುವುದಿಲ್ಲವೆಂದು ಶಿಕ್ಷಕರು ಮೂರ್ಖನೆಂದು ನಿರ್ಧರಿಸಿದ್ದರೋ ಅವನೇ ಮುಂದೆ ಬಲು ದೊಡ್ಡ ಶಾಸ್ತ್ರಜ್ಞನಾದನು.

ಹೌದು, ಇದು ನಿಜವಾದ ಕಥೆ ಇದೆ ! ಈ ಕಥೆಯಲ್ಲಿಯ ವ್ಯಕ್ತಿಗಳು ಇಲ್ಲಿದ್ದಾರೆ?

**ಚರ್ಚೆ ಮಾಡಿರಿ:**

- ಈ ಜನರು ತಮ್ಮ ಆಯುಷ್ಯದಲ್ಲಿ ಏನು ಮಾಡಿದ್ದಾರೋ ಮತ್ತು ಅದನ್ನು ಹೇಗೆ ದೊರಕಿಸಿಕೊಂಡಿದ್ದರೊ ಎಂದು ನಿಮಗೆ ಅನಿಸುತ್ತದೆ?
- ನಾವು ಸ್ಥಿರ ಬುದ್ಧಿಮತ್ತೆ ಅಥವಾ ಕೌಶಲ್ಯ ಪಡೆದು ಕೊಂಡು ಜನ್ಮ ಪಡೆದಿದ್ದೇವೆಯೇ?
- ಯಾರೊಬ್ಬರ ಬುದ್ಧಿಮತ್ತೆ ಅಥವಾ ಕ್ಷಮತಾ ಕೌಶಲ್ಯ ಯಾವುದೇ ವಯಸ್ಸಿಗೆ ವೃದ್ಧಿಂಗತವಾಗಲು ಸಾಧ್ಯವಿದೆಯೇ? ಹೇಗೆ?
- ಯಾವುದೇ ವಯಸ್ಸಿನಲ್ಲಿ ಯಾರೇ ಆಗಲ್ಲಿ ಹೊಸದನ್ನ ಕಲಿಯಬಹುದೇ?




**1. ಮಾಯಕೆಲ್ ಜಾರ್ಡನ್**
ಜಗಿತ್ತಿನ ಶ್ರೇಷ್ಠ ಬಾಸ್ಕೆಟ್‌ಬಾಲ್ ಆಟಗಾರರಲ್ಲಿ ಒಬ್ಬ



**2. ವಾಲ್ಟ್ ಡಿಸ್ನೆ**
ಮಿಕಿ ಮಾವುಸ ಮತ್ತು ಡೊನಾಲ್ಡಡಕ ಇವುಗಳ ನಿರ್ಮಿತಿ ಮಾಡಿದವರು



**3. ಅರುಣಿಮಾ ಸಿನ್ಹಾ**
ಒಬ್ಬ ಎಂತಹ ಮಹಿಳೆ ಅಂದರೆ, ಇವಳು ಮೌಂಟ್ ಎವ್ಹರೆಸ್ಟ್ ಶಿಖರವನ್ನು ತಲುಪಿದಳು ಮತ್ತು ಯುಕೋಪ, ಆಫ್ರಿಕೆಯಲ್ಲಿಯ ಎಲ್ಲಕ್ಕೂ ಎತ್ತರದ ಶಿಖರವನ್ನು ಕೃತ್ರಿಮ ಕಾಲಿನ ಸಹಾಯದಿಂದ ಏರಿದಳು



**4. ಥಾಮಸ್ ಎಡಿಸನ್**
ಕೇವಲ ವಿದ್ಯುತ ದೀಪದ ಶೋಧ ಮಾಡಿ ನಿಲ್ಲಲಿಲ್ಲ, ಆದರೆ ಮುಂದೆ ಅವನು ಅನೇಕ ಶೋಧ ಮಾಡಿದನು. ಅವನಕಡೆಗೆ 1000 ಪೇಟಂಟಗಳಿದ್ದವು.



## 2. ಯಾವುದೇ ಹೊಸ ಸಂಗತಿಯನ್ನು ನಾವು ಹೇಗೆ ಕಲಿಯುತ್ತೇವೆ?

ಜೀವನದ ಎಲ್ಲ ಮಹತ್ವದ ಪ್ರಕ್ರಿಯೆಗಳಲ್ಲಿ ಮಾನವನ ಮೆದುಳು ಸಮನ್ವಯಕವಾಗಿದೆ. ಶರೀರದ ಎಲ್ಲ ಅವಯವಗಳ ಕಡೆಗೆ ಸಂದೇಶವನ್ನು ಕಳಿಸುವ ಹೊಣೆಗಾರಿಕೆ ಮೆದುಳಿನದಾಗಿರುತ್ತದೆ. ಹಾಗೆಯೇ ಅವಯವಗಳ ಕಡೆಯಿಂದ ಬರುವ ಸಂದೇಶಗಳ ಸ್ವೀಕಾರವನ್ನುಸಹ ಮೆದುಳು ಮಾಡುತ್ತದೆ.

ಎಲ್ಲ ಪ್ರಕಾರದ ಅಧ್ಯಯನ ಮಾಡುವ ಹೊಣೆಕೂಡಾ ಮೆದುಳಿನದಿದೆ. ಹೊಸ ಹೊಸ ಸಂಗತಿಗಳ ಅಧ್ಯಯನ ಮಾಡುವುದು. ಇದು ಮೆದುಳಿನಿಂದ ಸಾಧ್ಯವಾಗಿದೆ. ಹೊಸ ಸಂಗತಿಗಳ ಅಧ್ಯಯನ ಪ್ರಕ್ರಿಯೆಯು ಮೆದುಳಿನಲ್ಲಿ ಹೇಗೆ ನಡೆಯುವುದು ಎಂಬುದನ್ನು ಈಗ ನಾವು ತಿಳಿದುಕೊಳ್ಳೋಣ.

## ಓದಿರಿ ಮತ್ತು ತಿಳಿದುಕೊಳ್ಳಿರಿ :



### ಮಜ್ಜಾಕೋಶ :


- ನಮ್ಮ ಮಜ್ಜಾಸಂಸ್ಥೆಯು ಅಸಂಖ್ಯ ಮಚ್ಚಾ ಕೋಶಗಳಿಂದ ನಿರ್ಮಾಣ ವಾಗಿದೆ. ಮೆದುಳು ಮತ್ತು ನಮ್ಮ ಸಂಪೂರ್ಣ ಶರೀರದ ತುಂಬ ಈ ಮಜ್ಜಾಕೋಶಗಳಜಾಳಿಗೆ ಪಸರಿಸಿರುತ್ತದೆ.
- ನಮಗೆ ಯಾವಾಗ ಯಾವುದೇ ಸಂವೇದನೆ ಆದಾಗ, ಈ ಮಜ್ಜಾಕೋಶಗಳಿಂದ ವಿದ್ಯುತ್‌ಪ್ರವಾಹ ಹರಿಯುತ್ತದೆ ಒಂದು ಮಜ್ಜಾಕೋಶದಿಂದ ಎರಡನೆ ಮಜ್ಜಾಕೋಶದವರೆಗೆ ಈ ವಿದ್ಯುತ್ ಪ್ರವಾಹವು ಕೆಲವು ರಸಾಯನಗಳ ಮಾಧ್ಯಮದಿಂದ ಕಳಿಸಲಾಗುವುದು.




- ಅಭ್ಯಾಸವೆಢರೆ ಈ ಮಜ್ಜಾಕೊಶದಿಂದ ವಿದ್ಯುತ್‌ತರಂಗವು ಹೋಗಿ ಅವುಗಳಲ್ಲಿ ಜೋಡಣೆ ತಯಾರಾಗುವುದು.

### ಮಜ್ಜಾಕೋಶಗಳ ಕೊಂಡಿ-

### Synapse - ಎರಡು ಮಜ್ಜಾಕೋಶಗಳಲ್ಲಿಯ ಸ್ಥಳ:




- ಎರಡು ಮಚ್ಚಾಕ್ಕೋಶಗಳು ಒಂದಕ್ಕೊಂದು ಪ್ರತ್ಯಕ್ಷವಾಗಿ ಜೋಡಿಸಿ ಇರುವುದಿಲ್ಲಮತ್ತು ಅವುಗಳಲ್ಲಿ ಅಂತರವಿರುವುದು. ಆ ಸ್ಥಳಕ್ಕೆ Synapse ಅನ್ನುತ್ತಾರೆ
- ವಿದ್ಯುತ್ ಪ್ರವಾಹಗಳು ಈ ಸ್ಥಳದಿಂದ ಪ್ರವಹಿಸದ ಹೊರತು ತಮ್ಮ ಯಾವುದೇ ಕೃತಿ,ಸಂವೇದನೆ, ಅಧ್ಯಯನವಾಗಲಾರದು.
- ಗುಡ್ಡದ ಮೇಲೆ ಹೇಗೆ ಮಣ್ಣು, ಹುಲ್ಲು ಇರುವುದೋ ಅಲ್ಲ ಮನಷ್ಯ, ಪ್ರಾಣಿಗಳು ಹೋಗಿ ಹೋಗಿ ಕಾಲುದಾರಿ ತಯಾರಾಗುತ್ತದೆ. ಹಾಗೆಯೇ ಮಜ್ಜಾಕೋಶಗಳುನಮ್ಮ ಮೆದುಳಿನಲ್ಲಿಮತ್ತು ಶರೀರದ ತುಂಬೆಲ್ಲ ಇದ್ದು ಅದರಿಂದ ವಿದ್ಯುತ್ ಪ್ರವಾಹವುರಸಾಯನಗಳ ಮಾಧ್ಯಮದಿಂದಹರಿದು ಆ ಕೋಶಗಳಲ್ಲಿ ಜೋಡಣೆ ತಯಾರಾಗುತ್ತದೆ. ಅಂದರೆ ಮೆದುಳಿನಲ್ಲಿ ಕೋಶಗಳ ಕಾಲುದಾರಿ ತಯಾರಾಗುತ್ತದೆ.





- ಕಾಲುದಾರಿ ಸಿದ್ಧವಾಗುವಾಗ ಪ್ರಾರಂಭದಲ್ಲಿ ಪ್ರವಾಸವು ಸ್ವಲ್ಪ ಕಷ್ಟಕರವಾಗಿ ಇರುವುದು ಹಾಗೆಯೇ ಹೊಸ ಸಂಗತಿಗಳನ್ನು ಕಲಿಯುವಾಗ ನಮಗೆ ಪ್ರಯತ್ನ ಮಾಡಬೇಕಾಗುತ್ತದೆ. ನಂತರ ಅಭ್ಯಾಸದಿಂದ ಈ ಮೆದಳಿನಲ್ಲಿಯ ಕಾಲುದಾರಿ ಸರಿಯಾಗಿ ತಯಾರಾಗುತ್ತದೆ ನಾವು ಅದಕ್ಕೇ 'ಅಭ್ಯಾಸ' ವಾಯಿತು ಎನ್ನುತ್ತೇವೆ. ಒಮ್ಮೆ ಅಧ್ಯಯನವಾಯಿತೆಂದರೆಅಭ್ಯಾಸದಿಂದನಮಗೆ ಅದರ ಕೌಶಲ್ಯ ಪ್ರಾಪ್ತವಾಗುವುದು.


## 3) ಮೆದುಳಿನ ಸಂಶೋಧನೆ ಏನನ್ನು ಸಿದ್ಧ ಮಾಡುತ್ತದೆ?



**ಸಂಶೋಧನೆ 1:**

ಕವಿತೆಯನ್ನು ಬರೆಯುವುದು , ಗಣಿತ ಬಿಡಿಸುವುದು, ಆಟಆಡುವುದು, ವಾದ್ಯ ಬಾರಿಸುವುದು ಮುಂತಾದವುಗಳನ್ನು ಮೇಲಿಂದ ಮೇಲೆ ಮಾಡಿದರೆ ಅದೇ- ಅದೇ ಮಜ್ಜಾಕೋಶಗಳಿಂದ ವಿದ್ಯುತ್ ಪ್ರವಾಹ ಹೋಗುತ್ತದೆ ಮತ್ತು ಅವುಗಳಲ್ಲಿ ಭದ್ರ ಕೊಂಡಿಗಳ ಸಿದ್ಧವಾಗುವವು.


**ತಾತ್ಪರ್ಯ -ಅಬ್ಯಾಸದಿಂದ ನಮಗೆ ಅನೇಕ ಹೊಸ ಸಂಗತಿಗಳನ್ನು ಮತ್ತು ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳಲು ಸಾಧ್ಯವಿದೆ.**



ಪಂಜರ ಕ್ರ.1

**ಸಂಶೋಧನೆ 2 :**

ಈ ಸಂಶೋಧನೆಯಲ್ಲಿ ಒಂದು ಪಂಜರದಲ್ಲಿ ಕೇವಲ ಅನ್ನ-ನೀರು ಇಡಲಾಗಿತ್ತು, ಮತ್ತು ಎರಡನೆಯ ಪಂಜರದಲ್ಲಿ ಅನ್ನ-ನೀರಿನಜೊತೆಗೆ ಬೇರೆ ಬೇರೆ ಆಟದ ಸಾಮಾನು ಕೆಲ ವ್ಯಾಯಾಮದಸಾಧನಗಳನ್ನು ಇಡಲಾಗಿತ್ತು, ಎರಡೂ ಪಂಜರಗಳಲ್ಲಿ ಇಲಿಗಳನ್ನಿಟ್ಟು ಸಾಕಲಾಯಿತು ಏರಡನೆಯ ಪದ್ಧತಿಯ ಪಂಜರದಲ್ಲಿಯ ಇಲಿಗಳಲ್ಲಿ ಮಜ್ಜಾಕೋಶಗಳ ಕೊಂಡಿಗಳು. ಎರಡನೆಯ ಪಂಜರದಲ್ಲಿಯ ಇಲಿಗಳಲ್ಲಿ ಮಜ್ಜಾಕೋಶಗಳ ಕೊಂಡಿಗಳು ಹೆಚ್ಚಾದದ್ದು ಕಂಡುಬಂದಿತು ಇದು ವಯಸ್ಸಿನಿಂದ ದೊಡ್ಡವಾಗಿದ್ದ ಇಲಿಗಳಲ್ಲಿಯೂ ಕಂಡುಬಂದಿತು.



ಪಂಜರ ಕ್ರ.2

**ತಾತ್ಪರ್ಯ- ಹೊಸ ಆವ್ಹಾನಗಳನ್ನು ಸ್ವೀಕರಿಸಲು ನಾವು- ಸಿದ್ಧರಿದ್ದರೆ ವಯಸ್ಸಿನ ಯಾವುದೇ ಹಂತದಲ್ಲಿ ನಮಗೆ ಹೂಸ ಸಂಗತಿಗಳನ್ನು ಕಲಿಯಲು ಸಾಧ್ಯವಾಗುವುದು.**



***ಗಮನಿಸಬೇಕಾದ ಅಂಶಗಳು:***

*ನಮ್ಮ ಮೆದುಳು ನಮ್ಮ ಸ್ನಾಯುಗಳಂತೆ ಇರುತ್ತದೆ. ವ್ಯಾಯಾಮ ಮಾಡಿ. ನಾವು ಸ್ನಾಯುಗಳನ್ನು ಬಲಿಷ್ಠ ಮಾಡುತ್ತೇವೆ. ಆದರಿಂತೆಯೆ ಆವ್ಹಾನಾತ್ಮಕ ಕೆಲಸಗಳನ್ನು ಮಾಡುವುದರಿಂದ, ಸತತವಾಗಿ ಪ್ರಶಿಕ್ಷಣ ಪಡೆದಾಗ, ರೂಢಿ ಮಾಡಿದಾಗ ಮತ್ತು ಪ್ರತಿಸಾದಾತ್ಮಕ ಸುಧಾರಣೆ ಮಾಡಿದಾಗ ನಮ್ಮ ಮೆದುಳು ಸದೃಢವಾಗುವುದು.*

ನೀವು ಎಂದಾದರೂ ವ್ಯಾಯಾಮ ಮಾಡಿದ್ದಿರಾ? ಓಡುವುದು ಭಾರ ಎತ್ತುವುದು, ಗಿಡ ಹತ್ತುವುದು, ಆಟ ಆಡುವುದು ಮುಂತಾದವುಗಳು ನೀವು ವ್ಯಾಯಾಮ ಮಾಡುವಾಗ ಏನು ಆಗುವುದು? ಮೊದಮೊದಲು ಬಹಳ ಕಠಿಣವೆನಿಸುತ್ತದೆಯೆ? ನಿಮ್ಮ ಸ್ನ್ಯಾಯುವಿನಲ್ಲಿನೋವು ಕಾಣಿಸುವುದೆ? ನಿಮಗೆ ನೋವು ಅನಿಸುತ್ತದೆಯೇ?

ಕಾಲಾಂತರದಲ್ಲಿ ವೇದನೆ ಕಡಿಮೆಯಾಗಿ ನಿಮಗೆ ಬಲಿಷ್ಟನಾದಹಾಗೆ ಅನ್ನಿಸುತ್ತದೆಯೆ? ಮುಂದಿನ ಸಲ ನೀವು ವ್ಯಾಯಮ ಮಾಡಿ ನೋಡಿರಿ. ನೀವು ಕಡಿಮೆ ಪ್ರಯತ್ನದಲ್ಲಿ ವ್ಯಾಯಾಮಮಾಡಲು ಸಾಧ್ಯವಾಯಿತೆ?

ಒಂದುವೇಳೆ ಮೈ ನೋಯುತ್ತದೆ ಎಂದು ನೀವು ಮೊದಲನೆಯ ಪ್ರಯತ್ನದಲ್ಲಿಯೇ ವ್ಯಾಯಾಮ ಮಾಡುವುದನ್ನು ಬಿಟ್ಟಿದ್ದರೆ ಏನಾಗುತ್ತಿತ್ತು?

## 4) ಅಧ್ಯಯನ ಮತ್ತು ಸುಧಾರಣೆ ಇವುಗಳಲ್ಲಿಯ ತೊಂದರೆಗಳು

**ಮಾನಸಿಕತೆ**

ಮುಂದೆ ಕೊಟ್ಟ ಎರಡು ಪ್ರಸಂಗಗಳ ಹೊಂದಾಣಿಕೆ ಮಾಡಿರಿ.



**ಚರ್ಚೆ ಮಾಡಿರಿ:**
ಎರಡೂ ಘಟನೆಗಳಲ್ಲಿಯ ಪಾಲಕರ ಪ್ರತಿಕ್ರಿಯೆಗಳ ನಿರೀಕ್ಷಣೆ ಮಾಡಿರಿ. ಅವುಗಳಲ್ಲಿ ಭೇದ ಏದೆಯೇ? ಇದ್ದರೆ ಯಾವುದು? ಅವರಿಗೆ ಮಗು ನಡೆಯಲು ಕಲಿಯಬಹುದು ಎಂಬ ವಿಶ್ವಾಸ ಏಕೆ ಮೂಡಿತು?

ಮಗು ನಡೆಯುವ ಪ್ರಯತ್ನ ಮಾಡುತ್ತಿದೆ, ಕಾಳಗೆ ಬೀಳುತ್ತದೆ ಮತ್ತೆ ಏಳುತ್ತದೆ ಮತ್ತೆ ನಡೆಯುವ ಪ್ರಯತ್ನ ಮಾಡುತ್ತದೆ ಪುನಃ ಕೆಳಗೆ ಬೀಳುತ್ತದೆ, ಇದರ ಪುನರಾವೃತ್ತಿಯಾಗುತ್ತದೆ. ಈ ಕುರಿತು ನೀವು ಕೆಳಗಿನವುಗಳಲ್ಲಿ ಯಾವ ವಿಧಾನ ಮಾಡುವಿರಿ?

**(1) ಮಗು ನಡೆಯಲು ಕಲಿಯುತ್ತಲಿದೆ.**

**(2) ಮಗುವಿಗೆ ನಡೆಯಲು ಸಾಧ್ಯವಾಗುವುದಿಲ್ಲ.**



ಹುಡುಗನು ಗಣಿತದಲ್ಲಿಯ ಪ್ರಮೇಯವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಹತ್ತಿದ್ದಾನೆ. ಆದರೆ ಪರೀಕ್ಷೆಯಲ್ಲಿ ಅವನಿಗೆ ಕಡಿಮೆ ಅಂಕಗಳು ದೊರಕುತ್ತವೆ ಅವನು ಮರಳಿ ಪ್ರಯತ್ನ ಮಾಡುವನು. ಆದರೆ ಮತ್ತೆ ಅವನಿಗೆ ಕಡಿಮೆ ಅಂಕಗಳು ದೊರಕುತ್ತವೆ. ಮುಂದಿನ ಎರಡು ವಿಚಾರಗಳಲ್ಲಿ ಯಾವ ವಿಚಾರವು ಈ ಪ್ರಸಂಗದ ಕುರಿತು ನಿಮ್ಮ ಮನಸ್ಸಿನಲ್ಲಿ ಬರುತ್ತದೆ?

**(1) ಹುಡುಗನು ಗಣಿತದಲ್ಲಿಯ ಪ್ರಮೇಯ ಕಲಿಯುತ್ತಿದ್ದಾನೆ.**

**(2) ಹುಡುಗನಿಗೆ ಗಣಿತದ ಪ್ರಮೇಯ ಸಾಧ್ಯವಾಗುವುದಿಲ್ಲ.**

**ಹೊಂದಾಣಿಕೆ ಮಾಡೋಣ ಬನ್ನಿ:**



**ರೇವತಿ ಬುದ್ಧಿವಂತ ಹುಡುಗಿ ಇದ್ದಾಳೆ ಎಂದು ಅವಳ ಪಾಲಕರು ಮತ್ತು ಶಿಕ್ಷಕರು ಯಾವಾಗಲೂ ಸ್ತುತಿಮಾಡುತ್ತಾರೆ**

- ಹತ್ತನೇ ತರಗತಿಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿ ರೇವತಿ ಒಳ್ಳೆಯ ಕಿರಿಯ ಮಹಾವಿದ್ಯಾಲಯಕ್ಕೆ ಹೋದಳು
- ಅಲ್ಲಿ ಆಕೆಗೆ ಅವಳಿಗಿಂತ ಬಹಳಷ್ಟು ಜಾಣ ವಿದ್ಯಾರ್ಥಿಗಳು ಇದ್ದಾರೆಂದು ತಿಳಿಯಿತು.
- ಅವಳಲ್ಲಿ ನ್ಯೂನಗಂಡದ (ತಾನು ಕೀಳೆಂಬ) ಭಾವನೆ ಮೂಡಿತು ಇತರ ವಿದ್ಯಾರ್ಥಿಗಳು ನಗಬಹುದು ಎಂದು ಅವಳು ಪ್ರಶ್ನೆಗಳನ್ನು ಕೇಳುವುದನ್ನು ಬಿಟ್ಟಳು.
- ಅವಳಿಗೆ ಪರೀಕ್ಷೆಯ ಭಯ ಬರ ಹತ್ತಿತು
- ಯಾರಿಗೆ ಹೆಚ್ಚು ಅಂಕಗಳು ದೊರೆಯುತ್ತಿದ್ದವೋ ಅವರ ಬಗ್ಗೆ ಮತ್ಸರ ಮೂಡಿತು.
- ಪರೀಕ್ಷೆಯಲ್ಲಿ ಅವಳಿಗೆ ಕಡಿಮೆ ಅಂಕಗಳು ದೊರಕಿದವು ಆಗ ಅವಳಿಗೆ ನಿರಾಸೆಯಾಯಿತು.



**ರೀಮಾಳಿಗೆ ಶಾಲೆಯಲ್ಲಿ ಯಾವಾಗಲೂ ಒಳ್ಳೆಮ ಅಂತಗಳು ಸಿಗುವವು ಆದರೆ ಅವಳ ಪಾಲಕ ಮತ್ತು ಶಿಕ್ಷಕರು ಯಾವಾಗಲೂ ಅವಳ ಬುದ್ಧಿಮತ್ತೆಗಿಂತ ಅವಳ ಪರಿಶ್ರಮದ ಸ್ತುತಿ ಮಾಡುತ್ತಾರೆ.**

- ಶಿಕ್ಷಕರು ಪಾಲಕರು ರೀಮಾಳಿಗೆ ಮೆದುಳಿನ ಹೊಸ ಸಂಶೋಧನೆಯ ಮಾಹಿತಿ ಹೇಳಿದರು. ಒಂದು ವೇಳೆ ನಾವು ಮೆದುಳಿಗೆ ಬಹಳಷ್ಟು ಅವ್ಹಾನ ನೀಡಿದರೆ ಯಾರು ಬೇಕಾದರೂ ಬುದ್ಧಿವಂತರಾಗಬಲ್ಲರು
- ಹನ್ನೊಂದನೆ ಇಯತ್ತೆಯ ಅಭ್ಯಾಸಕ್ರಮವು ಆಕೆಗೆ ಕಠಿಣವೆನಿಸತೊಡಗಿತು
- ಪ್ರಶಿಕ್ಷಣ, ಅಭ್ಯಾಸ ಮತ್ತು ಪ್ರತಿಕ್ರಿಯೆ ಇವುಗಳ ಮೂಲಕ ಅವಳು ತನ್ನ ಕ್ಷಮತೆಯನ್ನು ಹೆಚ್ಚಿಸಬಹುದು ಎಂಬುದು ಆಕೆಗೆ ತಿಳಿದಿತ್ತು
- ಆಕೆ ಸಾಕಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದಳು ಆವ್ಹಾನಾತ್ಮಕ ಸಮಸ್ಯೆಗಳನ್ನು ಬಿಡಿಸುತ್ತಿದ್ದಳು ಮತ್ತು ಸಹಜವಾಗಿ ಆಕೆ ಹನ್ನೊಂದನೆ ಇಯತ್ತೆಯಲ್ಲಿ ಉತ್ತಮ ಶ್ರೇಣಿಯಿಂದ ಪಾಸಾದಳು.

***ಗಮನಿಸಬೇಕಾದ ಅಂಶಗಳು:***

- *ಮಾನಸಿಕತೆ– ಮಾನಸಿಕತೆ ಅಂದರೇನೆ ವ್ಯಕ್ತಿಯ ದೃಷ್ಟಿಕೋನ ಇಲ್ಲವೆ ವಿಚಾರ ಮಾಡುವ ಪದ್ಧತಿ*
- *ವ್ಯಕ್ತಿಯ ಸ್ವಂತದ ಕ್ಷಮತೆ, ಬುದ್ಧಿಮತ್ತೆ, ಪ್ರತಿಭೆ ಇವುಗಳ ಕುರಿತು ಬಂಧನಕ್ಕೊಳಪಟ್ಟ ಮಾನಸಿಕತೆಯು ಯಾವಾಗಲೂ ಸುಧಾರಣೆ ಮಾಡುವುದರಲ್ಲಿ ತೊಂದರೆಯನ್ನು ಉಂಟು ಮಾಡುವುದು*
- *ಬುದ್ಧಿಮತ್ತೆ, ಕ್ಷಮತೆ ಜನ್ಮತಃ ದೊರಕುತ್ತವೆ, ಮತ್ತು ಸ್ಥಿರವಾಗಿರುತ್ತವೆ ರೇವತಿಯ ಈ ವಿಶ್ವಾಸಕ್ಕೆ ಸಂಕುಚಿತ ಬಂಧನಕ್ಕೊಳಪಟ್ಟ ಮಾನಸಿಕತೆ (Fixed mindset) ಎಂದು ಕರೆಯುವರು.*
- *ಬುದ್ಧಿಮತ್ತೆ, ಕ್ಷಮತೆ ಇವು ಕಠೋರ ಪರಿಶ್ರಮ ಮಾಡಿದರೆ, ಕಾಲಾಂತರದಲ್ಲಿ ಬದಲಾಗುತ್ತವೆ. ಇದು ರೀಮಾಳಿಗಿರುವ ವಿಶ್ವಾಸ. ಇದಕ್ಕೆ ಬೆಳವಣಿಗೆಗೆ ಪೂರಕವಾದ ಮಾನಸಿಕತೆ (Growth mindset) ಅನ್ನುತ್ತಾರೆ.*

**ಚರ್ಚೆ ಮಾಡಿರಿ:**

ಕೊಟ್ಟ ಉದಾಹರಣೆಗಳನ್ನು ವರ್ಗದಲ್ಲಿ ಓದಿ ತೋರಿಸಿರಿ ಮತ್ತು ಮುಂದಿನ ಪ್ರಶ್ನೆಗಳ ಮೇಲೆ ಚರ್ಚೆ ಮಾಡಿರಿ.

ರೀಮಾಳ ಮಾನಸಿಕತೆಗಿಂತ ರೇವತಿಯ ಮಾನಸಿಕತೆಯು ಹೇಗೆ ಬೇಕಿಯಾಗಿತ್ತು ರೇವತಿಗೆ ಪರೀಕ್ಷೆಯ ಅಂಜಿಕೆ ಏಕೆ ಇತ್ತು?

ಹನ್ನೊಂದನೆ ಇಯತ್ತೆಯ ಅಭ್ಯಾಸಕ್ರಮವು ಕಠಿಣವೆನಿಸಿದರೂ ರೀಮಾಳಿಗೆ ಪರೀಕ್ಷೆಯ ಅಂಜಿಕೆ ಏಕೆ ಇರಲಿಲ್ಲ?

## ಬೆಳವಣಿಗೆಗೆ ಪೂರಕವಾದ ಮಾನಸಿಕತೆ (Growth mindset)



ಬೆಳವಣಿಗೆಗೆ ಪೂರಕವಾದ ಮಾನಸಿಕತೆ (Growth mindset) ಈ ಸಂಜ್ಞೆಯನ್ನು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಮಾನಸಶಾಸ್ತ್ರದ ಪ್ರಾಧ್ಯಾಪಿಕೆಯಾದ ಕೆರಾಲ ಡ್ವೆಕ್ ಇವರು ನೀಡಿದ್ದಾರೆ ಕೆರಾಲ ಇವರು ಸಂಶೋಧನೆಯಿಂದ, ವಿಥ್ಯಾರ್ಥಿಗಳು ಬುದ್ಧಿಮತ್ತೆ / ಕ್ಷಮತೆ ಇವು. ಕಠೋರ ಪರಿಶ್ರಮದಿಂದ ಕಾಲಾಂತರದಲ್ಲಿ ಬದಲಾಗುತ್ತ ಎಂಬುದರ ಮೇಲೆ ವಿಶ್ವಾಸವಿಡುವರು. ಅವರಲ್ಲಿ ಅಡಚಣೆಗಳನ್ನು ದೂರ ಮಾಡುವ ಮತ್ತು ಸ್ವಂತದಲ್ಲಿ ಸುಧಾರಣೆ ಮಾಡುವ ಹೆಚ್ಚೆಚ್ಚು ಅವಕಾಶ ಇರುತ್ತವೆ. ಎಂಬುದನ್ನು ಸಿದ್ಧಮಾಡಿದರು.

ಕೆಳಗೆ ಕೋಷ್ಟಕದಲ್ಲಿ ಸಂಕುಚಿತ ಬಂಧನಕ್ಕೊಳಪಟ್ಟ ಮಾನಸಿಕತೆ ಮತ್ತು ಬೆಳವಣಿಗೆಗೆ ಪೂರಕವಾದ ಮಾನಸಿಕತೆ ಇರುವ ವ್ಯಕ್ತಿಗಳ ವ್ಯಶಿಷ್ಟ್ಯಗಳನ್ನೊಡಲಾಗಿದೆ. ಅದರ ಭೇದವನ್ನು ತಿಳಿದುಕೊಳ್ಳಿರಿ.

| ವ್ಯಕ್ತಿಗಳ ವೈಶಿಷ್ಟ್ಯಗಳು | ಸಂಕುಚಿತ ಬಂಧನಕ್ಕೊಳಪಟ್ಟ ಮಾನಸಿಕತೆ | ಬೆಳವಣಿಗೆಗೆ ಪೂರಕವಾದ ಮಾನಸಿಕತೆ |
|---|---|---|
| ಅವರ ಧಾರಣೆ (ಜ್ಞಾಪಕಶಕ್ತಿ) | ಬುದ್ಧಿಮತ್ತೆಯು ಜನ್ಮತಃ ಸ್ಥಿರ ವಾಗಿರುತ್ತದೆ | ಬುದ್ಧಿಮತ್ತೆಯು ವಿಕಸಿತ ಮಾಡಲು ಬರಬಹುದು |
| ಜ್ಞಾಪಕಶಕ್ತಿಯ ಪರಿಣಾಮ | ಸತತವಾಗಿ ಬುದ್ಧಿಮತ್ತೆಯ ಪ್ರದರ್ಶನ ಮಾಡುವುದರ ಕಡೆಗೆ ಒಲವು ಇರುವುದು | ಸತತವಾಗಿ ಅಧ್ಯಯನ ಮಾಡುವುದರ ಕಡೆಗೆ ಒಲವು ಇರುವುದು |
| ಆವ್ಹಾನಗಳ ಕಡೆಗೆ ನೋಡುವ ದೃಷ್ಟಿಕೋನ | ಆವ್ಹಾನಗಳನ್ನು ತಪ್ಪಿಸಿಕೊಳ್ಳುವ ಕಡೆಗೆ ಒಲವು ಇರುವುದು. | ಆವ್ಹಾನಗಳನ್ನು ಸ್ವೀಕರಿಸಲು ಇಷ್ಟವಾಗುತ್ತದೆ |
| ಅಡಚಣೆಗಳು ಬಂದರೆ | ಕೈಗೆತ್ತಿಕೊಂಡ ಸಂಗತಿಯನ್ನು ಸಹಜವಾಗಿ ಕೈಬಿಡುತ್ತಾರೆ | ಜಿದ್ದಿನಿಂದ ದಾರಿ ಹುಡುಕಿ ಮುನ್ನುಗ್ಗುತ್ತಾರೆ |
| ಪ್ರಯತ್ನಗಳ ಕಡೆಗೆ ನೋಡುವ ದೃಷ್ಟಿಕೋನ | ಪ್ರಯತ್ನಿಸುವುದು ನಿರರ್ಥಕ ವೆಂದು ತಿಳಿಯುತ್ತಾರೆ | ಪ್ರಯತ್ನವೆಂದರೆ ಒಂದು ಸಂಗತಿಯ ಮೇಲೆ ಪ್ರಭುತ್ವ ಸಾಧಿಸುವ ಮಾರ್ಗವಿದೆ ಎಂದು ತಿಳಿಯುತ್ತಾರೆ. |
| ಟೀಕೆಯ ಕಡೆಗೆ ನೋಡುವ ದೃಷ್ಟಿಕೋನ | ಉಪಯುಕ್ತ ಆದರೆ ನಕಾರಾತ್ಮಕ ಪ್ರತಿಕ್ರಿಯೆಯ ಕಡೆಗೆ ದುರ್ಲಕ್ಷ್ಯ ಮಾಡುವರು | ಟೀಕೆಗಳಿಂದ ಕಲಿಯುತ್ತಾರೆ. |
| ಇತರರ ಯಶಸ್ಸನ್ನು ನೋಡಿ ಆಗುವ ಪರಿಣಾಮ | ಇತರರಿಗೆ ಸಿಕ್ಕ ಯಶಸ್ಸನ್ನು ನೋಡಿ ಭಯ ಇಲ್ಲವೆ ಮತ್ಸರ ಪಡುವರು. | ಇತರರ ಯಶಸ್ಸಿನಿಂದ ಪ್ರೇರಣೆ ಪಡೆಯುವರು, ಪಾಠ ಕಲಿತು ಕೊಳ್ಳುವರು. |

## 5) ಬೆಳವಣಿಗೆಗೆ ಪೂರಕವಾದ ಮಾನಸಿಕತೆಯನ್ನು ಸ್ವೀಕರಿಸುವುದು

ಇಂಥ ಕೆಲವು ಪ್ರಸಂಗಗಳಿವೆ, ಅವುಗಳಲ್ಲಿ ಪ್ರತಿಯೊಬ್ಬವ್ಯಕ್ತಿಯುಸಂಕುಚಿತ ಬಂಧನಕ್ಕೊಳಪಟ್ಟಮಾನಸಿಕತೆಯನ್ನು ಉಪಯೋಗಿಸಿ ವಿಚಾರ ಮಾಡುವನು ಕೆಳಗಿನ ವಿಧಾನಗಳನ್ನುಓದಿ ನೀವು ಶೋಧಿಸಿರಿ, ಏನೆಂದರೆ ನೀವು ಸಂಕುಚಿತ ಬಂಧನಕ್ಕೊಳಪಟ್ಟಮಾನಸಿಕತೆಯನ್ನು ಉಪಯೋಗಿಸಿ ಯಾವಾಗ ವಿಚಾರ ಮಾಡುವಿರಿ? ಅದೇ ವಿಧಾನಗಳನ್ನು ಬೆಳವಣಿಗೆಗೆ ಪೂರಕವಾದ ಮಾನಸಿಕತೆಯಲ್ಲಿ ಬದಲಿಸಿರಿ.




**ಸಂಕುಚಿತ ಬಂಧನಕ್ಕೊಳಪಟ್ಟ ಮಾನಸಿಕತೆ**

- ನನಗೆ ಇದು ಬಹಳ ಚೆನ್ನಾಗಿಸಾಧ್ಯವಾಗುವುದಿಲ್ಲ
- ಈ ಕೆಲಸವನ್ನು ನಾನು ಎಲ್ಲಕ್ಕೂ ಚೆನ್ನಾಗಿಮಾಡುವೆ.
- ನನ್ನ ಗೆಳೆಯ/ಗೆಳತಿಯರು ಬಹಳೇ ಬುದ್ಧಿವಂತರಿದ್ದಾರೆ ನಾನು ಅವನ/ ಅವಳ ಹಾಗೆ ಆಗಲಾರೆ.
- ನನಗೆ ಆಹ್ವಾನಗಳು ಹಿಡಿಸುವುದಿಲ್ಲ.
- ನಾನು ಅಯಶಸ್ವಿಯಾದಾಗ ನನಗೆ ಮನಸ್ಸು ಒಳ್ಳೆಯದನ್ನು ಮಾಡಲು ಸಾಧ್ಯವಾಗುವುದಿಲ್ಲವೆಂದು ಅನಿಸುವುದು
- ನನ್ನದು ಗಣಿತದ ತಲೆ ಅಲ್ಲ ಮತ್ತು ನನಗೆ ಅದು ಎಂದಿಗೂ ಸಾದ್ಯವಾಗುವುದಿಲ್ಲ
- ನಾನು ಅಯಶಸ್ವಿಯಾದರೆ ಎಲ್ಲವೂ ಮುಗಿಯಿತು
- ನಾನು ಜಾಣನಿದ್ದೇನೆ ಎಂದು ಎಲ್ಲರೂ ಅನ್ನಿರಿ.
- ಎದುರಿನವನಿಗೆ ಯಶಸ್ಸು ದೊರಕಿದರೆ ನನಗೆ ಭಯವಾಗುವುದು, ಅಸುರಕ್ಷಿತ ವೆನಿಸುವುದು.



**ಬೆಳವಣಿಗೆಗೆ ಪೂರಕವಾದ ಮಾನಸಿಕತೆ**

- ನನಗೆ ಈ ಕೆಲಸ ಒಳ್ಳೆಯ ರೀತಿಯಿಂದ ಬರಬೇಕು ಎಂದರೆ ನಾನು ಏನು ಮಾಡಬೇಕು?
- ಈ ಕೆಲಸವನ್ನು ನಾನು ಹೆಚ್ಚು ಉತ್ತಮವಾಗಿ ಮಾಡಬಹುದು
- ನನ್ನ ಗೆಳೆಯ/ ಗೆಳತಿಯರು ಬೇರೆ ಏನು ಮಾಡುವರು, ಎಂಬುದರ ಶೋಧ ಮಾಡಿ ನಾನು ಸ್ವತಃ ಬದಲಾಗುವೆ
- ನನಗೆ ಸ್ವಂತಕ್ಕ ನೀಡಿದ ಆಹ್ವಾನಗಳು ನನಗೆ ಹಿಡಿಸುವವು
- ನಾನು ಅಯಶಸ್ವಿಯಾದಾಗ ನಾನು ನನ್ನ ತಪ್ಪುಗಳಿಂದ ಕಲಿಯುವೆನು
- ನಾನು ನನ್ನ ಮೆದುಳಿಗೆ ಗಣಿತದ ಪ್ರಶಿಕ್ಷಣ ಕೊಡುವವನಿದ್ದೇನೆ
- ನನಗೆ ಯಶಸ್ಸಿಗಾಗಿ ಪರ್ಯಾಯ ಮಾರ್ಗದ ಅವಲಂಬನೆ ಮಾಡಬೇಕಾಗಿವೆ.
- ನಾನು ಕಠೋರ ಪರಿಶ್ರಮ ಮಾಡುತ್ತೇನೆ ಎಂದು ನನಗೆ ಅನ್ನಿರಿ
- ಎದುರಿನವರಿಗೆ ಯಶಸ್ಸು ದೊರಕಿದರೆ, ಅಂದ ನಾನು ಪ್ರೇರಣೆ ಪಡೆಯುವೆನು.




**ಬೆಳವಣಿಗೆಗೆ ಪೂರಕವಾದ ಮಾನಸಿಕತೆಯನ್ನು ವಿಕಸಿತ ಗೊಳಿಸುವ ಸುಲಭ ಮೆಟ್ಟಿಲುಗಳು**

1. ನೀವು ನಿಮ್ಮ ಕ್ಷಮತೆಮತ್ತು ಬುದ್ದಿಮತ್ತೆ ಹೆಚ್ಚಿಸಬಹುದು ಎಂಬುದರಮೇಲೆ ವಿಶ್ವಾಸವಿಡಿ.
2. ಪರಿಶ್ರಮ ಮಾಡಿರಿ.
3. ಅವಶ್ಯಕತೆ ಇದ್ದರೆ ಸಹಾಯ ಬೇಡಿರಿ.
4. ಯಾವಾಗಲೂ ಉಚ್ಚ ಆಹ್ವಾನಗಳನ್ನು ಸ್ವೀಕರಿಸಿರಿ.

## ನಾವು ಕಲಿತೆವು ಅದರ ಉಪಯೋಗ ಮಾಡೋಣ.

### 1. ಚರ್ಚೆ ಮಾಡಿರಿ.

ಮುಂದೆ ಕೆಲ ಪ್ರಸಂಗಗಳನ್ನು ಕೊಟ್ಟಿದೆ ನಿಮ್ಮ ಗುಂಪು ಮಾಡಿರಿ ಮತ್ತು ಆಪ್ರಸಂಗಗಳಲ್ಲಿವ್ಯಕ್ತಿಯ ಬೆಳವಣಿಗೆಗೆ ಪೂರಕವಾದಿ ಮಾನಸಿಕತೆಯನ್ನುಉಪಯೋಗಿಸಿ ಹೇಗೆ ಪರ್ತಿಸಬಹುದು ಎಂಬುದರ ಚರ್ಚೆ ಮಾಡಿರಿ.

ನೀವು ಸಾಂಘಿಕ ಆಟಆಡಲು ಇತ್ತಿತ್ತಲಾಗಿಯೇಒಂದು ಹೊಸ ಸಂಘದಲ್ಲಿಪ್ರವೇಶಿಸಿದ್ದೀರಿ.ನಿಮಗೆ ಆ ಆಟದ ಕೌಶಲ್ಯಗಳಲ್ಲಿನೀವು ಹಿಂದೆ ಬೀಳುತ್ತಿದ್ದೀರಿಎಂಬುದು ತಿಳಿದಿದೆ. ಸಂಘದಲ್ಲಿಯ ಇತರರ ಹಾಗೆ ನಿಮಗೆ ಆಡಲು ಬರುವುದಿಲ್ಲ

ವರ್ಗದಲ್ಲಿಸತ್ರ ಪರೀಕ್ಷೆ ತಗೆದು ಕೊಳ್ಳ ಲಾಗಿದೆ, ಪ್ರತಿಯೊಂದುಸತ್ರದಲ್ಲಿನಿಮಗೆ ಕಡಿಮೆ ಅಂಕಗಳು ದೊರಕಿವೆ, ಅದೇವೇಳೆ ನಿಮ್ಮ ಗೆಳೆಯ/ಗೆಳತಿಗೆಸೆತತವಾಗಿ ಹೆಚ್ಚು ಅಂಕಗಳು ದೊರೆತಿವೆ

ನೀವು ಕವಿತೆಯನ್ನು ಬರೆದಿದ್ದೀರಿ ಮತ್ತು ನಿಮ್ಮ ಅಭಿಪ್ರಾಯದಂತೆಅದು ಒಳ್ಳೆಯದಾಗಿದೆ ಯಾವಾಗ ನಿಮ್ಮ ಶಿಕ್ಷಕರಿಗೆ ಅದನ್ನು ತೋರಿಸಿದರೋ ಆಗ ಶಿಕ್ಷಕರು ಅದರಲ್ಲಿಯ ಸಾಕಷ್ಟು ತಪ್ಪುಗಳನ್ನು ನಿಮಗೆ ತೋರಿಸಿ ಕೊಟ್ಟಿದ್ದಾರೆ

ನಿಮಗೆ ಶಾಲೆಯಲ್ಲಿಎಲ್ಲರ ಎದುರಿಗೆ ಒಳ್ಳೆಯ ಭಾಷಣ ಮಾಡಲು ಬರುವುದು. ನಿಮ್ಮ ಶಿಕ್ಷಕರು ನಿಮಗೆ ಅಂತರಶಾಲೆಯ ವಕ್ತೃತ್ವಸ್ಪರ್ಧೆಯಲ್ಲಿ ಭಾಗವಹಿಸುವಂತೆ ಸೂಚಿಸಿದ್ದಾರೆ. ಆದರೆ ಈ ಸರ್ಧೆಯ ಕೊನೆಗೆ ನೀವು ಉತ್ತಮರೆಂದು ನಿರ್ಧರಿಸಲ್ಪಡುವಿರೆಂದು ಹೇಳಲು ಬರುವಂತಿಲ್ಲಎಂಬ ಸಾಧ್ಯತೆ ಇದೆ

ನಿಮಗೆ ವಿಜ್ಞಾನ ಈ ವಿಷಯವು ಕಠಿಣ. ನೀವು ವಿಜ್ಞಾನವನ್ನು ಮನಸ್ಸಿನಿಂದ ಕಲೆಯಲು ಹೆಚ್ಚು ವೇಳೆ ಕೊಡುತ್ತಿದ್ದಿರಿ,ವೇಳೆ ಹೆಚ್ಚಿಸಿಯೂ ಯಶಸ್ಸು ದೊರಕುತ್ತಿಲ್ಲ.

### 2. ಸಂದರ್ಶನ



ಒಬ್ಬ ವ್ಯಕ್ತಿಯನ್ನುನಿಮ್ಮ ಕಣ್ಣುಮುಂದೆತನ್ನ ಯಾವನ ಕಡೆಗೆ ಮೊದಲು ಕೌಶಲ್ಯ ಇಲ್ಲವೆ ಕ್ಷಮತೆ ಇರಲಿಲ್ಲ. ಆದರೆ ಕಾಲಾಂತರದಲ್ಲಿ ಅವು ವಿಕಸಿತವಾದವು. ಆವ್ಯಕ್ತಿ ಯಾರೇ ಇರಬಹುದು. ಉದಾ: ನಿಮ್ಮ ಪಾಲಕರು, ಗೆಳೆಯರು, ಸಂಬಂಧಿಕರು, ಇಲ್ಲವೆ ಸುಪ್ರಸಿದ್ಧ ವ್ಯಕ್ತಿ, ಇಂಥ ವ್ಯಕ್ತಿಗಳ ಕುರಿತು ಹೆಚ್ಚೆಚ್ಚು ಮಾಹಿತಿಯನ್ನು ದೊರಕಿಸುವ ಪ್ರಯತ್ನ ಮಾಡಿರಿ ಸಂದರ್ಶನದಿಂದ (ಸಾಧ್ಯವಾದರೆ) ಮತ್ತು ಸಂಗ್ರಹಿಸಿದ ಮಾಹಿತಿಯ ಆಧಾರದಿದ ಮುಂದಿನ ಅಂಶಗಳ ಉತ್ತರಗಳನ್ನು ಕೊಡುವ ವರದಿಯನ್ನುಸಿದ್ಧಪಡಿಸಿರಿ.

- ಅವನು/ಅವಳು ಯಾವ ಪ್ರಸಂಗಗಳಲ್ಲಿ ಹೆಚ್ಚೆಚ್ಚು ಸಂಘರ್ಷ ಮಾಡಿದ್ದಾನೆ/ ಮಾಡಿದ್ದಾಳೆ.
- ಅವನ/ಅವಳ ಎದುರಿಗಿದ್ದ ಯಾವ ಆವ್ಹಾನಗಳನ್ನುಅವರು ಸ್ವೀಕರಿಸಿದರು.

### 3. ನಿಮ್ಮ ಸಮೀಪದ ಗೆಳೆಯ/ಗೆಳತಿಗೆ ಪತ್ರಬರೆಯಿರಿ


ನಿಮ್ಮಲ್ಲಿಯ ಕೊರತೆ ಇರುವ ಯಾವುದೇ ಒಂದು ಕ್ಷೇತ್ರವನ್ನುಶೋಧಿಸಿರಿ ಅದರಲ್ಲಿ ನಿಮಗೆ ಅನಿಸಿದಹಾಗೆ ಒಳ್ಳೆಯ ರೀತಿಯಿಂದ ಸಾದರಪಡಿಸುವುದಾಗಲಿಲ್ಲವುಮತ್ತು ನಿಮಗೆ ಸುಧಾರಣೆ ಮಾಡುವ ಅವಶ್ಯಕಇದೆ. ಅದಕ್ಕಾಗಿ ಒಂದು ಕೃತಿ ನಿಯೋಜನೆಯ ರೂಪರೇಷೆಯನ್ನುತಯಾರಿಸಿರಿ (ಉದಾ– ನಿಮ್ಮ ಅಭ್ಯಾಸದ/ರೂಢಿವೇಳಾಪತ್ರಿಕೆ)



ನಿಮ್ಮ ಸಮೀಪದ ಮಿತ್ರನಿಗೆ/ ಗೆಳತಿಗೆ ನಿಮ್ಮ ಸುಧಾರಣೆಗಾಗಿ ಮಾಡಿದ ಕೃತಿ ನಿಯೋಜನೆಯ ರೂಪರೇಷೆಯ ಮಾಹಿತಿಯನ್ನು ಪತ್ರದ ಮೂಲಕ ಕಳುಹಿಸಿರಿ ಮತ್ತು ಅದರ ಮೂಲಕ ನಿಮ್ಮ ಬೆಳವಣಿಗೆಗೆ ಪೂರಕವಾದ ಮಾನಸಿಕತೆಯನ್ನುಹೇಗೆ ತಯಾರು ಮಾಡುತ್ತಿದ್ದೀರಿಎಂಬುದನ್ನುವಹಿಯಲ್ಲಿ ಬರೆಯಿರಿ.

## ಮೌಲ್ಯಮಾಪನ

| ಭಾರಾಂಶ 10% | | | | |
|---|---|---|---|---|
| ಮಾನದಂಡ | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಗುಣಗಳು |
| ಉಪಕ್ರಮದಲ್ಲಿಯಸಹಭಾಗ | ಎಲ್ಲಸ್ವಾಧ್ಯಾಯ/ನಿಯಮಿತ ಕೆಲಸಗಳನ್ನುಕಾರ್ಯಶೀಲನಾಗಿ ಸಹಭಾಗದಿಂದಪೂರ್ಣ ಮಾಡಿದೆ. ಪ್ರಕರಣದಲ್ಲಿಯ ಮತ್ತು ಪಸ್ತಕದಲಿಯ ಎಲ್ಲ ಕೃತಿ ಪೂರ್ಣ ಮಾಡಲಾಗಿದೆ. | ಎಲ್ಲಕೃತಿಗಳನ್ನು ಪೂರ್ಣಮಾಡಿದೆ. | ಎರಡನೆಯವರನ್ನು ನೋಡಿ ಉತ್ತರಗಳನ್ನು ಬರೆಯಲಾಗಿದೆ. | |
| ಏನನ್ನುಕಲಿತಿದ್ದೇವೆ ಅದರ ಉಪಯೋಜನೆ ಮಾಡೋಣ ಈ ಅಂಶದಲ್ಲಿಯ ಮಾಹಿತಿಯ ಉಪಯೋಜನೆ | ಪ್ರಕರಣದಲ್ಲಿಸ್ಪಷ್ಟಪಡಿಸಿದ ಸಂಕಲ್ಪನೆಗಳಲ್ಲಿಯ ಎರಡಕ್ಕಿಂತ ಹೆಚ್ಚು ಸಂಕಲ್ಪನೆಗಳ ಉಪಯೋಜನೆ ಮಾಡಲಾಗಿದೆ. | ಪ್ರಕರಣದಲ್ಲಿಸ್ಪಷ್ಟಪಡಿಸಿದ ಸಂಕಲ್ಪನೆಗಳಲ್ಲಿಯ ಸೂಮಾರು ಒಂದು ಸಂಕಲ್ಪನೆಯ ಉಪಯೋಜನೆ ಮಾಡಲಾಗಿದೆ. | ಯಾವುದೇ ಕೃತಿ ಪೂರ್ಣಮಾಡಿಲ್ಲ. | |
| ಎಲ್ಲಕ್ಕೂಸಮೀಪದ ಗೆಳೆಯ/ ಗೆಳತಿಗೆ ಪತ್ರ ಬರೆಯಿರಿ. ಈ ಅಂಶಗಳಲ್ಲಿಯಮಾಹಿತಿಯ ಉಪಯೋಗ | ಪ್ರಕರಣದಲ್ಲಿಸ್ಪಷ್ಟಪಡಿಸಿದ ಸಂಕಲ್ಪನೆಗಳಲ್ಲಿಯ ಎರಡಕ್ಕಿಂತ ಹೆಚ್ಚು ಸಂತಲ್ಪನೆಗಳ ಉಪಯೋಜನೆ ಮಾಡಲಾಗಿದೆ. | ಪ್ರಕರಣದಲ್ಲಿಸ್ಪಷ್ಟಪಡಿಸಿದ ಸಂಕಲ್ಪನೆಗಳಲ್ಲಿಯಒಂದು ಸಂಕಲ್ಪನೆಯ ಉಪಯೋಗ ಮಾಡಲಾಗಿದೆ. | ಏನನ್ನೂ ಮಾಡಿಲ್ಲ. | |


ಇವತ್ತು ನಮಗೆ ಕರಿಅರದ ಸಂದರ್ಭದಲ್ಲಿ ಶಾಲೆಯಲ್ಲಿ ಕೇಳಲಾಯಿತು ಆದರೆ ನಿಶ್ಚಿತವಾಗಿ ನನಗೆ ಏನಾಗಬೇಕು ಈ ಕುರಿತು ಏನೇನೂ ತಿಳಿದಿಲ್ಲ. ನೀನು ಈ ಕರಿಅರ ಹೇಗೆ ಆರಿಸಿದೆ, ಧೈರ್ಯಧರ
ಬಹಳ ಬಹಳ ಪ್ರಯತ್ನದಿಡ ಮತ್ತು ನಿಜಹೇಳುವದಾದರೆ ಬಹಳ ತಪ್ಪು ಮಾಡಿ. ಕೆಲಸ ಮಾಡುವ ಎಲ್ಲ ಪದ್ಧತಿಗಳ ಅವಲಂಬವನ್ನು ನಾನು ಮಾಡಿದ್ದೆ.
ನಾನು ಎಲ್ಲವನ್ನು ಮಾಡಿ ನೋಡಿದೆ ಆಫೀಸಿನಲ್ಲಿ ಸಂಗಣಕದ ಮೇಲೆ ಅಂಕಿ ಅಂಶಗಳ ಲೆಕ್ಕ, ವಿವಿಧ ವಸ್ತುಗಳ ಮಾರಾಟ... ಹೇಗೆಂದರೆ: ಕಾಯಿಪಲ್ಲೆ ಮಾರುವದು, ಸಿನೇಮಾದ ತಿಕಿಟುಗಳನ್ನು ಮಾರುವುದು....ನನಗೆ ಸತತವಾಗಿ ಕರಿಅರ ಅಂದರೆ ಕೇವಲ ಹಣ ಗಳಿಸುವುದು ಇರುತ್ತದೆಂದು ಅನಿಸುತಿತ್ತು
ನಂತರ ನನ್ನ ಗಮನಕ್ಕೆ ಬಂದುದೆಂದರೆ, ನಾನು ಆ ಅಂಥ ಕೆಲಸಕ್ಕಾಗಿ ಹುಟ್ಟಿಲ್ಲ ನನ್ನಲ್ಲಿ ಏನಾದರೊಂದು ಬೇಕೆ ಗುಣ ವಿತ್ತು....ನನಗೆ ಹೀಗೆ ಅನ್ನಿಸುವುದು. ಅದು ಹೀಗೆ ಇರಬಹುದು......ನಿಮ್ಮಲ್ಲಿ ಒಂದು ಒಳಗಿನ ಧ್ವನಿ ಇರುವುದು ನಿಮಗೆ ಕೇವಲ ಅದನ್ನು ಲಕ್ಷ್ಯ ಕೊಟ್ಟುಕೇಳಬೇಕಾಗುವುದು ಹಾಗೆಯೇ ಅದಕ್ಕೆ ಪ್ರತಿಕ್ರಿಯೆಯುನ್ನು ಕೊಡಬೇಕು

# 8 ಕರಿಅರ

## ಅಂತರಂಗದ ಧ್ವನಿಯನ್ನು ಕೇಳುವುದು.....

**ಉದ್ದೇಶಗಳು:**

(1) ಕರಿಅರ ಈ ಸಂಜ್ಞೆಯ ಸ್ಪಷ್ಟಿಕರಣೆ ಮತ್ತು ಮಹತ್ವವನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವುದು.

(2) ಸ್ವಂತದ ಇಷ್ಟಗಳು, ಕ್ಷಮತೆಗಳು ಮತ್ತು ಎದುರಿಗೆ ಬರುವ ಅವಕಾಶಗಳನ್ನು ಗುರುತಿಸುವುದು.

(3) 'ಕರಿಅರ ಮ್ಯಾಜಿಕ ಫ್ರೇಮವರ್ಕದ' ಉಪಯೋಗ ಮಾಡಿ ಸ್ವಂತಕ್ಕಾಗಿ ಕರಿಅರದ ಯಾವ ಕ್ಷೇತ್ರ ಯೋಗ್ಯ ಇರಬಹುದು ಅದನ್ನು ಆರಿಸುವುದು.

(4) ಹತ್ತನೇ ತರಗತಿಯ ನಂತರ ಉಪಲಬ್ಧ ವಿರುವ ನೆಚ್ಚಿನ ಏಳು ಕ್ಷೇತ್ರಗಳನ್ನು ಅಂದಾಜಿನಂತೆ ಕ್ರಮದಲ್ಲಿ ಹಚ್ಚುವುದು.

(5) ಸ್ವಂತಕ್ಕಾಗಿ ಯೋಗ್ಯವೆನಿಸುವ ಕರಿಅರದ ಉದ್ದೇಶಗಳನ್ನು ಮತ್ತು ಆವ್ಹಾನಗಳ ಮೌಲ್ಯಾಂಕನೆ ಮಾಡುವುದು.

### 1. ನಿಮಗಾಗಿ ಕರಿಅರ ಇದರ ಅರ್ಥವೇನು?

- ಕರಿಅರ ಇದು ಬಹಳ ಹಣ ದೊರಕಿಸುವ ಸಾಧನವಾಗಿದೆ.

  ಹೌದು ಇಲ್ಲ

- ಕರಿಅರ ಅಂದರೆ ಮುಂಜಾನೆಯಿಂದ ಸಂಜೆಯವರೆಗೆ ಮಾಡುವ ಕೆಲಸ

  ಹೌದು ಇಲ್ಲ

- ಕರಿಅರ ಅಂದರೆ ಪ್ರಸಿದ್ಧವಾಗುವುದು ಮತ್ತು ಯಶಸ್ವಿಯಾಗುವುದು

  ಹೌದು ಇಲ್ಲ

ಪ್ರತಿಯೊಂದು ವಿಧಾನವನ್ನು ಓದಿರಿ ಮತ್ತು ವಿದ್ಯಾರ್ಥಿಗಳಿಗೆ ಹೌದು ಅಥವಾ ಇಲ್ಲ ಇವುಗಳಲ್ಲಿ ಯಾವುದು ಅವರ ಉತ್ತರವಿರುವುದು, ಅದಕ್ಕಾಗಿ ಕೈ ಮೇಲೆತ್ತಲು ಹೇಳಿರಿ. ವಿದ್ಯಾರ್ಥಿ ಕರಿಅರದ ಕುರಿತು ಏನು ವಿಚಾರ ಮಾಡುತ್ತಾರೆ. ಎಲ್ಲರೊಂದಿಗೆ ವಿಚಾರಗಳ ವಿನಿಮಯ ಮಾಡಲು ಹೇಳಿರಿ.

### 2. ಕರಿಅರ ಎಂದರೇನು?

ಕರಿಅರ ಅಂದರೆ ಜೀವನದಲ್ಲಿ ಆನಂದ ಮತ್ತು ಗುಣವತ್ತತೆಯಿಂದಾಗುವ ಸರ್ವಾಂಗೀಣ ಪ್ರಗತಿ.

| ಆನಂದ | + | ಗುಣವತ್ತತೆ | = | ಸರ್ವಾಂಗೀಣ ಪ್ರಗತಿ |
|---|---|---|---|---|
| ಆನಂದ ವೆಂದರೆ ಯಾವುಮೊಂದು ಇಷ್ಟದಬಗ್ಗೆ ಮಾತನಾಡುವಾಗ ಸಿಗುವ ಸಮಾಧಾನ. | | ನೆಚ್ಚಿನ ಕ್ಷೇತ್ರದಲ್ಲಿ ಸರ್ವೋತ್ತಮತೆ ಪ್ರಾಪ್ತ ಮಾಡಲು ನಿಮ್ಮ ಹತ್ತಿರ ಮೂಲತ: ಇರುವ ಕ್ಷಮತೆ ಇಲ್ಲವೆ ಅವಶ್ಯಕ ಕ್ಷಮತೆ ವಿಕಸಿತ ಮಾಡುವುದು ಇದಕ್ಕೆ ಗುಣವತ್ತತೆ ಎಂದು ಕರೆಯುವರು | | ಸರ್ವಾಂಗೀಣ ಪ್ರಗತಿ ಹಣ, ಆದರ, ಮಾನಸಿಕ ಸಮಾಧಾನ, ಪ್ರತಿಷ್ಠೆ, ಪ್ರಸಿದ್ಧತನ ಮುಂತಾದ ಸ್ವರೂಪದಲ್ಲಿ ಕಾಣಿಸುವವು. |



ಯಾವುದೇ ವ್ಯಕ್ತಿಯು ಅವನ ನೆಚ್ಚಿನ ಕ್ಷೇತ್ರದಲ್ಲಿ ಕೆಲಸ ಮಾಡುವನೋ ಮತ್ತು ಗುಣಾತ್ಮಕ ಕೆಲಸ ಮಾಡಲು ಅವನಕಡೆಗೆ ಕ್ಷಮತೆ ಇರುವುದೋ ಆ ಕ್ಷಮತೆಯಿಂದ ಎಡೆಬಡದೆ ಕೆಲಸ ಮಾಡಿ ತಾಳ್ಮೆ ಮತ್ತು ಬಂಧುತ್ವ ಬೆಳೆಸುವನೋ ಆಗ ಆ ವ್ಯಕ್ತಿಯ ಸರ್ವಾಂಗೀಣ ಪ್ರಗತಿಯಾಗುವುದು. ಇದಕ್ಕೇನೆ ಕರಿಅರ ನಿರ್ಮಿಸುವುದು ಅನ್ನಬಹುದು.




ಉದಾ: ಸಚಿನ ತೆಂಡೊಲಕರರು ಕ್ರಿಕೆಟ್ ಕರಿಅರ ಆರಿಸಿದರು. ಏಕೆ? ಏಕೆಂದರೆ ಕ್ರಿಕೆಟ್ ಆಡುವುದರಿಂದ ಅವರಿಗೆ ಆನಂದ ಸಿಗುತ್ತಿತು. ಅವಕ್ಕಾಗಿ ಅವರು ಬಹಳಷ್ಟು ಪರಿಶ್ರಮ ತಗೆದುಕೊಳ್ಳುತ್ತಿದ್ದರು ಮತ್ತು ಅವರು ಒಳ್ಳೆಯ ರೀತಿಯಿಂದ ಆಡ ಬಹುದಾಗಿತ್ತು. ಕ್ರಿಕೆಟದ ಆನಂದ ಪಡೆಯುತ್ತ ಮತ್ತು ಅದರಲ್ಲಿಯ ತನ್ನ ಗುಣವತ್ತತೆಯನ್ನು ಹೆಚ್ಚಿಸುತ್ತ ಅವರು ಕ್ರಿಕೆಟದ ಕ್ಷೇತ್ರದಲ್ಲಿ ಹೆಸರುವಾಸಿಯಾದರು. ತನ್ನ ಮೆಚ್ಚುಗೆ ಮತ್ತು ಕ್ಷಮತೆಯ ಆಧಾರದ ಮೇಲೆ ಅವರು ಸ್ವತದ ಸರ್ವಾಂಗೀಣ ವಿಕಾಸ ಮಾಡಿಕೊಂಡರು.

ವರ್ಗವನ್ನು ಐದು ಗುಂಪಿನಲ್ಲಿ ವಿಭಾಗಿಸಿರಿ. ಯಾವ ವ್ಯಕ್ತಿಗಳು ಸ್ವತದ ಕರಿಅರ ನಿರ್ಮಿಸಿದ್ದಾರೋ ಅಂತಹ ಮೂರು ವ್ಯಕ್ತಿಗಳ ಹೆಸರನ್ನು ನೆನಪಿಸಲು ಪ್ರತಿಯೊಬ್ಬರಿಗೆ ಹೇಳಿರಿ. ಆ ವ್ಯಕ್ತಿ ಯಾರೇ ಇರಬಹುದು. ಆ ಪ್ರತಿಯೊಬ್ಬರ ಕುರಿತು ಅವರ ಮೆಚ್ಚಿಗೆ ಅವರ ಕ್ಷಮತೆ, ಮತ್ತು ಅವಕಾಶ ಹೇಗೆ ಒಟ್ಟಿಗೆ ಬಂದವು ಎಂಬುದನ್ನು ಗುರುತಿಸಿ ಚರ್ಚೆಮಾಡಲು ಹೇಳಿರಿ.

## 3. ‘ಕರಿಅರ ಮ್ಯಾಜಿಕ ಫ್ರೆಮವರ್ಕ’

**ಮೆಚ್ಚುಗೆ** ಅಂದರೆ ಯಾವುದೇ ಒಂದು ಸಂಗತಿ, ಅದು ಎಷ್ಟೋ ವೇಳೆ ನೀವು ಆ ಕೆಲಸವನ್ನು ಮಾಡಬಹುದು, ನಿಮಗೆ ಸಮಯದ ಪರಿವೆಯೇ ಇರುವುದಿಲ್ಲ. ಮೆಚ್ಚುಗೆ ಇದು ವೈಯ್ಕಿಕ ಮತ್ತು ವ್ಯಕ್ತಿವಿಶಿಷ್ಟ ಆಂತರಿಕ ಸಂಗತಿಯಾಗಿದೆ.




**ಕ್ಷಮತೆ** ಅಂದರೆ ಯಾವುದೇ ಕೆಲಸ ಮಾಡುವ ಜ್ಞಾನ, ಕೌಶಲ್ಯ ಮತ್ತು ಶಕ್ತಿ. ಕ್ಷಮತೆ ಇದು ಅನುವಂಶಕತೆಯಿಂದ ಪ್ರಾಪ್ತವಾಗಬಹುದು ಇಲ್ಲವೆ ನಂತರ ಪ್ರಶಿಕ್ಷಣ, ಅಭ್ಯಾಸ ಮತ್ತು ಪ್ರತಿಕ್ರಿಯೆ ಇವುಗಳಿಂದ ಕಾಲದ ಪ್ರವಾಹದಲ್ಲಿ ವಿಕಾಸಮಾಡಲು ಬರುವುದು. ಯಾವುದೇ ವ್ಯಕ್ತಿ, ಅವನ ಮೆಚ್ಚಿನ ಕ್ಷೇತ್ರದಲ್ಲಿ ಸಾಕಷ್ಟು ಪರಿಶ್ರಮ ಮಾಡಿ ಕ್ಷಮತೆಯ ವಿಕಾಸ ಮಾಡಲು ಯಾವಾಗಲೂ ಇಚ್ಛೆಯುಳ್ಳವನಾಗಿರುತ್ತಾನೆ.

**ಅವಕಾಶ**ವೆಂದರೆ ಸಮಾಜದಿಂದ ಬರುವ ವಿಶಿಷ್ಟ ಬೇಡಿಕೆ ಇಲ್ಲವೆ ಸಮಾಜದ ಅವಶ್ಯಕತೆ,ಸಮಾಜವು ಅದಕ್ಕಾಗಿ ಹಣಕೊಡಲು ಸಿದ್ಧವಾಗುವುದು. ಸಮಾಜವ ಈ ಅವಶ್ಯಕತೆ ಇಲ್ಲವೆ ಬೇಡಿಕೆಯೇ ನೌಕರಿಯ ಇಲ್ಲವೆ ವ್ಯವಸಾಯದ ಅವಕಾಶವನ್ನು ದೊರಕಿಸಿಕೊಡುತ್ತದೆ.

**ಕರಿಅರ ಮ್ಯಾಜಿಕ ಫ್ರೇಮವರ್ಕ ಅಂದರೆ ಈ ಮೂರು ಅಂಶಗಳು ಒಟ್ಟಿಗೆ ಬರುವುದು. ಇದರಲ್ಲಿಯ ಯಾವುದೇ ಒಂದನ್ನು ಬದಿಗಿಟ್ಟರೆ, ಕೇವಲ ನಿಮ್ಮ ಕನಸು, ನಿಮ್ಮ ನೌಕರಿ ಇಲ್ಲವೆ ನಿಮ್ಮ ಆಸಕ್ತಿ ಉಳಿಯುತ್ತದೆ. ಕರಿಅರ ರೂಪಿಸಲು ಕನಸು, ನೌಕರಿ, ಆಸಕ್ತಿ ಮತ್ತು ಕರಿಅರದಲ್ಲಿಯ ಮಾಹಿತಿ ಇರುವುದು ಅವಶ್ಯಕವಾಗಿದೆ.**

*ಗಮನಿಸಬೇಕಾದ ಅಂಶಗಳು*

- *ಯಾವಾಗಲೂ ಲಕ್ಷ್ಯದಲ್ಲಿಡಿ – ನೀವು ವೈಶಿಷ್ಟ್ಯಪೂರ್ಣವಾಗಿದ್ದೀರಿ. ನಿಮ್ಮ ಕರಿಅರ ಮ್ಯಾಜಿಕ ಫ್ರೆಮವರ್ಕ ಕೂಡ ವಿಶಿಷ್ಟವಾಗಿದೆ*
- *ನಿಮ್ಮ ಕರಿಅರ ಮ್ಯಾಜಿಕಫ್ರೇಮವರ್ಕ ಇದು ಸಮೀಪದ ಗೆಳೆಯ/ಗೆಳತಿಯ ಸಹೋದರರು, ಇಲ್ಲವೆ ಯಾವುದೇ ವ್ಯಕ್ತಿಯ ಹಾಗೆ ಇರಲಾರದು. ಅಂತೆಯೇ ನಿಮಗೆ ನಿಮ್ಮ ಸ್ವಂತದ, ವೈಶಿಷ್ಟ್ಯಪೂರ್ಣ ಕರಿಅರ ಮ್ಯಾಜಿಕ ಫ್ರೇಮವರ್ಕ ತಯಾರು ಮಾಡಬೇಕಾಗಿದೆ*

## 4. ಕನಸು, ಆಸಕ್ತಿ, ನೌಕರಿ ಮತ್ತು ಕರಿಅರ ಇವುಗಳಲ್ಲಿಯ ಅಂತರ ತಿಳಿದುಕೊಳ್ಳುವುದು.




**(ಅ) ಕನಸು = ಇಷ್ಟ + ಆಸಕ್ತಿ – ಕ್ಷಮತೆ**

**ಇಷ್ಟ** – 'ಅ' ಇವನಿಗೆ ನಟನಾಗುವ ಇಷ್ಟವಿದೆ.

**ಕ್ಷಮತೆ** – 'ಅ' ಇವನು ಅತ್ಯಂತ ನಾಚಿಕೆಯುಳ್ಳವ, ಮೈಗಳ್ಳನಾಗಿದ್ದಾನೆ. ಅವನಿಗೆ ಒಳ್ಳೆಯ ಅಭಿನಯ ಬರುವುದಿಲ್ಲ.

**ಅವಕಾಶ** – ನಟನಿಗೆ ಮತ್ತು ನಟಿಯರಿಗೆ ಹಣಗಳಿಸಲು ಬಹಳ ಅವಕಾಶಕಗಳಿವೆ

ಕ್ಷಮತೆ ಇಲ್ಲದ್ದರಿಂದ ಒಳ್ಳೆಯ ನಟನಾಗುವ 'ಅ' ನ ಬರೇ ಕನಸು ಉಳಿಯಬಹುದು. ಅಭಿನಯದಲ್ಲಿಯ ಕರಿಅರ ರೂಪಿಸಲು ಅವನಿಗೆ ಅದರ ಕ್ಷಮತೆ ಇಲ್ಲವೆ ಬಹಳ ಪರಿಶ್ರಮ ಮತ್ತು ಪ್ರಶಿಕ್ಷಣದಿಂದ ವಿಕಸಿತ ಮಾಡ ಬೇಕಾಗುವುದು.



**(ಬ) ಆಸಕ್ತಿ = ಇಷ್ಟ + ಕ್ಷಮತೆ – ಅವಕಾಶ**

**ಇಷ್ಟ** – 'ಬ' ನಿಗೆ ಪುಸ್ತಕಗಳನ್ನು ಓದುವುದು ಇಷ್ಟವಾಗಿದೆ

**ಕ್ಷಮತೆ** – 'ಬ' ನು ದಿನಾಲು ನೂರು ಪುಟಗಳನ್ನು ಓದುವನು

**ಅವಕಾಶ** – ಕೇವಲ ಪುಸ್ತಕಗಳನ್ನು ಓದಿ ಹಣಗಳಿಸುವ ಯಾವುದೇ ಅವಕಾಶವಿಲ್ಲ.

ಅವಕಾಶ ವಿಲ್ಲದ್ದರಿಂದ 'ಬ' ನಿಗೆ ಪುಸ್ತಕಗಳನ್ನು ಓದುವುದು ಬರೀ ಆಸಕ್ತಿಯಾಗಿ ಇರಬಹುದು. ಎಲ್ಲಿಯವರೆಗೆ ಅವನಿಗೆ ಒಂದಿಲ್ಲ ಒಂದು ಶಿಕ್ಷಣದ ಜೊತೆ ಸಿಗುವುದಿಲ್ಲವೊ ಅಲ್ಲಿಯವರೆಗೆ.



**(ಕ) ನೌಕರಿ = ಕ್ಷಮತೆ + ಅವಕಾಶ –ಇಷ್ಟ**

**ಇಷ್ಟ** – 'ಕ' ನಿಗೆ ಗಣಿತ ಮತ್ತು ವಿಜ್ಞಾನಗಳು ಇಷ್ಟವಾಗುತ್ತವೆ.

**ಕ್ಷಮತೆ** – 'ಕ' ಈತನು ಸಂಗೀತದ ಹಿನ್ನೆಲೆಯಿದ್ದ ಮನೆತನದಲ್ಲಿ ಹುಟ್ಟಿದ್ದಾನೆ ಮತ್ತು ಹಾಡುವ ಕ್ಷಮತೆ ಇದು ಅವನ ನೈಸರ್ಗಿಕ ಪ್ರತಿಭೆಯಾಗಿದೆ.

**ಅವಕಾಶ** – ಒಳ್ಳೆಯ ಗಾಯಕರಿಗೆ ಹಣ ಮತ್ತು ಹೆಗ್ಗಳಿಕೆ ದೊರಕಿಸುವ ಬಹಳ ಅವಕಾಶಗಳು ಉಪಲಬ್ಧ ಇವೆ.

ಇಷ್ಟವಿಲ್ಲದ್ದರಿಂದ 'ಕ' ಇವನು ಗಾಯಕನಾದರೂ ಸಹ ಅವನು ಇಚ್ಛೆಗೆ ವಿರುದ್ಧವಾಗಿ ಹಣ ದೊರಕಿಸಲು ನೌಕರಿ ಮಾಡಬಹುದು.

**(ಡ) ಕರಿಅರ = ಕ್ಷಮತೆ + ಅವಕಾಶ - ಇಷ್ಟ**



**ಇಷ್ಟ** – 'ಡ' ಗೆ ಗೆಳೆಯ/ಗೆಳತಿಯರ ಹೊಲದಲ್ಲಿ ಕೆಲಸ ಮಾಡುವುದು ಇಷ್ಟವಾಗುತ್ತದೆ. ಹಾಗೆಯೆ ಒಕ್ಕಲುತನದ ಕುರಿತು ಅರಿತು ಕೊಳ್ಳಲು ಸಮಯ ಕೊಡುವುದು ಇಷ್ಟವಾಗುತ್ತದೆ.

**ಕ್ಷಮತೆ** – 'ಡ' ಇವಳು ಬೆಳೆಗಳ ಕುರಿತು ಹಾಗೇ ತಾಂತ್ರಿಕ ಕೃಷಿಯ ಕುರಿತು ಸಂಶೋಧನೆ ಮಾಡಿದ್ದಾಳೆ. 'ಡ' ಇವಳು ಬಿಸಿಲಿನಲ್ಲಿಯೂ ಬಹಳ ಹೊತ್ತು ಕೆಲಸ ಮಾಡಬಲ್ಲಳು.

**ಅವಕಾಶ** – ಕೃಷಿಈ ಕ್ಷೇತ್ರದಲ್ಲಿಹೊಸ ಸಂಶೋಧನೆ ಮತ್ತು ಶೋಧ ಮಾಡುವ ಹಲವಾರು ಅವಕಾಶಗಳಿವೆ.

ಅಂದರೆ 'ಡ' ಇವಳ ಇಷ್ಟ, ಕ್ಷಮತೆ ಮತ್ತು ಅವಕಾಶ ಒಗ್ಗೂಡಿವೆ. ಇದರಿಂದ 'ಡ' ಇವಳು ಕೃಷಿಕ್ಷೇತ್ರದಲ್ಲಿಉತ್ತಮ ಕರಿಅರ ಮಾಡಬಹುದು.

## 5. ಮನಸ್ಸಿನ ಹಾಗೆ ಯಾರು ಕರಿಅರ ರೂಪಿಸಬಹುದು?

ಕೆಳಗಿನ ಪ್ರಸಂಗಗಳ ಅಭ್ಯಾಸ ಮಾಡಿ ಕೇಳಿದ ಪ್ರಶ್ನೆಗಳಿಗೆ ನಿಮ್ಮ ಶಬ್ದಗಳಲ್ಲಿ ಉತ್ತರಿಸಿರಿ.

ಶಮಿಕಾಳ ಪಾಲಕರು ಡಾಕ್ಟರ ಇದ್ದಾರೆ ಔರಂಗಾಬಾದದಲ್ಲಿ ಅವರ ಸ್ವಂತದ ಆಸ್ಪತ್ರೆ ಇದೆ. ಶಮಿಕಾಳ ತಾಯಿಗೆ ಅವಳು ಡಾಕ್ಟರ ಆಗಬೇಕು ಅನಿಸುತ್ತದೆ. ಅವಳ ತಂದೆ. ತಾಯಿಯರು ಅವಳ ಫೀ ತುಂಬಿ ಅವಳಿಗೆ ಡಾಕ್ಟರ ಶಿಕ್ಷಣ ಕೊಡಿಸಲು ಸಿದ್ಧರಿದ್ದಾರೆ. ಆದರೆ ಶಮಿಕಾಳಿಗೆ ಪೇಂಟಿಂಗ ಮಾಡುವುದು ಬಲು ಇಷ್ಟ ಅದರಲ್ಲಿ ಆಕೆ ಬಹಳ ಒಳ್ಳೆಯ ಕೆಲಸ ಮಾಡಬಲ್ಲಳು ಆಕೆಯು ತಾಸುಗಟ್ಟಲೇ ಸ್ಕೆಚೆಸ್ ಮತ್ತು ಪೆಂಟಿಂಗ ಆಯಾಸವಿಲ್ಲದೆ ಮಾಡಬಲ್ಲಳು. ಆಕೆಗೆ ಆಸ್ಪತ್ರೆಯಲ್ಲಿ ಹೋಗಲು ಹಿಡಿಸುವುದಿಲ್ಲ.





- ಶಮಿಕಾ ಒಳ್ಳೆಯ ಡಾಕ್ಟರರಾಗ ಬಲ್ಲಳೆ?
- ಅವಳು ಒಳ್ಳೆಯ ಡಾಕ್ಟರಳಾಗಲು ಅವಳ ಹತ್ತಿರ ಯಾವ ಗುಣಗಳು ಇವೆ?
- ಅವಳು ಬಹುತೇಕವಾಗಿ ಒಳ್ಳೆಯ ಡಾಕ್ಟರಳಾಗಲಾರಳು. ಇದು ಏಕೆ ಅನಿಸುವುದು?



ಮನಿಷನಿಗೆ ಕ್ರಿಕೆಟ್ ಆಟಗಾರ ಆಗುವುದಿದೆ. ಸಚಿನ ತೆಂಡೂಲ್‌ಕರ್ ಅವನ ಆದರ್ಶವಾಗಿದ್ದಾನೆ. ಎಂದಾದರೂ ಸಚಿನನ ಹಾಗೆ ಆಗುವ ಕನಸು ಕಂಡಿದ್ದಾನೆ. ಆದರೆ ಅವನ ಕೆಲವು ವೈದ್ಯಕೀಯ ಸಮಸ್ಯೆಗಳಿಂದ ಅವನಿಗೆ ಬಹಳ ಹೊತ್ತು ಬಿಸಿಲಿನಲ್ಲಿ ನಿಲ್ಲಲಾಗುವುದಿಲ್ಲ.

- ಮನಿಷ್ ಒಳ್ಳೆಯ ಕ್ರಿಕೆಟಿಯರ ಆಗಬಹುದೇ?
- ಅವನು ಕ್ರಿಕೆಟಿಯರ ಆಗಬಹುದು ಎಂಬ ಯಾವ ಸಂಗತಿಗಳು ಅವನ ಹತ್ತಿರಇವೆ?
- ಬಹುಶ: ಅವನು ಕ್ರಿಕೆಟಿಯರ ನಾಗಲಾರ ಎಂದು ಏಕೆ ಅನಿಸುವುದು?



ಅಲಿಗೆ ಶಿಕ್ಷಕನಾಗುವುದಿದೆ. ಅವನ ತಂದೆ-ತಾಯಿ ಇಬ್ಬರೂ ಶಿಕ್ಷಕರಾಗಿದ್ದಾರೆ ಮತ್ತು ಅವನ ಮಹತ್ವಕಾಂಕ್ಷೆಗೆ ಬೆಂಬಲ ಕೊಡುವವರಿದ್ದಾರೆ. ಅಲಿ ಇವನು ವಿದ್ಯಾರ್ಥಿಯಂದು ಒಳ್ಳೆಯವನಿದ್ದಾನೆ ಮತ್ತು ಪರೀಕ್ಷೆಯಲ್ಲಿಯೂ ಒಳ್ಳೆಯ ಯಶಸ್ಸು ಪಡೆಯುವನು. ಅವನ ಮಿತ್ರರಿಗೂ ಅಲಿಯ ಹತ್ತಿರ ಕಲಿಯುವ ನೈಪುಣ್ಯತೆ ಇದೆ. ಎಂದು ಅನಿಸುತ್ತದೆ. ಅಲಿಗೆ ಯಾವಾಗ ಸಮಯ ಸಿಗುವುದೋ ಆಗ ಚಿಕ್ಕ ಮಕ್ಕಳೊಂದಿಗೆ ಸಮಯ ಕಳೆಯುವುದು ಹಿಡಿಸುವುದು. ಅಲಿ ಕಾಲೋನಿಯಲ್ಲಿಯ ಚಿಕ್ಕ ಮಕ್ಕಳಿಗೆ ಕಲಿಸುವನು.

- ಅಲಿಯು ಒಳ್ಳೆಯ ಶಿಕ್ಷಕನಾಗಬಹುದೆ?
- ಅಲಿ ಒಳ್ಳೆಯ ಶಿಕ್ಷತ ನಾಗಬಹುದು ಎಂಬ ಯಾವ ಸಂಗತಿಗಳು ಅವನಲ್ಲಿವೆ?
- ಬಹುಶ: ಅಲಿ ಒಳ್ಳೆಯ ಶಿಕ್ಷಕ ನಾಗಲಾರ ಎಂದು ಅನಿಸುತ್ತದೆಯೇ?

## 6. ನಿಮ್ಮ ಇಷ್ಟದ ಕುರಿತು ವಿಚಾರ ಮಾಡಿರಿ..

(1) ಇಂತಹ ಕೃತಿ ಮಾಡುವಾಗ ನಿಮಗೆ ವೇಳೆಯ ಪರಿವೆ ಇರುವುದಿಲ್ಲಮತ್ತು ಅದು ಮಾಡುವಾಗ ಅದರಲ್ಲಿನೀವು ಪೂರ್ಣವಾಗಿ ತೊಡಗಿರುತ್ತೀರಿ.

(2) ಇಂಥ ಕೃತಿ ಮಾಡುವಾಗ ನೀವು ಬಹಳ ಆನಂದಿತರಾಗಿ ಇರುತ್ತೀರಿ ಮತ್ತು ನಿಮಗೆ ಆ ಕೃತಿ ಮೇಲಿಂದ ಮೇಲೆ ಮಾಡಲು ಹಿಡಿಸುವುದು.

(3) ಇಂಥ ಕೃತಿ, ಮಾಡುವಾಗ ನಾವು 100% ಪ್ರಯತ್ನ ಮಾಡುತ್ತಿದ್ದೇವೆಎಂದು ನಿಮಗೆ ಅನಿಸುವುದು.

(4) ಇಂತಹ ಒಂದು ಕೃತಿ, ಮಾಡುವಾಗ ನೀವು ಸತತವಾಗಿ ನಿಮ್ಮಲ್ಲಿಸುಧಾರಣೆ ಮಾಡಿಕೊಳ್ಳುವಿರಿ.

(5) ಇಂಥ ಕ್ಷೇತ್ರ, ಕುರಿತು ನೀವು ಹೆಚ್ಚಿಗೆ ಮಾಹಿತಿಯನ್ನು ದೊರಕಿಸಿಕೊಳ್ಳುವಿರಿ ಇಲ್ಲವೆ ಆ ಕ್ಷೇತ್ರದ ಕುರಿತು ಇತರರೊಂದಿಗೆ ಸಂವಾದ ಸಾಧಿಸುವಿರಿ. ಏಕೆಂದರೆ ಆ ಕುರಿತು ನಿಮಗೆ ಹೆಚ್ಚಿಗೆ ಆಕಲನವಾಗಬಹುದು.

(6) ಇಂಥ ಕೃತಿ, ನೀವು ನಿಮ್ಮ ಬಿಡುವಿನ ವೇಳೆಯಲ್ಲಿ ಮಾಡುವ ವಿಚಾರ ಮಾಡುವಿರಿ.

ಕೇಳಿದ ಪ್ರಶ್ನೆಗಳಿಗೆ ಕರಿಅರದ ದೃಷ್ಟಿಯಿಂದ ವಿಚಾರ ಮಾಡಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿರಿ ಮತ್ತು ಅವರಿಗೆ ವಹಿಯಲ್ಲಿ ಉತ್ತರಗಳನ್ನು ಬರೆಯಲು ಹೇಳಿರಿ.
ವಿಧ್ಯಾರ್ಥಿಗಳು ಅಂದಾಜಿನ ಉತ್ತರಗಳಿಗಿಂತ ಬೇರೆ ಉತ್ತರಗಳನ್ನು ಕೊಡಬೇಕು ಅಂದರೆ ತಿನ್ನುವ/ ವ್ಹಿಡಿಯೋಗೇಮ ಆಡುವ/ಟಿ.ವ್ಹಿ. ನೋಡುವ/ಫೋನಿನ ಮೇಲೆ ಮಾತನಾಡುವ ಉತ್ತರಗಳನ್ನು ಬಿಟ್ಟು ಉಳಿದ ವಿಚಾರ ಬೇಕು.
ಇಲ್ಲಿ ಕೇಳಿವ ಪಶ್ನೆಗಳಿಂದ ಅವರಿಗೆ ಸ್ವಂತದ ಇಷ್ಟದ ಕುರಿತು ವಿಚಾರ ಮಾಡಲು ಸಹಾಯವಾಗಬಹುದೆಂಬಂತೆ ಈ ಪ್ರಶ್ನೆಗಳ ರಚನೆ ಮಾಡಲಾಗಿದೆ.
ವಿದ್ಯಾರ್ಥಿಗಳಿಗೆ ಅನೇಕ ಪ್ರಶ್ನೆಗಳಿಗೆ ಒಂದೇ ಉತ್ತರ ಕೊಡಲು ಇಲ್ಲವೆ ಪ್ರತಿಯೊಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಕೊಡಲು ಅನುಮತಿ ಇದೆ.

(7) ಇಂಥ ಒಂದು ಸಂಗತಿ ಮಾಡಲು ನಿಮಗೆ ಹಿಡಿಸುವುದಿಲ್ಲ,ಮಾಡಲು ಭೀತಿಯಾಗುತ್ತದೆ,ಮಾಡುವಾಗ ಅಸ್ವಸ್ಥತೆ ಬರುವುದು.

(8) ಇಂಥ ಕೃತಿ, ನೀವು ಎಷ್ಟೇ ಪ್ರಯತ್ನಮಾಡಿದರೂ ಅದು ಕಠಿಣವೆನಿಸುವುದು.

(9) ಇಂಥ ಕೃತಿ, ಮಾಡಲು ನೀವು ಹಿಂಜರಿಯುತ್ತೀರಿ.

## 7. ನಿಮ್ಮ ಇಷ್ಟಗಳನ್ನು ಶೋಧಿಸಿರಿ

- ಇಲ್ಲಿ ಕ್ರಿಯಾಪದಗಳ ಯಾದಿಯನ್ನು ಕೊಡಲಾಗಿದೆ.
- ತೋರಿಸುವಂತಹ ಐದು ಕ್ರಿಯಾಪದ ಶೋಧಿಸಿರಿ, ಅವು ನಿಮಿಗೆ ಇಷ್ಟವಾದ ಕ್ಷೇತ್ರವನ್ನು ಮತ್ತು ಆ ಕ್ರಿಯಾಪದಗಳನ್ನು ಉಪಯೋಗಿಸಿದರೆ ಅರ್ಥಪೂರ್ಣ ವಿಧಾನಗಳು ತಯಾರಾಗಬಲ್ಲವು.
- ನೀವು ಸ್ವಂತದ ಕ್ರಿಯಾಪದಗಳನ್ನು ಸಹ ಉಪಯೋಗಿಸಬಹುದು.

| ಕ್ರಿಯಾಪದಗಳ ಯಾದಿ | | | |
|---|---|---|---|
| ವಿಚಾರ ಮಾಡುವುದು | ಸಾದರ ಪಡಿಸುವುದು | ಸಂರಕ್ಷಣೆ ಮಾಡುವುದು | ಅಲೆದಾಡುವುದು |
| ಅಳೆಯುವುದು | ಯೋಜನೆಮಾಡುವುದು | ಸರ್ವೇಕ್ಷಣೆ ಮಾಡುವುದು | ವ್ಯಾಯಾಮಮಾಡುವುದು |
| ಸಂಗ್ರಹಿಸುವುದು | ಸಂಶೋಧನೆ ಮಾಡುವುದು | ಅಧ್ಯಾಪನಮಾಡುವುದು | ಚಿತ್ರವನ್ನು ಬಿಡಿಸುವುದು |
| ರಚಿಸುವುದು | ಅಭ್ಯಾಸಮಾಡುವುದು | ಭಾಷಾಂತರ ಮಾಡುವುದು | ದುರುಸ್ತಿ ಮಾಡುವುದು |
| ನಿರ್ಮಾಣ ಮಾಡುವುದು | ಬರೆಯುವುದು | ಪರೀಕ್ಷಣೆಮಾಡುವುದು | (ನಿಮ್ಮ ಮನಸ್ಸಿನಲ್ಲಿಯ |
| ಬಿತ್ತುವುದು | ಜೋಡಿನುವುದು | ಅಡುದೆ ಮಾಡುವುದು | ಕ್ರಿಯಾಪದಗಳನ್ನು |
| ದಿಗ್ದರ್ಶನ ಮಾಡುವುದು | ನಾವಿನ್ಯಪೂರ್ಣಶೋಧಹಚ್ಚುವುದು | ತಯಾರಿಸುವುದು | ಹೆಚ್ಚಿಸಿರಿ) |
| ಪ್ರಾರಭಿಸುವುದು | ನೇತೃತ್ವಮಾಡುವುದು | ಹಾಡು ಹಾಡುವುದು | |
| ಶೋಧಿಸುವುದು | ವ್ಯವಸ್ಥಾಪನೆಮಾಡುವುದು | ನೃತ್ಯ ಮಾಡುವುದು | |

**ಉದಾಹರಣಾರ್ಥ : ನನಗೆ ಕವನ ಬರೆಯಲು ಹಿಡಿಸುವುದು**

(1) ನನಗೆ < ಮೇಲಿನ ಯಾದಿಯಲ್ಲಿಯಕ್ರಿಯಾಪದ> ........................................ಇಷ್ಟ/ಹಿಡಿಸುತ್ತದೆ

(2) ನನಗೆ < ಮೇಲಿನ ಯಾದಿಯಲ್ಲಿಯಕ್ರಿಯಾಪದ> ........................................ಇಷ್ಟ/ಹಿಡಿಸುತ್ತದೆ

(3) ನನಗೆ < ಮೇಲಿನ ಯಾದಿಯಲ್ಲಿಯಕ್ರಿಯಾಪದ> ........................................ಇಷ್ಟ/ಹಿಡಿಸುತ್ತದೆ

(4) ನನಗೆ < ಮೇಲಿನ ಯಾದಿಯಲ್ಲಿಯಕ್ರಿಯಾಪದ> ........................................ಇಷ್ಟ/ಹಿಡಿಸುತ್ತದೆ

(5) ನನಗೆ < ಮೇಲಿನ ಯಾದಿಯಲ್ಲಿಯಕ್ರಿಯಾಪದ> ........................................ಇಷ್ಟೆ/ಹಿಡಿಸುತ್ತದೆ

## 8. ನಿಮ್ಮ ಕ್ಷಮತೆಯನ್ನು ಶೋಧಿಸಿರಿ.



ನಾನು........ಮಾಡುಹುದು.

ಉದಾ – ನಾನು ಒಳ್ಳೆಯ ಕವಿತೆ ಬರೆಯ ಬಲ್ಲೆನು

< ಪುರಾವೆ > ನನ್ನ ಕವಿತೆಗಳ ಎಲ್ಲರಿಂದಹೊಗಳಿಕೆ ಆಗುವದು. ನನ್ನ ಕವಿತೆಗೆ ಪಾರಿತೋಷಕ ದೂರಕಿವೆ.

- ವಿದ್ಯಾರ್ಥಿಗಳಿಗೆಏನು ಹೇಳುವುದಿದೆಯೋ ಅದನ್ನು ಸ್ಪಷ್ಟವಾಗಿಬರೆಯಲು ಮ್ರೋತ್ಸಾಹಿಸಿರಿ.
- ಕೊಟ್ಟ ಉದಾಹರಣೆಗಳ ಸಂದರ್ಭದಿಂದ ವಿಧಾನಗಳನ್ನುತಯಾರಿಸಿರಿ
- ವಿಧ್ಯಾರ್ಥಿಗಳು ಬರೆದ ವಿಧಾನದ ಆಧಾರವೆಂದು ಪುರಾವೇಕೊಟ್ಟರೆಪ್ರೋತ್ಸಾಹನೆಕೊಡಿರಿ.
- ಆ ಪುರಾವೆಯು , ಆ ವಿಧ್ಯಾರ್ಥಿ ಸ್ವತಃ ನಿಶ್ಚಿತವಾಗಿ ಯಾವ ಸಂಗತಿಗಳಲ್ಲಿ ನಿಷ್ಣಾತನಾಗಿದ್ದಾನೆ ಇದರ ವಾಸ್ತವ ಚಿತ್ರ ಮಂಡಿಸುವಂತಹದಿರಬೇಕು
- ವಿಧ್ಯಾರ್ಥಿಗಳ ಸ್ವ- ವರದಿಯ ಸಂದರ್ಭ ತೆಗೆದುಕೊಳ್ಳಬಹುದು
- ಇದು ಅವರ ಸ್ವ- ಪರಿಚಯ ಈ ಪ್ರಕರಣದಲ್ಲಿ ಬಿಡಿಸಿರುವರು.




ನನಗೆ........ಇದಸಹಜವಾಗಿ ಬರುವುದು
ಉದಾ: ನಾನು ವಿಜ್ಞಾನಪ್ರತಿಕೃತಿ(ಮಾಡೆಲ)
ಸಹಜವಾಗಿ ತಯಾರು ಮಾಡಬಲ್ಲೆ
< ಪುರಾವೆ> ನಾನು ಬಹಳ
ಪ್ರದರ್ಶನಗಳಿಗಾಗಿವಿಜ್ಞಾನ ಪ್ರತಿಕೃತಿ
ತಯಾರು ಮಾಡಿದ್ದೇನೆ.



ನನಗೆ......ಚೆನ್ನಾಗಿಆಡಲು ಬರುತ್ತದೆ.
ಉದಾ: ನನಗೆ ಫುಟ್‌ಬಾಲ ಚೆನ್ನಾಗಿ ಆಡಲು ಬರುತ್ತದೆ
< ಪುರಾವೆ> ಶಾಲೆಯ ಸಂಘದಲ್ಲಿನನ್ನ ಆಯ್ಕೆಯಾಗಿದೆ
ಮತ್ತು ನನಗೆ ಕಪ್ ದೊರೆತಿದೆ.

ನಾನು.....ಇದಕ್ಕಾಗಿಯಾವಾಗಲೂ ಸಿದ್ಧನಿರುವೆ
ಉದಾ: ನಾನು ಸಮಾಜಕಾರ್ಯಕ್ಕಾಗಿಯಾವತ್ತೂ ಸಿದ್ಧನಿರುವೆ
< ಪುರಾವೆ> ಯಾವುದೇ ಸಮಾಜಕಾರ್ಯಕ್ಕಾಗಿಮುಂದೆ
ಹೋಗುವವರಲ್ಲಿನಾನು ಮಾದಲು ಇರುವೆ.




ನನಗೆ ಎಂದಾದರೊಮ್ಮೆ
ಉದಾಃ ನನಗೆ ಎಂದಾದರೊಮ್ಮೆ ಗಣಿತದಲ್ಲಿಯ
ಉದಾಹರಣೆ ಬಿಡಿಸಲು ಕಠಿಣವಾಗುತ್ತದೆ.
< ಪುರಾವೆ> ನನ್ನ ವರ್ಗಮಿತ್ರರುಕಠಿಣ ಸಂಶಲ್ಪನೆಯನ್ನು
ತಿಳಿಸಿಕೊಳ್ಳಲು ನನ್ನ ಹತ್ತಿರವೇ ಬರುವರು.

ನಾನು.....ಇದಕ್ಕಾಗಿಪ್ರಸಿದ್ಧಸಿದ್ದೇನೆ
ಉದಾ: ನಾನು ಯಾವುದೇ ಸಂಗತಿ ಹೇಗೆ
ಕುರಿತು ಪ್ರಶ್ನೆ ಕೇಳಲು ಪ್ರಸಿದ್ಧನಿದ್ದೇನೆ.
<ಪುರಾವೆ> ಎಲ್ಲಕ್ಕೂಹೆಚ್ಚುಕುತೂಹಲವಿರುವ
ವಿದ್ಯಾರ್ಥಿಎಂದು ನನ್ನಪರಿಚಯ ಹೇಳುವರು.






ನನಗೆ......ದಲ್ಲಿಒಳ್ಳೆಯ ಅಂಕಗಳು ದೊರಕುತ್ತವೆ.
ಉದಾಃ ನನಗೆ ಭಾಷಾ ವಿಷಯದಲ್ಲಿ ಒಳ್ಳೆಯ ಅಂಕಗಳು ದೊರಕುತ್ತವೆ
<ಪುರಾವೆ> ನನ್ನಗುಣಪತ್ರಿಕೆಯಲ್ಲಿನನ್ನಫಲಿತಾಂಶನೋಡಲುಸಿಗಬಹುದು.



ಜನರು ನನ್ನ ....ಇದಕ್ಕಾಗಿಹೊಗಳಿದ್ದಾರೆ
ಉದಾಃ ಜನರು ನನ್ನ ಲೇಖನಕ್ಕಾಗಿ ಹೊಗಳಿದ್ದಾರೆ
<ಪುರಾವೆ> ಜಿಲ್ಹಾಮಟ್ಟದ ನಿಬಂಧ ಸ್ಪರ್ಧೆಯಲ್ಲಿನನಗೆ
ಪ್ರಥಮಕ್ರಮಾಂಕ ದೊರಕಿದೆ.

## 9. ನಿಮ್ಮ ಇಷ್ಟ ಮತ್ತು ಕ್ಷಮತೆಗಳ, ಒಂದನ್ನೊಂದು ಜೊತೆ ಮಾಡಿರಿ

ವಿಭಾಗ 7 ಮತ್ತು 8 ರಲ್ಲಿ ನೀವು ಬರೆದ ಉತ್ತರಗಳ ಅಭ್ಯಾಸ ಮಾಡಿರಿ ಅದರಿಂದ ನಿಮ್ಮ ಇಷ್ಟಗಳ ಮತ್ತು ಕ್ಷಮತೆಗಳ ಶೋಧ ಮಾಡಿರಿ.

ಎರಡರಲ್ಲಿ ಏನಾದರೂ ಸಾಮ್ಯ ದೊರಕಿದೆಯೇ?


ನಿಮ್ಮ ನೆಚ್ಚಿನ ಸಂಗತಿಗಳು ಯಾವವು? ಮತ್ತು ಯಾವ ಸಂಗತಿಯನ್ನು ತಯಾರಿಸಿರಿ ಅಲ್ಲಿ ನಿಮಗೆ ನಿಮ್ಮ ಇಷ್ಟ ಮತ್ತು ಕ್ಷಮತೆ ಇವುಗಳಲ್ಲಿ ಸಹಸಂಬಂಧ ಕಂಡು ಬರುವುದು.

- ಇಲ್ಲಿ ವಿದ್ಯಾರ್ಥಿಗಳಿಗೆ ನಿಮ್ಮ ಮಾರ್ಗದರ್ಶನದ ಅವಶ್ಯಕತೆ ಇದೆ
- ವಿದ್ಯಾರ್ಥಿಗಳು ವಿಧಾನಗಳ ರಚನೆಯನ್ನು ಬಹುತೇಕವಾಗಿ ಬೇರೆ ಪದ್ಧತಿಯಿಂದ ಮಾಡಬಹುದು. ಇದರಿಂದ ಸುಮಾರಾಗಿ ಅವರ ಇಷ್ಟ ಮತ್ತು ಕ್ಷಮತೆ ಇವುಗಳಲ್ಲಿರುವ ಸಾಮ್ಯತೆ ಶೋಧಿಸಲು ಕಠಿಣವಾಗಬಹುದು ಅವರಿಗೆ ಮಾರ್ಗದರ್ಶನವನ್ನು ಅವಶ್ಯವಾಗಿ ಮಾಡಿರಿ ಉದಾ: ನನಗೆ ಚಿಕ್ಕ ಮಕ್ಕಳ ಜೊತೆಗೆ ಸಮಯ ಕಳೆಯಲು ಇಷ್ಟವಾಗುತ್ತದೆ ಮತ್ತು ನಾನು ಒಳ್ಳೆಯ ರೀತಿಯಿಂದ ಕಲಿಸಬಹುದು. ಈ ವಿಧಾನಗಳು ಒಂದನ್ನೊಂದು ಪೂರಕವಾಗಿವೆ ಎಂಬುದನ್ನು ತೋರಿಸಿ ಕೊಡಿರಿ.

## 10. ನಿಮಗಾಗಿ ಅವಕಾಶವನ್ನು ಹುಡುಕಿರಿ

21ನೇ ಶತಮಾನದಲ್ಲಿ ಸಾಕಷ್ಟು ಅವಕಾಶ ಮತ್ತು ಸಾಧ್ಯತೆಗಳು ನಿರ್ಮಾಣವಾಗಿವೆ ಈ ಹಿಂದೆ ಕರಿಅರನ್ನು ರೂಪಿಸಲು ಬಹಳ ಕಡಿಮೆ ಅವಕಾಶಗಳಿದ್ದವು. ಆದರೆ ಇಂದಿನ ತಾಂತ್ರಿಕ ಮತ್ತು ಜಾಗತೀಕಿಕರಣದ ಕಾಲದಲ್ಲಿ ನಿಮಗೆ ನಿಮ್ಮ ಇಷ್ಟವಾದ ಕ್ಷೇತ್ರವನ್ನು ಕರಿಅರ ಎಂದು ಆರಿಸುವುದು ಬಹಳ ಸರಳವಾಗಿದೆ.

ಸಾಮಾನ್ಯವಾಗಿ ಹತ್ತನೆಯ ತರಗತಿಯ ಪರೀಕ್ಷೆಯಾದ ನಂತರವೇ ಉಚ್ಚಶಿಕ್ಷಣದ ಕ್ಷೇತ್ರದ ಆಯ್ಕೆ ಪ್ರಾರಂಭವಾಗುವುದು.ವಿದ್ಯಾರ್ಥಿಗಳು ಯಾವ ಕ್ಷೇತ್ರಗಳ ಆಯ್ಕೆ ಮಾಡುವರೋ ಅದು ಅಂದಾಜಿನಿಂದ ಮುಂದಿನಂತಿರುವವು.



ಮುಂದೆ ಇದೇ ಕ್ಷೇತ್ರಗಳು ಉಚ್ಚ ಶಿಕ್ಷಣದ ಕಡೆಗೆ ಹೋಗುತ್ತವೆ ಅಲ್ಲದೆ ಅಧ್ಯಾಪನ, ಕಾಯ್ದೆಶಿಕ್ಷಣ, ಸಂಶೋಧನೆ, ವ್ಯವಸ್ಥಾಪನೆ ನಾಗರಿಕ ಸೇವೆಗಳು, ಇತ್ಯಾದಿ ಅನೇಕ ಪರ್ಯಾಯಗಳು ಕೂಡಾ ತೆರೆದಿರುತ್ತವೆ.

ಯೋಗ್ಯ ಶಿಕ್ಷಣ ಕ್ಷೇತ್ರದ ಆಯ್ಕೆಯಾದ ನಂತರ ವಿಧ್ಯಾರ್ಥಿಗಳು ಆ ಕ್ಷೇತ್ರದಲ್ಲಿಯ ಅನುಭವ ಮತ್ತು ವಿವಿಧ ಸಂಗತಿಗಳಿಂದ ಸಮೃದ್ಧ ರಾಗುತ್ತಾರೆ ಸಂತರ ಅವರು ಸ್ವಂತದ ಉಚ್ಚಮಟ್ಟಿನ ಇಷ್ಟ ಮತ್ತು ಅವಕಾಶ ಇವುಗಳ ಶೋಧ ಮಾಡುವರು.

ಯಶಸ್ವಿ ಕರಿಅರ ರೂಪಿಸುವ ದಾರಿಯನ್ನು ಯಾವಾಗಲೂ ಹಂತ-ಹಂತವಾಗಿ ದಾಟಬೇಕಾಗುವುದು. ಯಶಸ್ವಿ ಕರಿಅರ ರೂಪಿಸಲು ಬಹಳ ತಾಳ್ಮೆ ಕಠೋರ ಪರಿಶ್ರಮ. ಕೂಡಿ ಇರುವಿಕೆ ಮತ್ತು ಗುಣವತ್ತತೆ ಇವುಗಳ ಅವಶ್ಯಕತೆ ಇರುವುದು.

## 11. ಪ್ರಕಲ್ಪ- 'ಗುರಿ'

ಈ ವರ್ಷ ನಾವು ಒಂದು ಅತ್ಯಂತ ಮಹತ್ವದ ಪ್ರಕಲ್ಪವನ್ನು ಪ್ರಾರಂಭಿಸುತ್ತಿದ್ದೇವೆ ಈ ಪ್ರಕಲ್ಪದ ಹೆಸರು ಗುರಿ.

ಪ್ರತಿಯೊಂದು ಗುಂಪಿಗೆ ತಮ್ಮ ಇಷ್ಟವನ್ನು ಲಕ್ಷ್ಯದಲ್ಲಿಟ್ಟುಕೊಂಡು ಮುಂದಿನ ಕೃತಿಯನ್ನು ಗುಂಪಿನಲ್ಲಿ ಮಾಡುವುದಿದೆ

- ●ಹಿಂದಿನ ಪುಟದಲ್ಲಿ ಕೊಟ್ಟಿರುವ ಕರಿಅರದ ಕ್ಷೇತ್ರಗಳನ್ನು ತೆಗೆದುಕೊಂಡು ಗುಂಪು ಮಾಡಿರಿ.
- ●ವಿದ್ಯಾರ್ಥಿಗಳಿಗೆ ಆ 7 ಗುಂಪುಗಳ ಪೈಕಿ ಅವರ ಹಿಡಿಸುವ ಗುಂಪಿನಲ್ಲಿ ಸೇರಲು ಹೇಳಿರಿ.
- ●ಈ ಪ್ರಕಲ್ಪ ಪೂರ್ಣಗೊಳಿಸಲು ಅವರಿಗೆ ಒಂದು ತಿಂಗಳ ಅವಧಿ ಕೊಡಿರಿ.
- ●ವಿದ್ಯಾರ್ಥಿಗಳ ಸಾದರೀಕರಣ ಕೇಳುವ ಸಲುವಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯ ತಜ್ಞ ವ್ಯಕ್ತಿಯನ್ನು ಕರೆಯಿರಿ.

(1) ನಿಮಗೆ ಇಷ್ಟವಾದ ಕ್ಷೆತ್ರದಲ್ಲಿಯ ಕರಿಅರದ ಅವಕಾಶಗಳ ಯಾದಿಯನ್ನು ತಯಾರಿಸಿರಿ.

(2) ನಿಮ್ಮ ನೆಚ್ಚಿನ ಕ್ಷೇತ್ರದಲ್ಲಿ ಕರಿಅರನ್ನು ರೂಪಿಸಿದ ವ್ಯಕ್ತಿಗಳ ಮತ್ತು ಅವರ ಕರಿಅರದ ಪ್ರವಾಸದ ಕುರಿತು ಸಂದರ್ಶನ ತೆಗೆದುಕೊಳ್ಳಿರಿ.

(3) ಈ ವ್ಯಕ್ತಿಗಳಿಗೆ ಅವರ ಕ್ಷೇತ್ರದಲ್ಲಿಯ ಅವಕಾಶ ಮತ್ತು ಮಾಡಬೇಕಾದ ಕೃತಿಗಳ ಸ್ವರೂಪದ ಮಾಹಿತಿಯನ್ನು ಕೇಳಿರಿ.

(4) ಆ ಕರಿಅರ ಕ್ಷೇತ್ರಕ್ಕೆ ಸಂಬಂಧಿಸಿದ ಯಾವ ಶಿಕ್ಷಣ ಪಡೆಯ ಬೇಕು ಮತ್ತು ಅದರ ವೆಚ್ಚದ ಅಂದಾಜು ಪಡೆಯ ಬೇಕು ಮತ್ತು ಅದರ ವೆಚ್ಚದ ಅಂದಾಜು ಪಡೆದುಕೊಳ್ಳಿರಿ.

(5) ಆ ವ್ಯಕ್ತಿಯ ಕೆಲಸದ ಸ್ಥಳಕ್ಕೆ ಭೆಟ್ಟಿ ನೀಡಿ, ಅಲ್ಲಿ ಸಂಪೂರ್ಣ ದಿವಸ ಕಳೆಯಿರಿ.

(6) ಸಾಧ್ಯವಾದರೆ ಯಾವ ವ್ಯಕ್ತಿಯನ್ನು ಭೆಟ್ಟಿಯಾಗಿದ್ದಿರೋ, ಆ ವ್ಯಕ್ತಿಯ ಫೋಟೊ, ವ್ಹಿಜಿಟಿಂಗ ಕಾರ್ಡ ಇಲ್ಲವೆ ಅವರ ಸಹಿಯನ್ನು ಪಡೆದು ಕೊಂಡು ಬನ್ನಿರಿ.

(7) ಎರಡು ತಿಂಗಳುಗಳ ನಂತರ ಪ್ರತಿಯೊಂದು ಗುಂಪು ವರ್ಗದ ಎದುರಿಗೆ ತಮ್ಮ ತಮ್ಮ ಕ್ಷೇತ್ರದ ಕುರಿತು ಸಂಗ್ರಹಿಸಿದ ಮಾಹಿತಿಯನ್ನು ಸಾದರ ಪಡಿಸಬೇಕು.

## 12. ಜೀವನ ಕೌಶಲ್ಯಗಳ ಮಹತ್ವ:

ಯಾವುದೇ ಕ್ಷೇತ್ರದ ಸ್ಕೋಪ ಎಷ್ಟಿದೆ ಎಂಬುದನ್ನು ನೋಡಿ ಹಿಂದಿನ ಜನರು ಕ್ಷೇತ್ರದ ಆಯ್ಕೆ ಮಾಡುತ್ತಿದ್ದರು. ಆದರೆ ಇಂದಿನ ಕಾಲದಲ್ಲಿ ಸ್ಕೋಪ ಈ ಸಂಕಲ್ಪನೆಯು ಕ್ಷೇತ್ರಕ್ಕೆ ಸೀಮಿತವಾಗಿರದೆ ವಿಧ್ಯಾರ್ಥಿಕೇಂದ್ರಿತವಾಗಿದೆ ಅಂದರೇ ಪ್ರತಿಯೊಬ್ಬ ವ್ಯಕ್ತಿ ತನಗೆ ಬೇಕಾದ ಹಾಗೆ ಸ್ಕೋಪ ನಿರ್ಮಾಣ ಬಲ್ಲನು.

ಇಂದಿನ ಕಾಲದಲ್ಲಿ ಶೈಕ್ಷಣಿಕ ಅರ್ಹತೆಯ ಜೊತೆಗೆ ಆ ವಿಶಿಷ್ಟ ಕ್ಷೇತ್ರದಲ್ಲಿಯ ಕೌಶಲ್ಯ ದೊರಕಿಸುವದು ಹೆಚ್ಚು ಮಹತ್ವದ್ದಾಗಿದೆ. ಸಂಗಣಕ ಸಾಕ್ಷರತೆ, ಭಾಷಾ ಪ್ರಭುತ್ವ ಸಂಪಾದ ಕೌಶಲ್ಯ ಸಂಘಕಾರ್ಯ, ಮತ್ತು ಯೋಗ್ಯ ಕಾರ್ಯಸಂಸ್ಕೃತಿ ಈ ಕೌಶಲ್ಯಗಳು ಮಾತ್ರ ಪ್ರತಿಯೊಂದು ಕ್ಷೇತ್ರಕ್ಕಾಗಿ ಪ್ರತಿಯೊಬ್ಬನ ಹತ್ತಿರ ಇರಲೇಬೇಕು

ಸತತವಾಗಿ ಅಧ್ಯಯನ ಮಾಡುವ ಮಾನಸಿಕತೆ , ಸ್ವಂತದ ಬಲಸ್ಥಾನಗಳನ್ನು ಗುರುತಿಸುವ ಕ್ಷಮತೆ ಹಾಗೆಯೇ ಗುಂಪಿನಲ್ಲಿಯ ಇತರ ಬಲಸ್ಥಾನಗಳನ್ನು ಗುರುತಿಸುವ ಕ್ಷಮತೆ ಇರುವುದು, ಧ್ಯೆಯ ಪ್ರಾಪ್ತಿಗಾಗಿ ಸಾಂಘಿಕ ಕೆಲಸ ಮಾಡುವುದು ಮುಂತಾದವುಗಳಿಂದ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಅವಕಾಶದ ಬಾಗಿಲುಗಳು ತೆರೆದಿಡುತ್ತವೆ.

## 13. ಮುಂದಿನ ಬೆಳವಣಿಗೆ

ನಿಮಗೆ ಹತ್ತನೆಯ ತರಗತಿಯಲ್ಲಿ ಈಗ ಅನುಭವಿಸಿದ ಏಳು ಕ್ಷೇತ್ರಗಳ ಸವಿಸ್ತಾರವಾದ ಪರಿಚಯವಾಗಬಹುದು. ನೀವು ಪರೀಕ್ಷೆ ಕೊಡಬಹುದು. ಈ ಮೌಖಿಕ ಪರೀಕ್ಷೆಯಿಂದ ನಿಮ್ಮ ನಿಜವಾದ, ಇಷ್ಟವಾದ ಕ್ಷೇತ್ರ ಯಾವುದಿದೆ ಎಂಬುದರ ಮೌಲ್ಯಾಂಕನವಾಗಬಹುದು. ನಿಮ್ಮ ಆಸಕ್ತಿಯ ಪರೀಕ್ಷೆ ಇದು ಪರೀಕ್ಷೆಯಲ್ಲ ಮತ್ತು ಇದಕ್ಕಾಗಿ ಯಾವುದೇ ಸಿದ್ಧತೆ ಮಾಡುವ ಅವಶ್ಯಕತೆ ಇಲ್ಲ ಕೇವಲ ನಿಮಗೆ ಪ್ರಶ್ನೆಗಳ ಉತ್ತರವನ್ನು ಕೊಡಬೇಕಾಗುವುದು.

ಮುಂದಿನ ವರ್ಷ ನಾವು ಧ್ಯೇಯ ನಿಶ್ಚಿತಿ ಮತ್ತು ಕರಿಅರ ನಿಯೋಜನೆ ಈ ಕುರಿತು ಕಲಿಯುವವರಿದ್ದೇವೆ.

## ಮೌಲ್ಯಮಾಪನ

| ಭಾರಾಂಶ 10% | | | | |
|---|---|---|---|---|
| ಮಾನದಂಡ | ಉತ್ತಮ (ಬಹಳ ಒಳ್ಳೆಯ) | ಯೋಗ್ಯ (ಸಮಾಧಾನಕಾರಕ) | ಅಯೋಗ್ಯ (ಅಸಮಾಧಾನಕಾರಕ) | ಗುಣಗಳು |
| ಕ್ಷೇತ್ರಭೆಟ್ಟಿ ಮತ್ತು ಸಂದರ್ಶನೆ | ಕ್ಷೇತ್ರ ಭೆಟ್ಟಿಯಾಗಿದೆ ಮತ್ತು ಸಂದರ್ಶನ ತಗೆದು ಕೊಂಡು ವರದಿಯನ್ನು ತಯಾರಿಸಿದೆ. ಫೋಟೊ, ವ್ಹಿಜಿಟಿಂಗ್ ಕಾರ್ಡ, ಸಹಿ ತರಲಾಗಿದೆ. | ಕೇವಲ ವರದಿ ತಯಾರಿಸಲಾಗಿದೆ. | ಏನನ್ನೂ ಮಾಡಿಲ್ಲ ವರದಿ ಅಪೂರ್ಣವಾಗಿದೆ. | |
| ಇಷ್ಟ ಮತ್ತು ಕ್ಷಮತೆಯನ್ನು ಗುರುತಿಸುವುದು | ಇಷ್ಟ ಮತ್ತು ಕ್ಷಮತೆಯನ್ನು ಶೋಧಿಸಿ ಸ್ಪಷ್ಟವಾಗಿ ಮಂಡಿಸಲಾಗಿದೆ. | ಇಷ್ಟ ಮತ್ತು ಕ್ಷಮತೆಗಳನ್ನು ಅಂದಾಜಿನಿಂದ ಶೋಧಿಸಲಾಗಿದೆ. | ಉತ್ತರಗಳ ನಕಲು ಮಾಡಿದೆ/ಅಪೂರ್ಣ ಕೆಲಸ ಮಾಡಿದೆ. | |


ಧೈರ್ಯಧರ ಮತ್ತು ಧೈರ್ಯಶೀಲಾ ಎಲ್ಲಿ ಕಾಣುತ್ತಿಲ್ಲ! ನೆನಪಿದೆಯೇ, ಹಿಂದೆ ಅವರು ನಮಗೆ ನಮಗೆ ಕಲಾ-ರಸಸ್ವಾದ ತೆಗೆದುಕೊಳ್ಳಲು ಹೇಳಿದ್ದರು?
ಹೌದು, ಅದರದೇನು?
ಆದರೆ ಅವರು ಗಾಯನ, ವಾದನ ಇಲ್ಲವೇ ನೃತ್ಯಗಳಕುರಿತು ಏನೇನೂ ಹೇಳಿಲ್ಲ.
ಅಂದರೆ ಪ್ರಯೋಗಜೀವಿ ಕಲೆಯ ಕುರಿತು?
ಪ್ರಯೋಗಜೀವಿಕಲೆ
ಹೌದು, ಹೀಗೆ ಸಂಬೋಧಿಸಲಾಗುತ್ತದೆ ಅವುಗಳಿಗೆ, ಆದರೆ ಈಗ ನಾವೇನು ಮಾಡಬೇಕು?
ನಾವು ಸ್ವತವೇ ತಿಳಿದುಕೊಳ್ಳುವ ಪ್ರಯತ್ನ ಮಾಡಿದರೆ?
ಇಬ್ಬರೂ ಒಬ್ಬರೊಬ್ಬರಕಡೆಗೆ ಸ್ವಲ್ಪ ಸಂಶಯದಿಂದ ನೋಡುವರು.

# 9 ಕಲಾ ರಸಾಸ್ವಾದ - ಪ್ರಯೋಗಜೀವಿ ಕಲೆ

## ಕಲೆಯಲ್ಲಿಯ ಸೌಂದರ್ಯ ತಿಳಿದುಕೊಳ್ಳುವಾಗ...

**ಉದ್ದೇಶಗಳು:**

(1) ನಾಟ್ಯ, ಸಂಗೀತ ಮತ್ತು ನೃತ್ಯಈ ಪ್ರಯೋಗಜೀವಿ ಕಲೆಗಳ ಮಹತ್ವವನ್ನು ಸ್ವಂತದ ಶಬ್ದಗಳಲ್ಲಿ ಹೇಳಲು ಬರುವುದು.

(2) ನಾಟ್ಯ, ನೃತ್ಯ ಮತ್ತು ಸಂಗೀತದಲ್ಲಿಯ ಮೂಲಭೂತ ಘಟಕಗಳ ಮುಖಪರಿಚಯ ವಾಗುವುದು.

(3) ಸಂಗೀತ ಮತ್ತು ನೃತ್ಯದಲ್ಲಿಯ ವಿವಿಧ ಕಲಾಪ್ರಕಾರಗಳ ಹೆಸರುಗಳನ್ನು ಹೇಳಲುಬರುವುದು ಮತ್ತು ಆ ಕಲಾಪ್ರಕಾರಗಳ ಮಹತ್ವ ಹೇಳಲು ಬರುವುದು

(4) ವಿವಿಧ ಪ್ರಯೋಗಜೀವಿ ಕಲಾಪ್ರಕಾರಗಳಿಂದ ಸ್ವಂತದ ಅಭಿವ್ಯಕ್ತಿಮಾಡಲು ಬರುವುದು.

(5) ಯಾವುದೇ ಕಲಾವಿಷ್ಕಾರದಲ್ಲಿ ತಮಗೆ ಹಿಡಿಸುವ ಘಟಕವನ್ನು ಗುರುತಿಸಿ ಅದರ ವರ್ಣನೆ ಮಾಡಲು ಬರುವುದು.



- ಮೊದಲನೆ ಸತ್ರದಲ್ಲಿಯ ಕಲಾರಸಾಸ್ವಾದದಲ್ಲಿಯ ಪ್ರಕರಣದಲ್ಲಿ ನಾವು ದೃಶ್ಯಕಲೆಮತ್ತು ಪ್ರಯೋಗಜೀವಿಕಲೆ ಇವುಗಳಲ್ಲಿರುವವ್ಯತ್ಯಾಸವನ್ನುತಿಳಿದು ಕೊಂಡಿದ್ದೇವೆ
- ಪ್ರಯೋಗಜೀವಿ ಎಂದರೆ ಇದರಲ್ಲಿ ನೇರವಾಗಿ ಪ್ರೇಕ್ಷಕರ ಎದುರಿಗೆಯೇ ಕಲಾವಿಷ್ಕಾರವನ್ನು ಸಾದರ ಪಡಿಸಲಾಗುವುದು
- ಪ್ರಯೋಗಜೀವಿಕಲೆಗಳಲ್ಲಿಜಾದು ಪ್ರಯೋಗ,ಗೊಂಬೆಗಳ ಆಟ, ಸರ್ಕಸ್, ಮೂಕನಾಟ್ಯ, ವಕ್ತೃತ್ವ, ಏಕ ಪಾತ್ರದ ವಿನೋದ ನಾಟಕ. ಮುಂತಾದವುಗಳ ಸಮಾವೇಶವೂ ಆಗುವುದು. ಆದರೆ ಈ ಎಲ್ಲವೂಗಳನ್ನು ಸಾಮಾನ್ಯವಾಗಿ ನೃತ್ಯ,ನಾಟಕ ಮತ್ತು ಸಂಗೀತ ಈ ಮೂರು ವಿಭಾಗಗಳಲ್ಲಿವರ್ಗೀಕರಿಸಲು ಬರಬಹುದು. ಅಂತಯೇ ಈ ಮೂರೂ ಕಲಾಪ್ರಕಾರಗಳನ್ನುನಾವು ಹೆಚ್ಚು ಆಳವಾಗಿ ತಿಳಿದುಕೊಳ್ಳೋಣ .

**ನಾಟಕ:**



## ಬನ್ನಿ ನಾಟಕ ಮಾಡೋಣ...

ಇಬ್ಬರು ವಿಧ್ಯಾರ್ಥಿಗಳನ್ನು ಮುಂದೆ ಬರಲು ಹೇಳಿರಿ. ಅವರಲ್ಲಿ ಒಬ್ಬನು ಪಾಲಕನಾಗಬೇಕು ಮತ್ತು ಇನ್ನೊಬ್ಬನು ಪಾಲ್ಯ ಒಂದು ಚಿಕ್ಕ ನಾಟ್ಯ ಸಾದರ ಪಡಿಸಬೇಕು. ಅವರಿಗೆ ಈ ವಿಷಯ ಕೊಡಬೇಕು- ಪಾಲ್ಯನು ಪರೀಕ್ಷೆಯಲ್ಲಿ ನಾಪಾಸು ಆಗಿದ್ದಾನೆ ವಿಧ್ಯಾರ್ಥಿಗಳಿಗೆ ವಿಚಾರ ಮಾಡಲು ಹೇಳಬೇಕು, ಇಂಥ ವೇಳೆಗೆ ಆ ಇಬ್ಬರಲ್ಲಿಏನು ಆಗುವುದು ಎಂಬುದನ್ನುಸ್ಮರಿಸಿ ಚಿಕ್ಕ ನಾಟಿಕವನ್ನುಸಾದರ ಪಡಿಸಬೇಕು ಅದಕ್ಕಾಗಿ ಅವರಿಗೆ ಐದು  ನಿಮಿಷಗಳ ಕಾಲಾವಧಿಯನ್ನು ಕೊಡಿರಿ.

**ಚರ್ಚೆ ಮಾಡಿರಿ:**

- ನಾಟಿಕದಲ್ಲಿ ಪಾತ್ರಮಾಡುವ ವಿಧ್ಯಾರ್ಥಿಗಳು ನಿಜವಾದ ತಂದೆ-ತಾಯಿ ಯರ ಹಾಗಿ ವರ್ತಿಸುವ ಪ್ರಮತ್ನವನ್ನು ಏಕೆ ಮಾಡುತ್ತೆದ್ದರು?
- ಪ್ರಾರಂಭವಾದದ್ದು ನುಳ್ಳಿದೆ ಎಂಬುದು ಗೂಚ್ಚಿದ್ದರೂ ನೆಹ ವಿದ್ಯಾರ್ಥಿಗಳು ನಾಟಿಕವನ್ನು ನೋಡುವದರಲ್ಲಿ ತಲ್ಲೀನೆರಾದದ್ದು ಏಕೆ?
- ಒಂದು ವೇಳೆ ನಾಟಿಕದಲ್ಲಿ ಪಾತ್ರ ಮಾಡುವ ವಿದ್ಯಾರ್ಥಿಗಳು ಹೆಚ್ಚೆಚ್ಚು ಪಾಲಕರಂತೆ ಇಲ್ಲವೆ ಪಾಲ್ಯರಂತೆ ವರ್ಲೆನೆದ್ದರೆ . ಇತರ ವಿದ್ಯಾರ್ಥಿಗಳಿಗೆ ನಾಟಿಕವು ಹೆಚ್ಚು ಹಿಡಿಸುತ್ತಿತ್ತೆ? ಕಾರಣ ಹೇಳಿರಿ

## 1. ನಾಟಕವೆಂದರೇನು?

ಹಿಂದಿನ ಚಿಕ್ಕ ನಾಟಿಕದಲ್ಲಿನೋಡಿದಂತೆ ತಾಯಿ/ತಂದೆ/ಮಗನು/ಮಗಳು ಇವರ ಪಾತ್ರ ಮಾಡುವ ವಿದಾರ್ಥಿಗಳು ಅವರ ಹಾಗೆ ವರ್ತಿಸುವ ಪ್ರಯತ್ನ ಮಾಡುತ್ತಿದ್ದರು.ನೋಡುವ ವಿಧ್ಯಾರ್ಥಿಗಳಿಗೆ ಅವರೆದುರು ಇದ್ದನಾಟಿಕ ಸುಳ್ಳು ಇದೆ ಎಂಬುದು ಗೂತ್ತಿತ್ತು ಆದರೂ ಅವರು ಆ ನಾಟ್ಯವನ್ನು ತಲ್ಲೀನರಾಗಿ ನೋಡಿದರು. ವಿದ್ಯಾರ್ಥಿಗಳು ಏನನ್ನು ಸಾದರ ಪಡಿಸಿದರೋ ಅದಕ್ಕೆ ನಾಟಕ ವೆಂದು ಹೆಸರು.

ನಾಟಕವು ಒಂದು ಕಲಾಪ್ರಕಾರ. ಅದರಲ್ಲಿ  ಕಲಾವಿದರು ಕೆಲಕಾಲದ ಕಾಲ್ಪನಿಕ ಪಾತ್ರವನ್ನು ಧರಿಸಿ ಅದನ್ನು ಪ್ರೇಕ್ಷಕರಿಗೆಸಾಧ್ಯವಾದಷ್ಟುಸತ್ಯವೆನಿಸುವ ಹಾಗೆ ಅಭಿನಯಿಸುವ ಪ್ರಯತ್ನ ಮಾಡವರು. ಸ್ವಲ್ಪದರಲ್ಲಿ ನಾಟಕವೆಂದರೆ ಸುಳ್ಳಿನಿಂದ ಸತ್ಯದ ಭಾಸವನ್ನು ನಿರ್ಮಾಣಮಾಡುವುದು. ಅಂತೆಯೇ ಸುಳ್ಳು ಹೇಳುವ ಮನುಷ್ಯನಿಗೆ ನಾವು ನಾಟಿಕ ಮಾಡಬೇಡಾ ಎಂದು ಅನ್ನುತ್ತೇವೆ.



## 2. ಅಭಿನಯ

ಯಾವುದೇ ಕಾಲ್ಪನಿಕ ಪಾತ್ರವನ್ನುಧರಿಸುವವನಿಗೆ ಅಭಿನೇತ್ರ / ಅಭಿನೇತ್ರಿ (ಕಲಾವಿದ/ಕಲಾವಿದೆ) ಎಂದು ಸಂಬೋಧಿಸಲಾಗುತ್ತದೆ ಮತ್ತು ಆ ಪಾತ್ರವನ್ನು ಮಾಡುವ ಕ್ರಿಯೆಗೆ ಅಭಿನಯ ಮಾಡುವದು ಅನ್ನುವರು.

ಭಾರತದಲ್ಲಿ ಅಭಿನಯದ ನಾಲ್ಕುಪ್ರಕಾರಗಳನ್ನು ಮನ್ನಿಸಲಾಗುತ್ತದೆ-

1. **ಆಂಗಿಕ ಅಭಿನಯ:** ಶಾರೀರಿಕ ಚಲನವಲನ, ದೇಹ ಮತ್ತು ಮುಖದ ಚಲನವಲನ ಇವುಗಳ ಉಪಯೋಗ ಮಾಡಿ ಮಾಡುವ ಅಭಿನಯಕ್ಕೆ ಆಂಗಿಕ ಅಭಿನಯವೆಂದು ಸಂಬೋಧಿಸಲಾಗುತ್ತದೆ.
2. **ವಾಚಿಕ ಅಭಿನಯ:** ಶಬ್ದ, ಧ್ವನಿಯಲ್ಲಿಯಏರಿಳಿತ, ಎರಡು ಶಬ್ದಗಳಲ್ಲಿ ಇಲ್ಲವೆ ವಾಕ್ಯಗಳಲ್ಲಿತಗೆದುಕೊಂಡ ಅವಕಾಶ ಇದರಿಂದ ಮಾಡಲಾಗುವ ಅಭಿನಯಕ್ಕೆ ವಾಚಿಕ ಅಭಿನಯವೆಂದು ಸಂಬೋಧಿಸುವರು.
3. **ಆಹಾರ್ಯ ಅಭಿನಯ:** ಅಭಿನಯ ಮಾಡುವ ವ್ಯಕ್ತಿಗಳ ವೇಷಭೂಷಣ ರಂಗಭೂಷಣ, ಸಂಗೀತ, ಅವರಲ್ಲಿ ಉಪಯೋಗಿಸಿದ ವಸ್ತುಗಳು ಇವುಗಳ ಸಹಾಯದಿಂದ  ಮಾಡಲಾಗುವ ಅಭಿನಯಕ್ಕೆ ಆಹಾರ್ಯ ಅಭಿನಯವೆಂದು ಸಂಬೋಧಿಸುವರು.
4. **ಸಾತ್ವಿಕ ಅಭಿನಯ:** ನಾಟಕದಲ್ಲಿಯಪಾತ್ರಗಳುಯಾವ ಭಾವನೆಗಳನ್ನು ಅನುಭವಿಸುವರೋ, ಯಾವ ಮನಃ ಸ್ಥಿತಿಯಲ್ಲಿಇರುವರೋ, ಆಭಾವನೆಗಳನ್ನು, ಆ ಮನಃಸ್ಥಿತಿಗಳನ್ನು ಸಾಕರಿಸುವ ಅಭಿನಯಕ್ಕೆ ಸಾತ್ವಿಕ ಅಭಿನಯವೆಂದು ಸಂಬೋಧಿಸಲಾಗುವುದು.

   ಭಗವಾನ ಶಂಕರನ ಸ್ತುತಿಮಾಡುವ ಕೆಳಗಿನ ಶ್ಲೋಕದಲ್ಲಿ ಈ ನಾಲ್ಕು ಪ್ರಕಾರಗಳ ಉಲ್ಲೇಖ ವಾಗುವುದು:

   **ಆಂಗಿಕಂ** ಭುವನಂ ಯಸ್ಯ **ವಾಚಿಕಂ** ಸರ್ವ ವಾಙ್ಮಯಮ್।

   **ಆಹಾರ್ಯಂ** ಚಂದ್ರ ತಾರಾದಿ ತಂ ನುಮ**ಸಾತ್ವಿಕಂ** ಶಿವಮ್।।

## 3. ನಾಟಕದಲ್ಲಿ ಸಂಘರ್ಷದ ಮಹತ್ವ

**ಕಥೆ –** ಒಬ್ಬಹುಡುಗಿ ಇದ್ದಳು. ಆಕೆಗೆ ಕಲಿಯುವ ಅಭಿರುಚಿ ಬಹಳವಿತ್ತು ಅವಳ ತಂದೆ– ತಾಯಿಯವರು ಆಕೆಗೆ ಶಾಲೆಗೆ ಕಳುಹಿಸಿದರು. ಆಕೆಯು ನಿಯಮಿತವಾಗಿ ಅಭ್ಯಾಸ ಮಾಡುತ್ತಿದ್ದಳು. ಅವಳಿಗೆ ಒಳ್ಳೆಯ ಅಂಕಗಳು ದೊರೆಯುತ್ತಿದ್ದವು, ಹೀಗೆ ಆಕೆಯು ಕಲಿಯುತ್ತ ಹೋದಳು ಮತ್ತು ಸ್ವತಃ ತನ್ನ ಕಾಲಮೇಲೆ ನಿಂತಳು.

**ನಾಟಕದ ತಿರುಳು ಅದರಲ್ಲಿಯ ಸಂಘರ್ಷದಲ್ಲಿ ಇರುವುದು. ಸಂಘರ್ಷದ ಹೊರತು ಯಾವುದೇ ನಾಟಕ ನಡೆಯುವುದಿಲ್ಲ.** ಯಾವುದೇ ಸಂಗತಿಯಲ್ಲಿ ಸಂಘರ್ಷ ಇದು ಅದರಲ್ಲಿಯ ಮನುಷ್ಯರಿಂದ ಇಲ್ಲವೆ ಚಟುವಟಿಕೆ/ಪರಿಸ್ಥಿತಿಯಿಂದ ನಿರ್ಮಾಣವಾಗುವುದು, ಮೇಲಿನ ಉದಾಹರಣೆಯಲ್ಲಿಯ ಕತೆಯಲ್ಲಿ ಸಂಘರ್ಷವು ಮುಂದಿನ ಪದ್ಧತಿಯಿಂದ ನಿರ್ಮಾಣವಾಗಬಹುದು. ಅವಳ ತಾಯಿ–ತಂದೆ ಆಕೆಗೆ ಶಾಲೆಗೆ ಕಳುಹಿಸುವುದಿಲ್ಲ.ಇಲ್ಲವೆತಂದೆ–ತಾಯಿಯರ ಹತ್ತಿರ ಆಕೆಗೆ ಶಾಲೆಗೆ ಕಳುಹಿಸಲು ಹಣ ಇರುವುದಿಲ್ಲ ಇಲ್ಲವೆ ಆಕೆಗೆ ಯಾವುದೋ ಕಾರಣದಿಂದ ತೆಗೆಯಲಾಗುತ್ತದೆ. ಇಲ್ಲವೆ ಶಾಲೆಗೆ ಹೋಗುವಾಗ ಆಕೆಗೆ ಅಪಘಾತವಾಗುವುದು ಮುಂತಾದವುಗಳು.

**ಮೊದಲು ಕತೆಯನ್ನು ಓದಿರಿ. ಚರ್ಚೆ ಮಾಡಿರಿ.**
1. ಅವರಿಗೆ ಕತೆಯು ಮನೊರಂಜಕ ವೆನಿಸಿತೆ? ಕಲೆಯಲ್ಲಿ ಏನು ಕದಿಮೆ ಇದೆ? ಈ ಕತೆಯನ್ನು ನಾಟಕದಲ್ಲಿ ರೂಪಾಂತರ ಮಾಡಿದರೆ, ಅದು ಪ್ರೆಕ್ಷಕರಿಗೆ ಹಿಡಿಸಬಹ್ರದೇ?
2. ಕೊಟ್ಟ ಕಥೆಗೆ ಮನೋರಂಜಕವನ್ನಾಗಿ ಮಾಡುವ ಸಲುವಾಗಿ ಏನು ಮಾಡಲು ಬರುವುದು ಎಂದು ನಿಮಗೆ ಅನಿಸುವುದು.

***ಗಮನಿಸಬೇಕಾದ ಅಂಶಗಳು:***

- *ನಾಟಕ ಈ ಕಲಾಪ್ರಕಾರದಲ್ಲಿ ಧ್ವನಿ, ನಟನೆ ಮತ್ತು ಶರೀರದ ಚಲನವಲನೆ ಇವು ಕಲಾವಿದ/ಕಲಾವಿದೆಯ ಹತ್ತಿರ ಇರುವ ಸಾಧನಗಳಾಗಿವೆ ಅವುಗಳ ಉಪಯೋಗ ಮಾಡಿ ಅವನು / ಅವಳುತನ್ನ ವಿಚಾರ ಭಾವನೆಯನ್ನು ಪ್ರೇಕ್ಷಕರವರೆಗೆ ಮಟ್ಟಿಸ ಬಲ್ಲನು/ಬಲ್ಲಳು.*
- *ಅಭಿನಯಿಸುವಾಗ ದೊಡ್ಡ, ಸ್ಪಷ್ಟದ್ವಾ ಮತ್ತು ಧ್ವನಿಯಲ್ಲಿಯ ಏರಿಳಿತ ಅತ್ಯಂತ ಮಹತ್ವದ್ದಾಗಿರುವುದು.*

## 4. ದೊಡ್ಡ ಮತ್ತು ಸ್ಪಷ್ಟಧ್ವನಿ ವಿಕಸಿತ ಗೊಳಿಸಲು ವ್ಯಾಯಾಮ

1. ಸೆಟೆದು ಕುಳಿತುಕೊಳ್ಳಿರಿ. ಆಳವಾದ ಶ್ವಾಸ ತೆಗೆದುಕೊಂಡು ನಿಮ್ಮ ಬಾಯಿ ತೆರೆದು 'ಆऽऽ' ಎಂಬ ಸ್ವರವನ್ನು ಬಾಯಿಯಿಂದ ತೆಗೆಯುತ್ತ ಬಾಯಿಯಿಂದ ಶ್ವಾಸ ಹೊರಗೆ ಬಿಡಿರಿ. ಶ್ವಾಸ ಮುಗಿದ ತಕ್ಷಣ ಮತ್ತೆ ಈ ಕ್ರಿಯೆ ಮಾಡಿರಿ. ಸುಮಾರು ಹತ್ತು ಸಲ ಮಾಡಿರಿ
2. ಸೆಟೆದು ಕುಳಿತಿರಿ. ಆಳವಾದ ಶ್ವಾಸ ತೆಗೆದುಕೊಂಡು ನಿಮ್ಮ ಬಾಯಿ ಮುಚ್ಚಿ 'ಮऽऽ' ಎಂಬ ಸ್ವರ ಬಾಯಿಯಿಂದ ತೆಗೆಯುತ್ತ ಮೂಗಿನಿಂದ ಶ್ವಾಸ ಹೊರಗೆಬಿಡಿರಿ ನಿಮ್ಮ ಗಲ್ಲದ ಮೇಲೆ ಕಂಪನಗಳ ಅನುಭವವಾಗಬೇಕು. ಸುಮಾರು ಹತ್ತು ವೇಳೆ ಮಾಡಿರಿ.
3. ಒಂದು ಆಳವಾದ ಶ್ವಾಸ ತೆಗೆದುಕೊಂಡು ಬಾಯಿಯಿಂದ ಒಂದು ಬಲೂನ ಉಬ್ಬಿಸಿರಿ ಮತ್ತು ಅದರ ಆಕಾರ ನೋಡಿರಿ ಪ್ರತಿಯೊಂದು ವೇಳೆ ಬಲೂನಿನ ಆಕಾರ ದೊಡ್ಡದಾಗಿಸುವ ಪ್ರಯತ್ನ ಮಾಡಿರಿ.

## ಸ್ವಲ್ಪ ಮೋಜು ಮಾಡೋಣ

**ಧ್ವನಿಯಲ್ಲಿಯ ಏರು ಇಳಿತ**

ಕೆಳಗೆ ಕೊಟ್ಟ ವಾಕ್ಯವನ್ನು ಬೇರೆಬೇರೆ ಶಬ್ದದ ಮೇಲೆ ಒತ್ತುನೀಡಿ ಮಾತಾಡಿ.

''ನನಗೆ ನೀನುಇಂದು ಭೆಟ್ಟಿಯಾಗಲು ಬರುವುದಿಲ್ಲ''

''ನನಗೆ ನೀನುಇಂದು ಭೆಟ್ಟಿಯಾಗಲು ಬರುವುದಿಲ್ಲ'' (ಬೆರೆಯಾರೊ ಭೇಟಿಯಾಗಬಹುದು)

''ನನಗೆ ನೀನು ಇಂದು ಭೆಟ್ಟಿಯಾಗಲು ಬರುವುದಿಲ್ಲ''(ನಾನು ಯಾರಿಗಾದರೂ ಭೇಟಿಯಾಗಬಹುದು)

''ನನಗೆ ನೀನುಇಂದು ಭೆಟ್ಟಿಯಾಗಲು ಬರುವುದಿಲ್ಲ''(ನಾಳೆ/ನಾಡದ್ದು ಭೇಟಿಯಾಗಬಹುದು

''ನನಗೆ ನೀನುಇಂದು ಭೆಟ್ಟಿಯಾಗಲು ಬರುವುದಿಲ್ಲ''(ಫೊನ ಮೇಲೆ ಮಾತಡಬಹುದು)

''ನನಗೆನೀನು ಇಂದು ಭೆಟ್ಟಿಯಾಗಲುಬರುವುದಿಲ್ಲ''(ನನಗೆ ನೀನು ಇಂದು ಭೇಟಿಯಾಗುವುದು ಸಾಧ್ಯವಿಲ್ಲ)

**ಚರ್ಚೆ ಮಾಡಿರಿ.**
- ಬೇರೆ ಬೇರೆ ಶಬ್ದಗಳ ಮೇಲೆ ಒತ್ತು ನೀಡಿದರೆ ವಾಕ್ಯದ ಅರ್ಥ ಬದಲಿಸಬಹುದೆ?
- ಕೆಲವು ಶಬ್ದ ಮೇಲಿನ ಧ್ವನಿಯಲ್ಲಿ ಒತ್ತು ನೀಡಿ ಮತ್ತು ಕೆಲವು ಶಬ್ದಗಳನ್ನು ಸಾವಕಾಶ ವಾಗಿ ಕೆಳಗಿನ ಧ್ವನಿಯಲ್ಲಿ ಅನ್ನುವುದಕ್ಕೆ ಧ್ವನಿಯಲ್ಲಿಯ ಏರು, ಇಳಿತ ಅನ್ನುತ್ತಾರೆ, ಇದನ್ನು ಮಕ್ಕಳಿಗೆ ತಿಳಿಸಿ ಹೇಳಬೇಕು.

## 5. ಪ್ರಸಂಗಕ್ಕನುಸರಿಸಿ ಧ್ವನಿಯಲ್ಲಾಗುವ ಬದಲಾವಣೆ

ಪ್ರತಿಯೊಬ್ಬ ವಿಧ್ಯಾರ್ಥಿಯು ವರ್ಗದ ಎದುರಿಗೆ ಬಂದು ಕೆಳಗಿನ ವಾಕ್ಯಗಳನ್ನು ನಿಜಜೀವನದಲ್ಲಿ ಯಾವ ರೀತಿಯಿಂದ ಅನ್ನುವರು ಹಾಗೆ ಅನ್ನಬೇಕು.




**ಚರ್ಚೆ ಮಾಡಿರಿ:**

- ಅವರ ಧ್ವನಿಯಿಂದ ವಾಕ್ಯಕ್ಕೆ ಅನುರೂಪವಾಗಿ ಏನಾದರೂ ಬದಲಾವಣಿ ಅನಿಸಿದೆಯಾ?
- ಧ್ವನಿಯಲ್ಲಿಯ ಉತ್ಸಾಹ ಕಡಿಮೆ ಹೆಚ್ಚು ಆಗಿದೆಯೇ?
- ಯಾವುದೇ ವಾಕ್ಯ ಯಾರೊಂದಿಗೆ ಮಾತನಾಡುತ್ತಿದ್ದಾರೆ ಅದಕ್ಕನುಸರಿಸಿ ಅದರಲ್ಲಿ ವ್ಯತ್ಯಾಸ ವಾಗುವುದೇ?

## 6. ಪ್ರಸಂಗಕ್ಕನುಸರಿಸಿ ಶರೀರ ಚಲನವಲನೆಯಲ್ಲಾಗುವ ಭೇದ/ ವ್ಯತ್ಯಾಸ

ಒಬ್ಬ ವಿಧ್ಯಾರ್ಥಿಯನ್ನು ವರ್ಗದ ಎದುರು ಕರೆದು ಕೆಳಗಿನ ಕೃತಿ ಮಾಡಲು ಹೇಳಿರಿ.

1. ಸೆಟೆದು ನಿಂತು ಶರೀರದ ಯಾವುದೇ ಚಲನ-ವಲನೆ ಮಾಡದೇ ಕೇವಲ ಧ್ವನಿಯಲ್ಲಿಯ ಯೋಗ್ಯ ಏರಿಳಿತ ಮತ್ತು ಅಭಿನಯಪೂರ್ವಕ ಕೆಳಗಿನ ವಾಕ್ಯವನ್ನು ಅನ್ನಿರಿ.
   ''ಉರಿ ಹತ್ತಿದೆ ಓಡಿ''
   ''ನನ್ನೊಂದಿಗೆ ಸುಳ್ಳು ಹೇಳಬೇಡ''
   ''ನನಗೆ ನಿನ್ನ ಮುಖ ಕೂಡ ನೋಡುವುದಿಲ್ಲ.''
   ''ನಡಿ, ನಾವು ಮೋಜು ಮಾಡೋಣ.''
2. ಈಗ ಬಹಳ ಕೈಸನ್ನೆ ಮಾಡುತ್ತು ಧ್ವನಿ ಮೇಲೆ ಕೆಳಗೆ ಮಾಡಿ ಕೆಳಗಿನ ಮಾತುಗಳನ್ನು ಅನ್ನಿರಿ.
   ''ಇಂದು ನನಗೆ ಬಹಳ ಶಾಂತವೆನಿಸುತ್ತದೆ''
   ''ನಿನ್ನದುಃಖ ನನಗೆ ತಿಳಿದಿದೆ ದೇವರು ನಿನಗೆ ಒಳ್ಳೆಯದನ್ನು ಮಾಡಲಿ.''

**ಚರ್ಚೆ ಮಾಡಿರಿ:**

- ಹೇಳಿದ ಕೃತಿ ನಿಮಗೆ ಅಸಹಜ/ ಕಠಿಣ ವೆನಿಸಬಹುದು? ಏಕೆ? ಕಾರಣಗಳನ್ನು ಹೇಳಿರಿ
- ಏನು ಮಾಡಿದಲೆ ಅವು ಸಹಜ ವೆನಿಸಬಹುದು?

***ಗಮನಿಸಿಬೇಕಾದ ಅಂಶಗಳು:***

- *ಭಾವನ, ಶಾರೀರಿಕ ಚಲನವಲನ ಮತ್ತು ಧ್ವನಿ ಇವುಗಳ ಪರಸ್ಪರ ಸಂಬಂಧ ಇರುವುದು ಅಭಿನಯ ಮಾಡುವಾಗ ಈ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು.*
- *ಯಾವಾಗ ನಾವು ಉತ್ತೇಜಿತರಾಗಿ ಮಾತನಾಡುತ್ತೇವೋ ಆಗ ಧ್ವನಿ ನೈಸರ್ಗಿಕವಾಗಿ ಏರುವುದು ಮತ್ತು ನಾವು ಬಹಳ ಕೈಸನ್ನೆ ಬಳಸಿ ಮಾತನಾಡುತ್ತವೆ ಯಾವಾಗ ನಾವು ದುಃಖಿ ಮತ್ತು ಖಿನ್ನ ರಾಗಿರುವೆವೋ ಆಗ ಧ್ವನಿ ಮತ್ತು ಶರೀರದ ಚಲನ ವಲನ ಕೂಡ ಶಾಂತ ವಾಗಿರುವುದು.*

## 7. ನಾಟಕದಲ್ಲಿಯ ವ್ಯಕ್ತಿರೇಖೆ:

ಸ್ವಲ್ಪ ವಿಚಾರ ಮಾಡಿರಿ.

- ಮಕ್ಕಳೊಂದಿಗೆ ಚರ್ಚೆ ಮಾಡಿರಿ ಯಾವುದೋ ವ್ಯಕ್ತಿ ಎಂಥ ಬಟ್ಟೆಗಳನ್ನು ಧರಿಸುವನು, ಹೇಗೆ ನಡೆಯುವನು, ಏಳುವನು, ಕೂಡುವನು, ಅವನ ಭಾಷೆ ಹೇಗಿದೆ ಇವುಗಳಿಂದ ನಮಗೆ ಆ ವ್ಯಕ್ತಿಯ ವಯಸ್ಸಿನ, ಸಂಪತ್ತಿನ ಮತ್ತು ಸಾಮಾಜಿಕ ಸ್ಥಿತಿಯ ಅಂದಾಜು ಬರಬಹುದು. ಆದರೆ ಒಂದುವೇಳೆ ನಮಗೆ ಒಂದು ವಿಶಿಷ್ಟ ವ್ಯಕ್ತಿಯ ಪಾತ್ರ ನಾಟಕದಲ್ಲಿ ಮಾಡುವುದಿದ್ದರೆ ನಾವು ಏನು ಮಾಡಬೇಕಾಗುವುದು
- ನಾಟಕದಲ್ಲಿ ಕೆಲಸೆಮಾಡುವ ಪ್ರತಿಯೊಬ್ಬ ಕಲಾವಿದನು ಒಂದಿಲ್ಲ ಒಂದು ಪಾತ್ರವನ್ನು ಮಾಡುತ್ತಾನೆ. ಯಾವ ವ್ಯಕ್ತಿಯ ಪಾತ್ರ ಮಾಡುವುದಿದೆಯೋ ಅವನ ವಯಸ್ಸು ಸಾಮಾಜಿಕ- ಆರ್ಥಿಕ ಸ್ಥಿತಿ, ವ್ಯವಸಾಯ, ಸ್ವಭಾವ, ಶೀವಿ, ಮೌಲ್ಯ, ವಿಚಾರ ಮುಂತಾದವುಗಳ ವಿಚಾರ ಮಾಡಿ ಆ ವ್ಯಕ್ತಿ ಹೇಗೆ ಇರಬಹುದು ಇದರ ಒಂದು ರೂಪರೇಷೆ ಮಾಡಲಾಗುತ್ತದೆ. ಅದಕ್ಕೆ ವ್ಯಕ್ತಿರೇಖೆ ಅನ್ನುವರು.

- ನಾಟಕದಲ್ಲಿ ಕೆಲಸ ಮಾಡುವಾಗ/ನಾಟಕ ಬರೆಯುವಾಗ ವ್ಯಕ್ತಿರೇಖೆಯಹಾಗೆ ಭಾಷೆ, ಸಂವಾದ, ಪೋಷಾಕು ಇರಬೇಕು ಇದರ ಕಾಳಜಿಯನ್ನು ವಹಿಸಬೇಕಾಗುವುದು.
- ನಾವು ವ್ಯಕ್ತಿರೇಖೆಯ ಬಗ್ಗೆ ಎಷ್ಟೊಂದು ಆಳವಾಗಿ ವಿಚಾರ ಮಾಡುವೆವೋ ಅಷ್ಟೊಂದು ವ್ಯಕ್ತಿರೇಖೆಸತ್ಯ / ಜೀವಂತ ವೆನಿಸುವುದು ಮತ್ತು ನಾಟಕ ಮನೋರಂಜಕವಾಗಬಹುದು.

## ಸ್ವಲ್ಪ ಮೋಜು ಮಾಡೋಣ

ವಿದ್ಯಾರ್ಥಿಗಳುಮುಂದೆ ಬಂದು ಕೆಳಗೆ ಕೊಟ್ಟ ಪಾತ್ರವನ್ನುಅಭಿನಯಿಸ ಬೇಕು ಕೊಟ್ಟ ವ್ಯಕ್ತಿಗಳಧ್ವನಿಯ, ಭಾಷೆಯ ಮತ್ತು ದೇಹದ ಹಾವಭಾವ ವಿಚಾರ ಮಾಡಿ ಅವರ ನಕಲು ಮಾಡಬೇಕು, ಸುಮಾರು ಐದು ವಾಕ್ಯಗಳನ್ನುಅನ್ನಬೇಕು1) ಬಡಮುದುಕಿ, ಹೊಲದಲ್ಲಿಯ ಕೂಲಿಹೆಣ್ಣಿಮಗಳು 2) ಮಹಾವಿದ್ಯಾಲಯದಲ್ಲಿಓದುವ ಯುವಕ 3)ಮಧ್ಯಮವಯಸ್ಸಿನ ಡಾಕ್ಟರ4)ಮನೆಯಲ್ಲಿತಯಾರಿಸಿದ ವಸ್ತುಗಳನ್ನು ಮನೆ-ಮನೆಗೆ ಮಾರುವ ಸ್ತ್ರೀ 5) ಒಬ್ಬ ಜನಪ್ರಿಯ ಸಿನೇಮಾ ಹೀರೊ

## 8. ನಾಟಕದ ಸಿದ್ಧತೆ:

| | | | | |
|---|---|---|---|---|
| ಯಾವುದೇ ಕತೆ ಇಲ್ಲವೆ ಪ್ರಸಂಗ ಅದರಲ್ಲಿ ಸಂಘರ್ಷದ ಬೀಜವಿರಬೇಕು. | ⇨ | ಕತೆಯಲ್ಲಿಯ ವ್ಯಕ್ತಿರೆಖೆ ಅವರ ಭಾಷೆ , ಧ್ವನಿ, ದೇಹದ, ಹಾವಭಾವ ವೇಶ | ⇨ | ಪ್ರತಿಯೊಂದು ವ್ಯಕ್ತಿ ರೇಖೆಯನ್ನು ಅಭಿನಯಿಸುವ ಕಲಾವಿದರ ಬಾಯಲ್ಲಿರುವ ಸಂವಾದ |

ಯಾವುದೇ ಮನೋರಂಜಕ ನಾಟಕ ಪ್ರಾರಂಭಿಸಲು ಮೇಲಿನ ಅಂಶಣ ವಿಚಾರ ಮಾಡಬೇಕಾಗುವುದು.

(1) ವಿದ್ಯಾರ್ಥಿಗಳ ಗುಂಪು ಮಾಡಿರಿ.

(2) ಪ್ರತಿಯೊಂದು ಗುಂಪಿಗೆ ಶಿಕ್ಷಕರು ಒಂದು ವಿಷಯ ಕೊಡಬೇಕು.

(3) ಪ್ರತಿಯೊಂದುಗುಂಪು ಆ ವಿಷಯದ ಮೇಲೆ ವಿಚಾರಮಾಡಿ ಒಂದು ಕತೆಯ/ಪ್ರಸಂಗದವಿಚಾರ ಮಾಡಚೇಕು. ಅದರಲ್ಲಿಸಂಘರ್ಷ ವಿರಬೇಕು. ಅದರಲ್ಲಿಯ ವ್ಯಕ್ತಿರೇಖೆಯನ್ನು ನಿರ್ಧರಿಸಬೇಕು ಮತ್ತು ಹಾಗೆ ಸಂವಾದ ಬರೆಯಬೇಕು

(4) ಪ್ರತಿಯೊಬ್ಬರೂ ಒಂದಿಲ್ಲ ಒಂದು ಪಾತ್ರ ಮಾಡುವ ಕಾಳಜಿ ವಹಿಸಬೇಕು.

(5) ಸಾಧ್ಯವಾದರೆನಿಮ್ಮ ವಾರ್ಷಿಕ ಸ್ನೆಹಸಮ್ಮೇಲನದಲ್ಲಿಇಲ್ಲವೆ ಯಾವುದೇ ಕಾರ್ಯಕ್ರಮದವೇಳೆಯಲ್ಲಿ ಚಿಕ್ಕ ನಾಟಕಗಳನ್ನುಸಾದರ ಪಡಿಸಬೇಕು.

**ಉದಾಹರಣೆಗಾಗಿ ಕೆಲವು ವಿಷಯಗಳುಃ**

(1) ಯಾವುದೋ/ಏತರದೋ ದಾರಿಕಾಯುವುದು (ಉದಾ: ರೈತ ಮಳೆಯ ಹಾದಿಕಾಯುವನು, ತಾಯಿಯು ಮಗಳ ದಾರಿ ಕಾಯುವಳು, ಇಬ್ಬರು ಬಸ್ಸಿನ ದಾರಿ ಕಾಯುತ್ತಾರೆ, ಮುಂತಾದವು)

(2) ಅಪಾರ್ಥ ವಾಗುವುದು (ಉದಾ- ಒಂದೇ ಹೆಸರಿನ ಇಬ್ಬರು ವ್ಯಕ್ತಿಗಳಿದ್ದರಿಂದ, ಗಡಿಯಾರ ಮಧ್ಯದಲ್ಲಿಯೇ ನಿಂತಿರುವುದರಿಂದ ಅಪಾರ್ಥ ವಾಗುವುದು)

(3) ಮರಳಿ ಬರುವುದು (ಉದಾ: ಹೊರದೇಶದಿಂದ ಭಾರತಕ್ಕೆ. ತಪ್ಪಿಸಿಕೊಂಡ ಮಗನು ಮನೆಗೆ ಬರುವುದು. ಮುಂತಾದವುಗಳು)

(4) ಪಶಾತ್ತಾಪ ಪಡುವುದು (ಕಷ್ಟವನ್ನು ಮಾಡದೇ ಇರುವ, ಉದ್ಧಟವಾಗಿ ಮಾತನಾಡಿದ, ತಡಮಾಡಿದ ಪಶ್ಚಾತ್ತಾಪ ಮುಂತಾದವುಗಳು)

ಈ ವಿಷಯಗಳನ್ನು ಕೇವಲ ಉದಾಹರಣೆಗಾಗಿ ಕೊಡಲಾಗಿದೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕೂಡಿ ಸ್ವಂತದ ಕಲ್ಪನೆಯಿಂದ ಸಹ ವಿಷಯವನ್ನುನಿರ್ಧರಿಸಬಹುದು .ಯಾವುದೇ ನಾಟಕ (ಚಿಕ್ಕ) ಪ್ರಾರಭಿಸುವುದು ಇದು ದೀರ್ಘಕಾಲನಡೆಯುವ ಪ್ರಕ್ರಿಯೆಯಾಗಿರುತ್ತದೆ. ಅದು ನಿರ್ಧರಿಸಿದ ವರ್ಗದ ವೇಳೆಯಲ್ಲಿ ಆಗುವುದು ಸಾಧ್ಯವಿಲ್ಲ. ಅದಕ್ಕಾಗಿ ಶಾಲಾಬಾಹ್ಯ ವೇಳೆಯ ಉಪಯೋಗ ಮಾಡಿ ಪಾಠದಲ್ಲಿ ಕೊಟ್ಟ ಸಂಕಲ್ಪನೆ ವಿದ್ಯಾರ್ಥಿಗಳಿಗೆ ಹೆಚ್ಚು ಒಳ್ಳೆಯರೀತಿಯಿಂದ ತಿಳಿಸಲು ಉಪಕ್ರಮವನ್ನು ತೆಗೆದುಕೂಳ್ಳುತ್ತ ಇರುವುದು ಮಹತ್ವದ್ದಾಗಿದೆ.

## ನೃತ್ಯ:

ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಅನೇಕ ಕ್ರಿಯೆಗಳನ್ನು ಮಾಡುತ್ತಿರುತ್ತೇವೆ. ಹೇಗೆಂದರೆ ನಡೆಯುವುದು, ಯಾವುದೇ ವಸ್ತುವಿನ ಕಡೆಗೆ ಬೆರಳು ತೋರಿಸುವುದು, ಯಾರೊಬ್ಬರನ್ನು ಕೂಗುವುದು, ಇಲ್ಲವೆನ್ನುವುದು. ಬಾಗಿಲು ಮುಚ್ಚಿಕೊಳ್ಳುವುದು ಮುಂತಾದವು, ಇವುಗಳಲ್ಲಿ ಮತ್ತು ನೃತ್ಯದಲ್ಲಿ ಮಾಡಿದ ಹಾವಭಾವಗಳಲ್ಲಿ ಏನು ವ್ಯತ್ಯಾಸವಿದೆ?

ನೀವು ಗ್ರ್ಯಾದರಿಂಗದಲ್ಲಿ, ಇಲ್ಲವೆ ಟಿ.ವಿ.ಮೇಲೆ ಬೇರೆ ಬೇರೆ ನೃತ್ಯ ಪ್ರಕಾರ ನೋಡಿರಬಹುದು, ಮೇಲೆ ನಮೂದಿಸಿದ ದೈನಂದಿನ ಕ್ರಿಯೆಗಳನ್ನು ನೀವು ನೋಡಿದ ನೃತ್ಯಪ್ರಕಾರಗಳಲ್ಲಿ ಮಾಡಿ ನೋಡಿರಿ.

**ಚರ್ಚೆ ಮಾಡಿರಿ:**

- ನಮ್ಮ ದಿನನಿತ್ಯದ ಚಲನ ವಲನಗಳು ನೃತ್ಯದಲ್ಲಿಯ ಚಲನವಲನದಷ್ಟೇ ಬಿಂಕಿ ಉಳ್ಳದ್ದು ಇರುವವೆ?
- ನಮ್ಮ ದೈನಂದಿನ ಚಲನವಲನಗಳು ನಾವು ಒಂದೇ ಲಯದಲ್ಲಿ ಅಥವಾ ಸಂಗೀತ ಬದ್ಧವಾಗಿ ಮಾಡುತ್ತೇವೆಯೇ?
- ನಮ್ಮ ದೈನಂದಿನ ಚಲನವಲನಗಳನ್ನು ನಾವು ಸತತ , ಕ್ರಮಬದ್ಧ ಪದ್ಧತಿಯಿಂದ ಮಾಡುತ್ತೇವೆಯೇ?

## 9. ನೃತ್ಯ ವೆಂದರೇನು?

**ನೃತ್ಯ ಇದು ಒಂದು ಕಲಾಪ್ರಕಾರವಿದೆ ಎಂದರೆ, ಅದರಲ್ಲಿ ಉದ್ದೇಶಪೂರ್ವಕವಾಗಿ ಆರಿಸಿದ ಸುಂದರ ಚಲನವಲನ, ಕ್ರಮವಾಗಿ ಮತ್ತು ಲಯಬದ್ಧ ರೀತಿಯಿಂದ ಯಾವುದೋ ಆಶಯ ವ್ಯಕ್ತ ಮಾಡಲಾಗುತ್ತದೆ, ನೃತ್ಯಕ್ಕೆ** ಸಾಮಾನ್ಯವಾಗಿ ಸಂಗೀತದ ಜೊತೆ ಇರುವುದು ಆಶಯ ಇಲ್ಲವೆ ಅಭಿವ್ಯಕ್ತಿ ಇರದಿದ್ದರೆ ನೃತ್ಯಕ್ಕೆ ವ್ಯಾಯಾಮದ ಸ್ವರೂಪ ಬರಬಹುದು.

### ಮಾಡಿ ನೋಡೋಣ ಬನ್ನಿ

## 10. ನೃತ್ಯದಲ್ಲಿಯ ಭಾವಭಂಗಿ



ನಮ್ಮ ಶರೀರದ ಭಾವಭಂಗಿಯ ಮೂಲಕ ಕೆಳಗೆ ಹೇಳಿದ ಅಂಶಗಳನ್ನು ಒಂದು ನೃತ್ಯದಲ್ಲಿ ಹೇಗೆ ಸಾದರ ಪಡಿಸುವುದು ಎಂಬ ವಿಚಾರ ವನ್ನು ನೀವು ಮಾಡಬಹುದೆ? ನಿಮಗೆ ಯೋಗ್ಯವೆನಿಸಿದ ಯಾವುದೇ ನೃತ್ಯಪ್ರಕಾರವನ್ನುಉಪಯೋಗಿಸಿರಿ, ಯಾವ ವಿದ್ಯಾರ್ಥಿಗಳ ಇಚ್ಛೆ ಇದೆಯೋ ಅವರು ವರ್ಗದ ಎದುರು ಈ ನೃತ್ಯ ಪ್ರಕಾರ ಸಾದರ ಪಡಿಸಬೇಕು.

(1) ಬೆಕ್ಕು, ಹಾವು, ಸಿಂಹ,ಮನುಷ್ಯ, ಇತ್ಯಾದಿ ಪ್ರಾಣಿಗಳ ಚಲನವಲನೆ

(2) ನದಿ, ಗಿಡಿಗಳು, ಗಾಡಿ ಬಿರುಗಾಳಿ ಮುಂತಾದವು.

(3) ನಿಲ್ಲುವುದು, ಹೋರಾಡುವುದು, ವಿಚಾರ ಮಾಡುವುದು ಮುಂತಾದ ಕ್ರಿಯೆ.

## 11. ನೃತ್ಯದಲ್ಲಿಯ ಅಭಿನಯ:



ಮುಖದ ಮೇಲಿನ ಅಭಿನಯು, ಶಾರೀರಿಕ ಮುದ್ರೆ ಮತ್ತು ನಿಮಗೆ ಯೋಗ್ಯವೆನಿಸಿದ ಸಂಗೀತವನ್ನು ಉಪಯೋಗಿಸಿ ಒಂದು ನೃತ್ಯ ಸಾದರಪಡಿಸಿರಿ, ಅದರ ಮೂಲಕ ಕೆಳಗೆ ನಮೂದಿಸಿದ ಮಾನವೀ ಭಾವನೆಗಳು ಪ್ರಕಟವಾಗಬೇಕು. ನೀವು ಯಾವುದೇ ನೃತ್ಯಪ್ರಕಾರ ಉಪಯೋಗಿಸಬಹುದು. ಯಾವ ವಿಧ್ಯಾರ್ಥಿಗಳಇಚ್ಛೆ ಇದೆಯೋ ಅವರು ವರ್ಗದ ಎದುರು ಈ ನೃತ್ಯಪ್ರಕಾರವನ್ನುಸಾದರಪಡಿಸಬಹುದು.

1) ಸಿಟ್ಟು 2) ಆನಂದ 3) ಅಂಜಿಕೆ 4) ಸಹಾನುಭೂತಿ 5) ಮತ್ಸರ ಇತ್ಯಾದಿ.

***ಗಮನಿಸಬೇಕಾದ ಅಂಶಗಳು:***

- *ಮುಖದಮೇಲಿನ ಹಾವಭಾವ ಮತ್ತು ಲಯಬದ್ಧ ಶಾರೀರಿಕ ಹಾವಭಾವ ಇವು ನೃತ್ಯದೂರದು ಮುಖ್ಯ ಅಂಗಗಳಾಗಿವೆ.*
- *ಅವುಗಳ ಯೋಗ್ಯ ಉಪಯೋಗ ಮಾಡಿ ನರ್ತಕ/ನರ್ತಕಿ ತಮಗೆ ಅವರಿಗೆ ಅಪೇಕ್ಷಿತ ವಿದ್ದ ಆಶಯವನ್ನು ಪ್ರೇಕ್ಷಕರವರೆಗೆ ಮುಟ್ಟಿಸುವರು.*

### ನೃತ್ಯ ದಿಗ್ದರ್ಶನ:

ಅಭಿನಯ ಮತ್ತು ಲಯಬದ್ಧ ಶಾರೀರಿಕ ಹಾವಭಾವಗಳ ಒಂದು ಸೌಂದರ್ಯಪೂರ್ಣ ಕ್ರಮ ನಿರ್ಧರಿಸಿ ನೃತ್ಯ ಕೂಡಿಸುವುದು, ಇದಕ್ಕೆ ನೃತ್ಯ ದಿಗ್ದರ್ಶನ ವೆನ್ನುವರು. ಆ ನೃತ್ಯ, ಪ್ರೇಕ್ಷಕರಿಗೆ ಹೇಗೆ ಕಾಣಿಸಬಹುದು ಮತ್ತು ಅವರ ಮನಸ್ಸಿನಲ್ಲಿ ಯಾವ ಪ್ರತಿಬಿಂಬ ನಿರ್ಮಾಣವಾಗಬಹುದು. ಇದರ ವಿಚಾರಕೂಡ ನೃತ್ಯ ದಿಗ್ದರ್ಶನದಲ್ಲಿ ಮಾಡಬೇಕಾಗುವುದು. ನೃತ್ಯ ದಿಗ್ದರ್ಶನ ಮಾಡುವವರಿಗೆ, ನೃತ್ಯದಿಗ್ದರ್ಶಕ ನೆನ್ನುವರು. ಸಂಗೀತ, ಹಾಡಿನ ಶಬ್ದ, ಭಾವ ಲಕ್ಷ್ಯದಲ್ಲಿಟ್ಟುಕೊಂಡು ನೃತ್ಯ ದಿಗ್ದರ್ಶಕರು ನೃತ್ಯದ ರಚನೆ ಮಾಡುವರು.

## ಮಾಡಿ ನೋಡಿರಿ

ವಿದ್ಯಾರ್ಥಿಗಳ ಗುಂಪನ್ನು ತಯಾರಿಸಿರಿ. ಪ್ರತಿಯೊಂದು ಗುಂಪು ತಮ್ಮ ಇಷ್ಟವಾದ ಸಂಗೀತ ಅಥವಾ ಹಾಡು ಅಥವಾ ಯಾವುದೋ ಕವನವನ್ನಾಯ್ದು ಅದಕ್ಕೆ ಧಾಟಿ ಕೂಡಿಸಿಯೂ ಅದರ ಮೇಲೆ ನೃತ್ಯಾತ್ಮಕ ಹಾವಭಾವಗಳನ್ನು ಮಾಡಲು ಬರುವುದು. ಗುಂಪಿನಲ್ಲಿಯ ಪ್ರತಿಯೊಬ್ಬ ವಿದ್ಯಾರ್ಥಿಯು ನೃತ್ಯದಲ್ಲಿಯ ಹಾವಭಾವದ ಒಂದು ಕ್ರಮದ ದಿಗ್ದರ್ಶನ ಮಾಡಬೇಕು. ಆಯ್ಕೆ ಮಾಡಿದ ಸಂಗೀತದ ಮೇಲೆ ಅಥವಾ ಹಾಡಿನ ಮೇಲೆ ನೃತ್ಯ ಹೊಂದಿಸಿದ ನಂತರ ಅದನ್ನು ವರ್ಗದ ಮುಂದೆ ಸಾದರ ಪಡಿಸಬೇಕು. ಒಂದು ಗುಂಪಿನ ನೃತ್ಯ ನಡೆದಾಗ ಇತರ ಗುಂಪುಗಳು ಅದರ ಅವಲೋಕನವನ್ನು ಕೆಳಗಿನ ಅಂಶಗಳನ್ನು ವಿಚಾರದಲ್ಲಿಟ್ಟು ಮಾಡಬೇಕು.

(1) ನೃತ್ಯದ ಮತ್ತು ಹಾಡಿನಲ್ಲಿಯ ಶಬ್ದಗಳ ಸಂಬಂಧ ಇದೆ ಎಂದೆನಿಸಿತೆ?

(2) ನೃತ್ಯ ಸಾದರಪಡಿಸುವ ಗುಂಪಿನಲ್ಲಿಯ ವಿದ್ಯಾರ್ಥಿಗಳಲ್ಲಿ ಹೊಂದಾಣಿಕೆ?

(3) ನೃತ್ಯವು ಹಾಡಿನ ತಾಲದಂತೆ ಸಾದರವಾಯಿತೆ?

(4) ನೃತ್ಯದ ಹಾವಭಾವದಲ್ಲಿ ಏಕತಾನತೆ?

(5) ನೃತ್ಯದಲ್ಲಿ ಏನಾದರೂ ನಾವಿನ್ಯ ಕಾಣಿಸಿತೇ?

(6) ನೃತ್ಯವು ಸಾಮರ್ಥ್ಯ ಉಳ್ಳದ್ದು ಅನಿಸಿತೇ?

(7) ನೃತ್ಯವು ಪರಿಣಾಮಕಾರಿ ಅನಿಸಿತೇ?

(8) ನೃತ್ಯದಿಂದ ಯೋಗ್ಯವಾದ ಆಶಯ ಪ್ರೇಕ್ಷಕರವರೆಗೆ ಮುಟ್ಟಿದೆಯೆ?

### ಭಾರತೀಯ ನೃತ್ಯಪ್ರಕಾರಗಳು:

ಸಂಗೀತದಂತೆ ನೃತ್ಯದ ವರ್ಗೀಕರಣ ಕೂಡ ಶಾಸ್ತ್ರೀಯ ಜನಪದ ಚಿತ್ರಪಟದ ಮುಕ್ತನೃತ್ಯ ಹೀಗೆ ನೃತ್ಯಪ್ರಕಾರಗಳಿವೆ.

### ಶಾಸ್ತ್ರೀಯ ನೃತ್ಯ:

ನಾಟ್ಯ ಶಾಸ್ತ್ರದಲ್ಲಿ ನಮೂದಿಸಿದ ನಿಯಮಾವಳಿಯನ್ನು ಚಾಚೂ ತಪ್ಪದೆ ಪಾಲನೆ ಮಾಡುವ ನೃತ್ಯಪ್ರಕಾರಗಳಿಗೆ ಮಾತ್ರ ಭಾರತದಲ್ಲಿ ಶಾಸ್ತ್ರೀಯ ನೃತ್ಯದ ದರ್ಜೆಯನ್ನು ಕೂಡಲಾಗುವುದು ಶಾಸ್ತ್ರೀಯ ನೃತ್ಯಗಳು ಈ ಹಿಂದೆ ಮಂದಿರಗಳಲ್ಲಿ ಸಾದರ ಪಡಿಸಲಾಗುತ್ತಿದ್ದವು, ಅವುಗಳಲ್ಲಿ ಹೆಚ್ಚಾಗಿ ಪೌರಾಣಿಕ ಕಥೆಗಳ ಅಂತರ್ಭಾವ ಮಾಡಲಾಗುತ್ತಿತ್ತು. ಕಾಲಾಂತರದಲ್ಲಿ ಶಾಸ್ತ್ರೀಯ ನೃತ್ಯದಲ್ಲಿ ಸಾಮಾಜಿಕ ಅರಿವುಗಳ ಮತ್ತು ಅವರ ಅಭಿವ್ಯಕ್ತಿಯ ಅಂತರ್ಭಾವ ಕೂಡ ಆಗಹತ್ತಿತು ಭಾರತದಲ್ಲಿ ಶಾಸ್ತ್ರೀಯ ನೃತ್ಯದ ಎಂಟು ಪ್ರಕಾರಗಳಿವೆ.

### ಭರತನಾಟ್ಯಮ್:

ಈ ನೃತ್ಯಪ್ರಕಾರವು ಸುಮಾರು 2000 ವರ್ಷಗಳಷ್ಟು ಹಳೆಯದಾಗಿದೆ. ಈ ನೃತ್ಯಪ್ರಕಾರದ ಕುರಿತು ಭರತಮುನಿಗಳ ನಾಟ್ಯ ಶಾಸ್ತ್ರದಲ್ಲಿಯು ಉಲ್ಲೇಖ ಸಿಗುವುದು. ಹಿಂದೂ ಧರ್ಮದಲ್ಲಿಯ ಕತೆಗಳು ಮತ್ತು ತತ್ವಜ್ಞಾನ ಇವುಗಳ ಆಧಾರದ ಮೇಲೆ ಭರತ ನಾಟ್ಯ ಸಾದರವಾಗುವುದು.

### ಕಥಕ್:

ಕಥಾ ಈ ಮೂಲಶಬ್ದದಿಂದ ತಯಾರಾದ ಕಥಕ ಈ ಶಬ್ದದ ಅರ್ಥ ವೆಂದರೆ ಕಥೆ ಹೇಳುವ ಕಲೆ. ಈ ಪ್ರಕಾರದ ಉಗಮ ಉತ್ತರ ಹಿಂದುಸ್ತಾನದಲ್ಲಿ ಆಯಿತು.

**ಕುಚಿಪುಡಿ:**

ಈ ನೃತ್ಯ ಪ್ರಕಾರದ ಉಗಮವು ಆಂಧ್ರಪ್ರದೇಶದಲ್ಲಿ ಆಯಿತು. ಶ್ರೀ ಸಿಧೇಂದ್ರ ಯೋಗಿ ಈ ವೈಷ್ಣವ ಕವಿಯು ಈ ನೃತ್ಯ ಪ್ರಕಾರಕ್ಕಾಗಿ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ



**ಉಡಿಸಿ**

ಭುವನೇಶ್ವರ ಸಮೀಪದ ಕ್ರಿಸ್ತಶಕಪೂರ್ವ ಎರಡನೇ ಶತಮಾನದಲ್ಲಿಯ ಗುಹೆಗಳಲ್ಲಿಯೂ ಈ ನೃತ್ಯಪ್ರಕಾರದ ಪುರಾವೆ ಸಿಗುತ್ತವೆ. ಉಡಿಸಿ ನುತ್ಯವನ್ನು ಮುಖ್ಯವಾಗಿ ನರ್ತಕಿಯರು ಸಾದರಪಡಿಸುತ್ತಿದ್ದರು, ವಿವಿಧ ದೇವತೆಗಳಿಗೆ ಸಂಬಂಧಿಸಿದ ಪುರಾಣಕಥೆ ಈ ನೃತ್ಯದ ಮೂಲಕ ಹೇಳಲಾಗುತ್ತಿತ್ತು

**ಸತ್ರಿಯಾ:**

ಈ ನೃತ್ಯ-ಪ್ರಕಾರದಉಗಮವು 15 ನೇ ಶತಮಾನದಲ್ಲಿ ಆಸಾಮದಲ್ಲಾಯಿತು. ಶ್ರೀಮುತ ಶಂಕರದೇವ ಇವರಿಗೆ ಈ ನೃತ್ಯಪ್ರಕಾರದ ನಿರ್ಮಿತಿಯ ಶ್ರೇಯ ಕೊಡಲಾಗುವುದು.

ವೈಷ್ಣವಮಠಗಳ ಮೂಲಕ (ಸತ್ರಂ) ಈ ನೃತ್ಯಪ್ರಕಾರದಪರಂಪರೆಯ ಜೋಪಾಸನೆ ಮಾಡಲಾಯಿತೆಂದು ಈ ನೃತ್ಯಪ್ರಕಾರಕ್ಕೆಸತ್ರಿಯಾ ಎನ್ನುತ್ತಾರೆ.

**ಮಣಿಪುರಿ :**

ಮಣಿಪುರದಲ್ಲಿಈ ನೃತ್ಯಪ್ರಕಾರದಉಗಮವಾಯಿತು.ಮಣಿಪುರಿ ಇದೊಂದು ಸಾಮೂಹಿಕನೃತ್ಯದಪ್ರಕಾರ.ಬಹುತೇಕವಾಗಿ ರಾಧಾ-ಕೃಷ್ಣರ ಕತೆಗಳಮೇಲೆ ಆಧರಿಸಿ ಈ ನೃತ್ಯವನ್ನುಸಾದರಪಡಿಸಲಾಗುವುದು.

**ಮೋಹಿನಿಯಾಟ್ಟಮ್:**

ಭಗವಾನ ವಿಷ್ಣುವಿನ ಮೋಹಿನಿ ಅವತಾರದಿಂದ ಹೆಸರು ಪಡೆದ ಈ ನೃತ್ಯಪ್ರಕಾಕೇರಳದಲ್ಲಿ ಉದಯಿಸಿತು. ಈ ನೃತ್ಯಪ್ರಕಾರದಲ್ಲಿಯ ಚಲನವಲನೆ ಬಹಳ ನಾಜೂಕು, ಸಾವಕಾಶ ಪದ್ಧತಿಯದ್ದಾಗಿರುತ್ತದೆ. ಈ ನೃತ್ಯಪ್ರಕಾಕೇವಲ ಸ್ತ್ರೀಯರ ಮೂಲಕ ಸಾದರಪಡಿಸಲಾಗುತ್ತದೆ.

**ಕಥಕಲಿ:**

ಕಥಕಲಿ (ಕಥಾ+ಕಲಿ=ಸಾದರಿಕರಣ) ಇದೂಂದು ನೃತ್ಯನಾಟ್ಯಪ್ರಕಾರವಿದಿ ಈ ನೃತ್ಯದಲ್ಲಿಯ ಕಲಾವಿದರ ವೇಷಭೂಷಣ, ಮುಖಕ್ಕೆ ವಿವಿಧ ಬಣ್ಣಗಳು ಮತ್ತುಮುಖವಾಡ ಇವುಗಳಿಂದ ಈ ನೃತ್ಯಪ್ರಕಾರವುವಿಶೇಷ ಆಕರ್ಷಕ ವೆನಿಸುವುದು. ಈ ನೃತ್ಯವನ್ನುಬಹುತೇಕವಾಗಿ ಪುರುಷಕಲಾವಿದರೇಸಾದರಪಡಿಸುತ್ತಾರೆ.ದಕ್ಷಿಣ ಭಾರತದಲ್ಲಿಯಕಲರಿ ಪಾಯಟ್ಟು ಈ ಮಾರ್ಶಲ್ ಆರ್ಟ್ ಪರಂಪರೆಕಥಕಲಿ ನೃತ್ಯಪ್ರಕಾರದ ಮೇಲೆ ಬಹಳ ಪ್ರಭಾವ ಬೀರಿದಿ

**ಜಾನಪದ ನೃತ್ಯ:**

ಜಾನಪದ ಸಂಗೀತದ ಹಾಗೆ ಜಾನಪದ ನೃತ್ಯದ ಅರ್ಥವೂ ಹೀಗಿದೆ ಜನರು ಒಟ್ಟಿಗೆಬಂದು ಮಾಡಿದ ನೃತ್ಯ.ವಿಶಿಷ್ಟಸಮುದಾಯದಲ್ಲಿಯ ಜನರು ವಿಶಿಷ್ಟ ಪ್ರಸಂಗದಲ್ಲಿ ಒಟ್ಟಿಗೆ ಸೇರಿ ಮಾಡಿದ ಸಾಮಾಹಿಕ ನೃತ್ಯ.

ಭಾರತದಲ್ಲಿಯ ವಿವಿಧತೆಯಿಂದ ಜನಪದ ನೃತ್ಯದಸಮೃದ್ಧ ಪರಂಪರೆಯು ಭಾರತದಲ್ಲಿ ಎಲ್ಲಕಡೆಗೂ ಕಾಣಸುವುದು. ಬೇರೆ ಬೇರೆ ಪ್ರದೇಶದಲ್ಲಿಯ ಜನಪದ ನೃತ್ಯಗಳ ಭಾವಭಂಗಿಗಳಲ್ಲಿ ಬಹಳ ವಿವಿಧತೆ ಕಂಡು ಬರುವುದು

ದಾಂಡಿಯಾ. ಗರಬಾ, ಭಾಂಗಡಾ, ಲಾವಣಿ, ಘುಮಾರ, ಕೋಳಿ ನೃತ್ಯಹೀಗೆ ಸಾಕಷ್ಟು ಜನಪದ ನೃತ್ಯಗಳನ್ನುನಮ್ಮಲ್ಲಿಮಾಡಲಾಗುತ್ತದೆ ಭಾರತದಲ್ಲಿಯ ಬುಡಕಟ್ಟಿನ ಸಮುದಾಯಗಳ ಸಂಸ್ಕೃತಿಯಲ್ಲಿಯೂ ಸಹ ಪಾರಂಪರಿಕ ನೃತ್ಯಗಳಿಗೆ ವಿಶೇಷ ಸ್ಥಾನವಿದೆ. ಮಹಾರಾಷ್ಟ್ರದ ಗುಡ್ಡುಗಾಡು ಪ್ರದೇಶದಲ್ಲಿಯ ಬುಡಕಟ್ಟಿನ ಜನರು ತರಪಾ ಈ ಕುಂಬಳಕಾಯಿಯಿಂದ ಮಾಡಿದ ವಾದ್ಯದೊಂದಿಗೆ ಪಾರಂಪರಿಕ ನೃತ್ಯ ಮಾಡುವರು. ಈ ನೃತ್ಯಕ್ಕೆ ತರಪಾ ನೃತ್ಯವೆಂದು ಕರೆಯುವರು.

**ಸಿನೇಮಾ ಗೀತೆಯ ಮುಕ್ತನೃತ್ಯ:**

ಭಾರತದ ಮತ್ತು ಹೊರಗಿನ ವಿವಿಧ ನೃತ್ಯ ಪ್ರಕಾರಗಳ ಮಿಶ್ರಣವು ನಮ್ಮ ಚಿತ್ರಪಟಗಳಲ್ಲಿಯ ನೃತ್ಯದಲ್ಲಿ ನೋಡಲು ಸಿಗಬಹುದು ಸಿನೇಮಾ ಗೀತೆಯ ಮೇಲಿನ ನೃತ್ಯವು ಬಹಳಷ್ಟು ವೇಳೆ ಮುಕ್ತಪ್ರವಾಹದ್ದಾಗಿರವುದು.

**ವಿವಿಧ ನೃತ್ಯಪ್ರಕಾರಗಳ ಅಭ್ಯಾಸ:**

ವಿಧ್ಯಾರ್ಥಿಗಳ ಗುಂಪು ತಯಾರಿಸಿರಿ. ಪ್ರತಿಯೊಂದು ಗುಂಪು ಒಂದು ಶಾಸ್ತ್ರೀಯ ಇಲ್ಲವೇ ಜಾನಪದ ನೃತ್ಯದ ಪ್ರಕಾರವನ್ನು ಆರಿಸಬೇಕು ಮತ್ತು ಆ ಕುರಿತು ಮಾಹಿತಿಯನ್ನು ದೂರಕಿಸಿ ವರ್ಗದ ಮುಂದೆ ಅದನ್ನು ಮಂಡಿಸಬೇಕು ಮಾಹಿತಿ ದೂರಕಿಸುವಾಗ ಕೆಳಗಿನ ಅಂಶಗಳ ಉಪಯೇಗವಾಗಬಲ್ಲದು.

(1) ಭಾರತದಲ್ಲಿಯ ಯಾವ ರಾಜ್ಯದಲ್ಲಿ ಈ ನೃತ್ಯಪ್ರಕಾರದ ಉಗಮವಾಯಿತು?

(2) ಈ ನೃತ್ಯವನ್ನು ಸಾದರ ಪಡಿಸುವಾಗ ಯಾವ ವೇಷಭೂಷಣ ಧರಿಸುವರು?

(3) ಈ ನೃತ್ಯಯಾವ ವಿಶಿಷ್ಟ ಪ್ರಸಂಗದಲ್ಲಿ ಅಥವಾ ವಿಶಿಷ್ಟ ಋತುವಿನಲ್ಲಿ ಸಾದರಪಡಿಸಲಾಗುತ್ತದೆ ಏಕೆ?

(4) ಈ ನೃತ್ಯಪ್ರಕಾರದಲ್ಲಿ ಪಾರಂಗರಾಗಿರುವ ಕೆಲವು ಪ್ರಸಿದ್ಧವ್ಯಕ್ತಿಗಳ ಹೆಸರುಗಳನ್ನು ದೊರಕಿಸಿರಿ. ಸಾಧ್ಯವಾದರೆ ನೃತ್ಯಪ್ರಕಾರದ ಒಂದು ದೃಷ್ಯವನ್ನು ವರ್ಗದ ಎದುರು ಸಾದರ ಪಡಿಸಿರಿ. ಅಥವಾ ಅದರ ಮೂಲ ಸಾದರಿಕರಣದ ವ್ಹಿಡಿಯೊ ವರ್ಗದಲ್ಲಿಯ ಇತರ ವಿಧ್ಯಾರ್ಥಿಗಳಿಗೆ ತೋರಿಸಿರಿ.

**ಚರ್ಚೆ ಮಾಡಿರಿ :**

- ಟಿ.ವ್ಹಿ ಮತ್ತು ಚಿತ್ರಪಟಗಳಲ್ಲಿ ನಾವು ಯಾವ ನೃತ್ಯವನ್ನು ನೋಡುವೆವು ಎಂಬುಂದರ ವಿಚಾರ ಮಾಡುತ್ತೇವೆಯೇ?
- ಯಾವ ನೃತ್ಯವನ್ನು ನಾವು ನೋಡಿದೆವೋ ಅದು ಕೇವಲ ವೇಗದ. ಉತ್ಸಾಹ ಕೂಡುವುದಾಗಿತ್ತೋ ಅಥವಾ ಅದರಲ್ಲಿ ಆಶಯ ವ್ಯಕ್ತಪಡಿಸುವ ಅರ್ಥಪೂರ್ಣ ಹಾವಭಾವಗಳು ಇದವೋ?
- ಕೆಲ ನೃತ್ಯಗಳಲ್ಲಿ ವ್ಯಾಯಾಮದಂತೆ ಕಾಣಿಸುವ ಭಾವಭಂಗಿಗಳಿರುವವು, ಅಲ್ಲದೆ ಕೆಲವು ನೃತ್ಯಗಳಲ್ಲಿಯ ಅಂಗವಿಕ್ಷೇಪ ಕುಟುಂಬದಲ್ಲಿಯ ಎಲ್ಲ ಸದಸ್ಯರು ಕೂಡಿ ನೋಡುವಂತೆ ಇರುವುದಿಲ್ಲ, ಇವುಗಳ ಕಡೆಗೆ ನಿಮ್ಮ ಲಕ್ಷ್ಯವಿರುವದೇ? ಕೆಲವು ನೃತ್ಯಗಳು ಸಾಮರ್ಥ್ಯವುಳ್ಳ ಅರ್ಥಪೂರ್ಣ ಹಾವಭಾವಗಳಿಂದ ಕೂಡಿದ್ದಾದಿರುತ್ತವೆ.ಅವುನ್ನು ನೋಡಿ ಮನಸ್ಸಿಗೆ ನೆಮ್ಮದಿ ಸಿಗುವುದು ಆಶಯ ಕೂಡ ಉತ್ತಮರೀತಿಯಿಂದ ಮಂಡಿಸಿರುವರು, ಇಂಥ ಕೆಲವು ಚಿತ್ರಪಟ ಗೀತೆಯ ಮೇಲಿನ ನೃತ್ಯಗಳನ್ನು ನೀವು ಹೇಳಬಹುದೆ?
- ಅದರ ವಿಶ್ಲೇಷಣೆ, ಪರೀಕ್ಷಣ, ವರ್ಗಿಕರಣ ಮಾಡಬಹುದೆ? ನಿಮ್ಮ ಅಭಿರುಚಿ ಸಂಪನ್ನತಗಾಗಿ ನೃತ್ಯದ ಕಡೆಗೆ ಈ ದೃಷ್ಟಿಯಿಂದ ನೋಡುವುದು ಮಹತ್ವದ್ದೆನಿಸುವುದೇ?

**ಸಂಗೀತ:**

**1. ಧ್ವನಿ: ನಮ್ಮ ನೆರೆಹೊರೆಯ ಧ್ವನಿ ಗಳ ನಿರೀಕ್ಷಣೆ ಮಾಡೋಣ.**

ನಿಮ್ಮ ವಹಿಯಲ್ಲಿ, ನಿಮ್ಮ ದೈನದಿನ ಜೀವನದಲ್ಲಿ ಕೇಳಿಬರುವ ಸಾಧ್ಯವಾದಷ್ಟು ಧ್ವನಿಗಳ ಪಟ್ಟಿ ಮಾಡಿರಿ. ಪಕ್ಷಿಗಳ ಕಲರವ, ವಾಹನದ ಹಾರ್ನ, ಮನುಷ್ಯರ ಧ್ವನಿ, ರೈಲಿನ ಸಪ್ಪಳ ಮುಂತಾದವುಗಳು.

**2) ನಾದ:**

ಕೆಲವೊಂದು ಧ್ವನಿಗಳ ಕರ್ಣಮಧುರವಾಗಿರುತ್ತವೆ ಮತ್ತು ಕೆಲವೊಂದು ಕರ್ಕಶವಾಗಿರುತ್ತವೆ. ಕರ್ಣಮಧುರ ಧ್ವನಿಗೆ 'ನಾದ' ವೆಂದು ಕರೆಯುವರು. ಯಾವುದೇ ವಾಹನದ ಬ್ರೆಕ್ ಹಚ್ಚುವುದರಿಂದ ಆಗುವ ಧ್ವನಿ, ಜನರ ಸದ್ದು ಇವು ಕರ್ಣಮಧುರ ವಾಗಿರುವದಿಲ್ಲ, ಇದರಿಂದಾಗಿ ಅದು ನಾದವಾಗಿರುವುದಿಲ್ಲ. ನೀವು ಮಾಡಿದ ಪಟ್ಟಿಯಲ್ಲಿ ನಾದ ಯಾವವು ಅವುಗಳನ್ನು ಗುರುತಿಸಲು ಬರುವುದೇ?

**ಚರ್ಚೆ ಮಾಡಿರಿ:**

1. ಹೇಳಿದ ಕೃತಿ ಮಾಡಲು ಸುಲಭ ವಿತ್ತೋ, ಕಠಿಣ ವಿತ್ತೋ? ಏಕೆ?

2.ಪಟ್ಟಿಯಲ್ಲಿಯ ಧ್ವನಿಗಳ ಕರ್ಣ ಮಧುರ/ಕರ್ಕಶ ಹೀಗಿ ಕೆಲವು ವರ್ಗಿಕರಣ ಮಾಡಲು ಬರಬಹುದೇ?

**3. ಸ್ವರ:**

ಶಾಶ್ವತವಾಗಿ ಉಳಿಯುವ ಮತ್ತು ಕರ್ಣಮಧುರವಾಗಿರುವ ನಾದವು ಸಂಗಿತಕ್ಕೆ ಉಪಯೋಗಕಾರಿಯಾಗಿರುವುದು.ಸಂಗೀತೋಪಯೋಗಿ ನಾದಕ್ಕೆ 'ಸ್ವರ' ವೆಂದು ಸಂಬೋಧಿಸಲಾಗುವುದು. ಸ್ವರಗಳ ಸರಪಳಿಗೆ ಇಲ್ಲವೆ ವಿಶಿಷ್ಟ ರಚನೆಗೆ ಸ್ವರ ರಚನೆ ಇಲ್ಲವೆ ಥಾಟಿ ಎಂದು ಸಂಬೋಧಿಸಲಾಗುವುದು ಥಾಟಿಯ ಹಾಗೆ ಸ್ವರಗಳಲ್ಲಿ ಮತ್ತು ಧ್ವನಿಯಲ್ಲಿ ಭೇದ ಇರುವುದು.

ನಾವೆಲ್ಲರೂ ದಿನಾಲು ರಾಷ್ಟ್ರಗೀತೆ ಅನ್ನುತ್ತೇವೆ, ರಾಷ್ಟ್ರಗೀತೆಯ ಕೊನೆಯ ಸಾಲನ್ನು ನೆನಪಿಸಿರಿ. **'ಜಯ ಜಯ ಜಯ ಜಯ ಹೇ'** ಯಾವಾಗ ನೀವು ಆ ಕೊನೆಯ ಸಾಲನ್ನು ಹಾಡುವಿರಿ, ಆಗ ಪ್ರತಿಯೊಂದು ಜಯ ಅನ್ನುವಾಗ ನಿಮಗೆ ಏನಾದರೂ ವ್ಯತ್ಯಾಸ ವೆನಿಸುವಮಾ? ಶಬ್ದವಂತೂ ಅದೇ ಇದೆ, ಆದರೆ ಏತರಲ್ಲಿ ಬದಲಾವಣೆ ಯಾಗುವುದು? ಧ್ವನಿ ಚಿಕ್ಕ ದೊಡ್ಡದಾಗುವುದೋ?

ನಾವು ರಾಷ್ಟ್ರಗೀತೆಯನ್ನು ಎಷ್ಟೇ ಜೋರಾಗಿ ಇಲ್ಲವೆ ಸಾವಕಾಶ ವಾಗಿ ಹಾಡಿದರೂ ಕೊನೆಯ ಸಾಲಿನಲ್ಲಿಯ ಪ್ರತಿಯೊಂದು ಜಯ ಬೇರೆ ಅನಿಸುವುದು. ಈ ವ್ಯತ್ಯಾಸಪ್ರತಿಯೊಂದು ಜಯ ಅನ್ನುವಾಗ ಅದರ ಸ್ವರ ಬೇರೆ ಇದ್ದುದರಿಂದ ಕಂಡುಬರುವುದು ಸ್ವರ ಇದು ಸಂಗೀತದಲ್ಲಿಯ ಮೂಲಭೂತ ಘಟಕವಾಗಿದೆ. ರಾಷ್ಟ್ರಗೀತೆಯಲ್ಲಿಯ ಕೊನೆಯ ಸಾಲಿನಲ್ಲಿ ಪ್ರತಿಯೊಂದು ಜಯ ದ ಸ್ವರವು ಮೊದಲಿನ ಜಯ ಕ್ಕಿಂತ ಮೇಲೆ ಏರುತ್ತ ಹೋಗುವುದು.

- ಗಾಜಿನ ಪಾತ್ರೆಗಳಲ್ಲಿ/ಕಪ್ಪಿನಲ್ಲಿಬೇರೆ ಬೇರೆ ಪ್ರಮಾಣದಲ್ಲಿ ನೀರು ತುಂಬಿರಿ. ಪ್ರತಿ ಪಾತ್ರೆಯ ಮೇಲೆ ಚಮಚಾದಿಂದ ಸಾವಕಾಶವಾಗಿ ಬಹೇದು ನೋಡಿರಿ. ಬರುವ ಸ್ವರ ಕೇಳಿರಿ. ವಿಧ್ಯಾರ್ಥಿಗಳಿಗೆ ಕೆಳಗಿನ ಸ್ವರದಿಂದ ಮೇಲಿನ ಸ್ವರದ ವರೆಗೆ ಕ್ರಮವಾಗಿ ಕೇಳಿಸಿ ಬರಬಹುದು ಹೀಗೆ ಪಾತ್ರೆಗಳ ರಚನ ಮಾಡಿರಿ.

**ಚರ್ಚೆ ಮಾಡಿರಿ:**

ತಂದೆ ಮತ್ತು ತಾಯಿ ಇವೇ ವಾಕ್ಯಗಳನ್ನು ಅಂದರೂ ಅವರ ಸ್ವರದಲ್ಲಿ ವ್ಯತ್ಯಾಸ ಕಂಡುಬರುವದು.

## 4. ತಾಲ:

ವರ್ಗದಲ್ಲಿ ಯಾವುದೇ ಹುರುಪು ಬರುವ ಹಾಡನ್ನು ಹಚ್ಚಿರಿ ಮತ್ತು ಅದಕ್ಕನುಸರಿಸಿ ನೀವು ಹೇಗೆ ಚಪ್ಪಾಳೆ ತಟ್ಟುವಿರೋ. ಹೇಗೆ ಕಾಲು ಅಲುಗಾಡಿಸುವಿರೋ ಆಕಡೆಗೆ ಲಕ್ಷ್ಯ ಕೊಡಿರಿ. ಈಗ ಒಂದು ಸೌಮ್ಯವಾದ ಹಾಡನ್ನು ಹಚ್ಚಿರಿ ಮತ್ತು ಪುನಃ ನಿರೀಕ್ಷಣೆ ಮಾಡಿರಿ. ಯಾವ ಪುನರಾರ್ವತೆಯಿಂದ ನೀವು ಚಪ್ಪಾಳೆ ಬಾರಿಸಿದಿರೋ ಅದಕ್ಕೆ 'ತಾಲ' ಎಂದು ಸಂಬೋಧಿಸಲಾಗುವುದು. ಗಣಪತಿಯ ಮೆರವಣಿಗೆಯಲ್ಲಿಬಾರಿಸುವ ಢೊಳ್ಳು ನೆನಪಿಸಿದರೆ ನಿಮಗೆ ತಾಲ ಈ ಸಜ್ಞೆಯು ಹೆಚ್ಚು ಸ್ಪಷ್ಟವಾಗಬಹುದು.

**ಚರ್ಚೆ ಮಾಡಿರಿ:**

1. ಚಪ್ಪಾಳೆ/ಕಾಲು ಬಡಿಯುವುದು ಇವುಗಳ ನಿಶ್ಚಿತ ಕಾಲದನಂತರ ಪುನರಾವೃತ್ತಿ ಯಾಗುತಿತ್ತು ಏಕೆ?

2) ಎರಡು ಹಾಡಿನಮೇಲೆ ಬಾರಿಸುವ ಚಪ್ಪಾಳೆಗಳ ಪುನಗಾವೃತೆಯಲ್ಲಿ ವ್ಯತ್ಯಾಸವಿತ್ತೆ?

## 5. ಲಯ:

ತಾಲ ಗತಿಗೆ ಲಯವೆಂದು ಸಂಭೋಧಿಸಲಾಗುವುದು. ಯಾವುದೇ ಸ್ವರ ಹಿಡಿಯುವುದು. ಇಲ್ಲವೆ ಧಾಟಿ ಇದು ಸ್ವರ, ತಾಲ ಮತ್ತು ಲಯ ಇವುಗಳಿಂದ ಕೂಡಿ ಆದಿರುತ್ತದೆ. ಸ್ವರದಲ್ಲಿ ಹೇಗೆ ಲಯವಿರುವುದೋ ಹಾಗಿಯೇ ನಿಸರ್ಗದ ಲಯವೂ ಇರುವುದು. ನಿಶ್ಚಿತ ವೇಳೆಯ ನಂತರ ರಾತ್ರಿ ಕಳೆದು ಹಗಲಾಗುವುದು. ಮತ್ತು ಮರಳಿ ದಿವಸಕಳೆದು ರಾತ್ರಿಯಾಗುವುದು ನಿಶ್ಚಿತ ಕಾಲದ ನಂತರ ಋತು ಬದಲಿಸುತ್ತವೆ ಹೀಗೆ ನಿಸರ್ಗದಲಯಬದ್ಧ ಚಕ್ರ ನಡೆಯುತ್ತಿರುತ್ತದೆ.

ಆದರೆ ಋತುಗಳ ಆಗಮನ ಬೇಗನೆ ಇಲ್ಲವೇ ತಡಮಾಡಿ ಆದರೆ ನಿಸರ್ಗದ ಲಯ ಕೆಟ್ಟಿದೆ ಎಂದು ನಾವು ಅನ್ನುತ್ತೇವೆ. ನಮ್ಮ ಹೃದಯದ ಬಡಿತವು ಕೂಡಾ ಒಂದು ನಿಶ್ಚಿತಗತಿಯಲ್ಲಿಇರುವುದು. ಅದಕ್ಕೆನಾವು ಹೃದಯ ಬಡಿತದ ಲಯವೆಂದು ಅನ್ನುತ್ತೇವೆ, ರೈಲಿನ ಧ್ವನಿಗೂ ಒಂದು ಲಯವಿರುತ್ತದೆ.

## ಸ್ವಲ್ಪ ಮೋಜು ಮಾಡೋಣ

**ಲಯವಿರುವ ಧ್ವನಿಯನ್ನು ಶೋಧಿಸುವುದುಃ** ನಮ್ಮ ಪರಿಸರದಲ್ಲಿಯ ಲಯವುಳ್ಳ ಧ್ವನಿಗಳನ್ನು ಶೋಧಿಸಿರಿ.

**ವಿವಿಧ ಲಯಗಳಲ್ಲಿಯ ತಾಲ ಬಾರಿಸಿ ಒಂದು ರಚನೆಯನ್ನು ನಿರ್ಮಾಣ ಮಾಡುವುದುಃ** ಮಕ್ಕಳ ಗುಂಪನ್ನು ತಯಾರಿಸಿರಿ. ಪ್ರತಿಯೊಬ್ಬರುಒಂದು ವಿಶಿಷ್ಟಧ್ವನಿಯನ್ನುನಿರ್ಮಾಣ ಮಾಡಲಿ – ಉದಾಃ ಕಂಪಾಸ ಪೆಟ್ಟಿಗೆಯಮೇಲೆ ಪೆನ್ನುಬಡೆದು ನಿರ್ಮಾಣ ವಾಗುವ ಧ್ವನಿ. ಮೋಜಿನ ಮೇಲೆ ಕೈಬಡೆದು ನಿರ್ಮಾಣವಾಗುವ ಧ್ವನಿ, ಚುಟುಕಿ ಬಾರಿಸಿ ನಿರ್ಮಾಣಮಾಡಿದ, ಚಪ್ಪಾಳೆ ಬಡೆದು ನಿರ್ಮಾಣ ಮಾಡಿದ ಧ್ವನಿ, ಪ್ರತಿಯೊಬ್ಬನು ಸ್ವತಃನಿಶ್ಚಿತಗೊಳಿಸಿದಧ್ವನಿಯನ್ನುನಿಮಗೆ ಹಿಡಿಸಿದಿ ಲಯದ ಸ್ವರೂಪದಲ್ಲಿನಿರ್ಮಾಣಯಾದಿಒಟ್ಟಿಗೆಒಂದು ಲಯರಚನೆಯನ್ನುನಿರ್ಮಾಣ ಮಾಡುವ ಪ್ರಯತ್ನ ಮಾಡಬೇಕು

**6. ಸಂಗೀತ ವೆಂದರೇನು? ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ- ಸಂಗೀತ ಮುಚ್ಯತೆ||**

ಮೇಲಿನ ಶ್ಲೋಕದಂತೆ ಗಾಯನ. ವಾದನ ಮತ್ತು ನೃತ್ಯ ಈ ಕಲೆಗಳ ಸಮುಚ್ಚಯದಿಂದ ಸಂಗೀತದ ನಿರ್ಮಾಣವಾಗುವುದು ಸಂಗೀತದಲ್ಲಿ ಸ್ವರ, ತಾಲ ಮತ್ತು ಲಯ ಇವುಗಳ ಸಮನ್ವಯ ಸಾಧಿಸಬೇಕಾಗುವುದು. ಸ್ವರ, ತಾಲ, ಮತ್ತು ಲಯ ಇವು ಸಂಗೀತದ ಮೂಲಭೂತ ಘಟಕಗಳಾಗಿವೆ.

**7. ಸಂಗೀತದಲ್ಲಿಯ ಭಾವ**

1. ಯಾವುದೇ ಹುರುಪು ಬರುವ ಹಾಡನ್ನು ಕೇಳಿ ನಿಮಗೆ ಕುಣಿಯುವಂತೆ ಅನಿಸುತ್ತದೆಯೇ?
2. ದೇಶಭಕ್ತಿಯ ಹಾಡನ್ನು ಕೇಳಿ ನಿಮಗೆ ಅಭಿಮಾನವೆನಿಸುವುದೊ?
3. ನಿರಾಶೇಯುಳ್ಳ ಹಾಡನ್ನುಕೇಳಿ ನಿಮಗೆ ಶಾಂತವೆನಿಸುತ್ತದೆಯೇ?
4. ಜೋಗುಳ ಹಾಡನ್ನು ಕೇಳಿದಾಗ ನಿಮಗೆ ಶಾಂತವೆನಿಸುತ್ತದೆಯೇ?

ಸಂಗೀತದಲ್ಲಿ ಶ್ರೊತೃಗಳ ಭಾವನೆಗೆ ಕೈಹಾಕುವ ವಿಲಕ್ಷಣ ತಾಕತ್ತು ಇರುವುದು. ನಾಟಕದ ಹಾಗೆಯೇ ಹಾಡುವವ/ ಬಾರಿಸುವವ ಎಷ್ಟೊಂದು ಆತ್ಮೀಯತೆಯಿಂದ, ಪ್ರಾಮಾಣಿಕವಾಗಿ ತನ್ನ ಭಾವನೆಯನ್ನು ಶ್ರೊತೃಗಳವರೆಗೆ ಮುಟ್ಟಿಸುವ ಪ್ರಯತ್ನ ಮಾಡಬಹುದೋ ಅಷ್ಟೊಂದು ಆ ಶ್ರೊತೃಗಳಹೃದಯಕ್ಕೆ ಮುಟ್ಟುವನು ಈ ಪ್ರಕಾರದ ಸಂಗೀತವು **'ಭಾವಪೂರ್ಣ ಸಂಗೀತ' ವೆಂದು ತಿಳಿಯಲಾಗುವದು.**

**ಚರ್ಚೆ ಮಾಡಿರಿ:**

1. ವಿವಿಧ ಪ್ರಕಾರದ ಹಾಡುಗಳನ್ನು ಕೇಳಿ ನಮ್ಮಲ್ಲಿ ಯಾವ ಭಾವನೆಗಳು ನಿರ್ಮಾಣವಾಗುವವು. ಅವು ನಿಶ್ಚಿತವಾಗಿ ಯಾವುದರಿಂದ ಆಗುವವು? ಶಬ್ದ ಧಾಟ, ಸ್ವರ ಇಲ್ಲವೇ ತಾಲ ? ಇಲ್ಲವೇ ಎಲ್ಲವೂ ಒಟ್ಟಿಗೆಸೇರಿ?

2) ಮೋಜಿಗಾಗಿ ಕೆಲವು ಹಾಡುಗಳ ಧಾಟಿ ಲಯ ಇಲ್ಲವೆ ಶಬ್ದ ಬದಲಿಸಿ ನೋಡಿ. ಏನನ್ನಿಸುವುದು.

**8. ವಾದ್ಯ ಸಂಗೀತ:**

ನಿಮಗೆ ಹಿಡಿಸುವ ಕಾರ್ಟೂನಿನ ಚಲನವಲನೆಯಹಿಂದೆ ಬಾರಿಸುವ ಸಂಗೀತವನ್ನು ನೆನಪಿಸಿ ಕೊಳ್ಳಿರಿ. 15 ಅಗಷ್ಟ ಮತ್ತು 26 ಜನೇವರಿಗೆ ಪರೇಡ ಮಾಡುವ ವೇಳೆಗೆ ಬಾರಿಸುವ ಸಂಗೀತ ನೆನಪಿಸಿ ಕೊಳ್ಳಿರಿ, ಅದರಲ್ಲಿ ಸ್ವಸ ವಿರುವುದು ಆದರೆ ಶಬ್ದವಿರುವದಿಲ್ಲ ಇಲ್ಲವೆ ಮಾನವನ ಧ್ವನಿಯೂ ಇರುವುದಿಲ್ಲಿ ಆದರೂ ಸಹ ಅದರಿಂದ ದೇಶಪ್ರೇಮದ ಒಂದು ಭಾವನೆ ನಮ್ಮ ಮನಸ್ಸಿನಲ್ಲಿ ಜಾಗೃತವಾಗುವುದು. ಸಂಗೀತದಲ್ಲಿ ಕೇವಲ ಶಬ್ದಗಳಿಂದ ಭಾವನೆಗಳನ್ನು ತೋರಿಸಬಹುದು ಎಂದಿಲ್ಲ, ಯಾವ ಸಂಗೀತದಲ್ಲಿ ಯಾವುದೇ ಶಬ್ದವಿರುವುದಿಲ್ಲ ಮತ್ತು ಕೇವಲ ಒಂದು ಇಲ್ಲವೆ ಅನೇಕ ವಾದ್ಯಗಳು (ಉದಾ: ತಬಲಾ, ಹಾರ್ಮೋನಿಯಂ, ಸಿತಾರು, ಸಂತೂರ ಮುಂತಾದವು) ಬಾರಿಸಿ ನಿರ್ಮಾಣ ಮಾಡಲಾಗುತ್ತದೆ. ಅದಕ್ಕೆ **ವಾದ್ಯ ಸಂಗೀತ** ವೆಂದು ಸಂಬೋಧಿಸಲಾಗುತ್ತದೆ. ಪಂಡಿತ ಹರಿಪ್ರಸಾದ ಚೌರಸಿಯಾ , ಡಾ. ಎನ್. ರಾಜಮ, ಪಂಡಿತ ರವಿಶಂಕರ, ಪಂಡಿತ ಶಿವಕುಮಾರ ಶರ್ಮಾ, ಉಸ್ತಾದಝಾಕೀರ ಹುಸೇನ ಹೀಗೆ ಅನೇಕ ಕಲಾವಿದು ಒಂಟಿ ವಾದ್ಯವಾದನಕ್ಕಾಗಿ ಪ್ರಸಿದ್ಧಾಗಿದ್ದಾರೆ

**9. ವಾದ್ಯಗಳ ಪ್ರಕಾರಗಳು:**

ಭಾರತದಲ್ಲಿ ಸಾಮಾನ್ಯವಾಗಿ ಬಾರಿಸಲಾಗುವ ಕೆಲವೊಂದು ವಾದ್ಯಗಳ ಹೆಸರುಗಳನ್ನು ಕೆಳಗೆ ಕೊಡಲಾಗಿದೆ.

| ತಾಲ ವಾದ್ಯಗಳು | ತಂತು ವಾದ್ಯಗಳು | ಸುಶೀರ ವಾದ್ಯಗಳು |
|---|---|---|
| ತಬಲಾ, ಢೋಲಕ , ಹಲಗೆ, ಪಖವಾಜ ತಾಶಾ, ಮೃದುಂಗ ಮುಂತಾದವು. | ಸಿತಾರ, ತಂಬೂರಿ, ವ್ಹಾಯೋಲಿನ, ಸಾರಂಗಿ, ಸಂತೂರ ಮುಂತಾದವು. | ಕೊಳಲು, ಬಿಗುಲ, ತುತ್ತೂರಿ, ಶಹನಾಯಿ ಮುಂತಾದವು. |



## ಮೋಜು ಮಾಡೋಣ

ವಿದ್ಯಾರ್ಥಿಗಳ ಗುಂಪು ತಯಾರಿಸಿರಿ. ಮೊದಲು ಕೊಟ್ಟ ಯಾದಿಗಳಲ್ಲಿಯ ಯಾವುದೇ ಒಂದು ವಾದ್ಯವನ್ನು ಆರಿಸಿರಿ, ಅವುಗಳ ಕುರಿತು ಕೆಳಗಿನ ಅಂಶಗಳ ಆಧಾರದಿಂದ ಮಾಹಿತಿಯನ್ನು ಸಂಗ್ರಹಿಸಿ ಸಾದರುಪಡಿಸಿರಿ.

(1) ವಾದ್ಯದ ಪ್ರಕಾರ.

(2) ಅದರ ಫೋಟೊ ಇಲ್ಲವೆ ಚಿತ್ರ.

(3) ವಾದ್ಯದಿಂದ ಧ್ವನಿ ಹೇಗೆ ನಿರ್ಮಾಣವಾಗುವುದು ಎಂಬುದರ ಮಾಹಿತಿ.

(4) ಆ ವಾದ್ಯವನ್ನು ನುಡಿಸುವ ಕೆಲವೊಂದು ಜನಪ್ರಿಯ ಕಲಾಕಾರರು.

(5) ಯಾವುದೇ ಚಿತ್ರಪಟಗೀತೆ / ಲೋಕಗೀತೆ, ಅದರಲ್ಲಿ ಈ ವಾದ್ಯಗಳ ವಾದನವಿರಬೇಕು.

### 10. ಸಂಗೀತದ ಹೊರತು ಜೀವನ:

ಒಂದು ದಿವಸ ನಿಮ್ಮ ಜೀವನದಲ್ಲಿಯ ಎಲ್ಲ ಸಂಗೀತ ಮಾಯವಾದರೆ? ಎಂಬ ಕಲ್ಪನೆಯನ್ನು ಮಾಡಿರಿ. ಶಾಲೆಯಲ್ಲಿಯ ಪ್ರಾರ್ಥನೆ, ವರ್ಗದಲ್ಲಿ ಹಾಡುವ ಹಾಡುಗಳು, ಮೋಬಾಯಿಲದಲ್ಲಿಯ ಅಲಾರ್ಮದಲ್ಲಿಯ ಹಾಡುಗಳು, ರಿಂಗಟೋನ, ಬಾಗಿಲಿನ ಮೇಲೆ ಬಾರಿಸುವ ಬೆಲ್ ಸಂಗೀತ, ರೇಡಿಯೋ, ಇಲ್ಲವೆ ಟಿ.ವ್ಹಿ ಮೇಲೆ ಬರುವ ಹಾಡುಗಳು ಮುಂತಾದವುಗಳು ಕಾಣದಂತೆ ಮಾಯವಾದರೆ? ಏನೇನು ಪರಿಣಾಮಗಳಾಗುವವು?

### 11. ಭಾರತೀಯ ಸಂಗೀತದಲ್ಲಿಯ ಪ್ರಕಾರಗಳು:

ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಧಾರ್ಮಿಕ, ಭೌಗೋಲಿಕ, ಭಾಷಿಕ , ಸಾಂಸ್ಕೃತಿಕ ವಿವಿಧತೆ ಕಂಡುಬರುವುದು. ಇದೇ ವಿವಿಧತೆಯು ನಮಗೆ ಭಾರತೀಯ ಸಂಗೀತದಲ್ಲಿಯೂ ಕಂಡುಬರುವುದು. ಕೆಳಗೆ ಭಾರತದಲ್ಲಿಯ ಕೆಲವು ಮುಖ್ಯ ಸಂಗೀತ ಪ್ರಕಾರದ ಕುರಿತು ಮಾಹಿತಿಯನ್ನು ಕೊಡಲಾಗಿದೆ.

#### ಭಾರತೀಯ ಶಾಸ್ತ್ರೀಯ ಸಂಗೀತ:

ಶಾಸ್ತ್ರೀಯ ಸಂಗೀತದಲ್ಲಿ ಕಂಠಸಂಗೀತ ಮತ್ತು ವಾದ್ಯಸಂಗೀತ ಈ ಎರಡರ ಸಮಾವೇಶವಾಗುವವು. ಶಾಸ್ತ್ರೀಯ ಸಂಗೀತದಲ್ಲಿ ನಿಶ್ಚಿತ ಸಂರಚನೆಯ ಮತ್ತು ನಿಯಮಗಳ ಚೌಕಟ್ಟಿನಲ್ಲಿ ಇದ್ದುಕೊಂಡೇ ಸಂಗೀತ ನಿರ್ಮಿತಿ ಮಾಡಲಾಗುತ್ತದೆ.ರಾಗ ಮತ್ತು ತಾಲ ಇವು ಶಾಸ್ತ್ರೀಯ ಸಂಗೀತದ ಎರಡು ಮೂಲಭೂತ ಘಟಕಗಳಾಗಿವೆ. ಪ್ರತಿಯೊಂದು ರಾಗದ ಸ್ವತದ ನಿಯಮಗಳಿವೆ. ಅದರಲ್ಲಿ ಕೆಲವು ನಿಶ್ಚಿತ ಸ್ವರಗಳೇ ಉಪಯೋಗಿಸಬೇಕು. ಅದು ನಿಶ್ಚಿತ ಪದ್ಧತಿಯಿಂದಲೇ ಮಾಡಬೇಕು. ಪ್ರತಿಯೊಂದು ತಾಲದ ಸ್ವತ ನಿಯಮಗಳಿವೆ. ಭಾರತೀಯ ಶಾಸ್ತ್ರೀಯ ಸಂಗೀತದ ಉತ್ತರ ಹಿಂದುಸ್ತಾನಿ ಸಂಗೀತ ಮತ್ತು 'ದಕ್ಷಿಣ ಹಿಂದುಸ್ತಾನಿ ಸಂಗೀತ' ವೆಂದು ಎರಡು ಭಾಗ ಮಾಡುವರು. ಪಂ, ಭೀಮಸೇನ ಜೋಶಿ, ಪಂ, ಕೂಮಾರ ಗಂಧರ್ವ, ಗಾನಸರಸ್ವತಿ ಕಿಶೋರಿತಾಯಿ ಆಮೋಣಕರ, ಗಂಗೂಬಾಯಿ ಹಾನಗಲ, ಬೇಗಮ್ ಅಖ್ತರ ಇಂತಹ ಅನೇಕ ಶಾಸ್ತ್ರೀಯ ಗಾಯಕರು ಭಾರತದಲ್ಲಿ ಪ್ರಸಿದ್ಧರಾಗಿದ್ದಾರೆ, ಹಾಗೆಯೇ ಅನೇಕ ಶಾಸ್ತ್ರೀಯ ಒಂಟ ವಾದ್ಯವಾದಕರು ಕೂಡ ಪ್ರಸಿದ್ಧರಾಗಿದ್ದಾರೆ.

#### ಜಾನಪದ ಸಂಗೀತ:

ಜಾನಪದ ಸಂಗೀತ ವೆಂದರೆ ಜನರ ಸಂಗೀತ. ಜಾನಪದ ಸಂಗೀತದ ಉಗಮವು ಜನರ ಪರಂಪರೆ ಮತ್ತು ಸಂಸ್ಕೃತಿಯಿಂದ ಆಗುವುದು ಮತ್ತು ಅದು ಪೀಳಿಗೆಯಿಂದ ಪೀಳಿಗೆಗೆ ಬಂದಿರುತ್ತದೆ. ಭಾರತದಲ್ಲಿಯ ಭೌಗೋಲಿಕ ಪರಿಸ್ಥಿತಿಗೆ ಅನುಸರಿಸಿ ಜಾನಪದ ಸಂಗೀತದಲ್ಲಿ ಬದಲಾವಣೆಯಾಗಿರುವುದು ಕಂಡುಬರುವುದು.

1. ಸಾಧ್ಯವಾದಷ್ಟು ಜಾನಪದ ಸಂಗೀತದ ಉದಾಹರಣೆಗಳನ್ನು ವಿದ್ಯಾರ್ಥಿಗಳಿಗೆ ಕೇಳಿಸುವ/ ತೋರಿಸುವ ವ್ಯವಸ್ಥೆ ಮಾಡಿರಿ.
2. ವಿದ್ಯಾರ್ಥಿಗಳು ಯಾವುದೇ ಸಂಗೀತ ಕಾರ್ಯಕ್ರಮಕ್ಕೆ ಭೆಟ್ಟಿ ನೀಡಿದ್ದರೆ, ಆ ಅನುಭವದ ಮೇಲೆ ಚರ್ಚೆ ಮಾಡಿರಿ.

## ಮಹಾರಾಷ್ಟ್ರದಲ್ಲಿಯ ಜನಪ್ರಿಯ ಜಾನಪದ ಸಂಗೀತ

- **ಪೋವಾಡಾ:**

ಪೋವಾಡಾ ಇದು ಹುರುಪು ತರುವ ಗೀತೆಯಾಗಿದೆ ಅದರ ಉದ್ದೇಶವು ಮುಖ್ಯವಾಗಿ ಐತಿಹಾಸಿಕ ಘಟನೆಗಳ ವರ್ಣನೆ ಮಾಡಿ ಜನರಿಗೆ ಸ್ಫೂರ್ತಿ ಕೊಡುವುದಿರುವುದು ಪೋವಾಡಾ ಬರೆಯುವ ಮತ್ತು ಸಾದರ ಪಡಿಸುವವರಿಗೆ ಶಾಹೀರ ಎಂದು ಸಂಬೋಧಿಸುವರು. ಛತ್ರಪತಿಶಿವಾಜಿ ಮಹಾರಾಜರಶೌರ್ಯದ ವರ್ಣನೆ ಮಾಡುವ ಪೋವಾಡಗಳು ಮಹಾರಾಷ್ಟ್ರದಲ್ಲಿಬಹಳ ಪ್ರಸಿದ್ಧವಾಗಿವೆ ಪೋವಾಡಾ ಸಾದರ ಪಡಿಸುವಾಗ ಹಲಗೆ, ತುಣ್‌ತುನಿ, ತಾಳ ಈ ವಾದ್ಯಗಳನ್ನು ಉಪಯೋಗಿಸಲಾಗುವುದು.

- **ಅಭಂಗ:**

ಈ ಗೀತ ಪ್ರಕಾರದಲ್ಲಿ ಭಕ್ತಿರಸದ ಅಭಿವ್ಯಕ್ತಿ ಕಂಡುಬರುವುದು. ಉದಾ: ಸಂತ ತುಕಾರಾಮರು ರಚಿಸಿದ ವಿಠ್ಠಲನಸ್ತುತಿ ಮಾಡುವ, ಹಾಗೆಯೇ ಜೀವನದ ಕುರಿತು ತತ್ವಜ್ಞಾನ ಹೇಳುವ ಅನೇಕ ಅಭಂಗಗಳು ಪ್ರಸಿದ್ಧವಾಗಿವೆ. ಅಭಂಗ ಸಾದರ ಪಡಿಸುವಾಗ ತಬಲಾ, ಹಾರ್ಮೋನಿಯಂ, ತಾಳ, ಮೃದಂಗ ಈ ವಾದ್ಯಗಳನ್ನು ಉಪಯೋಗಿಸಲಾಗುತ್ತದೆ.

- **ಕೀರ್ತನೆ:**

ಕೀರ್ತನೆ ಎಂದರೆ ವರ್ಣನೆ, ಕೇಳಿಸುವುದು, ಯಾವುದೋ ಕಲ್ಪನೆಯ ಇಲ್ಲವೆ ಕತೆಯ ವರ್ಣನೆ ಮಾಡುವುದು. ಕೀರ್ತನೆ ಮಾಡುವ ಕಲಾಕಾರನಿಗೆ ಕೀರ್ತನಕಾರ ಅನ್ನುವರು. ಕೀರ್ತನೆಯ ಉದ್ದೇಶ ಒಳ್ಳೆಯ ಚಟ, ಒಳ್ಳೆಯ ಮೌಲ್ಯಗಳು, ಒಳ್ಳೆಯ ವಿಚಾರ ಜನರಲ್ಲಿ ಮೂಡಿಸುವುದು ಉದಾ: ಸಂತ ಗಾಡಗೆಬಾಬಾರ ಸಾರ್ವಜನಿಕ ಸ್ವಚ್ಛತೆಯ ಕುರಿತು ಕೀರ್ತನೆ, ಕೀರ್ತನೆಯಲ್ಲಿ ಹಾರ್ಮೋನಿಯಂ, ತಾಳ. ಚಿಪಳ್ಯಾ (ಕಟ್ಟಿಗೆಯವಾದ್ಯ). ಮೃದಂಗ, ತಬಲಾ ಈ ವಾದ್ಯಗಳನ್ನು ಉಪಯೋಗಿಸಲಾಗುವುದು

- **ಭಾರುಡ:**

ಈ ಸಂಗೀತ ಪ್ರಕಾರವನ್ನು ಸಂತ ಏಕನಾಥರು ಪ್ರಸಿದ್ಧಗೊಳಿಸಿದರು. ಕೀರ್ತನೆಯ ಹಾಗೆ ಭಾರುಡದಲ್ಲಿಯೂ ಸಂಗೀತದ ಉಪಯೋಗ ಮಾಡಿ ಕತೆ ಹೇಳಲಾಗುವುದು ಆದರೆ, ಭಾರುಡ ಇದನ್ನು ಸಮೂಹದಿಂದ ಸಾದರ ಪಡಿಸಲಾಗುವುದು ಸಮಾಜ ಪ್ರಬೋಧನೆ ಇದು ಭಾರುಡದ ಮುಖ್ಯ ಉದ್ದೇಶವಿದೆ.

- **ಜಾಗರಣೆ – ಗೊಂಧಳ:**

ದೇವಿಯ ಸಲುವಾಗಿ ಗೊಂದಳ ಮಾಡಲಾಗುತ್ತದೆಮತ್ತು ಖಂಡೆರಾಯನಿಗಾಗಿಯೂ ಜಾಗರಣ ಹಾಕುವ ಪರಂಪರೆ. ಇದೆ ಈ ಎರಡೂ ಪ್ರಕಾರದಲ್ಲಿ ಸಂಗೀತದ ಮತ್ತು ವಾದ್ಯಗಳ ಉಪಯೋಗ ಮಾಡಲಾಗುತ್ತದೆ.

- **ಭಜನೆ:**

ಇದು ಯಾವುದೇ ಧಾರ್ಮಿಕ ಇಲ್ಲವೆ ಆಧ್ಯಾತ್ಮಿಕ ಹಾನಿಗೆ ಕೊಟ್ಟ ಸರ್ವ ಸಾಧಾರಣವಾದ ಹೆಸರು ಇದೆ, ಪುರಾಣದಲ್ಲಿಯ ಸಂಕಲ್ಪನೆ, ಸಾಧುಸಂತರ ಉಪದೇಶಗಳ ಮೇಲೆ ಸಾಮಾನ್ಯವಾಗಿ ಭಜನೆ ಆಧರಿಸಿರುತ್ತದೆ, ಇದರಲ್ಲಿಯೂ ಸಹ ತಾಳ, ತಬಲಾ, ಹಾರ್ಮೋನಿಯಂ, ಮೃದಂಗದಂತಹ ವಾದ್ಯಗಳ ಉಪಯೋಗ ಮಾಡಲಾಗುವುದು.

- **ಲಾವಣಿ:**

ಇದೊಂದು ಪಾರಂಪರಿಕ ಗಾಯನ ಮತ್ತು ನೃತ್ಯ ಪ್ರಕಾರವಿದೆ ಇದನ್ನು ಢೋಲಿಕಿ ಎಂಬ ವಾದ್ಯದ ತಾಲದ ಮೇಲೆ ಸಾದರ ಪಡಿಸಲಾಗುವುದು. ಲಾವಣಿಯ ಹುರುಪು ತರುವ ತಾಲ ಇದು ಅದರ ವೈಶಿಷ್ಟವಾಗಿದೆ ಢೋಲಕಿ ಮತ್ತು ಹಾರ್ಮೋನಿಯಂ ಈ ವಾದ್ಯಗಳನ್ನು ಲಾವಣಿ ಸಾದರಪಡಿಸುವಾಗ ಪ್ರಮುಖವಾಗಿ ಉಪಯೋಗಿಸಲಾಗುವುದು.

- **ಕವ್ವಾಲಿ:**

ಇದು ಸೂಫಿ ಭಕ್ತಿ ಪರವಾದ ಸಂಗೀತದ ಪ್ರಕಾರವಾಗಿದೆ ಕವ್ವಾಲಿ ಇದು ಸಾಮೂಹಿಕ ಗಾಯನ ಪ್ರಕಾರವಾಗಿದ್ದು ಇದಕ್ಕೂ ಕೂಡಾ ಒಂದು ವಿಶಿಷ್ಟ ತಾಲ ಇರುವುದು. ಕವ್ವಾಲಿ ಸಾದರಪಡಿಸುವಾಗ ಒಂದು ವಿಶಿಷ್ಟ ಪದ್ಧತಿಯಿಂದ ಚಪ್ಪಾಳೆ ಬಡೆಯುವ ಪದ್ಧತಿ ಇದೆ.

- **ಜನಪ್ರಿಯ ಚಿತ್ರಪಟ ಸಂಗೀತ:**

ಚಿತ್ರಪಟ ಸಂಗೀತದಲ್ಲಿ ನಮಗೆ ಎಲ್ಲ ಪ್ರಕಾರದ ಸಂಗೀತ ಕೇಳಲು, ನೋಡಲು ಸಿಗುವದು. ಆದರೆ ಯಾವುದೇ ಒಂದು ಪ್ರಕಾರವನ್ನು ಹಿಡಿದು ಈ ಸಂಗೀತವಿರುವುದಿಲ್ಲ, ಶಾಸ್ತ್ರೀಯ ಮತ್ತು ಜಾನಪದ ಸಂಗೀತದಿಂದ ಹಲವಾರು ಸಂಗತಿಗಳನ್ನು ಈ ಸಂಗೀತ ಸ್ವೀಕರಿಸಿದ್ದನ್ನು ನೋಹಬಹುದು.

- **ನಾಟ್ಯ ಸಂಗೀತ:**

ಮಹಾರಾಷ್ಟ್ರದಲ್ಲಿ ಸಂಗೀತ ನಾಟಕಗಳ ಬಹುದೊಡ್ಡ ಪರಂಪರೆ ಇದೆ ಹಿಂದಿನ ಕಾಲದಲ್ಲಿ ಸಂಗೀತ ನಾಟಕಗಳು ಬಹಳ ಜನಪ್ರಿಯವಾಗಿದ್ದವು. ಸಂಗೀತ ನಾಟಕಗಳಲ್ಲಿ ಕಲಾವಿದ/ಕಲಾವಿದೆಯರು ಮೌಖಿಕ ಸಂವಾದದೊಂದಿಗೆ ಗಾಯನದಿಂದಲೂ ತಮ್ಮ ಭಾವನೆ ಮತ್ತು ವಿಚಾರ ವ್ಯಕ್ತ ಪಡಿಸುತ್ತಿದ್ದರು. ಸಂಗೀತ ನಾಟಕಗಳಲ್ಲಿ ಸಾದರ ಪಡಿಸಲಾಗುವ ಸಂಗೀತಕ್ಕೆ ನಾಟ್ಯಸಗೀತ ವೆಂದು ಕರೆಯುವರು. ನಾಟ್ಯಸಂಗೀತದದಲ್ಲಿಯ ಹಾಡಿಗೆ ಪದವೆಂದು ಕರೆಯುತ್ತಿದ್ದರು ನಾಟ್ಯಸಗೀತ ಇದು ಬಹಳಷ್ಟು ವೇಳೆ ಶಾಸ್ತ್ರೀಯ ಸಂಗೀತವನ್ನು ಆಧರಿಸಿರುತ್ತದೆ. ಬಾಲಗಂಧರ್ವ, ಮಾಸ್ಟರ ದೀನಾನಾಥ ಮಂಗೇಶಕರ, ಪಂ. ವಸಂತರಾವ ದೇಶಪಾಂಡೆ, ಪಂ. ಜಿತೇಂದ್ರ ಅಭಿಶೇಕ ಇಂಥ ಅನೇಕ ನಾಟ್ಯಸಗೀತಗಾರರು ಮಹಾರಾಷ್ಟ್ರದಲ್ಲಿ ಪ್ರಸಿದ್ಧರಾಗಿದ್ದಾರೆ ಅಲ್ಲದೆ ಶಿಲೆದಾರ ಕುಟುಂಬದ ವರುದುಕೂಡ ನಾಟ್ಯಸಂಗೀತದಲ್ಲಿ ಬಹುಮೂಲ್ಯ ಕೊಡುಗೆ ನೀಡಿದ್ದಾರೆ.

- **ಗಝಲ:**

ಗಝಲ ಈ ಸಂಗೀತ ಪ್ರಕಾರದಲ್ಲಿ ಶಬ್ದಗಳಿಗೆ ಬಹಳ ಮಹತ್ವವಿದ್ದು, ಶಬ್ದಗಳ ಸೌಂದರ್ಯ ಹೆಚ್ಚು ಅರಳಿಸಲು ಧಾಟಿ ಹಚ್ಚಲಾಗುವುದು. ಗಝಲ ಈ ಕಾವ್ಯ ಪ್ರಕಾರದಒಂದು ನಿಶ್ಚಿತ ರಚನೆ ಇರುವುದು ಮತ್ತು ಅದತನುಸರಿಸಿಯೇ ಈ ಕಾವ್ಯ ಪ್ರಕಾರವನ್ನು ಬರೆಯಲಾಗುವುದು. ಗಝಲದವಿಷಯ ಅನೇಕ ಇರುವವು. ಹಿಂದಿನ ಕಾಲದಲ್ಲಿ ಗಝಲ ಇದು ಕೇವಲ ಪಾರ್ಶಿ ಇಲ್ಲವೆ ಉರ್ದು ಭಾಷೆಯಲ್ಲಿ ರಚಿಸಲಾಗುತ್ತಿತ್ತು ಅದರೆ ಈಗ ಗಝಲನ್ನು ಹಿಂದಿ, ಮರಾಠಿ ಹೀಗೆ ಅನೇಕ ಭಾಷೆಗಳಲ್ಲಿಯೂ ರಚಿಸಲಾಗುತ್ತದೆ.

- **ಇತರ ಸಂಗೀತ ಪ್ರಕಾರಗಳು:**

ಚಿತ್ರಪಟ ಸಂಗೀತದ ಹೊರತು, ಚಿತ್ರಪಟದಲ್ಲಿಲ್ಲದ ಕಲಾಕಾರರು ಸ್ವತಂತ್ರವಾಗಿ ನಿರ್ಮಿಸಿದ. ಯಾವುದೇ ಒಂದು ವಿಶಿಷ್ಟ ಸಂಗೀತ ಪ್ರಕಾರದಲ್ಲಿ ಬರೆದಸಂಗೀತವನ್ನೂ ಸಹ ಒಂದು ಬೇರೆ ಸಂಗೀತ ಪ್ರಕಾರವೆಂದು ತಿಳಿಯಬಹುದು.

## 12. ಸ್ವಲ್ಪ ಶೋಧಿಸಿರಿ

- ನಿಮ್ಮ ಭಾಗದಲ್ಲಿ ಯಾವ ಪ್ರಕಾರದಜಾನಪದ ಸಂಗೀತ ಹಿಂದಿನಿಂದ ನಡೆದುಬಂದಿದೆ?
- ನಿಮ್ಮ ಊರಲ್ಲಿ/ಪಟ್ಟಣದಲ್ಲಿ ಯಾವ ಕಲಾಕಾರರುಜನಪ್ರಿಯರಾಗಿದ್ದಾರೆ?
- ನಿಮ್ಮ ಊರಲ್ಲಿ/ ಪಟ್ಟಣದಲ್ಲಿ ಸಂಗೀತದ ಸಾರ್ವಜನಿಕ ಕಾರ್ಯಕ್ರಮಗಳು ಆಗುತ್ತವೆಯೇ? ಸಾಧ್ಯವಾದರೆ ಕಾರ್ಯಕ್ರಮಕ್ಕೆ ಉಪಸ್ಥಿತರಾಗಿರಿ

## 13. ಕಟ್ಟುವುದು:

ಕವಿತೆಯನ್ನು ಹಾಡಿನಲ್ಲಿ ರುಪಾಂತರ ಮಾಡುವುದಿರುವುದೋ ಆಗ ಆ ಕವಿತೆ ಮೇಲೆ ದಾಟಿ ಹಚ್ಚಬೇಕಾಗುವುದು. ಧಾಟಿ ಹಚ್ಚುವಾಗ ಸಂಗೀತಕಾರನು ಆ ಕವಿತೆಯ ಆಶಯ, ಶಬ್ದರಚನೆ, ಕವಿತೆಯಲ್ಲಿ ಉಪಯೋಗಿಸಲಾದ ಭಾಷೆ ಯಾವ ಭೌಗೋಲಿಕ ಭಾಗದ್ದಿದೆ ಅದನ್ನನುಸರಿಸಿ ಸಂಗೀತ ಪ್ರಕಾರನಿರ್ಧರಿಸಿ ಧಾಟಿ ಹಚ್ಚುವರು ಒಮ್ಮೆ ದಾಟಿ ನಿರ್ಧರಿಸಿದ ಮೇಲೆ ಆ ಹಾಡಿನ ಪ್ರಸ್ತುತಿಗಾಗಿಯಾವ ವಾದ್ಯಗಳನ್ನು ಉಪಯೋಗಿಸ ಬೇಕೆಂಬ ವಿಚಾರ ಮಾಡಲಾಗುವುದು

ಚಿತ್ರಪಟದಲ್ಲಿಯ ಹಾಡುಗಳಿಗೆ ಧಾಟಿ ಹಚ್ಚುವಾಗ ಒಮ್ಮೊಮ್ಮೆ ಮೊದಲು ಧಾಟಿ ಹಚ್ಚಿ, ನಂತರ ಅದಕ್ಕನುಸರಿನಿ ಕವಿತೆಮನ್ನು ಬರೆಯಲಾಗುತ್ತದೆ. ಚಿತ್ರಪಟದಲ್ಲಿಯ ಹಾಡುಗಳಿಗೆ ಧಾಟಿ ಹಚ್ಚವಾಗ ಆ ಹಾಡಿನ ಚಿತ್ರಪಟದಲ್ಲಿಯ ಸಂಭಾವ್ಯ ಸ್ಥಳ, ಪ್ರಸಂಗ, ಅದರಲ್ಲಿಯ ಪಾತ್ರ, ಆ ಹಾಡಿನಿಂದ ಪ್ರೇಕ್ಷಕರಮೇಲೆ ಪರಿಣಾಮ ಸಾಧಿಸಬೇಕೆಂಬ ಅಪೇಕ್ಷೆ ಇರುವುದು. ಹೀಗೆ ಅನೇಕ ಅಂಶಗಳ ವಿಚಾರ ಮಾಡಲಾಗುವುದು.

## 14. ನಡೆಯಿರಿ ಉಪಯೋಜನೆ ಮಾಡುವಾ:

ವಿದ್ಯಾರ್ಥಿಗಳ ಗುಂಪು ಮಾಡಿರಿ , ನಿಮ್ಮ ಪುಸ್ತಕದಿಯ ಇಲ್ಲವೆ ಇತರ ಯಾವುದೇ ಕವಿತೆಯ ಪುಸ್ತಕದಿಂದ ಒಂದು ಕವಿತೆಯ ಆಯ್ಕೆ ಮಾಡಿರಿ. ಆಕವಿತೆಯವಿಶ್ಲೇಷಣೆ ಕೆಳಗಿನ ಅಂಶಗಳ ಸಹಾಯದಿಂದ ಮಾಡಿರಿ.

(1) ಶಬ್ದ ಹೇಗಿದೆ? ಯಾವ ಭಾವನೆಗೆ ಶಬ್ದರೂಪ ಕೊಡುವ ಪ್ರಯತ್ನಕವಿಯು ಮಾಡಿದ್ದಾನೆ?

(2) ಕವಿತೆಯ ಭಾವನೆ ಹೇಗಿದೆ?

(3) ಒಂದು ವೇಳೆ ಈ ಕವಿತೆಯನ್ನು ಹಾಡಿನಲ್ಲಿ ರೂಪಾಂತರ ಮಾಡುವುದಿದ್ದರೆ, ಆ ಹಾಡಿನ ತಾಲದ ಬಗ್ಗೆ ನೀವು ಏನು ಕಲ್ಪನೆ ಮಾಡಬಹುದು?

(4) ಹಾಡಿನ ಪ್ರಕಾರ ನೀವುಕಲಿತ ಸಂಗೀತ ಪ್ರಕಾರಗಳಲ್ಲಿ ಹೇಗೆ ಇರಬೇಕು ಎಂದು ನಿಮಗೆ ಅನಿಸುವುದು?

(5) ಮೇಲಿನ ಅಂಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಕವಿತೆಯಲ್ಲಿಯ ಮೊದಲನೆಯ ನಾಲ್ಕು ಸಾಲುಗಳಿಗಾಗಿ ನಿಮಗೆ ಸ್ವಂತದ ಧಾಟಿಹಚ್ಚಲು ಬರಬಹುದೇ? ಇಲ್ಲವೆ ಯಾವುದೇ ಬೇರೆ ಹಾಡಿನ ಧಾಟಿ ಆ ಕವಿತೆಗೆ ಯೋಗ್ಯವಾಗಬಹುದುಎಂದು ನಿಮಗೆ ಅನಿಸುವುದೇ?

(6) ಹಾಡಿಗಾಗಿ ನೀವು ಯಾವ ವಾದ್ಯಗಳನ್ನು ಉಪಯೋಗಿಸುವಿರಿ

(7) ಸಾಧ್ಯವಾದರೆ ಹಾಡನ್ನು ಸಾದರಪಡಿಸಿರಿ.

## ಮೌಲ್ಯಮಾಪನ

| ಭಾರಾಂಶ 10% | | | | |
|---|---|---|---|---|
| **ಮಾನದಂಡ** | **ಉತ್ತಮ (ಬಹಳ ಒಳ್ಳೆಯ)** | **ಯೋಗ್ಯ (ಸಮಾಧಾನಕಾರಕ)** | **ಅಯೋಗ್ಯ (ಅಸಮಾಧಾನಕಾರಕ)** | **ಗುಣಗಳು** |
| ನಾಟಿಕದಲ್ಲಿಯ ಕಾರ್ಯಕಲಾಪ | ವ್ಯಕ್ತಿರೇಖೆಯ ಧ್ವನಿಯ ಮತ್ತು ಶರೀರ ಹಾವಭಾವ ಸಾಕಷ್ಟು ವಿಚಾರ ಕಾಣಿಸಿತುಕ ನಾಟಕದಲ್ಲಿ ಸಂಘರ್ಷವಿತ್ತು. | ವ್ಯಕ್ತಿ ರೇಖೆಯ ಧ್ವನಿಯ ಮತ್ತು ಹಾವಭಾವ ಕೆಲವೊಂದು ಪ್ರಮಾಣವಲ್ಲಿಕಾಣಿಸಿತು ನಾಟಿಕದಲ್ಲಿ ಸಂಘರ್ಷ ಇರಲಿಲ್ಲ. | ವ್ಯಕ್ತಿ ರೇಖೆಯ ಧ್ವನಿಯ ಮತ್ತು ಹಾವಭಾವರೆ ವಿಚಾರ ಸ್ವಲ್ಪವೂ ಕಾಣಿಸಿಲ್ಲ. ನಾಟಕದಲ್ಲಿ ಸಂಘರ್ಷವೂ ಇರಲಿಲ್ಲ. | |
| ಸಂಗೀತ | ಸಂಗೀತದಲ್ಲಿಯ ತಾಲ ಸ್ವರ ಮತ್ತು ಭಾವ ಕವಿತೆಗೆ ಹೊಂದುವಂತೆ ಇತ್ತು. ಸ್ವರರಚನೆ ಸ್ವತಃ ಮಾಡಲಾಗಿತ್ತು. | ಸಂಗೀತದಲ್ಲಿಯ ತಾಲ ಸ್ವರ ಮತ್ತು ಭಾವ ಕವಿತೆಗೆ ಹೊಂದಾಣಿಕೆ ಯಾಗುವಂತೆ ಇತ್ತು. | ಸಂಗೀತದಲ್ಲಿಯ ತಾಲ ಸ್ವರ ಮತ್ತು ಭಾವ ಇವುಗಳಲ್ಲಿ ಒಂದೇ ಸಂಗತಿ ಹೊಂದಾಣಿಕೆ ಯಾಗುವಂತಿತ್ತು. | |
| ನೃತ್ಯದಿಗ್ದರ್ಶನ | ನೃತ್ಯಹಾಡಿನ ತಾಲದಲ್ಲಿ ಕುಳಿತಿತು, ನೃತ್ಯದಲ್ಲಿಯ ಹಾವಭಾವ , ಹಾಡಿನಲ್ಲಿಯ ಶಬ್ದಗಳೊಂದಿಗೆ ಮತ್ತು ಸಂಗೀತದೊಂದಿಗೆಹೊಂದಾಣಿಕೆ ಆಗುವಂತಿತ್ತು. ನರ್ತಕರ ಮುಖದಮೇಲಿನ ಭಾವ ಶೋಭಿಸುವಂತಿತ್ತು. | ಎಡಬದಿಯ ಮೂರರಲ್ಲಿ ಎರಡು ಅಂಶಗಳನ್ನು ಸಾದರ ಪಡಿಸಲಾಯಿತು. | ಎಡಬದಿಯ ಮೂರು ಅಂಶಗಳಲ್ಲಿ ಒಂದೇ ಅಂಶವನ್ನು ಸಾದರಪಡಿಸಲಾಯಿತು. | |


ಐದವರೊ ಗೆಳೆಯ – ಗೆಳತಿಯರು ಅವರ ಪ್ರೀತಿಯ ಸ್ಥಳದಲ್ಲಿಕೂಡುವರು,
ಎಲ್ಲರೂ ಧೈರ್ಯಧರ ಮತ್ತು ಧೈರ್ಯಶಿಲೆಮರನ್ನು ಶೋಧಿಸುತ್ತಾರೆ.
ಲೋಬೊ! ನೀನು ಆ ಇಬ್ಬರನ್ನು ಎಲ್ಲಿಯಾದರೂ ನೋಡರುವಿ ಏನೂ?
ಇಲ್ಲ ರಾಘವ, ನನಗನಿಸುತ್ತದೆ, ಕೊನೆಯದಾಗಿ ಸಮೀನಾಳು ಅವರಿಗೆ ನೋಡಿದ್ದಳು
ಅವರನ್ನುಬೇಗ ಹುಡುಕಬೇತು ನನಗೆ ಎಷ್ಟೋಸಂಗತಿಗಳಿಗಾಗಿ ಅವರ ಸಹಾಯ ಬೇಕಾಗಿದೆ.
ಹೌದು, ನಿಜವಾಗಿಯೂ
ಎಲ್ಲಿದ್ದೀರಿ ನೀವಿಬ್ಬರೂ?
ಅಲ್ಲಿನೋಡಿ! ಆಕಾಶದಲ್ಲಿ
ನಾವು ಮರಳಿ ನಡೆದಿದ್ದೆವು . ನಿಮಗೆ ಕೊನೆಯದಾಗಿ ಭೆಟ್ಟಿಯಾಗಲು ಬಂದಿದ್ದೇವೆ.
ಆದರೆ ನೀವು ಹೋಗಲು ಸಾಧ್ಯವಿಲ್ಲ,ನಮಗೆ ಯಾರು ಸಹಾಯ ಮಾಡಬಲ್ಲರು?
ನಿಮಗೆ ಈಗ ನಮ್ಮ ಸಹಾಯದ ಅವಶ್ಯಕತೆ ಇಲ್ಲ . ನಿಮ್ಮ ಹೋರಾಟವನ್ನು ನೀವು ಹೋರಾಡಬೇಕುಬಹುದು. ನೀವು ಈಗ ಸ್ವಂತಹ ವಿಚಾರ ಮಾಡ ಹತ್ತಿದ್ದೀರಿ. ನೀವು ಈಗ ಸ್ವಲ್ಪ ಹೊರಗಿನ ಜತ್ತಿನ ಕಡೆಗೆ ನೋಡುವ ಅವಶ್ಯಕತೆ ಇದೆ ಹೊಸಹೊಸ ಅವಕಾಶಗಳು ನಿಮ್ಮ ದಾರಿಕಾಯುತ್ತಿವೆ, ನಿಮ್ಮ ಶೋಧಕ್ಕಾಗಿ ಶುಭೇಚ್ಛೆ

## ಸಂದರ್ಭ


1. ಆಕೃತಿ – ಆಭಾ ಭಾಗವತ
2. ವಾಚಿಕ ಅಭಿನಯ – ಡಾ. ಶ್ರೀರಾಮ್ ಲಾಗೂ
3. ಕಲಾ ಸೆ ಸಿಖನಾ – ಜೇನ ಸಾಹಿ, ರೋಶನಿ ಸಾಹಿ.
4. ಶಿಕ್ಷಾ ಕಾ ವಾಹನ : ಕಲಾ – ದೇವಿಪ್ರಸಾದ
5. ಕಲೆಚಾ ಇತಿಹಾಸ – ಪಾಠ್ಯ ಪುಸ್ತಕ ಮಂಡಳ, ಪುಣೆ
6. 21 ವ್ಯಾ ಶತಕಾತೀಲ ಜೀವನ ಕೌಶಲ್ಯ, ಸಂಶೋಧನಾ ವಿಕಾಸ, ಶ್ಯಾಮ್‌ಚಿ ಆಯಿ ಫೌಂಡೇಶನ್
7. An actor prepares – Constantin Stanislavski
8. Mindset : Key Takeaways, Analysis and Review – Carol Dweck
9. Introduction to Conflict Management : Improving performance using the TKI – Kenneth Wayne Thomas


## ಸಂದರ್ಭಕ್ಕಾಗಿ ಸಂಕೇತ ಸ್ಥಳಗಳು



1. www.safindia.org
2. http://mahacareermitra.in
3. http://ccrtindia.gov.in/
4. http://ncert.nic.in/ncert/aerc/pdfs/training_resource_materials.pdf
5. https://www.sps186.org/downloads/basic/571702/conflict_management_styles.pdf
6. https://en.wikipedia.org/wiki/Environmental_enrichment
7. https://dweck.socialpsychology.org/
8. https://en.wikipedia.org/wiki/Neuroplasticity
9. http://www.thebetterindia.com/53993/10-indian-folk-art-formssurvived-paintings/









































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५

ಮಹಾರಾಷ್ಟ್ರ ರಾಜ್ಯ ಪಾಠ್ಯ ಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ. ಪುಣೆ 4.

स्व–विकास व कलारसास्वाद इयत्ता नववी (कन्नड)

₹ 64.00